

"ಗುರುಸಿದ್ಧದೇವ"

ನಿರಾಕಾರದಲ್ಲಿದ್ದ ಪೂರ್ಣನನ್ನು ಸಾಕಾರದಲ್ಲಿದ್ದವರು ಅವನನ್ನು ನಿರಾಕಾರಿಯನ್ನಾಗಿಯೇ ಗುರುತಿಸಲು ಕಷ್ಟಸಾಧ್ಯವಾಗುತ್ತದೆ. ಪೂರ್ಣನಾದ ಆ ಪರಂಜ್ಯೋತಿಃ-ಸತ್ತ್ವವನ್ನು ಬೆಳಕನ್ನಾಗಿ ಗುರುತಿಸಲು ಸಾಕಾರವಾದ ಪ್ರಣತಿ ಮೇಣಬತ್ತಿ... ಮುಂತಾದವುಗಳ ನೆರವಿನಿಂದ ಸುಲಭವಾಗುತ್ತದೆ...... ಅಂಥ ಪೂರ್ಣನನ್ನು ಓಂಕಾರವನ್ನಾಗಿ ಭಾವಿಸಿಕೊಳ್ಳಬೇಕು. ಆ ಓಂಕಾರವೇ ಶಿವನು, ಶಿವನೇ ಓಂಕಾರನು......

...... ಶಿವನಿಗೂ ಮತ್ತು ...... ಓಂಕಾರ ವರ್ಣಕ್ಕೂ ಸರಿ ಸಮ ಹೋಲಿಸುವುದೆಂದರೆ ಚಿಕ್ಕ ಮಕ್ಕಳಾಡುವ 'ಮಣ್ಣಾಟ' ದಲ್ಲಿಯ ಮಣ್ಣನ್ನು ಸಕ್ಕರೆಯನ್ನಾಗಿ ಹೋಲಿಸಿದಂತೆ! ...... ಮಕ್ಕಳಾಡುವ ಈ ಮಣ್ಣಿನಾಟಕ್ಕೆ ಆಗಮ ವೇದ ಉಪನಿಷತ್ತು ಶಾಸ್ತ್ರಗಳಲ್ಲಿ ಸಂಪದುಪಾಸನೆ ಪ್ರತೀಕೋಪಾಸನೆ ಹಾಗೂ ಅಂಗಾವಬದ್ಧೋಪಾಸನೆ ಮೊದಲಾದ ಹೆಸರಿಟ್ಟು ಕರೆದು ತತ್ತ್ವಜ್ಞಾನಿಗಳು ಪೂರ್ಣನ ಪೂರ್ಣತ್ವವನ್ನು ತಿಳಿಸುವ ಆಟಪಾಡುತ್ತಾರೆ.

(ಪುಟ : ನೂರಾಎಂಬತ್ತು)

87

...ಮಿನಿ ಷಟ್ಪದಿ ॥

ನಮಸ್ಕಾರ !

ನನ್ನ ಈ "ಪೂರ್ಣಾತ್ಮ" ಪುಸ್ತಕ-
ವನ್ನು ಎಲ್ಲಾ ಓದಿ, ವಿಷಯಗ-
ಳನ್ನು ಚರ್ಚಿಸಿ, ನಿಮಗೆ ಅನಿಸಿದ-
ದನ್ನು ಚಿತ್ರಿಸಿ ।
ಚನ್ನು ಆಗುವ ಹಾಗೆ—'ಪೂರ್ಣತ್ರ'-
ಯನ್ನು ತಿಳಿಸುವ—ನಿಮ್ಮ ಲೇಖನ-
ವನ್ನು ಕಳಿಸಿರಿ; ಅದನು ಪ್ರಕಟಿಸ-
ಲಿಹೆವು, ನಾವಿಲ್ಲಿ ॥ ॥

ಲೋಕ ಮೆಚ್ಚುವ ಸಲಹೆ-ಸೂಚನೆ,
ಸಾಕಿ ಸಲಹುವ ಹರಕೆ-ಕೋರಿಕೆ,
ತೂಕವಿರುವ ವಿಮರ್ಶೆ-ವಿಸ್ತೃತಿ
ಮೇಣ್ ಪರಾಮರ್ಶೆ ।
'ಬೇಕೊ, ಬೇಡವೊ' ಎಂದು ಬಿಡದಲೆ—
"ಲೋಕ ಒಪ್ಪುವ ಶಾಸ್ತ್ರ ಬೋಧೆಗೆ
ಬೇಕು, ವಿವರಣೆ;"—ಬರೆದು ಕಳಿಸಿರಿ,
ತತ್ತ್ವ ಚಿಂತನಕೆ ॥ ೨॥

ಇತಿ, ವಿಜ್ಞಾಪನೆಯೊಂದಿಗೆ
"ಪೂರ್ಣಾತ್ಮ"ದವರು

ಓಂ

ಆದಾನ ಪ್ರದಾನ :

ಗೆ TO

ಇಂದ FROM

SHRI RAAJAGURU KELADI SAMSTHAANA HIREMATHA
ಶ್ರೀ ರಾಜಗುರು ಕೆಳದೀ ಸಂಸ್ಥಾನ ಹಿರೇಮಠ.
AT, P.O. KELADI ಕೆಳದಿ
Talq. SAAGAR : : DIST. SHIMOGA
KARNAATAKA RAAJYA (INDIA)

ಓಂ :

ಪೂರ್ಣಮ್ ಅದಃ; ಪೂರ್ಣಮ್ ಇದಮ್;

ಪೂರ್ಣಾತ್ ಪೂರ್ಣಮ್ ಉದಚ್ಯತೇ|

ಪೂರ್ಣಸ್ಯ ಪೂರ್ಣಮ್ ಆದಾಯ,

ಪೂರ್ಣಮ್ ಏವಾವಶಿಷ್ಯತೇ||

(ಉಪನಿಷತ್)

ಓಂ : ಪೂರ್ಣ. ಅದು ಪೂರ್ಣ; ಇದು ಪೂರ್ಣವಿದೆ. ಮತ್ತೆ
ಪೂರ್ಣದಿಂದಲೆ ಪೂರ್ಣ. ಅದೆ ಸತ್ತು; ಅದೆ ಚಿತ್ತು.
ಪೂರ್ಣದಲಿ ಪೂರ್ಣ ಕಳೆದರು, ಬೆರೆಸುವುದು, ಮತ್ತು.
ಬೆರೆಸು; ಪೂರ್ಣ ಬೆರೆಸದೆ ಬಿಡಬೇಡ ಬೇಸತ್ತು.

(ಪುಟ : ನೂರಾಎಪ್ಪತ್ತೆರಡು)

ಪೂರ್ಣತ್ವ

**

‘ಗುರುಸಿದ್ಧ ದೇವ’

[ಶ್ರೀ ಷಟ್‌ಸ್ಥಲ ಬ್ರಹ್ಮ
ಗುರುಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು
ರಾಜಗುರು ಕೆಳದಿ ಸಂಸ್ಥಾನ ಹಿರೇಮಠ
ಕೆಳದಿ]

**

ರಾಜಗುರು ಪ್ರಕಾಶನ, ಕೆಳದಿ

೧೯೭೩

POORNATVA:

by Gurusiddha Deo.

RĀJAGURU PRAKĀSHANA, KELADI

First Edition : October, 1973.

pp. XX + 206;

Price : Rs. 3-00

Publisher :

Rājaguru Prakāshana Keladi

AT, P.O. KELADI

Dist. Shimoga

Printer :

M. H. Belgaumkar

Samyukta Karnatak Press, HUBLI.

ಪರಿವಿಡಿ

*

ಓಂ ಎಂಬಕ್ಷರ ಪೂರ್ಣವೆ ಪೂರ್ಣ :

ಓ + ಮ್ = ಓಂ ÷ ಓಂ + ಓಂ — ಓಂ × ಓಂ = ಪೂರ್ಣ : —

....

ಪೂರ್ಣದ ಭಾಗವು ಶೇಷವು ಪೂರ್ಣ
ಪೂರ್ಣದ ಜೋಡಣೆ ಮೊತ್ತವು ಪೂರ್ಣ
    ಪೂರ್ಣವ ಕಳೆದರೆ ಅಳಿವಿಕೆ ಪೂರ್ಣ
    ಪೂರ್ಣಕೆ ಗುಣಿಸಲು ವೃದ್ಧಿಯು ಪೂರ್ಣ
ಪೂರ್ಣಕೆ ಸರಿ ಇದೆ ಕಾಣುವುದೆಲ್ಲಾ
ಪೂರ್ಣವೆ ಪೂರ್ಣವು ಜಗವಿದು ಎಲ್ಲಾ

(ಪುಟ : ನೂರಾಎಂಬತ್ತೊಂಬತ್ತು)

ಶಿವ - ಸಂಕಲ್ಪ

॥ ಮನೋ ಮೇ ಶಿವ-ಸಂಕಲ್ಪಮಸ್ತು ॥

ಕೆಳದಿಯ ಬ್ರಹ್ಮಚಾರಿ 'ಗುರುಸಿದ್ಧ ದೇವ'ರು ಬರೆದ ಈ "ಪೂರ್ಣತ್ವ" ಎಂಬ ಪ್ರಬಂಧವು ಚಿಕ್ಕದಾದರೂ ಒಂದು ಮಹಾಗ್ರಂಥ ಎನಿಸಿಕೊಳ್ಳುವ ಯೋಗ್ಯತೆಯುಳ್ಳದಾಗಿದೆ.

ಶ್ರೀ ಕಾಶೀ ಕ್ಷೇತ್ರದಲ್ಲಿ ಶೈವ ಶಾಸ್ತ್ರ ಅಧ್ಯಯನವನ್ನು ಸಾಂಗವಾಗಿ ಮಾಡಿಕೊಂಡು, ಶಿವ-ಶಕ್ತಿಯನ್ನು ಕುರಿತು, ಸಂಸ್ಕೃತ ಭಾಷೆಯಲ್ಲಿ ಪಿ-ಎಚ್.ಡಿ. ಪದವಿಗಾಗಿ ಇವರು ಈಗಾಗಲೇ ಒಂದು ಮಹಾ ಪ್ರಬಂಧ ವನ್ನು ಅರ್ಪಿಸಿದ್ದಾರೆ.

'ಪೂರ್ಣತ್ವ' ಎಂಬ ಪ್ರಬಂಧದಲ್ಲಿ ಎರಡು ಭಾಗ. ಎಂಟೆಂಟು ಸಾಲಿನ ೩೬ ಸೂತ್ರಗಳಲ್ಲಿ ಸತ್-ಚಿತ್-ಆನಂದ-ನಿತ್ಯ-ಪರಿಪೂರ್ಣದ ಗಹನ ರಹಸ್ಯ ವನ್ನು ವಿವಿಧ ವರ್ಣಮಾಲೆಯ ಹೊಸ ಬೆಡಗಿನಲ್ಲಿ ತೊಡಗಿಸಿ, ಈ ಪುರಾತನ ಸಂಪ್ರದಾಯಕ್ಕೆ ನವೀನ ರಮ್ಯತೆಯನ್ನು ಒದಗಿಸಿದ್ದಾರೆ.

ಅವರ ಸೂತ್ರಗಳು **ಕಾವ್ಯದಂತೆ ರಮ್ಯ.** ಅವರೇ ಬರೆದ ಅದರ ಭಾಷ್ಯ (೪೩ ನೆಯ ಪುಟದಿಂದ ೧೯೨ ನೆಯ ಪುಟದ ವರೆಗೆ) ಹಬ್ಬಿದೆ. ಇದು ಜಟಿಲ.

'ಪೂರ್ಣತ್ವ' ಇದು ಶಾಸ್ತ್ರ - ಕಾವ್ಯ. ೩೬ ಕ್ಕೂ ೧೩೬ ಕ್ಕೂ ಒಂದು ಹೊಸ ಬಗೆಯ ಬೆಸಿಗೆ ಹಾಕಿ, 'ಪೂರ್ಣ'—ಬಿಡಬೇಡ ಬೇಸತ್ತು, ಎಂಬುದಕ್ಕೆ ವಿವಿಧ ಕ್ರಿಯಾ-ಯೋಜನೆ ಮಾಡಿ, ತಮ್ಮ ಸಮಸ್ಯೆಯನ್ನು ಕವಿತ್ವದಿಂದಲೂ, ಪಾಂಡಿತ್ಯದಿಂದಲೂ ಪರಿಪೂರ್ಣಗೊಳಿಸಿದ್ದಾರೆ.

ಹಾನುಗಲ್ಲ ಕುಮಾರ ಸ್ವಾಮಿಗಳ ಅಪೂರ್ವ ಪೂರ್ಣ-ಯೋಗದ ಮರಿ ಇದು. ಇದೂ ಪೂರ್ಣವೇ. ಪೂರ್ಣಾತ್ ಪೂರ್ಣಂ ಉದಚ್ಯತೇ.

ಇದು ಕಬ್ಬಿಣದ ಕಡಲೆ, ನಾರಿಕೇಳ ಪಾಕ — ಶಕ್ತಿ ಸಮನ್ವಯ ಇಲ್ಲ ದವರಿಗೆ. ಈಷತ್‌ಸ್ಪರ್ಶ ಉಳ್ಳವರಿಗೂ ಇದು ರಸಕ್ರೀಡೆ.

ಇಲ್ಲಿ ವರ್ಣಾರ್ಥವನ್ನು ವೀರಶೈವದ ವಿಶೇಷವಾದ ಷಟ್‌ಸ್ಥಲ, ೩೬ ತತ್ತ್ವ, ೨೧೬ ಸಕೀಲಗಳಿಗೆ ಏಕಪಿಂಡ ಮಾಡುವ ನವವಿಧಾನ ಕಂಡು ಹಿಡಿದಿದೆ; ಉಂಡು, ಉಸಿರಿದೆ. ಇದು ಪಾಮರರಿಗೆ ಬರೆದ ಗ್ರಂಥವಲ್ಲ.

'ಶ್ರೀ ಮಾತಾ' ಸಾಧನ ಕೇರಿ — **ದ. ರಾ. ಬೇಂದ್ರೆ**

ಧಾರವಾಡ, ೩-೭-೭೩

ಪೀಠಿಕೆ

ಸೂರ್ಯ ಸಿಂಹಾಸನಾಧೀಶ್ವರ ಶ್ರೀ ಜ.ಚ.ನಿ. ಅವರಿಂದ

‘ಪೂರ್ಣತ್ವ’ ಕೆಳದಿ ಶಿವಾಚಾರ್ಯರ ಪುಟ್ಟ ಪುಸ್ತಿಕೆ; ಗಾತ್ರದಿಂದ ಪುಟ್ಟದು; ಪಾತ್ರದಿಂದ ಅಂದರೆ ಗುಣದಿಂದ ಹಿರಿಯದು; ಗುರು ಕೃತಿ. ಇದು ಕೇವಲ ಮೂವತ್ತಾರು ನುಡಿಗಳ ಖಂಡ ಕಾವ್ಯ; [ಇದಕ್ಕೆ ಗದ್ಯದ ‘ಭಾವಾಭಿವ್ಯಕ್ತಿ’ ಯುಕ್ತವಾಗಿದೆ.] ವಸ್ತು ವಿಭು; ತತ್ತ್ವ ನಿಗೂಢ. ಆದರೂ ಅವರ ಸ್ಫೂರ್ತಿ ಅದರ ಮೇಲೆ ಹರಿದಿದೆ; ಅದನ್ನು ಬಳಸಲು ಬಯಸಿದೆ. ಇದೊಂದು, ಅವರದೇ ಆದ ಮಾತಿನಲ್ಲಿ ಹೇಳುವುದಾದರೆ, ‘ಪೂರ್ಣ ಮಾರ್ಗದ ಅರೆ- ಸುತ್ತು.’

‘ಸುತ್ತು’ ನುಡಿಯು ಹೊಲಬನ್ನು ಹತ್ತಿರದ್ದನ್ನಾಗಿಸಿಕೊಂಡಿದ್ದರೂ ಲೌಕಿಕದಲ್ಲಿ ಭೌತಿಕದಲ್ಲಿ ‘ಅರೆ-ಸುತ್ತು’. ಕೊನೆ ಹತ್ತುವ ಕೊನೆ ಹೊತ್ತು ಹತ್ತಿರದ್ದಾಗಿಲ್ಲ. ಅಂತೆಯೇ ಕವಿಯ ಆದೇಶ: ‘ಪೂರ್ಣ ಮುಗಿಸದೆ ಬಿಡಬೇಡ ಬೇಸತ್ತು.’ ಎಂದು. ಇದರಲ್ಲಿ ಅದೆಂತಹ ಅಂತರ್ಭಾವವಿದೆ! ಅದೆಂತಹ ಆಳ ಧ್ವನಿಯಿದೆ!! ನಾಲ್ಕು ಪದ ಉಳ್ಳ ಈ ವಾಕ್ಯದಲ್ಲಿಯ ಎರಡನೆಯ ಪದವು ಆ-ಆ ನುಡಿಗೆ ತಕ್ಕಂತೆ ಬೇರೆ–ಬೇರೆಯಾಗಿ ಉದ್ದಕ್ಕೂ ಅಂದರೆ ಎಲ್ಲ ನುಡಿಗಳಲ್ಲಿ ಉಚಿತವಾಗಿ ಉಪಯುಕ್ತವಾಗಿದೆ. ಏನೆಲ್ಲ ವನ್ನು ಅರೆಕೊರೆಯಾಗಿಸದಿರೆಂದು ಪ್ರೇರೇಪಿಸಲು ಅಥವಾ ಬೋಧಿಸಲು ಬಳಕೆಯಾಗಿದೆ.

‘ಪೂರ್ಣ’ದಲ್ಲಿ ಪೂರ್ಣತ್ವವೆಂದರೇನು? ‘ತತ್’ದಲ್ಲಿ ತತ್ತ್ವವೆಂದರೇನು? ‘ಘಟ’ದಲ್ಲಿ ಘಟತ್ವವೆಂದರೇನು? –ಈ ಮೂರರಲ್ಲಿರುವ ‘ತ್ವ’ ಪದವು ಏನನ್ನು ಸೂಚಿಸುತ್ತದೆ? ಸ್ವರೂಪ ಸಂಬಂಧವನ್ನು ಸ್ಥಿತಿ ಸ್ಥಾಪಕತ್ವವನ್ನು ಸೂಚಿಸುತ್ತದೆ. ಸ್ವರೂಪವೆಂದರೆ ಮೂಲ ಪ್ರಕೃತಿ. ಸ್ಥಿತಿಯೆಂದರೆ ಸ್ವಗುಣಾಭಿವ್ಯಕ್ತಿ. ಸ್ವಯವು ಗುಣ ಧರ್ಮಗಳ ಸತ್ತಾ–ಸೂಚಕ; ಪರಿಣಾಮ. ಸತ್ತೆಯ ಕುರುಹು ‘ತ್ವ’.

ಘಟತ್ವವಿಲ್ಲದೆ ಘಟವಿರಬಹುದು. ಇರುತ್ತದೆ. ಬರೀ ನಾಮ–ರೂಪಾತ್ಮಕವಾದುದು ಘಟ. ನಾಮ–ರೂಪಗಳೊಡನೆ ಕ್ರಿಯಾ – ಶೀಲತೆಗೆ ಕಾರಣವಾದುದು ಅಂದರೆ ಗುಣ – ಧರ್ಮ – ನಿಷ್ಪತ್ತಿಗೆ ಸಮರ್ಥವಾದದ್ದು ಘಟತ್ವ. ಸೀಳಿದ ಅಥವಾ ತೂತು ಬಿದ್ದ ಕೊಡದಲ್ಲಿ ಕೊಡತನ [ಘಟತ್ವ] ಇರದು. ಕಲ್ಲಿನ ಎತ್ತು ಗಾಣದ ವೃತ್ತಿಗೆ ಸ್ಫೂರ್ತಿಯನ್ನು ಚಲನೆಯನ್ನು

ತರವು. ಏಕೆಂದರೆ, ಏಲಾ – ನಿರ್ಮಿತ ವೃಷಭದಲ್ಲಿ ವೃಷಭತ್ವವಿರದು.

ಸ್ವಚ್ಛಂದ ಚಲನೆ, ಸ್ವಚ್ಛಂದ ವೃತ್ತಿಗಳು 'ತ್ವ'ದ ಗುರಿಯಲ್ಲ. ವೃತ್ತದ ಸ್ಫೂರ್ತಿ – ಸಂಚಲನೆಗಳು ಹೇಗೆ ಅಗತ್ಯವೋ ಹಾಗೆ ವೃತ್ತದ ವೃತ್ತಿಯೂ ಅಗತ್ಯವೆಂಬುದು ವಿಸ್ಮರಣೀಯ. ಅಂತೆಯೇ ನಿರ್ದಿಷ್ಟವಂತೆ ನಿರ್ದುಷ್ಟತೆಯೂ ಪೂರ್ಣತ್ವದ ಸಂಕೇತವೆಂಬುದೂ ಸ್ಮರಣೀಯ.

'ಕ್ಷರ'ದಲ್ಲಿ ಅಕ್ಷರ, ಅಕ್ಷರದಲ್ಲಿ ಕ್ಷರಗಳಿರುವಂತೆ, ಸೀಮಿತದಲ್ಲಿ ಅಸೀಮಿತತೆ, ಅಸೀಮಿತದಲ್ಲಿ ಸೀಮಿತತೆ ಇರುವುದರಿಂದ ಅಕ್ಷರದ ಸುತ್ತು. ಈ ಅಕ್ಷರದ ಸುತ್ತು ದಿಟವೆನಿಸುವುದಾವಾಗ? ಸೀಮಿತ ಅಕ್ಷರವು ಅಸೀಮಿತ ಅಕ್ಷರವಾದಾಗ! ಆಗ ಮಾತ್ರ ಪೂರ್ಣಕ್ಕೆ ಪೂರ್ಣತ್ವ; ಅಕ್ಷರಕ್ಕೆ ಅಕ್ಷರತ್ವ. ಸಾಕ್ಷರರೆಲ್ಲ ಅಕ್ಷರತ್ವಕ್ಕೇರಿರುವರೆಂದು ಹೇಳಲು ಅಳವಿಲ್ಲ. 'ಅ – ಕ್ಷ' ಈ ಜೋಡಣೆ ಕೇವಲ ವರ್ಣಮಾಲೆಗೆ ಸಂಖ್ಯೆಯ ಶಾಸ್ತ್ರಕ್ಕೆ ಸಾಂಕೇತಿಕವಲ್ಲ; ಸತ್ತಿಗೂ ಸಂಪೂರ್ಣತೆಗೂ ಸಂಕೇತ. 'ಅಕ್ಷರದ ನಿಜ ಸುತ್ತು' ಎಂಬ ಈ ಮಾತಿನಲ್ಲಿ ಅಕ್ಷಯ ಭಾವ ಚಿರೆತ್ತಿದೆ. ಕಾವ್ಯದ ಕಲೆ ದಿವ್ಯತೆಗೇರಿದೆ. ಇಲ್ಲಿ ಪರಾ ವಿದ್ಯೆಯ ಪೂರ್ಣತ್ವವು ಪರಿಣಾಮಕಾರಿಯಾಗಿ ಪ್ರತಿಪಾದಿತವಾಗಿದೆ.

ಗಡಿಯಿಲ್ಲದ ಹೊತ್ತನ್ನು ಗಡಿಯುಳ್ಳ ಮುಳ್ಳುಗಳು, ಅಂಕೆಯಿಲ್ಲದ ಆ ಸುತ್ತನ್ನು ಅಂಕೆಯುಳ್ಳ ಸುತ್ತು ತಿಳಿಸಲು ಹೊತ್ತ ಹೊಣೆಯಾಗಿದೆ. ಆದರೂ ಅವು ಹೊಣೆಯನ್ನು ಹೊತ್ತು, ಪೂರ್ತಿ ನಿತ್ತರಿಸವು. ಪ್ರಾಕೃತಿಕ ಪೂರ್ಣಾಪೂರ್ಣ ಸಮಸ್ಯೆಗಳು ಒಂದಲ್ಲ ಎರಡಲ್ಲ, ಹಲವಾರು. ತೆರಪಿಲ್ಲದೆ ತೋರದೆ ತುಂಬಿರುವುದೊಂದೆ ಪೂರ್ಣತೆಯ ಲಕ್ಷಣವೆಂತಲ್ಲ! ಒಂದೊಂದಕ್ಕೂ ಒಂದೊಂದು ಪೂರ್ಣತೆಯಿದೆ. ಎಲ್ಲದರ ಗತಿಯಲ್ಲಿ, ಎಲ್ಲದರ ಸ್ಥಿತಿಯಲ್ಲಿ ಪೂರ್ಣತೆಗೆ ನಿಲುಕುವ ಶಕ್ತಿಯಿದೆ. ಇದನ್ನು ನಿಲುಕಿಸುವ ಬಗೆಯ ಹವಣು ಈ ಕವಿಯದು: ಜೋಗುಳ ಹಾಡುವಲ್ಲಿ, ಜೋಕಾಲಿ ಜೀಕುವಲ್ಲಿ, ಜಗ ಸುತ್ತುವಲ್ಲಿ, ಪೂಜೆ ಜಪತಪಗಳಲ್ಲಿ, ಮುತ್ತೈದೆಯ ಐದು ಮುತ್ತುಗಳಲ್ಲಿ, ಅರುವತ್ತು–ಮೂರರಲ್ಲಿ, ಕನ್ನಡದ ಓಂಕಾರ ಮತ್ತು ಱ ಳ–ಕುಟಗಳಲ್ಲಿ, ಮರಾಠಿ–ಬಂಗಾಲಿ–ಉರ್ದು ಅರಬಿ – ಫಾರ್ಶೀ – ದೇವನಾಗರಿ – ಇಂಗ್ರೇಜಿ ಲಿಪಿಗಳಲ್ಲಿ, ವಿರಾಮಾದಿ ಚಿಹ್ನೆಗಳಲ್ಲಿ ಕೌಟುಂಬಿಕ ಜನರಲ್ಲಿ 'ಪೂರ್ಣತ್ವ'ದ ಕವಿಯು ಸುತ್ತಿ–ಸುತ್ತಿ ಪೂರ್ಣತೆಯ ಪ್ರಜ್ಞೆಯನ್ನು ಅಭಿವ್ಯಕ್ತಗೊಳಿಸಿದ್ದಾನೆ.

ಚೂರ್ಣತೆಯಲ್ಲಿಯೂ ಪೂರ್ಣತೆಯಿದೆ. ಆದರೆ, ಅದರ ಸ್ಥಿತಿ ಗತಿ

ಗಳಲ್ಲಿ ಗುರುತಿಸಿಕೊಳ್ಳುವ ಜಾಣ್ಮೆಯು ಗುಣ್ಣು ಬೇಕು. ಇದನ್ನು 'ಪೂರ್ಣತ್ವ'ದ ಕವಿಯಲ್ಲಿ ಕಾಣಬಹುದಾಗಿದೆ. ಅಪರಪರ ಮುಟ್ಟಿದ ಪೂರ್ಣತೆಯನ್ನು ಕವಿಯು ತನ್ನ ['ಭಾವಾಽಭಿವ್ಯಕ್ತಿ'ಯಿಂದಲೂ] ಪದ–ಪದಕ್ಕೂ ಪ್ರದರ್ಶಿಸಿದ್ದಾನೆ.

ಆ ದೃಕ್ ಪೂರ್ಣ: ಈ ದೃಶ್ಯವೂ ಪೂರ್ಣ. ಇದು ಅದರಿಂದ ಬರುವಲ್ಲಿ ಇರುವಲ್ಲಿ ಮರಳಿ ಅದರಲ್ಲಿ ಬೆರೆವಲ್ಲಿ–ಇದೆಲ್ಲವನ್ನು ಅರಿವಲ್ಲಿ ಪೂರ್ಣತ್ವವಿದ್ದೇ ಇರುತ್ತದೆ.

ಪೂರ್ಣತ್ವ ಶ್ರುತಿಯು ಸ್ವಯಮೇವ ಓತ–ಪ್ರೋತವಾಗಿ ಇರುತ್ತದೆ; ಹಾರದೊಳಗಿನ ದಾರದಂತಿರುತ್ತದೆ; ಆ ದಾರದೊಳಗೂ ಲಘು–ತಂತುವಿನಂತಿರುತ್ತದೆ. ಈ ಸಮಷ್ಟಿ–ಸೃಷ್ಟಿಯೊಳಗಿನ ವ್ಯಷ್ಟಿ–ಸೃಷ್ಟಿಯೂ ಹಾರದೊಳಗಿನ ಹೂವಿನಂತಿರುತ್ತದೆ. ಕೂಡುವಾಗಳೇ ಅಲ್ಲ, ಕಳೆವಾಗಲೂ ಪೂರ್ಣವೇ ಶೇಷವಾಗಿ ನಿಲ್ಲುತ್ತದೆ. ಅನಾದಿಗೆ ಆದಿಯೆಂಬುದಿಲ್ಲ; ಅನಂತಕ್ಕೆ ಅಂತವೆಂಬುದಿಲ್ಲ. ಅದು ಉತ್ಪತ್ತಿಯಿಂದ ವೃದ್ಧಿಸದು; ಸ್ಥಿತಿಯಿಂದ ಅಗಲದು; ವಿಲಯ ಅಥವಾ ಪ್ರಳಯದಿಂದ ನಿಃಶೇಷವಾಗದು. ಈ ಶ್ರುತಿ ಹಿಡಿದು ನಡೆದರೆ. ಬೇಸರಿಸದೆ ಬಿಡದೆ ನಡೆದರೆ, ಅದೇ ಪೂರ್ಣತೆಗೇರುವ ಕಸರತ್ತು. ಅಂತಹದಲ್ಲಿ ಅದೇ ಸತ್ತು: ಅದೇ ಚಿತ್ತು: ಅದೇ ಸುಖ-ಸಂಪತ್ತು.

ಪೂರ್ಣದ ವರ್ಣನೆ ಪೂರ್ಣಗೊಳ್ಳುವುದಾದರೂ ಹೇಗೆ? 'ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾಽವಶಿಷ್ಯತೇ' ಎಂದು ಉಪನಿಷತ್ತು ಉದ್‌ಘೋಷಿಸುವಂತೆ, ಅದು ಮುಗಿಯುವುದಲ್ಲ; ಕೊಂಡರೂ ಕೊನೆಗೊಳ್ಳುವುದಲ್ಲ.

ಪೂರ್ಣತ್ವದ ಸಾಧನೆಯು ಶಾಂತಿಗಾಗಿ! ಅಪೂರ್ಣ ಭಾವವೇ ಅಶಾಂತಿಗೆ ಕಾರಣ. ಜೀವನವು ಅಪೂರ್ಣದಂತೆ ತೋರುತ್ತದೆ. ಅಂತೆಯೇ ಅದು ಅಶಾಂತಿಗೆ ತಳ್ಳುತ್ತದೆ. ಎಲ್ಲೆಲ್ಲಿಯೂ ಪೂರ್ಣತ್ವದ ಪೂರ್ಣ ಪ್ರಜ್ಞೆ ಪೂರ್ಣ ಕ್ರಿಯೆ ಉಂಟಾದರೆ, ಅಪೂರ್ಣ ಭ್ರಾಂತಿಗೆಡೆಯಿರದು. ನೀರ ತೆರೆ ಅಪೂರ್ಣದಂತೆ ತೋರುತ್ತದೆ. ಆದರೆ, ವಾಸ್ತವವಾಗಿ ಅದು ಪೂರ್ಣ ಜಲವೇ! ಸಿಂಧುವಿನಲ್ಲಿ ಬಿಂದುವಿದ್ದಂತೆ, ಬಿಂದುವಿನಲ್ಲಿ ಸಿಂಧುವಿದ್ದೇ ಇರುತ್ತದೆ. ಇರದಿದ್ದರೆ, ಇದು ಸಿಂಧುವಿನಲ್ಲಿ ಸೇರದು.

ಗತಿಯು ಪೂರ್ಣ ಸ್ಥಿತಿಗೆ ಸಾಽಪೇಕ್ಷವಾಗಿದೆ. ಇದನ್ನು ಮನಗಂಡು 'ಪೂರ್ಣ ಮುಗಿಸದೆ ಬಿಡಬೇಡ ಬೇಸತ್ತು.' 'ಸುತ್ತು' ನಿನ್ನ ಶಕ್ತಿ. 'ಸತ್ತು' ನಿನ್ನ ಚೇತನ.

ಅಗಮ್ಯ ಅಗೋಚರ ಅಪ್ರಮಾಣವಾದ ಆ ಪೂರ್ಣತ್ವವು ಶ್ರೀರಾಜ ಗುರು ಕೆಳದೀ ಸಂಸ್ಥಾನ ಹಿರೇಮಠದ ಪಟ್ಟಸ್ಥಲಿ ಬ್ರಹ್ಮ ಶ್ರೀಗುರುಸಿದ್ಧೇಶ್ವರ ಶಿವಾಚಾರ್ಯರ ಶ್ರವ-ಶ್ರುತಿಗೆ ಗಮ್ಯವಾಗಿ ಗೋಚರವಾಗಿ ಈ 'ಪೂರ್ಣತ್ವ'ದ ಕೃತಿಯು ಆಕೃತಿಯಲ್ಲಿ ಚುಳುಕಾಗಿ ಬಂದಿದೆ; ಚೆಲುವಾಗಿ ನಿಂದಿದೆ.

* * * *

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಉತ್ತಮ ಭವಿಷ್ಯವನ್ನು ಹೊತ್ತು ನಿಲ್ಲಲಿರುವ ಶ್ರೀ ಸಿದ್ಧರಾಮ ದೇವರು ಸಿಂದಗಿ ಇವರು ಕೆಳದಿ ಗುರುಸಿದ್ಧದೇವ'ರ ಈ ಕೃತಿಯನ್ನಿತ್ತು ಪೀಠಿಕೆಯೊಂದನ್ನು ಬರೆಯಲು ಬಿನ್ನವಿಸಿಕೊಂಡ ಕಾರಣ ದಿಂದಾಗಿ ಇವರ ಮಾತನ್ನು ತೆಗೆದು ಹಾಕದೆ, ಈ ಎರಡು ನುಡಿಗಳನ್ನು ಬರೆಯೋಣವಾಗಿದೆ.

* * * *

ಕೆಳದಿಯ ಶ್ರೀ ಗುರುಸಿದ್ಧೇಶ್ವರ ಶಿವಾಚಾರ್ಯರ ಇನ್ನೂ ಇಂತಹ ಗುರು ಭಾವದ, ಉರು ಕೃತಿಗಳಿಂದ 'ಕೆಳದಿ'ಯ ಕಲರವದ ನಿಕ್ವಸರು ನಾಲ್ದಿಶೆಯ ಕೇಳಿಯರ ಕಿವಿ ಮನದಿ ಕೆಳದುರ್ಣ ಕೇಳುವಂತಾಗಲೆಂದು ಹೃದಯಾರೆ ಹಾರೈಸೋಣವಾಗಿದೆ.

'ಓಂ ಪೂರ್ಣಮದಃ ಪೂರ್ಣಮಿದಮ್'

ಕೊಪ್ಪಳ ಬೀಡು
೨೦-೧೦-೭೨

ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು
ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು
ಮೂರುಸಾವಿರ ಮಠ ಹುಬ್ಬಳ್ಳಿ [ಶ್ರೀ ಮೂಜಗಂ] ಅವರ

ಆಶೀರ್ವಚನ

ತನ್ನರಿವ ಅರಿವು ಬೇರಿಲ್ಲದಿರ್ಪಾಗಿ
ಷಡೂರ್ಮಿಗಳೆಲ್ಲವೂ ನಷ್ಟವಾಗಿ
ಪ್ರಾಣವು ಪ್ರಣವಾಕಾರವಾಗಿ
ಭಾವದ ನಿಬ್ಬೆರಗಿನೊಳು
ಆತ್ಮಾನಂದವ ಪಡೆದು,
'ಉರಿ-ಕರ್ಪೂರ' ದಂತೆ
ಪರಂಜ್ಯೋತಿಯ ಬೆಳಗನುಂಡು
ಆ ಬೆಳಗಿನೊಳು ತೊಳಗಿ ಬೆಳಗುವುದೇ
ಪೂರ್ಣತ್ವ ನೋಡಾ ಭೂಲತಾಪುರೀಶ
ಕರ್ತೃ ಜಗದ್ಗುರು ಗುರುಸಿದ್ದೇಶ್ವರಾ.

ಕೆಳದಿ ಸಂಸ್ಥಾನ ಹಿರೇಮಠದ ಗುರುಸಿದ್ಧ ಶಿವಾಚಾರ್ಯರು 'ಪೂರ್ಣತ್ವ' ಪುಸ್ತಕ ಬರೆದು, ತಮ್ಮಿಚ್ಛೆಯನ್ನು ಪೂರ್ಣಗೊಳಿಸಿದ್ದಾರೆ. ಶಿರೋನಾಮಕ್ಕೆ ತಕ್ಕಂತೆ 'ಪೂರ್ಣತ್ವ' ದಲ್ಲಿ ಪೂರ್ಣ ಪ್ರಜ್ಞೆಯನ್ನು ಒಡಮೂಡಿಸಿ, ಸರಳಭಾಷೆಯಲ್ಲಿ ಅರ್ಥ-ಗಾಂಭೀರ್ಯವನ್ನು ತುಂಬಿ, ತತ್ತ್ವ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ಇನಿತು ಸಂವತ್ಸರಗಳವರೆಗೆ ಕಾಶಿಯಲ್ಲಿ ನಮ್ಮ ನಿರೀಕ್ಷಣೆಯಲ್ಲಿ ಅಧ್ಯಯನ ಮಾಡಿದ್ದು ಸಾರ್ಥಕಗೊಳಿಸಿದ್ದಾರೆ. ಭಾವೈಕ್ಯವನ್ನು ಪ್ರತಿ ನುಡಿ-ನುಡಿಯಲ್ಲಿಯೂ ಉಪಮೆಯೊಡನೆ ಸೇರಿಸಿ ಸಮರಸಗೊಳಿಸಿದ್ದಾರೆ.

ಮಾನವನು ತನ್ನ ಸಹಜ ಪ್ರವೃತ್ತಿಯನ್ನು ದಾಟಿ, ನಿವೃತ್ತಿ ಮಾರ್ಗದಲ್ಲಿ ಮುನ್ನಡೆದು, ತರ್ಕಬುದ್ಧಿಗಿಂತಲೂ ಮಿಗಿಲಾಗಿರುವ ಮಾನಸ ಚೈತನ್ಯದಾನಂದವನ್ನು ಪಡೆದು, ಈಶ್ವರನಿಗೆ ತನ್ನ ಇಡಿಯ ಬಾಳನ್ನು ಸಮರ್ಪಿಸಿದಾಗ ಪೂರ್ಣತ್ವದ ಸಿದ್ಧಿ.

ನಿರಂತರವೂ ದೈವೀ ಪ್ರಜ್ಞೆಯಲ್ಲಿ ಜೀವನ-ಪುಷ್ಪವರಳಿಸಿ, ಭಾವ ಸೌರಭವ ಬೀರುತ್ತ, ಆ ಯೋಗ ಸಮನ್ವಯಕ್ಕಾಗಿ ಬೇಸರಿಸದೆ 'ಶ್ರಮವಹಿಸಿ' ಪೂರ್ಣ ತಿರುಗಿದರೆ 'ಗತಿ-ಪಣ್ಣೆ' ಬರದಿರದು.

ಅನುಭವ ಪರಿಪೂರ್ಣ ಸಿದ್ಧಾಂತವು ದ್ರಾಕ್ಷಾರಸದ ಪರಿಪಾಕವಿದ್ದಂತೆ. ಮನಸ್ಸಿನ ಆಲೋಚನೆಯು ದೇವರ ಬೆಳಕಿನಲ್ಲಿ ತಿರುಗಿದರೆ, ಪರಿಮಿತಗಳೆಲ್ಲವೂ ದೂರಾಗಿ ಪೂರ್ಣ ಮಾರ್ಗದ ಸುತ್ತು ಸಾರ್ಥಕವಾಗುವುದು.

ಪೂರ್ಣವಿಲ್ಲದ ಬಾಳು ನೀರಸ; ನಿರರ್ಥಕ. 'ಹಿಡಿದ ನೇಮವನೆಡ-ವಿಡದತಿ ಛಲವನು' ನಿಜಗುಣರ ಈ ಉಕ್ತಿಯಂತೆ ಹಿಡಿದ ಕಾರ್ಯಗಳನ್ನು ಬಿಡದೆ ಮುಗಿಸಿದರೆ ಜೀವನದಲ್ಲಿ ಸಾಫಲ್ಯ ದೊರೆತು, ಸಿದ್ಧಿಯಾಗುವುದು. ಆತ್ಮ ಪರಮಾತ್ಮ ಸಂಧಾನವಾಗಿ ಭವ್ಯ ದರ್ಶನವುಂಟಾಗುತ್ತದೆ. ಇದುವೇ ಪೂರ್ಣ ಯೋಗದ ಗುರಿ.

ಈ ಪೂರ್ಣತ್ವ ಸಿದ್ಧಿಗಾಗಿಯೇ ೩೬ ತತ್ತ್ವಗಳನ್ನರಿಯಬೇಕಾಗುತ್ತದೆ. ಷಟ್‌ಸ್ಥಲಗಳನ್ನು ಅಳವಡಿಸಿಕೊಳ್ಳಬೇಕಾಗುತ್ತದೆ; ಷಡೂರ್ಮಿಗಳನ್ನು ಸುಡಬೇಕಾಗುತ್ತದೆ; ನಿತ್ಯವೂ ಸತ್ಯಪ್ರಜ್ಞೆಯಲ್ಲಿ ಜೀವಿಸಬೇಕಾಗುತ್ತದೆ. ಇದೆಲ್ಲವನ್ನು ಅರ್ಥೈಸಿಕೊಳ್ಳಲು ದುಡಿದರೆ, ಸತ್-ಚಿತ್-ಆನಂದದ ಪರಮ ಸುಖವು ದೊರೆತು 'ಪೂರ್ಣಮೇವಾವಶಿಷ್ಯತೇ' ಅಂದರೆ, ಪೂರ್ಣದಿಂದ ಪೂರ್ಣವು ಪರಿಣಮಿಸುವುದು.

ಈ ಅನುಭವಸಾರವನ್ನು ಗ್ರಂಥಕರ್ತರು 'ಪೂರ್ಣತ್ವ'ದಲ್ಲಿ ತುಂಬಿದ್ದಾರೆ. ಈ ಕೃತಿಗೆ ತಾವೇ 'ಭಾವಾಭಿವ್ಯಕ್ತಿ'ಯನ್ನು ಬರೆದು ಮತ್ತಷ್ಟು ಸುಂದರಗೊಳಿಸಿದ್ದಾರೆ. ಪೂರ್ಣತ್ವ ಸಿದ್ಧಿಗಾಗಿ ಕೃತಿಕರ್ತರು 'ಬಿಡಬೇಡ ಬೇಸತ್ತು' ಎಂದು ಒತ್ತಿ ಒತ್ತಿ ತಿಳಿಸಿದ್ದಾರೆ. ಇದರಲ್ಲಿ ತತ್ತ್ವ ತುಂಬಿದೆ. ಪೂರ್ಣತ್ವವನ್ನು ಬಳಕೆಯ ಭಾಷೆಯ ಶಬ್ದಗಳ ಹಾಗೂ ಅಂಕಿಗಳ ಜೊತೆಗೆ ಹೋಲಿಸಿ ಅದಕ್ಕೊಂದು ಸತ್ತ್ವವನ್ನು ಶಕ್ತಿಯನ್ನು ಕಲ್ಪಿಸಿದ್ದಾರೆ; ಶೂನ್ಯದೆಡೆಗೆ ಒಯ್ದಿದ್ದಾರೆ; ಓಂಕಾರದರ್ಥಕ್ಕೆ ಶ್ರುತಿ ಶಾಸ್ತ್ರ ಉಪನಿಷತ್ತಿನಲ್ಲಿ ಹೇಳಿರುವ ಭಾವವನ್ನು ಬಿತ್ತರಿಸಿ = ವಿಸ್ತರಿಸಿ ವೀರಶೈವ ಸಿದ್ಧಾಂತಕ್ಕೆ ಹೋಲಿಸಿದ್ದಾರೆ; ಪ್ರತಿಯೊಂದರಲ್ಲಿಯೂ ಪೂರ್ಣತೆಯು ತುಂಬಿರುತ್ತದೆ—ಅದನ್ನು ನೋಡುವ ಕಣ್ಣು ಬೇಕಾಗುತ್ತದೆಂದು ತೋರಿಸಿದ್ದಾರೆ. 'ಕಿರಿದರೊಳು ಪಿರಿದರ್ಥ'ವನು ತಿಳಿಸುವ ಕಲೆ 'ಪೂರ್ಣತ್ವ'ದಲ್ಲಿ ಸಾಧಿಸಿದೆ.

ಭೌತಿಕ ವಿಕಾಸಕ್ಕಿಂತಲೂ ಆತ್ಮಿಕ ವಿಕಾಸ ಹೆಚ್ಚಿನದು. ಆಧ್ಯಾತ್ಮ ಪ್ರಕಾಶದಿಂದ ಪೂರ್ಣತೆಯ ಪ್ರಾಪ್ತಿ. ಅಂತೆಯೇ ಕೆಳದಿಯ ಶ್ರೀ ಗುರುಸಿದ್ಧ ಶಿವಾಚಾರ್ಯರು ಪೂರ್ಣತ್ವದ ಗುರಿಸಾಧನೆಗಾಗಿ ಹಂಬಲಿಸಿ, 'ಪೂರ್ಣತ್ವ' ಹೊತ್ತಿಗೆಯನ್ನು ಬರೆದು, ವಾಚಕರ ಕೈಗಿತ್ತಿದ್ದಾರೆ.

ಸಶಾಸ್ತ್ರೀಯ ಸಿದ್ಧಾಂತಗಳಿಂದ ಕೂಡಿದ 'ಪೂರ್ಣತ್ವ' ಜಿಜ್ಞಾಸುಗಳ ಹೃದಯಕ್ಕೆ ತಂಪನ್ನೀಯಲಿ! ಶ್ರೀ ಗುರುಸಿದ್ಧ ಶಿವಾಚಾರ್ಯರಿಂದ ಇಂತಹ ಸಂಶೋಧನಾತ್ಮಕ ಗ್ರಂಥಗಳು ಹೊರಬರಲು, ಜನ ಜೀವನಕ್ಕೆ ಚೈತನ್ಯವನ್ನು ನೀಡಲೆಂದು ಹಾರೈಸೋಣವಾಗಿದೆ.

ಮುಕ್ಕಾಂ: 'ಧ್ಯಾನಧಾಮ' — ಇತಿ ಶಿವಮ್
ಶ್ರೀ ಶಿವಯೋಗ ಮಂದಿರ — ೨೮–೬–೭೩

ಸುಹೃದ್ - ವಚನ

'ಗಣಪತಿಯನ್ನು ಮಾಡೋಕೆ ಹೊರಟು ಅವನಪ್ಪನ್ನ ಮಾಡಿದರು' ಎಂಬ ಕನ್ನಡದ ಗಾದೆಯು "ಪೂರ್ಣತ್ವ"ದ ಕರ್ತೃಗಳಾದ 'ಗುರುಸಿದ್ಧ ದೇವ'ರೆಂಬ ಕಾವ್ಯನಾಮದ ಕೆಳದಿ ರಾಜಗುರು ಶ್ರೀ ಗುರುಸಿದ್ಧೇಶ್ವರ ಶಿವಾಚಾರ್ಯರಿಗೆ ಅಕ್ಷರಶಃ ಅನ್ವಯಿಸುತ್ತದೆ.

'ಪೂರ್ಣತ್ವ'ದ ಹಸ್ತಪ್ರತಿ ನೋಡಿದಾಗ ೩೮ ಪುಟಗಳ ಪಿಳ್ಳಾರಿ ಹೊತ್ತಿಗೆ; ಗುಂಫಿತಾರ್ಥದ ಸೂತ್ರ ರೂಪದಲ್ಲಿರುವ ಕೇವಲ ಮೂವತ್ತಾರು ಪದ್ಯಗಳ ಹೊತ್ತಿಗೆ; ವಿವರಣೆಯ ಸಹಾಯವಿಲ್ಲದೆ, ವಿವರಿಸಲು ಸರಳ ವಾಗಲಾರದ ಸಂಕೇತಗಳ ಸಂಕ್ಷೇಪ; ಪೂರ್ಣ ಶಿವ ತತ್ತ್ವದ ವಿಕ್ಷೇಪ. ಅವನ್ನು ನಾನು ಓದಿದ ಮೇಲೆ ಈ ಪದ್ಯಗಳಿಗಿಷ್ಟು ವಿವರಣೆ ಇದ್ದರೆ, ಚನ್ನಲ್ಲವೆ? ಎಂದಿದ್ದೆ. ಅದಕ್ಕೆ ತಥಾಽಸ್ತು ಎಂದ ಶಿವಾಚಾರ್ಯರಿಂದ ಆ ವಿವರಣೆ ಪೂರ್ಣತ್ವದ 'ಭಾವಾಽಭಿವ್ಯಕ್ತಿ' ಯಾಗಿ ನೂರಾತೊಂಬತ್ತೆರಡು ಪುಟಗಳವರೆಗೆ ಹರಹಿಕೊಂಡಿದೆ,

ಗಣಪತಿಯನ್ನು ಮಾಡುವುದು ಒಂದು ರೀತಿಯಿಂದ ಸುಲಭ: ಡೊಳ್ಳು ಹೊಟ್ಟೆ, ಮೇಲೊಂದು ಸೊಂಡಿಲು ಮುಖ, ಅದರ ಪಕ್ಕಕ್ಕೆರಡು ಆನೆಗಿವಿ, ತಲೆಯ ಮೇಲೊಂದು ಕಿರೀಟ, ಕಂಠದ ಕೆಳಗಡೆ ಹೊಟ್ಟೆಯ ಮೇಲ್ಗಡೆ ಪಕ್ಕಕ್ಕೆರಡೆರಡು ನಾಲ್ಕು ಹೋಟುಗೈ, ಎರಡು ಮೋಟುಗಾಲು– ಚಂದವೋ ಚಂದಲ್ಲವೋ ಯಾರು ಬೇಕಾದರೂ ಮಾಡಬಹುದು. ಅಂಥ ಗಣಪತಿಯು ಗಣಪತಿಯೇ ಆಗಿರುತ್ತಾನೆ.

ಆದರೆ, ಅವನ ಜೊತೆ–ಜೊತೆಗೆ ಅವನಪ್ಪನ್ನ ಮಾಡಬೇಕಾದರೆ, ಅಂದರೆ ಅದಕ್ಕಿಂತಲೂ ಸುಂದರ ಮಾಡಬೇಕೆಂದರೆ, 'ಅಪ್ಪ'ನ ಜೊತೆಗೆ 'ಅಮ್ಮ'ನನ್ನೂ ಮಾಡಬೇಕು. ಹಾಗೆಯೇ ಮಕ್ಕಳಿಬ್ಬರನ್ನೂ, ಅವರೆಲ್ಲರ ವಾಹನಗಳನ್ನೂ, ಅವರ ಆಯುಧಾದಿಗಳನ್ನೂ ಮಾಡಬೇಕು. ಇವೆಲ್ಲ ಸುಮ್ಮನೆ ಆಗುತ್ತವೆಯೆ? ಮಾಡುವವನ ಜಾಣ್ಮೆ ತಾಳ್ಮೆ ಶ್ರಮ ಶ್ರದ್ಧೆ, ನಿಷ್ಠೆ ಎಷ್ಟಿರಬೇಡ! ಪೂರ್ಣತ್ವದ ವಿವರಣೆ ಗಣಪತಿಯಾದರೆ, ಇದರ ಪರಿಣತಿ ಯಾದ 'ಭಾವಾಭಿವ್ಯಕ್ತಿ' "ಅವನಪ್ಪ". ಶಿವ–ಶಿವೆಯ ಸಂಸಾರ ದೊಡ್ಡ ದಲ್ಲವೆ? ಇಲ್ಲಿ ಉಪಕ್ರಮಾದಿ ಷಡ್‌ಲಿಂಗಯುಕ್ತವಾದ ಭಾವಾಽಭಿವ್ಯಕ್ತಿಯ ಸರಳ ವಿಧಾನವನ್ನೊಳಗೊಂಡ ಪೂರ್ಣತ್ವದ ಪ್ರತಿಪಾದನೆಯ 'ಭಾವಾಽಭಿ ವ್ಯಕ್ತಿ'— ಭಾಷ್ಯವೂ ತನ್ನ ಮಹಿಮೆಯ ತಾತ್ತ್ವಿಕ ಗುಣದಿಂದ ದೊಡ್ಡದೇ.

ಆಧ್ಯಾತ್ಮದಲ್ಲಿ ಬಲು ಚರ್ಚಿತವಾದ ಪೂರ್ಣ – ಪೂರ್ಣತ್ವದ ಬಗೆಗೆ

"ಪೂರ್ಣತ್ವದಿಂದ ಪರಿಚಿತ ।
ಪೂರ್ಣಾಽಽಕೃತಿಗಳನು ಪಡೆದ ವರ್ಣದ ಜಗದೊಳ್ ॥
ಪೂರ್ಣತ್ವ, ಪೂರ್ಣ ಕೃತಿಯನು ।
ಪೂರ್ಣನ ಗುರುಸಿದ್ಧ ವರ್ಣಿಸಿದನೀ ಪರಿಯೊಳ್ ॥"

ಈ ಪರಿಯೊಳ್ 'ಭಾವಾಽಭಿವ್ಯಕ್ತಿ' ಭಾಷ್ಯದೊಂದಿಗೆ, ವರ್ಣಿಸಿದ ಪೂರ್ಣನ ಗುರುಸಿದ್ಧರ ಪೂರ್ಣತ್ವವು ಪಂಡಿತ ಮಂಡಲಿಯಿಂದ ಮೆಚ್ಚಿಗೆ ಪಡೆದ ಕೃತಿ. ಇದನ್ನು ನಮ್ಮ 'ರಾಜಗುರು ಪ್ರಕಾಶನ'ದಿಂದ ಪ್ರಕಾಶಪಡಿಸಲು ಅನುಮತಿಯನ್ನಿತ್ತು ಕೃಪೆದೋರಿದ ಪೂರ್ಣತ್ವಕಾರರಿಗೆ ಚಿರಋಣಿಯಾಗಿದ್ದೇವೆ.

* * * *

'ಪೂರ್ಣತ್ವ' ಪ್ರಾಪ್ತಿ ಮಾಡಿಸಲು ಸಹಾಯಕರಾಗಿ 'ಶಿವ-ಸಂಕಲ್ಪ'ವನ್ನು ನೆನಪಿಸಿಕೊಟ್ಟ ಸನ್ಮಾನ್ಯ ಶ್ರೀ ದ. ರಾ. ಬೇಂದ್ರೆಯವರಿಗೂ, 'ಪೀಠಿಕೆ'ಯನ್ನು ಕೈಗಿತ್ತಿರುವ ಪೂಜ್ಯ 'ಶ್ರೀ. ಜ. ಚ. ನಿ.'ಯವರಿಗೂ, 'ಆಶೀರ್ವಚನ'ವನ್ನು ಅನುಗ್ರಹಿಸಿದ ಪರಮಪೂಜ್ಯ "ಶ್ರೀ.ಮೂ.ಜ.ಗಂ." ಅವರಿಗೂ, 'ಸುಹೃದ್-ವಚನ'ದಿಂದ ಮುನ್ನಡೆಸಿದ ನಲ್ಮೆಯ ಶ್ರೀ ಸಿಂದಗೀ ಸಿದ್ಧರಾಮದೇವರಿಗೂ – ಅದರಂತೆ – ಸಹಾಯಕರಿಗೆ ಸಹಾಯಕರಾಗಿರುವ 'ಕುಮಾರೇಶ್ವರ ಶಿವಯೋಗಿ ಸಂಘ'ದ ಗೆಳೆಯರಿಗೆ ಹಾಗೂ ಆದರಣೀಯ ಶ್ರೀ ಎಚ್. ಪಿ. ಹುಲ್ಯಾಳರ ಜೊತೆಗೆ, ಸುಂದರವಾಗಿ 'ಪೂರ್ಣತ್ವ'ವನ್ನು ಮುದ್ರಿಸಿಕೊಟ್ಟ 'ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಪ್ರೆಸ್ಸಿ'ನ ಕಾರ್ಯಕರ್ತರಿಗೂ ಕೃತಜ್ಞತೆಯ ಧನ್ಯವಾದಗಳನ್ನು ಸಮರ್ಪಿಸುತ್ತೇವೆ.

—ಪ್ರಕಾಶಕರು

*

ಪೂರ್ಣತ್ವ

ಪೂರ್ಣತ್ವ

ಶ್ರಮವಹಿಸಿ, ಶ್ರುತಿ–ಗಾಣ
ತಿರು ತಿರುಗಿ, ಕೊನೆ ಹೊತ್ತು

ಗತಿ–ಎಣ್ಣೆ ಬರದೆ ವೃತ್ತಿ
ಬಿಡಲದು ಅರೆ–ಸುತ್ತು.

‘ ವೃತ್ತಿ ವೃತ್ತದ ಸ್ಫೂರ್ತಿ ’
ಎಂದು, ಗಾಣದ ಎತ್ತು

ಏರಿಳಿತ, ಎಡ ವ ಬಲ
ಬಿಟ್ಟು: ಮತ್ತೂ ಮತ್ತು

ಮುಂದಗೇ ತಿರುಗುವುದು
ಪೂರ್ಣ ಮಾರ್ಗದ ಸುತ್ತು.

ತಿರುಗು; ಪೂರ್ಣ ತಿರುಗದೆ
ಬಿಡಬೇಡ ಬೇಸತ್ತು.

'ತಿರುಗಿದ್ದೆ ತಿರುಗುವುದೆ ?'
ಇತಿ ನಿಲ್ಲದಿರು ಅತ್ತು,
"ಅ–ಕ್ಷ" ಎಂಬೈವತ್ತು
ಅಕ್ಷರದ ನಿಜ ಸುತ್ತು:
ಜಗ ತುಂಬ ಬೆಳೆದಿಹುದು
ವಿದ್ಯೆ ನಾಮುದ ಸುತ್ತು.
ಬೆಳೆಸು; ಪೂರ್ಣ ಬೆಳೆಸದೆ
ಬಿಡಬೇಡ ಬೇಸತ್ತು.

ಗಡಿಯಾರ ಮುಳ್ಳುಗಳು
ಅಷ್ಟೆ ಅಂಕೆಯ ಸುತ್ತ
ಕೀಲಿ ಇರೆ ತಿರುಗುವವು—
ದಿನ – ದಿನಕು ಕೆಲ ಸುತ್ತು.
ಸುತ್ತದಿರೆ ಸರಿಯಾಗಿ
ತಿಳಿಸಲಾರವು ಹೊತ್ತು.
ತಿಳಿಸು ; ಪೂರ್ಣ ತಿಳಿಸದೆ
ಬಿಡಬೇಡ ಬೇಸತ್ತು.

ಮೇರುವನು ಎಡಕಿಟ್ಟು
　　ಪೂರ್ವಕ್ಕೆ ಇಡು ಕತ್ತು
ಒಂದೆ ಸುತ್ತಿಗೆ ಎಂಟು
　　ದಿಶೆ ನಿನಗೆ ಬಲ, ಗೊತ್ತು;
ಗೊತ್ತು–ಗುರಿ ಎಲ್ಲಕೂ
　　ಒಲುಮೆಯೇ ನಿಜ ಸೊತ್ತು.
ಒಲಿಸು; ಪೂರ್ಣ ವಲಿಸದೆ
　　ಬಿಡಬೇಡ ಬೇಸತ್ತು.

ಬಾಲ್ಯದಲಿ ತೊಟ್ಟಿಲವು
ಒಂದೆ ವಿಧ ಬರುತಿತ್ತು ;
ಶ್ರುತಿ ಮಧುರ ಜೋಗುಳದ
ಪದ ಕೇಳಿಸುತಲಿತ್ತು ;
ಒಂದೆ ಪಥದಿಂದ ಕಿರಿ
ಮಗುವ ನಲಿಸುತಲಿತ್ತು.
ನಲಿಸು ; ಪೂರ್ಣ ನಲಿಸದೆ
ಬಿಡಬೇಡ ಬೇಸತ್ತು.

ಸ್ವಯಮೇವ ಜೋಕಾಲಿ
    ಜೀಕಲಿಕೆ ಮನ ತೆತ್ತು,
ಅದರಲ್ಲಿ ನೀಟಾಗಿ
    ಕುಳಿತೊ, ನಿಂತೋ ಮತ್ತು
ಎರಡು ಕೈಯಲಿ ಎರಡು
    ಹಗ್ಗ ಹಿಡಿ; ಜೀಕೆತ್ತು.
ಜೀಕು; ಪೂರ್ಣ ಮುಗಿಸದೆ
    ಬಿಡಬೇಡ ಬೇಸತ್ತು.

ಧರಣಿ, ಜಲ, ಉರಿ, ಗಾಳಿ,
ಗಗನ ಪೂರ್ಣನ ಸುತ್ತು–

ಮುತ್ತಲೂ ತಿರುಗುವವು–
ಒಂದೆ ಗತಿಯುಳ ಸುತ್ತು.

ತಿರುಗದಿರೆ ಹೊಂದುವವು
ಅಂತಿಮ ಲಯದ ಗೊತ್ತು.

ತಿರುಗು; ಪೂರ್ಣ ತಿರುಗದೆ
ಬಿಡಬೇಡ ಬೇಸತ್ತು.

"ಜನರೇಟರಿ" ನಿಂದ ಹೊರ-
ಹೊರಟ ನೆಗೆಟಿವ್ ಮತ್ತು
ಪೋಜಿಟಿವ್ ವಾಯ್ರ ಸರ್-
ಕಿಟ್ಟು ಸರ್ಕಲ್=ಸುತ್ತು
ಪೂರ್ಣ ಇರೆ, ಪಾವರ್ ವ
ಲೈಟ್ ಸ್ವಿಚ್ಚ ಆನ್ ಒತ್ತು.
ಇರಿಸು; ಪೂರ್ಣ ಇರಿಸದೆ
ಬಿಡಬೇಡ ಬೇಸತ್ತು.

ಹುಣ್ಣಿಮೆ – ಅಮಾವಾಸ್ಯೆ
ಮರುದಿನವೆ ಪ್ರತಿಪತ್ತು.

ಪಂಚಾಕ್ಷರೀ ಮಂತ್ರ
ಐದರಡೆ ಸಂಮಿತ್ತು;

ನೂರೆಂಟು ಸಲ; ಸದಾ ಪುನಃ
ಜಪಿಸಿದರು ಸಂಪತ್ತು.

ಜಪಿಸು; ಪೂರ್ಣ ಜಪಿಸದೆ
ಬಿಡಬೇಡ ಬೇಸತ್ತು.

ಪೂಜೆಯನು ಕೈಕೊಳ್ಳೆ
　　ಇಷ್ಟಲಿಂಗಕು ನುತ್ತು
ಲಿಂಗ ಸಾಲಿಗ್ರಾಮಕೂ
　　ಪೂರ್ಣತೆಯ ಸುತ್ತು ;
ಮೂರ್ತಿ ಪ್ರಭಾವಳಿಯು
　　ಮಿಂಚುವುದು ಮುಖಸುತ್ತು
ಮಿಂಚು ; ಪೂರ್ಣ ಮುಗಿಸದೆ
　　ಬಿಡಬೇಡ ಬೇಸತ್ತು.

“ ಪೂರ್ಣತೆಯು ಪರಮ ಶಿವನೇ !
ಪರಿಹರಿಸು ಕುತ್ತ. ”

ಎಂದು, ಪ್ರದಕ್ಷಿಣೆಯ
ಕ್ರಿಯೆಯಿಂದ ತನುವಿತ್ತ,

ಭಕ್ತಜನ ತಿರುಗುವರು
ದೇವಾಲಯದ ಸುತ್ತ.

ತಿರುಗು ; ಪೂರ್ಣ ತಿರುಗದೆ
ಬಿಡಬೇಡ ಬೇಸತ್ತ.

ರಕ್ಷಿಸುವ ಚಕ್ರಪಾಣಿಯು
ಚಕ್ರಕೂ ಮತ್ತು
ಯಂತ್ರ–ವಾಹನ–ಬಂಡಿ–
ಚಕ್ರಗಳಿಗೂ ಸುತ್ತು–
ವರೆಯುವಿಕೆ ಅದರದರ
ಚಲಿಸುವಿಕೆಯು ಮಹತ್ತು.
ಚಲಿಸು; ಪೂರ್ಣ ಚಲಿಸದೆ
ಬಿಡಬೇಡ ಬೇಸತ್ತು.

ಗ್ರಹಣವಿಲ್ಲದ ಪೂರ್ಣ
ಹುಣ್ಣಿಮೆಯ ಶಶಿ ಮತ್ತು
ದಿನ–ದಿನದ ರವಿ ರೂಪು
ಪೂರ್ಣ ರೂಪದ ಸುತ್ತು.
ಪೂರ್ಣ ರೂಪವ ಪಡೆದು,
ಬೆಳಗಿಸುವವು ಜಗತ್ತು.
ಬೆಳಗು; ಪೂರ್ಣ ಬೆಳಗದೆ
ಬಿಡಬೇಡ ಬೇಸತ್ತು.

ನೀರೊಳಗೆ, ನೀರ್‌ಮೇಲೆ
ಗಾಳಿ ಬೀಸಲು ಮತ್ತು
ಕೆರೆ, ಭಾವಿ ನೀರಲ್ಲಿ
ಕಲ್ಲು ಬೀಳಲು ಸುತ್ತು
ದುಂಡನೆಯ ತೆರೆಯೆದ್ದು
ಚಲಿಸುತ್ತಲಿವೆ, ಗೊತ್ತು.
ಚಲಿಸು; ಪೂರ್ಣ ಚಲಿಸದೆ
ಬಿಡಬೇಡ ಬೇಸತ್ತು.

ಜಲನಿಧಿಯು ಜಲ–ಬಿಂದು
    ಉಗೆ, ಮೇಘ, ಮಳೆ, ಮತ್ತು
ಹಳ್ಳ, ಹಿರಿ ಹೊಳೆ ಆಗಿ,
    ಮರಳಿ ಬರಲೋರ್ ಸುತ್ತು.
ಸುತ್ತುತ್ತ ಜಗವನ್ನೆ
    ಸಲಹುವುದು ತಣ್ಪಿತ್ತು.
ಸಲುಹು; ಪೂರ್ಣ ಸಲುಹದೆ
    ಬಿಡಬೇಡ ಬೇಸತ್ತು.

ಮುತ್ತೈದೆಯ ಕರಿ ಮಣಿ–
ತಾಳಿ ಸರ, ಬಳೆ, ನತ್ತು,

ಕುಂಕುಮದ ಬೊಟ್ಟು ಸಹ
ಪೂರ್ಣತೆಯ ಕಲೆ ಹೊತ್ತು,

ಸತ್ಯ–ಶಿವ–ಸುಂದರತೆ
ಬೆಳೆಸುವವು ಗೆಲುವಿತ್ತು.

ಬೆಳೆಸು; ಪೂರ್ಣ ಬೆಳೆಸದೆ
ಬಿಡಬೇಡ ಬೇಸತ್ತು.

ಜಪಮಾಲೆ, ಶಿವದಾರ,
ಜನಿವಾರಗಳ ಮತ್ತು
ಸುತ್ತಿದೆಲ್ಲ ರುಮಾಲು,
ಪಟಗ, ಶೆಲ್ಲೆಯು ಸುತ್ತು
ವರ್ತುಳದ್ದದಕಾಗಿ
ಪರಿಪೂರ್ಣತೆಯು ಸುತ್ತು.
ಧರಿಸು; ಪೂರ್ಣ ಧರಿಸದೆ
ಬಿಡಬೇಡ ಬೇಸತ್ತು.

ಆರು ಅರಿಗಳ ಗೆದ್ದು,
ಮೂರ್ ತಿಳಿದ ಅರುವತ್ತು +
ಮೂರು (63) ಪ್ರಮಥ ಗಣದ
ಸಂಖ್ಯೆ ಪೂರ್ಣದ ಸುತ್ತು.
ವ್ಯಕ್ತಿ ಸಂತುಷ್ಟ ಇರೆ,
ಮುಕ್ತಿ, ಸುಖ ತಾ ತೊತ್ತು.
ಸುಖಿಸು; ಪೂರ್ಣ ಸುಖಿಸದೆ
ಬಿಡಬೇಡ ಬೇಸತ್ತು.

ಕನ್ನಡದ "ಓಂ"–ಪೂಜಿ
ಅರಮನೆ ವಸತಿ ಮತ್ತು

ಆಶ್ರಯ ಪಡೆದು, ಪದದ
ಮೊದಲ ನೆಲೆ ಕಳೆದತ್ತು,

'ಜ'ದ ರೂಪ ತಳೆದು ನಿಜ–
ನಿಜತೆ ಅಳಿವುದು ಗೊತ್ತು.

ಗಳಿಸು; ಪೂರ್ಣ ಗಳಿಸದೆ
ಬಿಡಬೇಡ ಬೇಸತ್ತು.

ಎಱೆಯ = ದೊರೆ; ಎರೆಯ = ಹಾಲ್
ಎರೆಯಲಾರನು ಸತ್ತು.

ಕನ್ನಡದ 'ಱಳ–ಕುಱ'ದ
ರೇಫದಾಕೃತಿ ಮತ್ತು

'ಗುರು' ಪದದ ರೇಫವೂ
ಸಹ ಪೂರ್ಣ ಗೆರೆ ಸುತ್ತು.

ಸುತ್ತು; ಪೂರ್ಣ ಮುಗಿಸದೆ
ಬಿಡಬೇಡ ಬೇಸತ್ತು.

“ಅಂ”ದಲ್ಲಿ ಇಹುದೆಂದೆ
ಪದ–ಬಹುವಚನ ಮತ್ತು

“ಕಾಮ ಕೇಲೇ ಪಾಹಿ–
ಜೇ”ದಲ್ಲಿ “ಅಂ”ಕಿತ್ತು,

‘ಆತಾಂ’ (=ಈಗಲೆ) ಮರಾಠಿ ನುಡಿ
ಲಿಖಿಸುವೆನು ಬೆಲೆ ಇತ್ತು.

ಲಿಖಿಸು; ಪೂರ್ಣ ಲಿಖಿಸದೆ
ಬಿಡಬೇಡ ಬೇಸತ್ತು.

ಬಂಗಾಲಿ ಅಂ, ಅಃ ವ
ಚಂದ್ರಬಿಂದುವು; ಮತ್ತು
ಅದರಂತೆ "ಯ–ರ–ಡ–ಢ"ದ
. . . .
ಕೆಳಗೆ ಬಿಂದುವನಿತ್ತು,
ಶಕ್ತಿ ಸಾಹಿತ್ಯಾರ್ಥ
ಹೇಳುವೆವು ಮನನಿತ್ತು.
ಹೇಳು; ಪೂರ್ಣ ಮುಗಿಸದೆ
ಬಿಡಬೇಡ ಬೇಸತ್ತು.

ج ٹ ت پ ب و ر اُ
ಮತ್ತು ش ز خ چ
ವ ڨ ف ع ک ض
ಬಿಂದುವನಿತ್ತು, ಗೆ ں

ಲಿಖಿಸುವೆನು; "O"(=ಹೇ) ಅಂತು
ಪೂರ್ಣ ಪೂರ್ಣದ ಗೊತ್ತು.

ಲಿಖಿಸು; ಪೂರ್ಣ ಲಿಖಿಸದೆ
ಬಿಡಬೇಡ ಬೇಸತ್ತು.

ಉರ್ದು ಬೆ-ಪೆ-ತ್ರೆ-ಸೆ-ಜೀಮು
ಚೆ-ಖೆ-ಜಾಲ್-ಜೆ-ಶೀನ್ ಮತ್ತು

ಜ್ವಾದ್-ಜೊ-ಗೈನ್-ಫೇ-ಕಾಫ್ ನ
ನೂನ್‌ಗೆ ಬಿಂದುವನಿತ್ತು,

ಲಿಖಿಸುವೆವು; 'ಹೆ' ಅಂತು
ಪೂರ್ಣ ಪೂರ್ಣದ ಗೊತ್ತು.

ಲಿಖಿಸು; ಪೂರ್ಣ ಲಿಖಿಸದೆ
ಬಿಡಬೇಡ ಬೇಸತ್ತು.

ಅರಬಿ–ಫ಼ಾರ್ಶೀ ಶಬ್ದ
ಸ್ವೀಕರಿಸಿ, ವಿಧಿ ಇತ್ತು,

ದೇವನಾಗರಿ ಲಿಪಿಗೆ
ಸಮ ಮನ್ನಣೆಯನಿತ್ತು,

ಕ಼–ಖ಼–ಗ಼–ಜ಼–ಡ಼–ಢ಼–ಫ಼ ಬೆರೆಸು
ಬಿಂದು-ಗಂಗೆಯನಿತ್ತು.

ಬೆರೆಸು; ಪೂರ್ಣ ಬೆರೆಸದೆ
ಬಿಡಬೇಡ ಬೇಸತ್ತು.

ಉರ್ದು
ಅಸಲು ೨೪ನೇ ಪುಟಕ್ಕೆ

ಇಂಗ್ಲೀಷ ಏ, ಬೀ, ಸಿ
ಮುಂತಾದ ಇಪ್ಪತ್ತು-
ಆರು ವರ್ಣದ ಪೈಕಿ
ಮುದ್ರಿಸಿದರೂ ಮತ್ತು
ಲಿಖಿಸಿದರು "ಓ" (=O) ಒಂದೆ
ಪೂರ್ಣದಾಕೃತಿ ಸುತ್ತು.
ಲಿಖಿಸು; ಪೂರ್ಣ ಲಿಖಿಸದೆ
ಬಿಡಬೇಡ ಬೇಸತ್ತು.

"స్వాధీన" ఐ (= I = İ) = The ninth Letter of the English alphabet-- Used as the Pronoun.

The pronoun I (= Ï)
which denotes the person shea-
king is said to be Personal
Pronoun of the First Person.

స్వాధీన I (ఆయన్) means personal pronoun, common gender, singular number, first person; nominative case, subject of the verb transitive or intransitive.

ఇష్టత్వంబు: ______________________________

ಇಂಗ್ಲೀಷ ಎಮ್ (=M) ಸಹ-
ಸ್ರ; ಸಿ(=c)ನೂರು; ಎಕ್ಸ್ (=X)
ಹತ್ತು;
ಐದು (=V)ವೀ; ಐವತ್ತು (=L)
ಎಲ್;—ಒಳಬಳಿಕೆ ಮತ್ತು

ಬಿಂದು ಇರದ ಕಪಟಿಲ್
"ಸ್ವಾರ್ಥಿ" ಐ (=I) ಓರ್ ಸೊತ್ತು.

ಇರಿಸು; ಪೂರ್ಣ ಇರಿಸದೆ
ಬಿಡಬೇಡ ಬೇಸತ್ತು.

" ಅಂ " ದನುಸ್ವಾರವೇ
ಪೂಜಿ ಹಾಗೂ ಹತ್ತು

ಸೂಚಿಸುತ ಪೂರ್ಣತೆಯ
ದುಂಡಾದ ಗುರುತಿತ್ತು,

ಸಂಖ್ಯೆಯನು, ವರ್ಣವನು
ನುಡಿಸುವುದು—ನೆರವಿತ್ತು.

ನುಡಿಸು; ಪೂರ್ಣ ನುಡಿಸದೆ
ಬಿಡಬೇಡ ಬೇಸತ್ತು.

ಪ್ರಶ್ನಾರ್ಥ   ಉದ್ಗಾರ-
(?)   (!)
ನಾಚ್ಯದ ಕೆಳಗೆ ಮತ್ತು

ಅರ್ಧ,   ವಿವರ   ವ   ವಿಸರ್ಗ-
(;)   (:)   (ಃ)
ಗಳಿಗೆ ಬಿಂದುವನಿತ್ತು,

ಪೂರ್ಣಗುಣ ಸಾಹಿತ್ಯ
(.) ಲೇಖನಕೆ ಲಿಪಿ-ಮುತ್ತು

ಲಿಖಿಸು ಪೂರ್ಣ ಲಿಖಿಸದೆ
ಬಿಡಬೇಡ ಬೇಸತ್ತು.

ದುಂಡು ಅಥವಾ ಚೌಕು

( )   [><]   [ ]

“ ಬ್ರಾಕೆಟ್ಟು ”ಗಳ ಸುತ್ತು

ಒಂದರೊಂದರ ಇದಿರು-
ಬದಿರಾಗಿರುವ ಗತ್ತು;

ಜೊತೆಗೂಡಿ ಪೂರ್ಣತೆಯು
ತಿಳಿಸುತಿಹ ಗೆರೆ ಸುತ್ತು.

ತಿಳಿಸು; ಪೂರ್ಣ ತಿಳಿಸದೆ
ಬಿಡಬೇಡ ಬೇಸತ್ತು.

ಸಂಬಂಧಿ ಕೆಳಗಿಳಿಯೆ
(')

ಅಲ್ಪ-ಮಾನ, ವಿಪತ್ತು;
(,)

ಕಾಮ ಮೇಲ್ ಮುಖ ಮಾಡೆ,
(,)

ಸಂಯೋಜಕದ ಗೊತ್ತು.
(‘)

ಸಂಯೋಜಕವೆರಡನು
(‘’ “”)

ಅತಿನಿಕಟ ಇಡೆ ಸುತ್ತು.

ಇಡಿಸು; ಪೂರ್ಣ ಇಡಿಸದೆ

ಬಿಡಬೇಡ ಬೇಸತ್ತು.

ಪೂರ್ಣತೆಯ ಸುಖ ಜೀವಿ
ಪ್ರತಿದಿನವು ಜಾಗ್ರತ್ತು,
ಸ್ವಪ್ನ ವ ಸುಷುಪ್ತಿಗೂ
ಸಕ್ರಮ ಸಮಯವಿತ್ತು,
ಸಂತೈಸಿ, ಸುಖಿಸುವನು—
ಅನ್ಯರಿಗು ಸುಖವಿತ್ತು.
ಸುಖಿಸು; ಪೂರ್ಣ ಸುಖಿಸದೆ
ಬಿಡಬೇಡ ಬೇಸತ್ತು.

ಪುತ್ರ–ಮಮತಾ–ಸಹಿತ –
ಮಸ್ತು ತವ ಮಾತೃ-ಹೃತ್ತು.
ಸೋದರರು ಅರಿತಿರಲಿ
ನಿನ್ನ ದಿವ್ಯ ಮಹತ್ತು.
ಹರಸಿ, ಸಲುಹಲಿ ಸದಾ
ಸ-ಕಲ ಜನ ಪರಿಷತ್ತು.
ಸಲುಹು; ಪೂರ್ಣ ಸಲುಹದೆ
ಬಿಡಬೇಡ ಬೇಸತ್ತು.

ಓಂ ಪೂರ್ಣ; ಅದು ಪೂರ್ಣ;
ಇದು ಪೂರ್ಣವಿದೆ ಮತ್ತು

ಪೂರ್ಣದಿಂದಲೆ ಪೂರ್ಣ;
ಅದೆ ಸತ್ತು; ಅದೆ ಚಿತ್ತು;

ಪೂರ್ಣದಲಿ ಪೂರ್ಣ ಕಳೆ-
ದರು, ಬೆರೆಸುವದು ಮತ್ತು.

ಬೆರೆಸು; ಪೂರ್ಣ ಬೆರೆಸದೆ
ಬಿಡಬೇಡ ಬೇಸತ್ತು.

ಭ್ರಮ ವಹಿಸಿ, ಶ್ರುತಿ–ಗಾಣ
ತಿರು ತಿರುಗಿ, ಕೊನೆ ಹೊತ್ತು

ಗತಿ–ಎಣ್ಣೆ ಬರದೆ ವೃ-
ತ್ತಿ ಬಿಡಲದು ಅರೆ–ಸುತ್ತು.

ಅಮ್ಮ! ಪೂರ್ಣ ಮುಗಿಸದೆ
ಬಿಡಬೇಡಬೇ! ಸತ್ತು.

ತಮ್ಮ! ಪೂರ್ಣ ಮುಗಿಸದೆ
ಬಿಡಬೇಡ ಬೇಸತ್ತು.

|| ಕಂದ ||

ಪೂರ್ಣತ್ವದಿಂದ ಪರಿಚಿತ ।
ಪೂರ್ಣಾಕೃತಿಗಳನು ಪಡೆದ
ವರ್ಣದ ಜಗದೋಳ್ ||

ಪೂರ್ಣತ್ವ, ಪೂರ್ಣ ಕೃತಿಯನು ।
ಪೂರ್ಣನ ಗುರುಸಿದ್ಧ
ವರ್ಣಿಸಿದನೀ ಪರಿಯೋಳ್ ||

卐

ಪೂರ್ಣತ್ವ—ಭಾವಾಭಿವ್ಯಕ್ತಿ

ಪೂರ್ಣತ್ವ–ಭಾವಾಭಿವ್ಯಕ್ತಿ

ಪುಟ ೧ ಮತ್ತು ೩೭]

ಶ್ರಮ ವಹಿಸಿ, ಶ್ರುತಿ-ಗಾಣ ತಿರು ತಿರುಗಿ, ಕೊನೆ ಹೊತ್ತು
ಗತಿ-ಎಣ್ಣೆ ಬರದೆ, ವೃತ್ತಿ ಬಿಡಲದು ಅರೆ-ಸುತ್ತು.
ಅಮ್ಮ ! ಪೂರ್ಣ ಮುಗಿಸದೆ ಬಿಡಬೇಡ ! ಬೇಸತ್ತು.
ತಮ್ಮ ! ಪೂರ್ಣ ಮುಗಿಸದೆ ಬಿಡಬೇಡ ! ಬೇಸತ್ತು.

ಪೂರ್ಣತ್ವವನ್ನು ಯಥಾಶಕ್ತಿ ಸಂಪೂರ್ಣವಾಗುವಂತೆ ಪ್ರತಿ ಾದಿಸುವ "ಪೂರ್ಣತ್ವ" ಪುಸ್ತಕದ ಸಿದ್ಧಾಂತ ವಾಕ್ಯ : "ಶ್ರಮ ಹಿಸಿ, ಪೂರ್ಣ ಮುಗಿಸದೆ ಬಿಡಬೇಡ ಬೇಸತ್ತು !" ಅರ್ಥಾತ್ ೊನೆ ಹೊತ್ತಿನ ವರೆಗೆ, ಬೇಸರಿಸದೆ, ಮತ್ತೆ-ಮತ್ತೆ ಪೂರ್ಣ ುಗಿಸುತ್ತಿರುವ ವೃತ್ತಿಯು ಪೂರ್ಣ ಸುತ್ತು; ಪೂರ್ಣ ಸುತ್ತು ರದೆ ಗತಿಯ ಪ್ರಾಪ್ತಿಗಿಂತ ಮುಂಚೆ ಅರ್ಧಕ್ಕೇ ಬಿಟ್ಟ ಕಾರಣ ಂದಾಗಿ ಅರೆ–ಕೊರೆಯಾಗಿಸುವ ವೃತ್ತಿಯೇ ಅರೆ-ಸುತ್ತು.

ಅರೆಸುತ್ತು ಅನಪೇಕ್ಷಿತ; ಅಪೇಕ್ಷಿತವಾದದ್ದು—ಪೂರ್ಣ ುತ್ತು. ಪೂರ್ಣವಾಗುವಂತೆ ಶ್ರಮವಹಿಸಿ, ಶ್ರುತಿಯೆಂಬ ಗಾಣ ನ್ನು ಸುತ್ತುತ್ತಿದ್ದರೆ, ಗತಿಯೆಂಬ ಎಣ್ಣೆ ಬರುತ್ತದೆ. ಗತಿ-ಎಣ್ಣೆ ರದೆ, ವೃತ್ತಿಯನ್ನು ಬಿಡಲು ಅದು ಅರೆ–ಸುತ್ತು.

"ಅರೆ–ಸುತ್ತು" ಅಂದರೇನು? ಎಂಬುದನ್ನು ವಾಚ್ಯಾರ್ಥದಿಂದ ಳಿಸಿ, "ಗತಿ–ಎಣ್ಣೆ ಬರುವ ವರೆಗೆ ವೃತ್ತಿ ಬಿಡಬಾರದೆಂ"ದು

ಲಕ್ಷ್ಯದಲ್ಲಿರಿಸಿ, ಉಪಕ್ರಮೋಪ - ಸಂಹಾರಗಳಿಂದ ಪೂರ್ಣ
ಬಗ್ಗೆ ಸುಲಲಿತವಾಗಿ ನಿರ್ದೇಶನ ಮಾಡುವ ಈ "ಶ್ರಮ ವ
ಶ್ಲೋಕದಲ್ಲಿದ್ದಂತೆ, ಈ ಸಂಪೂರ್ಣ "ಪೂರ್ಣತ್ವ" ಪುಸ್
ಲಲಿತ ರಗಳೆಯ ಛಂದದಲ್ಲಿದೆ.

ಸಿದ್ಧಾಂತದ ಈ ಶ್ಲೋಕದಲ್ಲಿ ಅಂತಿಮ ಪ್ರಾಸವಾಗಿ ಹೊ
ಸುತ್ತು–ಸತ್ತು-ಬೇಸತ್ತು ಶಬ್ದಗಳ ಪ್ರಯೋಗ ಸಾರ್ಥಕವಾ
ಅದರಂತೆ 'ಪೂರ್ಣತ್ವ' ಪುಸ್ತಕದುದ್ದಕ್ಕೂ ಅಂದರೆ ಎಲ್ಲ ಶ
ಗಳಿಗೂ (ಕೊನೆಯ ಕಂದ ಪದ್ಯದ ಹೊರತಾಗಿ) ತ್ತು–
ಎಂಬ ಒಂದೇ ತರಹದ ವರ್ಣಪ್ರಾಸವಾಗಿ, ಪೂರ್ಣತ್ವ ಪ್ರಾಪ್ತಿ
ದೆಶೆಯಿಂದ, ಕೊನೆ ಹೊತ್ತಿನ ವರೆಗೂ "ತ್ತು"ಕಾರವು ಬೇಸ
ನಿಲ್ಲದೆ, ಮತ್ತೆ–ಮತ್ತೆ ಸುತ್ತುವರಿದಿದೆ. ೧೩೬ ಸಲ ಕಂಡಿದೆ.

ಪೂರ್ಣ ಶಿವನು ಶ್ರಮವಹಿಸಿ, ಮೂವತ್ತಾರು ತತ್ತ್ವರ
ದಲ್ಲಿ ಪ್ರಕಟವಾಗಿರುವನು. ಅದರಂತೆ ಈ "ಪೂರ್ಣತ್ವ"
ಕದಲ್ಲಿಯ ಪದ್ಯಗಳು ಮೂವತ್ತಾರು. ಶಕ್ತಿರಹಿತನಾದ ಶಿ
ತನಗೆ ಹೊರತಾದ (ವಾಸ್ತವಿಕವಾಗಿ ತನಗೆ ಅಭಿನ್ನವಾ
ಮೂವತ್ನಾಲ್ಕು ತತ್ತ್ವಗಳ ನಿರ್ಮಾಣದಲ್ಲಿ ಅರೆ-ಸುತ್ತಿನಂ
ತ್ತಾನೆ. ಆದುದರಿಂದ 'ಪೂರ್ಣತ್ವ'ದ ಮೊದಲ ನುಡಿಯು ಸ
ಅರೆ-ಸುತ್ತು.

ಶಿವೆಯಿಲ್ಲದ ಶಿವನು ಶವದಂತಾಗಿರುತ್ತಾನೆ. ಇದರಿಂ
ಅವನು ಕರ್ಮ ಮಾಡಲಾರನು. ಆದುದರಿಂದ ಇಲ್ಲಿಯ 'ಶ
ಗಾಣ' ಹಾಗೂ 'ವೃತ್ತಿ' ಪದಗಳ ಕರ್ಮ–ಕಾರಕ ಪ್ರತ್ಯ
ಸ್ಫುಟವಾಗಿಲ್ಲ; ಮತ್ತು ಪ್ರಧಾನ ಕ್ರಿಯಾಪದವು ಪ್ರತ್ಯಕ್ಷ
ತೋರುವದಿಲ್ಲ. ಹೀಗೆ ತೋರದಿರುವ ಇಚ್ಛಾ–ಜ್ಞಾನ–ಕ್ರಿ
ಯಿಂದಾಗಿ ಶಿವನು ಅರೆ–ಸುತ್ತಿನಂತಿರುವನು. ಆದರೂ ಅ

ದಾನಂದ ನಿತ್ಯ ಪರಿಪೂರ್ಣನು. ಆದುದರಿಂದ ಇಲ್ಲಿಯ ಯೋಗವು ಪೂರ್ಣವಾಕ್ಯದ ಕರ್ತರಿ ಪ್ರಯೋಗ. ಇದು ರ್ಣತ್ವ'ಕ್ಕೆ ವಸ್ತು-ನಿರ್ದೇಶ ರೂಪ ಆದಿ ಮಂಗಲ. "ತಮ್ಮ! ರ್ಣ ಮುಗಿಸದೆ, ಬೇಸತ್ತು ಬಿಡಬೇಡ!" ಎಂಬುದಾಗಿ ಎಚ್ಚ ಪೂರ್ಣ ಮುಗಿಸಲು ಆದೇಶ ನೀಡುವ, ಆಶೀರ್ವಾದಾತ್ಮಕ ದ ಮಂಗಲವು ಮಂಗಲದ ಮಂಗಲವಾಗಿದೆ.

ಪೂರ್ಣತ್ವ'ದ ಮೊದಲ ನುಡಿಯು. ಮೊದಲ ವಾಕ್ಯದ ಉಪ ದ ಜೊತೆಗೆ ಮತ್ತೆರಡು ವಾಕ್ಯಗಳನ್ನು ಉಪಸಂಹಾರದಲ್ಲಿ ಸಲಾಗಿದೆ. ಇಲ್ಲಿ "ಅಮ್ಮ ! ಶ್ರಮವಹಿಸಿ ಪೂರ್ಣ ಮುಗಿಸದೆ, ತ್ತು ಬಿಡಬೇಡಬೇ !" ಎಂದು ಹೆಣ್ಣಿಗೆ ಸಾಯದಿರುವಿಕೆಯ ರಿಕೆ. ಮತ್ತು "ಪೂರ್ಣ ಮುಗಿಸದೆ, ಶ್ರಮವಹಿಸಿ ಬೇಸತ್ತು ಬೇಡ ತಮ್ಮ! " ಎಂದು ಗಂಡಸಿಗೆ ಕೇವಲ ಬೇಸರಿಸದಿರುವ ರಿಕೆ.

ಇಲ್ಲಿಯ 'ಅಮ್ಮ' ಶಬ್ದವು ಸ್ತ್ರೀಲಿಂಗವಾಚಕವಾಗಿ ಜಗನ್ಮಾತೆ ದ ಶಕ್ತಿವಾಚಕ ಆಗಿದೆ. ಶಕ್ತಿ-ತತ್ತ್ವವು ಶಿವ-ತತ್ತ್ವದಲ್ಲಿ ವಾಗುವ ಸಂಭವವಿರುವುದು. ಆದುದರಿಂದ ಅವಳು (ಶಕ್ತಿ- ವು) ಜಾಗರೂಕಳಾಗಿರಬೇಕು ; ಶ್ರಮವಹಿಸುತ್ತ ಪೂರ್ಣ ಗಿಸಿ, ಅವಳು ಪೂರ್ಣನಲ್ಲಿ ಪೂರ್ಣಳಾಗಬೇಕು-ಎಂಬುದುಧ್ವನಿ. ಸ್ವೇಚ್ಛೆಯಿಂದ ಲೀಲೆ ಮಾಳ್ಪ ಶಿವನು ಶ್ರಮವಹಿಸಿ, ಮೂವ- ರು ತತ್ತ್ವವಾಗಿ ಆ-ಆ ತತ್ತ್ವಗಳು ತಂತಮ್ಮ ಕಾರ್ಯಗಳನ್ನು ರ್ಣವಾಗಿ ನೆರವೇರಿಸುವಷ್ಟು ಸಮಯದ ವರೆಗೆ ತಾಳ್ಮೆ- ದ ಕಾಯದಿರಬಹುದು. ಕಾಯುವದನ್ನು ಪೂರ್ಣ ಗಿಸದೆ ಬೇಸತ್ತೊ ಬಿಡಬೇಡ ತಮ್ಮ! ಎಂದು ತಮ್ಮನಿಗೆ ರಿಕೆಯು ತಗಾದೆ. ಆ ಪರಾತ್ಪರ ಷಟ್‌ಸ್ಥಲ ಬ್ರಹ್ಮ ಪರ-

ಶಿವನು ಪಶ್ಚಿಮ-ಶಿಖಾ-ಚಕ್ರದಲ್ಲಿಂದಿಳಿದು, ಕರಸ್ಥಲಕ್ಕೆ ಚುಳು
ಬಂದು, ಇಲ್ಲಿ ತಮ್ಮನಂತಾಗಿದ್ದಾನೆ. ಅವನು "ಕೂಡಲ ಸ
ಶರಣರ ಮನದ ಕೊನೆಯ ಮೊನೆಯ ಮೇಲಡಗು"ವಷ್ಟು ಸ
ನಾಗಿದ್ದಾನೆ. "ನೀನೆನಗೆ ಚಿಕ್ಕ ತಮ್ಮ ಕೂಡಲ ಸಂಗಮದೇವ

ಹೀಗೆ "ಮಮ ಭಕ್ತಾ ಮಮಾಧಿಕಾಃ" ಎಂದು ಸಣ್ಣವ
ತಾಗಿ ಶಿವನು, ತನ್ನ ಕೇವಲ ಆತ್ಮೀಯ ಕೆಳದಿಯಂತಿರುವ,
ಸ್ವರೂಪದ ಶಿವೆಯೊಂದಿಗೆ ಅವಿನಾಭಾವ ಸಂಬಂಧದಿಂದಿರುವ
ಆದುದರಿಂದ ಶಿವೆ-ಶಿವ ಎಂಬರ್ಥದ 'ಅಮ್ಮ' "ತಮ್ಮ"
ಗಳ ಬಳಕೆ ಸಾರ್ಥಕ.

"ಕು-ಪುತ್ರೋ ಜಾಯೇತ ಯದಿ, ಕು-ಮಾತಾ ನ ಭವ
ಎಂದಿದ್ದಾರೆ—ಶ್ರೀ ಶಂಕರಾಚಾರ್ಯರು. ಅವರ ಈ ಮಾತಿನ
ಕುದಲ್ಲಿ ಅಂದರೆ ಭೂಮಿಯಲ್ಲಿ [ಕು=ಭೂಮಿ] ಪುತ್ರನು
ಯಿಂದ ಜನಿಸಬಹುದು. ಆದರೆ, ಆ ಕು-ಪುತ್ರನಿಂದ ಕು
ಮಾತೆ ಜನಿಸಲಾರಳು. ಅಂದರೆ, ಮಾತೆಯ ರೂಪ (ದೇ
ಲ್ಲಿಂದ ಮಗುವಿನ ರೂಪವು ಹೊರಬರುತ್ತದೆ. ಆದರೆ
ಮಗುವಿನ ದೇಹದಲ್ಲಿಂದ ಅದರ ಮಾತೆಯ ದೇಹವು ಎಂದೆ
ಹೊರಬರಲಾರದು. ಆದುದರಿಂದ 'ಅಮ್ಮ' ಎಂದುದಾಗಿ ಮಾ
ಇಲ್ಲಿಯ ಮೊದಲ ಸಂಬೋಧನೆ ಅಮ್ಮನಿಗೆ. ಎರಡನೆಯ ಸಂಬೋ
ಧನೆಯು ತನ್ನ ತಮ್ಮನಿಗೆ. (ಅವಳ ತಮ್ಮನಿಗಲ್ಲ; ತನ್ನ ತ
ನಿಗೇ.) ಇಲ್ಲಿ ಸಂಬೋಧನೆ ಮಾಡುವವನು ಜೀವಾತ್ಮ; ಅ
ಅಮ್ಮ ಶಕ್ತಿ; ಅವನ ತಮ್ಮ ಶಿವ. ಹೀಗೆ ಅಮ್ಮ-ತಮ್ಮ ಎ
ಮಾಡಿದ ಸಂಬೋಧನೆಯ ಕ್ರಮ ಸಕ್ರಮ. ಏಕೆಂದರೆ, ತ
ಹಾಗೂ ತನ್ನ ತಮ್ಮ ಇಬ್ಬರೂ ಎಲ್ಲದರಲ್ಲಿ ಸರಿ-ಸಮಾನ
ದ್ದರೂ ಅಣ್ಣನಿಗಿಂತ ತಮ್ಮನೇ ಸರ್ವ ಸಮರ್ಥನಾಗಿದ್ದ

ಮ್ಮನು ತನಗಿಂತ ಸಣ್ಣವನಾದ ಕಾರಣ-ಮಾತ್ರದಿಂದ ಆದೇಶ
ಾಡುವ ಹಕ್ಕು ಅಣ್ಣನಿಗೇ ಮೀಸಲು. ಹಾಗೆ ಈ'ಪೂರ್ಣತ್ವ'ದ
–ಜೀವಾತ್ಮನು ತನ್ನ ತಮ್ಮನಂತಾದ ಪರಮಾತ್ಮನಿಗೂ ಆತ್ಮೀ
ತೆಯಿಂದ ಆದೇಶ ಮಾಡಿದ್ದಾನೆ. ತಮ್ಮನಿಗೆ ಒಳ್ಳೆಯದಾಗ
ದು ಹಿತ-ಮಿತವಾಗಿ ಕಳಕಳಿಯಿಂದ ಆದೇಶ ಮಾಡುವುದು
ಣ್ಣನಾದವನ ಕರ್ತವ್ಯ, ಕರ್ತವ್ಯ ಪಾಲನೆಗಾಗಿ ಇತರರಿಗೆ ಆದೇಶ
ಾಡುವಷ್ಟು ಯೋಗ್ಯತೆಯನ್ನು ತಾನು ಕಾಯ್ದುಕೊಂಡು
ದಿದ್ದಾನೆಂದು ತೋರಿಸುವ ಪರೀಕ್ಷೆಯಲ್ಲಿ ಪಾಸಾಗಲು, ಹಿರಿ
ಗನಿಂವ ತನ್ನ ಅಮ್ಮನಿಗೂ ಮಾತೃ–ಭಕ್ತಿ-ಪುರಸ್ಸರವಾದ
ದೇಶ.

ಮಾಡಿದ ಆದೇಶವನ್ನು ಗ್ರಹಿಸಲು ಯೋಗ್ಯವಾದ ಈ
ಮ್ಮ' ಹಾಗೂ 'ತಮ್ಮ' ಪದಗಳೆರಡರಲ್ಲು ಅ+ಮ್+ಮ್+
–ನಾಲ್ಕು ವರ್ಣಗಳು ಸಮಾನವಾಗಿವೆ. ಆದರೆ, ತಮ್ಮನಂತಾ
ಂವ ಆ 'ತತ್' ಪದ ಸೂಚಕವಾದ 'ತಮ್ಮ' ಪದಕ್ಕೆ ತ್+
+ಮ್+ಮ್+ಅ—ಎಂಬುದಾಗಿ "ತ"ಕಾರವು ಹೆಚ್ಚಿಗಿದೆ.
ು ವರ್ಣಗಳಿವೆ. ಆದುದರಿಂದ ಶಿವನಿಗೆ ಪಂಚ ಕೃತ್ಯಗಳು
ಹಜವಾಗಿವೆಯೆಂಬುದು ನಿಚ್ಚಳವಾಗಿದೆ. ಅಂದರೆ, ಶಿವನಿಗೆ ಶಿವೆ
ುವ ಸೃಷ್ಟಿ-ಸ್ಥಿತಿ–ಲಯ-ತಿರೋಧಾನಗಳೂ ಇದ್ದು, 'ಅನು
ಹ' ಕೃತ್ಯವೊಂದು ಅವಳಿಗಿಂತ ಅವನಿಗೆ ಹೆಚ್ಚಿಗಿದೆಯೆಂದು
ಸುತ್ತಿದೆ—ಆಗಮಂದ ಭಾರತೀಯ ಸಂಸ್ಕೃತಿ.

ಭಾರತೀಯ ಸಂಸ್ಕೃತಿಯ ಶಬ್ದ ಸಂಪದದ ಪಂಚ ರೂಪಗಳಾದ
ುತಿ–ಸ್ಮೃತಿ–ಪುರಾಣ–ಇತಿಹಾಸ–ಕಾವ್ಯಗಳನ್ನು ನಿರಂತರವೂ
ಸ್ಯಸಿಸುತ್ತಿದ್ದು, ಜ್ಞಾನೋದಯಂದ ಗತಿಯನ್ನು ಹೊಂದುವುದಕ್ಕೆ
ುಂಚೆ, ಆ ಕಾರ್ಯದಿಂದ ವಿಮುಖನಾದರೆ 'ತ್ರಿ–ಶಂಖು–

ಸ್ವರ್ಗ'ದಂತಾಗಿ 'ಅರೆ–ಸುತ್ತು' ಆಗುತ್ತದೆ. ಆದುದರಿ
ಪೂರ್ಣ ಮುಗಿಸದೆ ಸತ್ತು ಬಿಡಬೇಡಬೇ! ಅಮ್ಮ"; "ಪೂ
ಮುಗಿಸದೆ ಬೇಸತ್ತು ಬಿಡಬೇಡ ತಮ್ಮ!" ಎಂದು ಪ್ರತಿಯೆ
ಸ್ತ್ರೀ–ಪುರುಷರಿಗೂ ಕರ್ತವ್ಯದ "ಕಳಕಳಿಯ ಆದೇಶ
ಬೇಕಾಗಿದೆ.

ಬೇಸರಿಸದೆ ಕಾರ್ಯ ಮಾಡುತ್ತಿರಬೇಕು. "ಯತ್ನೇ ಕೃತೆ
ನ ಸಿಧ್ಯತಿ ಭೂತಲೇ" ಎಂದು ಛಲದಿಂದ ಸತತೋದ್ಯ
ಯಾಗಿ ಪೂರ್ಣತ್ವ ಪಡೆಯಲು ಸದಾ ಪ್ರಯತ್ನಶೀಲನ
ಬೇಕು.

ನಾಮ–ರೂಪಗಳ ಜೊತೆಗೆ ಕ್ರಿಯಾಶೀಲತೆ ಇದ್ದರೆ ಪ
ಸತ್–ಚಿತ್–ಆನಂದ–ನಿತ್ಯವಾದುದಕ್ಕೆ ಪರಿಪೂರ್ಣತೆ. ಪೂ
ಪೂರ್ಣತ್ವಕ್ಕೆ, ತತ್‌ದ ತತ್ತ್ವಕ್ಕೆ ಕ್ರಿಯಾ–ಶೀಲತೆಯು ಅ
ಪಾವಂತೆಯೇ ನ್ಯೂನತ್ವ ಊನತ್ವ ಪೂರ್ಣತ್ವಕ್ಕೂ ಅವಶ
ಗಿದೆ. ಕ್ರಿಯಾಶೀಲತೆಯೆಂಬುದು ಶಿವನ ಶಕ್ತಿಯು. ಈ
ಯೆಂಬ 'ಅರೆ–ಸುತ್ತಿ'ನಿಂದ ಮುಂದುವರೆದರೆ ಪೂರ್ಣ ಸ
ಅದರಿಂದ ಇದು; ಇದರಿಂದ ಅದು. ಈ ದೃಗ್ ದೃಶ್ಯ ವಿ
ಜ್ಞಾನ-ಕರ್ಮ-ಸಮುಚ್ಚಯದಿಂದ ಗೋಚರಿಸುವ ವ್ಯಷ್ಟಿ-ಸ
ಯಲ್ಲಿ "ಸತ್ಯಂ ಶಿವಂ ಸುಂದರಂ" ರಹಸ್ಯವನ್ನು ಅರಿತು
ಸುತ್ತಿರುವುದೇ ಪೂರ್ಣದ, ಪೂರ್ಣತ್ವದ ಆಚರಣೆ. ಪ
ಶಿವ; ಪೂರ್ಣತ್ವ ವಿಶ್ವ. ವಿಶ್ವವು ಪೂರ್ಣತ್ವ, ಪೂ
ಶಿವನು ಪೂರ್ಣ.

ಕಾರಣ, ಪೂರ್ಣ ಪೂರ್ಣತ್ವಗಳ ನೀನು ನಿನ್ನನ್ನರಿತು,
ವಹಿಸಿ, ಪೂರ್ಣ ಮುಗಿಸದೆ, ಅರ್ಧಕ್ಕೇ ಬಿಡಬೇಡ ಬೇಸ

[ಪುಟ ೨]

> "ವೃತ್ತಿ ವೃತ್ತದ ಸ್ಫೂರ್ತಿ" ಎಂದು, ಗಾಣದ ಎತ್ತು
> ಸಿರಿಳಿತ ಎಡ ವ ಬಲ ಬಿಟ್ಟು, ಮತ್ತೂ ಮತ್ತು
> ದುಂಡಗೇ ತಿರುಗುವುದು—ಪೂರ್ಣ ಮಾರ್ಗದ ಸುತ್ತು.
> ತಿರುಗು; ಪೂರ್ಣ ತಿರುಗದೆ ಬಿಡಬೇಡ ಬೇಸತ್ತು.

ಬೇಸತ್ತು ಬಿಡದೆ, ಪೂರ್ಣತ್ವ ಪ್ರಾಪ್ತಿಗೆ, ಪ್ರಯತ್ನಿಸುತ್ತಿರುವವರ ಪ್ರವೃತ್ತಿ ಮಾರ್ಗದಂತೆ, ನಿವೃತ್ತಿ ಮಾರ್ಗಕ್ಕೂ ಕ್ರಿಯಾಶೀಲತೆಯು ವೃತ್ತಿ ಬೇಕು. ಮೊದಲನೆಯು ಮಾರ್ಗಕ್ಕೆ 'ಬೇಕು' ಇರಬೇಕು. ಎರಡನೆಯದಕ್ಕೆ 'ಬೇಡ' ಇರದಿರಬೇಡ. ಈ "ಬೇಕು-ಬೇಡ"ಗಳೆರಡೂ ಕ್ರಿಯಾಶೀಲತೆಯು ಎರಡು ಮುಖ. ಒಂದು ಚಿತ್ತ; ಮತ್ತೊಂದು ಪಟ್ಟ. ಈ ಚಿತ್ತ-ಪಟ್ಟದ ಕೂಡಲ ಸಂಗಮದ ರಹಸ್ಯದ ವೃತ್ತಿಯಿಂದ 'ಅಸ್ತಿ ಜಾಯಂತೇ ವರ್ಧತೇ ವಿಪರಿಣಮತೇ ಅಪಕ್ಷೀಯತೇ ನಶ್ಯತೇ' ಎಂಬರ್ಥದ ಷಡ್ ಭಾವ ವಿಕಾರದ ವೃತ್ತಾಕಾರದ ಅರಿವಾಗುತ್ತದೆ; ಅನುಭವವಾಗುತ್ತದೆ. ಇದಕ್ಕೆ ಸ್ಫೂರ್ತಿದಾಯಕವಾದುದು ವೃತ್ತಿ.

ತನ್ನ ವೃತ್ತದ ಸುತ್ತಲೂ ಸುತ್ತುತ್ತಿರುವ ವಿಶ್ವವನ್ನು ಸಲುಹಿ ಸಂರಕ್ಷಿಸುತ್ತಿರುವ ಶ್ರೀವಿಷ್ಣುವು ತನ್ನ ವೃತ್ತಿಯ ಪೂರ್ಣತ್ವಕ್ಕಾಗಿ ಮತ್ಸ್ಯಾದಿ ದಶಾವತಾರದಲ್ಲಿ ವೃತ್ತಿಯನ್ನು ನಿರ್ವಹಿಸಬೇಕಾಗುತ್ತದೆ. ಸಂಹರಿಸುವ ಹರನು ವೃಷಭ-ವಾಹನ-ಮೂರ್ತ್ಯಾದಿ ಪಂಚವಿಂಶತಿ ಲೀಲಾ ವೃತ್ತಿಯನ್ನು ಕೈಕೊಳ್ಳಬೇಕಾಗುತ್ತದೆ. ಸೃಷ್ಟಿ-ಬ್ರಹ್ಮನ ಬ್ರಹ್ಮ-ಸೃಷ್ಟಿಯು ವೃತ್ತದ ಸ್ಫೂರ್ತಿಯ ವೃತ್ತಿಯಂತೂ ಅವನಿಗೆ ವೃತ್ತಿ-ವೇದ್ಯವಾಗಿದೆ.

ಹರಿ-ಹರ-ಬ್ರಹ್ಮರಾದರೇನಂತೆ! ವೃತ್ತದ ಸ್ಫೂರ್ತಿಗೊಳಪಟ್ಟು

ಕಾರಣದಿಂದಾಗಿ ಅವರು ಮತ್ತೆ-ಮತ್ತೆ ಪೂರ್ಣತ್ವದ ವೃತ್ತಿಯಲ್ಲಿರಬೇಕಾಗುತ್ತದೆ.

ಈ ಒಂದು ಮುಖ್ಯ ವೃತ್ತಿಯಲ್ಲಿ ತೊಡಗಿರುವಾಗ, ಭೌತಿಕ ಶರೀರ ಧರಿಸಿ, ಮಾನವರಾದ ನಮಗೆ ಉಪವೃತ್ತಿಗಳು ಬಂದೊದಗುವುದು ಸ್ವಾಭಾವಿಕ. ಆದರೂ, ಅಲ್ಲಿಯೇ, ನೆಲೆ ನಿಲ್ಲದೆ ಏರು-ಇಳಿತ, ಎಡ ಮತ್ತು ಬಲಗಡೆಗೆ ಬೀಳುವುದು ಬಿಡದೆ, ಮುಂದುವರಿಯುತ್ತಿರುವುದೇ ದುಂಡಗೇ ತಿರುಗುವಿಕೆ. ಇದೇ ವೃತ್ತಿಯು ಪೂರ್ಣದ ಪೂರ್ಣತ್ವದ ಕೃತಿ. ಈ ಪೂರ್ಣ ಮಾರ್ಗದ ಸುತ್ತು ಪೂರ್ಣ ತಿರುಗುತ್ತಿರದೆ, ರಾಗ-ದ್ವೇಷಾದಿಗಳ ಸೆಳವಿನಿಂದ ವಿಷಯಾಸಕ್ತನಾಗಿ ದಣಿವಿನ ನೆಪದಿಂದ ಬೇಸತ್ತು ನಿಂತರೆ, ಕರ್ತವ್ಯದಿಂದ ಚ್ಯುತನಾದರೆ, ಗಾಣದ ಎತ್ತಿಗಿಂತಲೂ ಹೀನತ್ವ ಬರಬಹುದು! ಆದುದರಿಂದ ಪೂರ್ಣತ್ವ ಪಡೆದು ಪೂರ್ಣನಾಗಲು ಯಾವಾಗಲೂ ಸದ್-ವೃತ್ತಿಯಲ್ಲಿರಬೇಕು.

[ಪುಟ ೩]

'ತಿರುಗಿದ್ದೆ ತಿರುಗುವುದೆ.' ಇತಿ ನಿಲ್ಲದಿರು ಅತ್ತು,
"ಅ-ಕ್ಷ" ಎಂಬೈವತ್ತು, ಅಕ್ಷರದ ನಿಜ ಸುತ್ತು
ಜಗ ತುಂಬ ಬೆಳೆದಿಹುದು ವಿದ್ಯೆ, ನಾವದ ಸುತ್ತು.
ಬೆಳೆಸು; ಪೂರ್ಣ ಬೆಳೆಸದೆ ಬಿಡಬೇಡ ಬೇಸತ್ತು.

ಸದ್‌ವೃತ್ತಿಯಲ್ಲಿಯೇ ನಿರತನಾಗಿದ್ದರೂ ಅಸದ್‌ವೃತ್ತಿಯ ವಕ್ರತೆಯಿಂದಾಗಿ ಸಕಾಮ ಕರ್ಮದಿಂದ ವ್ಯಗ್ರತೆಯುಂಟಾಗಿ ಆಲಸ್ಯ ತಲೆದೋರಬಹುದು! ಆಗ "ಕ್ಷೀಣೇ ಪುಣ್ಯೇ ಮರ್ತ್ಯ-ಲೋಕಂ ವಿಶಂತಿ" ಎಂದುದರಿಂದ ಪುಣ್ಯವನ್ನೂ ಸಹ ಗಳಿಸಬಾರದೆಂದುಕೊಂಡು, 'ತಿರುಗಿದ್ದೆ ತಿರುಗುವುದೆ?' ಎಂದು ನಿಷ್ಕ್ರಿಯನಾಗಬಾರದು. ನಿಷ್ಕಾಮ ಕರ್ಮ ಬಿಡಬಾರದು.

ಪಂಚ ಪುರುಷಾರ್ಥ ಪಥದಲ್ಲಿ ಮುನ್ನುಗ್ಗಿ ಗೊತ್ತು-ಗುರಿ ಯತ್ತ ಸಾಗುವುದು ಪ್ರವೃತ್ತಿಮಾರ್ಗ; ಅಲ್ಲಿಂದ ಹಿಂದಕ್ಕೆ ಸರಿ ಯುವುದು ನಿವೃತ್ತಿ ಮಾರ್ಗ. ಹಾಗೆಯೇ ಅಲ್ಲಿ ಅತ್ತು-ಅತ್ತು ನಿಲ್ಲುವುದೂ ನಿಷ್ಕ್ರಿಯನಾಗುವುದೂ ಸಹ ಒಂದು ಕ್ರಿಯೆಯಾ ಗಿದೆ. ಕಾರಣ, ಆ-ಆ ಕ್ರಿಯೆಯನ್ನು ಸದ್‌ಭಾವನೆಯಿಂದ ನಿಷ್ಕಾಮ ಕರ್ಮವನ್ನಾಗಿಸಬೇಕು. 'ಕಾಯಕವೇ ಕೈಲಾಸ'ವೆಂದು ನೆರೆನಂಬ ಬೇಕು. "ಕರ್ಮಣ್ಯೇವಾಽಧಿಕಾರೋ ಮೇ; ಮಾ ಫಲೇಷು ಕದಾ ಚನ" ಎಂದು ನಿತ್ಯವೂ ಕ್ರಿಯಾಶೀಲನಾಗಿರಬೇಕು. ಸಮಯೋ ಚಿತ ರಜೆ-ಮನೋರಂಜನೆ ಎಂಬುದು ರುಜೆ ಬಾರದಂತೆ ಸವಕಳಿ ಯನ್ನು ಸರಿಪಡಿಸಿಕೊಳ್ಳುವ ಕ್ರಿಯೆಯಾಗಿರಬೇಕು.

ನಿನ್ನೆ ಹೋಗಿ ತಿರುಗಿ ಬಂದ ಗುರುಕುಲ ಸ್ಕೂಲು-ಕಾಲೇಜಿಗೆ ಇಂದು ಹೋಗುವಾಗ ನಾಳೆಯೂ ಹೋಗಿ ಬರಬೇಕಲ್ಲ! ಎಂದು ಬೇಸತ್ತು ಹೋಗುವುದನ್ನು ನಿಲ್ಲಿಸಬಾರದು. ಏಕೆಂದರೆ, ಜ್ಞಾನಾ ಗ್ನಿಯು ಅಜ್ಞಾನ-ಕಾಷ್ಠವನ್ನು ವಿಭೂತಿಯನ್ನಾಗಿಸಬೇಕಾದರೆ ಅವೆರಡೂ ಪರಸ್ಪರ ಸಮೀಪಿಸಿದರೆ ಮಾತ್ರ ಅದು ಸಾಧ್ಯವಾಗ ಬಲ್ಲದು. ಆದುದರಿಂದ ಸಮಯಕ್ಕೆ ಸರಿಯಾಗಿ ಪಾಠ-ಪಠನಗಳು ನಡೆಯುತ್ತಿರಬೇಕು.

ವಿದ್ಯಾರ್ಜನೆ ಮಾಡಿಸುವ ಶಿವಯೋಗದ ಮಂದಿರದಲ್ಲಿ ದಿನ- ನಿತ್ಯವೂ ಅದೇ ಕಲಿಸಿದ ಅಕ್ಷರಗಳನ್ನೇ ಕಲಿಸುತ್ತಿರುವರೆಂದು ಬೇಸರ ಬೇಡ. ಬರೆಯುವ ಮಸಿಯಿಂದ ಗೆರೆ ಎಳೆದು ಬರೆದ ಅಥವಾ ಮುದ್ರಿಸಿದ ಪೂರ್ಣತ್ವವು ನಿಜವಾದ ಪೂರ್ಣತ್ವವಲ್ಲ; ನಿಜ. ಆದರೆ, ಈ ಕೃತ್ರಿಮದ ಪೂರ್ಣತ್ವದಿಂದ ನಾವು ಕೃತ್ರಿಮ ವಲ್ಲದ ಆ ಪೂರ್ಣವಾದ ಪೂರ್ಣತ್ವವನ್ನು ನಿಚ್ಚಳವಾಗಿ ತಿಳಿಯ ಬಹುದು. ಭೂಮಿಯಲ್ಲದ ಭೂ-ಪಟದ ಜ್ಞಾನದಿಂದ ಭೂಮಿ

ಯುನ್ನು ಹಾಗೂ ಅದರ ನದಿ-ಪರ್ವತಾದಿಗಳನ್ನು ತಿಳಿಯಬಲ್ಲೆವು. ಅದರಂತೆ "ಅವಿದ್ಯಯಾ ಮೃತ್ಯುಂ ತೀರ್ತ್ವಾ, ವಿದ್ಯಯಾ ಅಮೃತಮ್ ಅಶ್ನುತೇ".

ಕೃತಕವೂ ಕಲ್ಪಿತವೂ ಆದುದರ ದೆಶೆಯಿಂದ, ಪ್ರತೀಕೋಪಾಸನೆಯ ರೂಪದಂತಿರುವ ಈ ಅಕಾರದಿಂದ ಕ್ಷಕಾರದ ವರೆಗಿನ ಕೇವಲ ಐವತ್ತು ವರ್ಣಗಳೇ ಭಾರತೀಯ ಪದ್ಧತಿಯಿಂದ ಅಕ್ಷರ-ರಹಿತವಾದ ಅಕ್ಷರ ಷಟ್‌ಸ್ಥಲ ಬ್ರಹ್ಮದ ನಿಜ ಸುತ್ತ್ವನ್ನು ಶಬ್ದ ರೂಪದಲ್ಲಿ ತಿಳಿಸಬಲ್ಲವುಗಳಾಗಿವೆ.

ಈಗ ಕನ್ನಡದ ವರ್ಣಮಾಲೆಯಲ್ಲಿ ಹೆಚ್ಚು ಬಳಕೆಯಲ್ಲಿರುವ ಅಕ್ಷರಗಳು ಐವತ್ತು: ಅಕಾರಾದಿ ಔಕಾರಾಂತದ ಹನ್ನೆರಡು ಸ್ವರಗಳು; ಕಕಾರಾದಿ ಮಕಾರಾಂತದ ಇಪ್ಪತ್ತೈದು ವರ್ಗೀಯ ವ್ಯಂಜನಗಳು; ಯ-ರ-ಲ-ವ-ಸ-ಹ-ಳ-ಱ-ೞ ಎಂಬ ಒಂಭತ್ತು ಅವರ್ಗೀಯ ವ್ಯಂಜನಗಳು ಮತ್ತು ವರ್ಣದಲ್ಲಿ ಹಾಗು ಸಂಖ್ಯೆಯ ಜೊತೆಗೆ ಬರೆಯುವ ಯೋಗ್ಯತೆಯುಳ್ಳ ಪೂಜಿಯೆಂಬ ಅನುಸ್ವಾರ ಒಂದು —ಹೀಗೆ ನಾಲ್ವತ್ತೇಳು. ಅದರಲ್ಲಿ ಈ ಱ-ೞ ಎರಡನ್ನು ಕಡಿಮೆ ಮಾಡಿ, ಸಂಸ್ಕೃತದ ದೇವನಾಗರಿ ವರ್ಣಮಾಲೆಯ ಶ-ಷ-ವಿಸರ್ಗ-ಋಸ್ವರ ಮತ್ತು ಸಂಯುಕ್ತಾಕ್ಷರದ ಪ್ರತಿನಿಧಿಯಯನ್ನಾಗಿ 'ಕ್ಷ' ಅಕ್ಷರವನ್ನು ಸೇರಿಸಿ, ಒಟ್ಟು "ಅ-ಕ್ಷ" ಎಂಬ ಐವತ್ತು ವರ್ಣಗಳೆಂದು ಸರ್ವ-ಸಾಮಾನ್ಯ ಎಣಿಕೆಯಾಗಿದೆ.

ಈ ಐವತ್ತು ವರ್ಣಗಳಿಲ್ಲದೆ ಪಾಠ-ಪ್ರವಚನ ಸಾಗದು; ಅಧ್ಯಯನ-ಅಧ್ಯಾಪನ ನಡೆಯದು; ಶಬ್ದ ಪ್ರಮಾಣದ ಶಿವ ಪೂಜಾ-ಯಜ್ಞಾದಿ ಮಂತ್ರಗಳ ಪಾರಾಯಣವು ನಿರ್ದುಷ್ಟ ಆಗದು; ವಾಗರ್ಥದ ಪ್ರತಿಪತ್ತಿ ಸಮನಿಸದು; ಈ ರೇಖಾಂಕನ ಚಿತ್ರದಂತಹ ವರ್ಣ-ಸಮೂಹದ ಸಮಯೋಚಿತ ಬಳಕೆಯೇ

ಜಗ ತುಂಬ ಬೆಳೆದಿರುವ ಪರಾ-ಪಶ್ಯಂತೀ-ಮಧ್ಯಮಾ-ವೈಖರೀ ವಾಣಿಯು ವಿದ್ಯೆಯು. ತತ್ತ್ವತಃ ಸಮಯೋಚಿತವಲ್ಲದ ಅಯಥಾರ್ಥ-ಗ್ರಹಣವೇ ಅವಿದ್ಯೆಯು.

ಆ ಅವಿದ್ಯೆಗೆ ಮೃತ್ಯುವೆಂದೂ, ವಿದ್ಯೆಗೆ ಅಮೃತತ್ವವೆಂದೂ ಕರೆಯುವುದು ದಾರ್ಶನಿಕರ ವಾಡಿಕೆ. ವಿಧಿ ನಿಷೇಧದ ಬಳಕೆಯಂತೆ ಈ ವಿದ್ಯಾಽವಿದ್ಯೆಗಳ ತಿಳಿವಳಿಕೆ ಬೇಕು. ಅವಿದ್ಯೆಯ ಅರಿವಿಲ್ಲದೆ, ವಿದ್ಯೋದಯದ ಅರಿವಾಗದು; ಕತ್ತಲೆಯ ದುಃಖ ಗೊತ್ತಿಲ್ಲದೆ, ಬೆಳಕಿನ ಸುಖದ ಶಿವನಾಗಲು ಮನವೆಳಸದು. ಈ ವಿದ್ಯಾಽವಿದ್ಯೆಗಳು ಪರಸ್ಪರವಾಗಿ ಪ್ರತ್ಯಕ್ಷ ಸಾಧನೆಗಳಲ್ಲದಿದ್ದರೂ, ವಿದ್ಯೆಗೆ ಅವಿದ್ಯೆಯು ಮೊದಲ ಮೆಟ್ಟಲು; ಅಡಿಗಲ್ಲು.

ಮಠ-ಮಂದಿರಗಳಲ್ಲಿ ನಡೆಯುವ ಪುರಾಣ-ಪ್ರವಚನ ಶ್ರವಣದಿಂದಲೂ ಗುರುಕುಲ-ಶಾಲೆ-ಕಾಲೇಜುಗಳ ಅಧ್ಯಯನ-ಅಭ್ಯಾಸದಿಂದಲೂ ಮೃತ್ಯುರೂಪದ ಅವಿದ್ಯೆಯನ್ನು ದೂರ ಹೊಡೆದೋಡಿಸಬಹುದು. ಈ ಅವಿದ್ಯಾ-ವೃತ್ತಿಯ ಹತೋಟಿಯಿಂದ ಅಮೃತತ್ವ ರೂಪದ ಶಿವಾನುಭವ ವಿದ್ಯೆಯನ್ನು ಗಳಿಸಿ, ಬೆಳೆಸಿಕೊಂಡು ಶಿವಸ್ವರೂಪರಾಗಬಲ್ಲೆವು. ಹಾಗೆ ಪೂರ್ಣತ್ವದ ಪೂರ್ಣ ಸ್ವರೂಪರಾದಾಗ ಚೂರ್ಣತ್ವಕ್ಕೆಂಬಿಲ್ಲದೆ, ಎತ್ತೆತ್ತ ನೋಡಿದೊಡತ್ತ ಪೂರ್ಣತ್ವವೇ ವೇದ್ಯವಾಗುತ್ತದೆ.

ಸ್ವಾನುಭೂತಿ-ವೇದ್ಯವಾದ ಈ ಪೂರ್ಣತ್ವದ ಅರಿವಾಗುವುದು—ಎರಡು ರೀತಿಯಿಂದ. ಸಾಧಕನ ಪೂರ್ವ ಜನ್ಮದ ಪುಣ್ಯದೊಂದಿಗೆ ಸಹಕರಿಸಿದ ಗುರುಕೃಪೆಯಿಂದಾಗುವುದು ಒಂದನೆಯ ರೀತಿ. ಎರಡನೆಯದು ನಿಗಮಾಗಮ-ಕಾವ್ಯಾದಿಗಳ ಅಕ್ಷರಾಽಭ್ಯಾಸದಬಲದಿಂದ. ಒಂದನೆಯದಕ್ಕಿಂತಲೂ ಎರಡನೆಯ ರೀತಿಯು ಸರ್ವ ಜನ ಸುಲಭವಾಗಿದೆ. ಆದುದರಿಂದ ನಾವೆಲ್ಲರೂ ಈ

ಐವತ್ತೂ ವರ್ಣಾಕ್ಷರಗಳನ್ನು ಸರಿಯಾಗಿ ಕಲಿಯಬೇಕಾದದ್ದು ಮೊಟ್ಟ ಮೊದಲು.

[ಪುಟ ೪]

ಗಡಿಯಾರ ಮುಳ್ಳುಗಳು ಅಷ್ಟೆ ಅಂಕೆಯ ಸುತ್ತು
ಕೀಲಿ ಇರೆ ತಿರುಗುವವು–ದಿನ–ದಿನಕು ಕೆಲ ಸುತ್ತು.
ಸುತ್ತದಿರೆ ಸರಿಯಾಗಿ ತಿಳಿಸಲಾರವು ಹೊತ್ತು.
ತಿಳಿಸು; ಪೂರ್ಣ ತಿಳಿಸದೆ ಬಿಡಬೇಡ ಬೇಸತ್ತು.

ಮೊದಲು ಇದೀಗ ಆಮೇಲೆ,
ಹಿಂದೆ ಇಂದು ಮುಂದೆ,
ಆಗ ಈಗ ಯಾವಾಗ,
ನಿನ್ನೆ ಈ ಹೊತ್ತು ನಾಳೆ

ಹೀಗೆ ಭೂತ ವರ್ತಮಾನ ಭವಿಷ್ಯತ್ತಿನ ವ್ಯವಹಾರಕ್ಕೆ ಅಸಾ ಧಾರಣವಾದ ನಿಮಿತ್ತ ಕಾರಣವಾದುದರಿಂದ ಹೊತ್ತು ವ್ಯಾಪಕವೂ ನಿತ್ಯವೂ ಆಗಿರುತ್ತದೆ. ಹೊತ್ತಿಗೆ ಕಾಲ ವೇ ಸಮಯ ಮುಂತಾಗಿ ಕರೆಯಬಹುದು.

ಒಂದೇ ಒಂದಾದ ಈ ಹೊತ್ತನ್ನು ಕ್ಷಣ–ಗಂಟೆ, ಬೆಳಗು–ಸಂಜೆ, ದಿನ–ರಾತ್ರಿ, ದಿವಸ ಪಕ್ಷ ಮಾಸ ವರ್ಷ ಯುಗ ಕಲ್ಪ ಮೊದಲಾದ ವಿಭಾಗ ಮಾಡಿಕೊಂಡು ವ್ಯವಹರಿಸುತ್ತಿದ್ದೇವೆ ಇವೆಲ್ಲವೂ ಹೊತ್ತಿನ ಗೊತ್ತನ್ನು ಗುರಿಯನ್ನು ತೋರಿಸು ಉಪಾಯಗಳು.

ಹೊತ್ತು ಸರ್ವ ದೇಶದಲ್ಲಿಯೂ ಪೂರ್ಣವಾಗಿ ವ್ಯಾಪ ವಾಗಿದೆ; ಒಂದೇಸಮನಾಗಿದೆ. ಭೂಮಿಯ ಮೇಲಿನ ವಸ್ತುವಿ ಭಾರಕ್ಕೂ ಚಂದ್ರನ ಮೇಲಿನದಕ್ಕೂ ವ್ಯತ್ಯಾಸ ಕಂಡುಬರುವುದ

ಆದರೆ, ಹೊತ್ತಿಗೆ ಮಾತ್ರ ಭಾರದ ಹೆಚ್ಚು-ಕಡಿಮೆಯೆಂಬುದಿಲ್ಲ. ಅಂತೆಯೇ ಅದು ನಿತ್ಯವಾಗಿರುತ್ತದೆ. ಇಂಥ ಹೊತ್ತಿಗೆ ಹಿರಿ-ಕಿರಿ ಎಂಬ ಭೇದವಿರದಿದ್ದರೂ ಅದು ವಿಶ್ವದ ಎಲ್ಲ ಜೀವ-ಜಂತು ಗಳನ್ನು ಹಿರಿ-ಕಿರಿಯದನ್ನಾಗಿಸುತ್ತದೆ.

ಈ ರೀತಿಯ ಪೂರ್ಣತ್ವದ ಹೊತ್ತನ್ನು ಯಾರಿಂದ ತಾನೆ ತಡೆಯಲು ಸಾಧ್ಯ ! ಆದರೂ ಅದಕ್ಕೆ ಸೀಮಾಂಕನ ಮಾಡಿದ್ದೇವೆ. ಗಡಿ ಹಾಕಿದ್ದೇವೆ; ಗಡಿಯಾರವನ್ನಾಗಿ ರೂಪಿಸಿದ್ದೇವೆ. ವಾಚ್= ನೋಡು ಎನ್ನುತ್ತೇವೆ. ಟಾಯಿಮ್—ಪೀಸ್ ಮಾಡಿದ್ದೇವೆ; ವೇಳೆಯನ್ನು ಹೋಳಾಗಿಸಿದ್ದೇವೆ.

ನಿರಾಕಾರನಾದ ಅಂದರೆ, ಸಾಕಾರನಲ್ಲದ ಅಮೂರ್ತ ಪರ ಶಿವನು ಜ್ಞಾನ-ಕ್ರಿಯಾರೂಪ ಶಕ್ತಿಯಾಕಾರದಲ್ಲಿ ತನ್ನ ಇಚ್ಛೆ ಯಿಂದ ಜಗತ್ ಸೃಷ್ಟಿ-ಸ್ಥಿತಿ-ಲಯ-ತಿರೋಧಾನ-ಅನುಗ್ರಹ ಕಾರ್ಯಗಳನ್ನು ಮಾಡುತ್ತಿರುವಂತೆ, ಅವನ ಪೂರ್ಣಗುಣ ಸ್ವರೂಪವಾದ ಈ ಹೊತ್ತು ಆ-ಆ ಸಂದರ್ಭಕ್ಕೆ ಯೋಗ್ಯವಾಗಿ ರುವ ಅಂಕುರ ಪತ್ರ ಪುಷ್ಪ ಫಲಗಳಿಗೆ ಹಾಗು ಸಕಲ ದ್ರವ್ಯಗಳ ಪರಿಣತಿಗೆ ಮತ್ತು ಬಾಲ್ಯ-ಯೌವನಾದಿಗಳಿಗೆ ಸಾಧಕವಾಗಿದ್ದುದು ಸ್ಪಷ್ಟವಿದೆ. "ಕಾಲೋಹ್ಯಮೂರ್ತೋಽಪಿ ದೃಶ್ಯತೇ ಫಲಸಾಧಕಃ"

ಫಲ ಸಾಧಕವಾದ ಈ ಹೊತ್ತಿಗೆ ಹೀಗೆ ಗಡಿಯನ್ನು ಕಲ್ಪಿಸುವ ಗಡಿಯಾರದ ಮುಳ್ಳುಗಳು ಅದರ 'ಡಾಯಲಿ' ನಲ್ಲಿದ್ದಷ್ಟೇ ನಿರ್ದಿಷ್ಟ ಅಂಕೆ-ಸಂಖ್ಯೆಯ ಸುತ್ತಲೂ ಚೈತನ್ಯ ರೂಪದ 'ಕೀಲಿ' ಸ್ಫೂರ್ತಿ ಇದ್ದರೆ ಮಾತ್ರ ಪ್ರತಿದಿನವೂ ಹಲ ಕೆಲವು ಸಲ ಸುತ್ತು ತ್ತಿರುತ್ತವೆ. ದಿನವೊಂದಕ್ಕೆ ಗಂಟೆಯ ಮುಳ್ಳು ಕೇವಲ ಎರಡೇ ಸಲ ಸುತ್ತಿದರೆ, ಮಿನೀಟಿನ ಮುಳ್ಳು ಇಪ್ಪತ್ನಾಲ್ಕು ಸಲ; ಸೆಕೆಂಡಿನ ಮುಳ್ಳಂತೂ ಮಿನೀಟೊಂದಕ್ಕೇ ಅರವತ್ತು ಸಲ.

ಗಂಟೆಯ ಹಾಗೂ ಮಿನೀಟಿನ ಮುಳ್ಳಿಗೆ ಹನ್ನೆರಡು ಅಂ
ಯನ್ನು ನಿರ್ದಿಷ್ಟ ಪಡಿಸಿದರೆ, ತಾರೀಖಿನ ಮುಳ್ಳಿಗೆ ಮೂವ
ತ್ತೊಂದು ಅಂಕೆಗಳು; ಸೆಕೆಂಡಿನ ಮುಳ್ಳಿನ ಸುತ್ತುವಿಕೆಯು ಅರ
ವತ್ತು ಅಂಕೆಯದು. ಆದುದರಿಂದಲೇ ರಾಜ್ಯ-ರಾಷ್ಟ್ರಗಳಲ್ಲಿ ತೂ
ಅಳತೆ ಎಣಿಕೆ ಮಾಡುವಾಗ ದಶಾಂಶ ಪದ್ಧತಿಯನ್ನು ಬಳಕೆ
ತಂದರೂ ಈ ವಿಭಿನ್ನವಾದ ವಿಲಕ್ಷಣ ಹೊತ್ತನ್ನು ದಶಾಂಶ ಪದ್
ತಿಗೊಳಪಡಿಸುವುದು ಕಷ್ಟ ಸಾಧ್ಯವಾಗಿದೆ.

ಪೂರ್ಣತ್ವ ಪ್ರತೀಕವಾದ ಈ ವ್ಯಾಪಕವಾದ ಹೊತ್ತನ್
ಗುರುತಿಸಲು ನಿರ್ಮಿಸಿದ ಗಡಿಯಾರದ ಅಂಕೆ-ಸಂಖ್ಯೆಯನ
ಸ್ಥಾಪಿಸಿದ ಆಕಾರ ಪೂರ್ಣ ರೂಪದಂತಹ ವರ್ತುಲಾಕಾ
(ಅಥವಾ ವರ್ತುಲದಂತಹ ಚೌಕಾಕಾರ) ಆಗಿರಬೇಕು. ಸರ
ರೇಖೆಯಲ್ಲಿ ನೇರವಾಗಿರಲಾಗದು. ನೇರವಾಗಿದ್ದರೆ ನಿರ್ದಿಷ
ಅಂಕೆಗೆ ನಿರ್ದಿಷ್ಟ ಅಂಕಣ (ಮನೆ) ಆಗಲಾರವು. ಒಂದೊಂದಂಕ
ಕಡಿಮೆ ಆಗುತ್ತದೆ. ಅಂದರೆ, ಒಂದೇ ಸಾಲಿನಲ್ಲಿ ಹನ್ನೆರಡು ಅಂ
ಗಳನ್ನು ಬರೆದರೆ, ಅಲ್ಲಿ ಕೇವಲ ಹನ್ನೊಂದೇ ಅಂಕಣ ಸ್ಥಾನವಾಗ
ತ್ತದೆ. ಹೀಗೆಯೇ ಅರುವತ್ತಕ್ಕೆ ಐವತ್ತೊಂಬತ್ತು.

ಕಾರಣ, ಕೇಂದ್ರದ ಸ್ಥಿತಿಸ್ಥಾಪಕತ್ವವನ್ನು ಮೀರದಂತಿದ್
ಸ್ವಯಂ ಚೈತನ್ಯವನ್ನು ಬೆಳೆಸಿಕೊಳ್ಳುತ್ತ ಪೂರ್ಣ ರೂಪದ ಜ
ದಲ್ಲಿ ನಾನಾತ್ವವನ್ನು ಗುರುತಿಸಿ ತಿಳಿಸಿದರೂ ತಾನು ಹಾಗೆಯೆ
ದುಂಡಾಗುವಂತೆ ಸುತ್ತುತ್ತಿರಬೇಕು. ಇದು ಹೊತ್ತಿನಂತ
ಪೂರ್ಣ ಪೂರ್ಣತ್ವದ ಸಂಕೇತ.

[ಪುಟ ೫]

ಮೇರುವನು ಎಡಕಿಟ್ಟು ಪೂರ್ವಕ್ಕೆ ಇಡು ಕತ್ತು;
ಒಂದೆ ಸುತ್ತಿಗೆ ಎಂಟು ದಿಶೆ ನಿನಗೆ ಬಲ, ಗೊತ್ತು:
ಗೊತ್ತು-ಗುರಿ ಎಲ್ಲಕೂ ಬಲುಮೆಯೇ ನಿಜ ಸೊತ್ತು.
ಬಲಿಸು; ಪೂರ್ಣ ಬಲಿಸದೆ ಬಿಡಬೇಡ ಜೀಸತ್ತು.

ಪೂರ್ಣತ್ವದ ಸಂಕೇತವಾದ ಹೊತ್ತು ನಿತ್ಯವಾಗಿಯೂ ವ್ಯಾಪಕವಾಗಿಯೂ ಮತ್ತು ಒಂದಾಗಿಯೂ ಇರುವಂತೆ ದಿಕ್ಕೂ ಸಹ ಹಾಗೆಯೇ. ಪೂರ್ವ-ಪಶ್ಚಿಮ, ಆಗ್ನೇಯ-ನೈರುತ್ಯ, ಮೇಲೆ-ಕೆಳಗೆ, ಒಳಗೆ-ಹೊರಗೆ, ಅಲ್ಲಿ-ಇಲ್ಲಿ ಇವೇ ಮುಂತಾದ ಸ್ಥಾನ ಸೂಚಕ ವ್ಯವಹಾರಕ್ಕೆ ಅಸಾಧಾರಣವಾದ ಕಾರಣವಾಗಿರುವುದರ ಹೆಸರೇ ದಿಕ್ಕು. ಈ ದಿಕ್ಕಿಗೆ ದಿಕ್ಕೇ ದಿಕ್ಕು. ಆ ಹೊತ್ತಿಗೆ ಪರತ್ವ ಮತ್ತು ಅಪರತ್ವ (ಮುಂಚೆ-ಆ ಮೇಲೆ) ಇದ್ದಂತೆ ಈ ದಿಕ್ಕಿಗೂ ಇವೆರಡೂ ಇವೆ. ಸಮೀಪ-ದೂರ ಸ್ಥಾನ ತೋರಿಸುತ್ತವೆ. ಆದುದರಿಂದಲೇ ಈ ಹೊತ್ತಿಗೆ, ಈ ದಿಕ್ಕಿಗೆ ಪೂರ್ಣತ್ವದ ದ್ರವ್ಯವೆನ್ನುತ್ತೇವೆ. ಈ ಹೊತ್ತು-ದಿಕ್ಕುಗಳೆರಡೂ ಪ್ರತಿಯೊಂದು ಕಾರ್ಯಕ್ಕೂ ನಿಮಿತ್ತ ಕಾರಣಗಳಾಗಿವೆ. ಪೂರ್ವ-ಪಶ್ಚಿಮವೆಂಬ ಹೆಸರಿನ ದಿಕ್ಕಿಗೆ ವ್ಯವಹಾರ ಭೇದಗಳೆಲ್ಲವೂ, ಉಪಾಧಿ ಮೂಲಕವಾಗಿವೆ. ಶಿವನ ಅಷ್ಟತನುವಿನಂತೆ, ವೀರಶೈವದ ಅಷ್ಟಾವರಣದಂತೆ, ಪತಂಜಲಿಯ ಅಷ್ಟಾಂಗದಂತೆ, ಪಾಣಿನಿಯ ಅಷ್ಟಾಧ್ಯಾಯದಂತೆ ಈ ದಿಕ್ಕೊಂದೇ ಇದ್ದರೂ ಮುಖ್ಯವಾಗಿ ಎಂಟನ್ನಾಗಿಸಿದ್ದೇವೆ.

ಒಂದುವಸ್ತು ಮತ್ತೊಂದಕ್ಕಿಂತ ದೂರದಲ್ಲಿ ಅಥವಾ ಸಮೀಪದಲ್ಲಿ ಇರುತ್ತದೆಂಬ ತಿಳುವಳಿಕೆಯಿಂದ ನಮಗೆ ದಿಕ್ಕಿನ ಅರಿವಾಗುತ್ತದೆ. ಒಬ್ಬನ ಮುಖದ ಎಡಗಡೆಯ ಕಣ್ಣು ಎಡಗಣ್ಣು, ಎಡಕ್ಕಿರುವ ಕಣ್ಣು. ಆದರೆ, ಆದೇ ಕಣ್ಣು ಆವನ ಎಡಗಡೆ ಕುಳಿತವಳ

ಬಲಗಣ್ಣಿನ ಬಲಕ್ಕಿರುವ ಕಣ್ಣೂ ಆಗುತ್ತದೆ.

ಸಾಮಾಜಿಕ ಜೀವಿಗಳಾದ ನಾವು ವ್ಯಷ್ಟಿ ಅಥವಾ ಸಮಷ್ಟಿ
ಪ್ರತಿಯೊಂದಕ್ಕೂ ಕೇಂದ್ರ ಬಿಂದುವನ್ನಾಗಿ ಯಾವುದನ್ನಾದ
ಒಲಿದು ಒಪ್ಪಲೇಬೇಕು. ಸ್ಥೂಲಾರುಂಧತೀ ನ್ಯಾಯವಿ
ಸೂಕ್ಷ್ಮದ ವ್ಯವಹಾರ ನಡೆಯಲಾರದು.

ಭೂ-ಗೋಲವನ್ನು ಮೇಲ್ಮುಖವಾಗಿಟ್ಟು ನೋಡುವ
ಭೂ-ಪಟವನ್ನು ಯಾವ ದಿಕ್ಕಿನ ಗೋಡೆಗಾದರೂ ತಗುಲ
ಅದರ ಮೇಲ್‌ಭಾಗವನ್ನು ಉತ್ತರದ ದಿಕ್ಕೆಂದು ಒಲಿದು ವ
ಹರಿಸುವಂತೆಯೇ ಈ ಭೂ-ಮಂಡಲಕ್ಕೆ ಉತ್ತರದಲ್ಲಿರ
ಮೇರು ಪರ್ವತವನ್ನು ಎಡಗಡೆ ಇರುವಂತೆ ಭಾವಿಸಿ, ಸೂರ್ಯೋ
ದಯವಾಗುವ ಪೂರ್ವ ದಿಕ್ಕಿಗೆ ಮುಖ ಮಾಡಿ, ಹಾಗೆ
ನಿಂತಲ್ಲಿಯೇ ಬಲಗಡೆಗೆ ಪೂರ್ಣ ಒಂದು ಸುತ್ತು ತಿರುಗಿ
ಎಂಟೂ ದಿಕ್ಕುಗಳು ಒಂದೊಂದಾಗಿ ಬಲಕ್ಕಾಗಿ ಅವುಗಳ ಪೂ
ಜ್ಞಾನವಾಗಿ ಪೂರ್ಣತ್ವದ ಅರಿವಾಗುತ್ತದೆ. ಪೂರ್ಣ ಸುತ್ತ
ಸುತ್ತದಿದ್ದರೆ, ಎಂಟೂ ದಿಕ್ಕುಗಳು ಗೊತ್ತಾಗಿ, ಅವುಗಳ
ಪೂರ್ಣ ಜ್ಞಾನವಾಗಲಾರದು. ಅದಕ್ಕಾಗಿ, ಮೇರು ಮಣಿಯ
ಜಪಮಾಲೆಯ ಜಪಿಸುವಿಕೆಯನ್ನು ಪ್ರಾರಂಭಿಸುವಂತೆ. ಮೇ
ಪರ್ವತವನ್ನು ಕೇಂದ್ರ ಸಂಕೇತವನ್ನಾಗಿ ನಂಬಿ, ದಿಕ್ಕಿನ
ಒಲಿದು ವ್ಯವಹರಿಸುತ್ತೇವೆ. ಬೀಸುವ ಬೀಸು-ಕಲ್ಲು, ಬೀ
ಕಲ್ಲು ತನ್ನ ಮಧ್ಯಸ್ಥವಾದ ಕೇಂದ್ರ-ಕೀಲ (ಒಳಗಿನ ಕಿರುಗೂ
ವನ್ನು ಸೆರೆ ನಂಬಿದಂತಿರುವುದರಿಂದ ತನ್ನ ಕಾರ್ಯದಲ್ಲಿ
ಸರಿಯಾಗಿ ವ್ಯವಹರಿಸುತ್ತಿರುತ್ತದೆ. ಹಾಗೆ ಜೀವನದಲ್ಲಿಯೂ
ಆದರ್ಶ ವ್ಯಕ್ತಿಯನ್ನು ಗುರುವನ್ನಾಗಿ ನಂಬಿ, ವ್ಯವಹರಿಸಬೇ

ಆದರ್ಶ ವ್ಯವಹಾರಕ್ಕೆ, ಸುಖ ಜೀವನಕ್ಕೆ. ಜೀವನದ ಗೊತ

ುರಿಗೆ, ಎಲ್ಲಕ್ಕೂ ಒಲುಮೆಯೇ ನಿಜ ಸೊತ್ತು. ಈ ಒಲುಮೆ
ುಯಿಂದ ಜಗತ್ತಿನ ಸರ್ವ ವ್ಯವಹಾರ ಸಾಗುತ್ತವೆ. ಯೋಗ,
ರೂಢ ಹಾಗೂ ಯೋಗ–ರೂಢ–ಈ ಮೂರೂ ಶಬ್ದಗಳ ವ್ಯವ
ಹಾರಕ್ಕೂ ಒಲುಮೆಯೇ ಕಾರಣವು. ಹಿಂದಿನ ಹಿರಿಯರು ಒಲಿದು
ಈಗಿನವರಿಗೆ ವಿದ್ಯೆ ಮಂತ್ರ ಮುಂತಾದ್ದನ್ನು ತಿಳಿಸಿದಂತೆ, ಈಗಿನ
ರರೂ ಮುಂದಿನ ಸಂತಾನಕ್ಕೆ ಒಲಿದು ತಿಳಿಸುತ್ತಿರಬೇಕು. ಅಂದರೆ,
ಈಗಿನವರಿಗೆ ತಿಳಿಸುತ್ತಿರುವ ಈಗಿನ ಹಿರಿಯರಿಗೆ ಕಿರಿಯರಾಗಿದ್ದು,
ತಿಳಿದು, ಈಗಿನವರು ಜ್ಞಾನದಿಂದ ಹಿರಿಯರಾದಾಗ ಈಗಿನವರಿ
ಂತ ಕಿರಿಯರಾದವರಿಗೆ ಜ್ಞಾನಾರ್ಜನೆ ಮಾಡಿಸಲು ಪೂರ್ಣತ್ವದ
ುಗ್ಗೆ ತಿಳಿಸುತ್ತಿರುವ ಈಗಿನವರ ಪರೋಪಕಾರವೂ ಒಂದು
ಪೂರ್ಣ ಕಾರ್ಯ. ಪಟುವಾಗಿ ಕಲಿತಿದ್ದುದನ್ನು ಗುರುವಾಗಿ ಶಿಷ್ಯರಿಗೆ
ಲಿಸುವುದೂ ಒಂದು ಒಳ್ಳೆಯ ಹಾಗೂ ಪುಣ್ಯಪ್ರದವಾದ
ಪೂರ್ಣ ಕಾರ್ಯ.

[ಪುಟ ೬]

ಬಾಲ್ಯದಲಿ ತೊಟ್ಟಿಲವು ಒಂದೆ ಪಥ ಬರುತಿತ್ತು;
ಶ್ರುತಿ ಮಧುರ ಜೋಗುಳದ ಪದ ಕೇಳಿಸುತಲಿತ್ತು;
ಒಂದೆ ಪಥದಿಂದ ಕಿರಿ ಮಗುವ ನಲಿಸುತಲಿತ್ತು.
ನಲಿಸು; ಪೂರ್ಣ ನಲಿಸದೆ ಬಿಡಬೇಡ ಬೇಸತ್ತು.

ಪೂರ್ಣ ಕಾರ್ಯನೂ ಕಾರಣನೂ ಆದ ಪೂರ್ಣತ್ವ ರೂಪದ
ಪರಮಾತ್ಮನು ತನ್ನ ಲೀಲೆಯಿಂದ ಜೀವಾತ್ಮನಾಗುತ್ತಾನೆ. ಅವನು
ಭೌತಿಕ ಶರೀರ ಧರಿಸುತ್ತಾನೆ. ಬೆಳಕು ಕಾಣುವ ಮುಂಚೆ ಅವನು
ಭ್ರೂಣಾವ್ಯವಸ್ಥೆಯಲ್ಲಿ ಗರ್ಭಾಶಯ – ತೊಟ್ಟಿಲದಲ್ಲಿರುತ್ತಾನೆ.
ಆಗ ಅವನು ಪರ-ಜೀವೋಪಜೀವಿಯಾಗಿರುತ್ತಾನೆ. ಮಾನವ-
ಶಿಶುವಾಗಿ ಬಂದ ಹೊಸತರಲ್ಲಿ ಅವನು, ಮುಂದೆ ಮಹಾತ್ಮ

ನಾಗುವ ಸಾಮರ್ಥ್ಯವಿದ್ದರೂ, ಲೌಕಿಕ ಕ್ರಿಯೆ ಮಾಡಿ ದ
ದುಣ್ಣುವ ಸಾಮರ್ಥ್ಯ ಇಲ್ಲದ್ದರಿಂದ ಮಗುವಾಗಿ ಯಾವು
ವಿಧದ ತೊಟ್ಟಿಲದಲ್ಲಿ ಬಂಧನದಲ್ಲಿದ್ದಂತೆಯೇ ಇರಬೇಕಾಗುತ್ತ

ಈ ಮಾತು, ಪ್ರಥಮಾವಸ್ಥೆಯಲ್ಲಿದ್ದ ಚರಾಚರವೆಲ್ಲಕ
ಅನ್ವಯಿಸುತ್ತದೆ. ಆ ಅವಸ್ಥೆಯ ಆ ತೊಟ್ಟಿಲವು ಒಂದೇ
ವಾಗಿ ತೂಗಿ – ತೂಗಿ ಶ್ರುತಿ – ಮಧುರವಾದ ಜೋಗ
ಜಯಕುಲ ಜಯ–ಜಯ ಎಂಬ ಜಯಕಾರವನ್ನು ಕೇಳಿಸುವ
ಮಾಡಿ, ಆ ಶಿಶುವನ್ನು ಪೂರ್ಣ ಮಾನವನನ್ನಾಗಿಸಬೇಕೆಂದು
ನಿಸರ್ಗವು ತನ್ನ ಪೂರ್ಣತ್ವದ ಒಂದೇ ಮಾರ್ಗದಿಂದ ಕಲಿ
ಮಗುವನ್ನು ನಲಿಸುತ್ತಿರುತ್ತದೆ.

ಅದರಂತೆ ಸಾಮರ್ಥ್ಯ ಓಣಿಸರನ್ನು ಸಂರಕ್ಷಿಸಬೇಕು. ಜ
ಜಯಕಾರ ಮಾಡಿಸಬೇಕು. ಅವರನ್ನು ಪೂರ್ಣ ಗುಣದ ಮಾ
ರನ್ನಾಗಿ ಮಾಡಬೇಕು. ಅವರು ಸದಾ ನಲಿದಾಡುವಂತೆ ಮಾ
ಬೇಕು.

[ಪುಟ ೭]

ಸ್ವಯಂಸೇವ ಜೋಕಾಲಿ ಜೀಕಲಿಕೆ ಮನ ತೆತ್ತು,
ಅದರಲ್ಲಿ ನೀಟಾಗಿ ಕುಳಿತೊ, ನಿಂತೋ ಮತ್ತು
ಎರಡು ಕೈಯಲಿ ಎರಡು ಹಗ್ಗ ಹಿಡಿ; ಜೀಕೆತ್ತು,
ಜೀಕು; ಪೂರ್ಣ ಮುಗಿಸದೆ ಬಿಡಬೇಡ ಬೇಸತ್ತು.

ನಲಿದಾಡುವಂತೆ ಮಾಡಿಸಿದ ಮುಗ್ಧ ಬಾಲ್ಯಾವಸ್ಥೆಯ
ದಾಟಿ ತಾರುಣ್ಯವು ಸಮೀಪಿಸುತ್ತಿದ್ದಂತೆ ನಿರಂಕುಶ ಸ್ವಚ್ಛಂ
ಗಿಂಬಂಗೊಡದೆ ಜೀವನ—ಜೋಕಾಲಿ ಜೀಕಬೇಕು. ಇದ—
ಮಾರ್ಗ ಬಿಡದಂತೆ ಸಂಸಾರ ಸಾಗಿಸಬೇಕು. ಸುಖ—ದುಃಖ
೬೨ ಘಾತ ಲಾ[illegible]ಭದಲ್ಲಿ, ಜಯಾಪಜಯದಲ್ಲಿ, ಸ್ತುತಿ—

ಳಲ್ಲಿ ಕೋಪಾದಿಗಳನ್ನು ತಾಳದೆ ಸಮಾಧಾನಿಯಾಗಿರಬೇಕು. ಜೋಕಾಲಿಯನ್ನು ಜೀಕಲು ತೊಡಗಿದಾಗ ಬೇಸತ್ತು ಅರ್ಧಕ್ಕೇ ಕೈಬಿಟ್ಟರೆ, ಆಗುವ ಗತಿಯಂತೆಯೇ ಉಸಿರಾಟದ ಜೀವನವನ್ನು ಅರ್ಧಕ್ಕೆ ನಿಲ್ಲಿಸಿದರೆ ಆಗುವುದು.

ಕಾರಣ. “ಶರೀರಮ್ ಆದ್ಯಂ ಖಲು, ಧರ್ಮ-ಸಾಧನಂ” ಎಂಬ ಕಾಲಿದಾಸನ ನುಡಿಯಂತೆ ಶರೀರದ ರಕ್ಷಣೆ ಪೋಷಣೆ ಮಾಡಿ ಕೊಳ್ಳುತ್ತಿರಬೇಕು. ಸಂಸಾರದ ದಂದುಗಕ್ಕೆ ಕೋಟಲೆಗೆ ಅಂಜಿ, ಬೇಸತ್ತು, ಕರ್ತವ್ಯದಿಂದ ದೂರ ಜಿಗಿದುಬಿಡಬೇಕೆಂಬ ದುಡುಕು ಭ್ರಾಂತಿಯಿಂದ ಆತ್ಮಹತ್ಯೆಯಂತಹ ಪಾಪದ ಕೆಲಸ ಮಾಡಿ ಕೊಂಡು ಜೀವನ–ಜೋಕಾಲಿಯನ್ನು ಅರ್ಧಕ್ಕೆ ಕೈಬಿಡಬಾರದು. ನನ್ನ ಮಾನಾಪಮಾನ ನಿಮ್ಮದಯ್ಯ; ಹಾನಿ – ವೃದ್ಧಿ ನಿಮ್ಮದಯ್ಯ” ಎಂದು ಪೂರ್ಣ ನಂಬಿ. ಪೂರ್ಣ ಜೀವನವನ್ನು ಸಾಗಿಸಬೇಕು. ಪೂರ್ಣನಾಗಬೇಕು.

[ಪುಟ ೮]

ಧರಣಿ ಜಲ ಉರಿ ಗಾಳಿ ಗಗನ ಪೂರ್ಣನ ಸುತ್ತು-
ಮುತ್ತಲೂ ತಿರುಗುವವು-ಒಂದೆ ಗತಿಯುತ ಸುತ್ತು.
ತಿರುಗದಿರೆ ಹೊಂದುವವು ಅಂತಿಮ ಲಯದ ಗೊತ್ತು.
ತಿರುಗು; ಪೂರ್ಣ ತಿರುಗದೆ ಬಿಡಬೇಡ ಬೇಸತ್ತು.

ಪೂರ್ಣ ಜೀವನ ಸಾಗಿಸಬೇಕೆಂದು ನಿರ್ಧರಿಸಿ, ಪೂರ್ಣತ್ವ ಪಡೆಯಲಿಚ್ಛಿಸುವ ಜೀವಿಗಳು ಇಹಲೋಕದಲ್ಲಿಯ ಭೋಗ-ಭಾಗ್ಯವನ್ನು ಹಾಗು ಪರಲೋಕದ ನಿತ್ಯಾನಂದವನ್ನು ಪಡೆಯಲು ಪಾಪ-ಪುಣ್ಯದ ಭಯದಿಂದ ಕರ್ತವ್ಯವನ್ನು ನೆರವೇರಿಸುತ್ತಿರುತ್ತಾರೆ.

ಪಂಚೀಕರಣದ ಪಂಚ ಭೂತಗಳು ಪೂರ್ಣನ ಆಜ್ಞೆಯಿಂ

ದೆಂಬಂತೆ ತಮ್ಮ ನೈಸರ್ಗಿಕ ಸಹಜ ಕಾರ್ಯಕ್ರಮದಲ್ಲಿ ಜಾ
ತಪ್ಪದಂತೆ ನಡೆಯುತ್ತಿರುತ್ತವೆ:

(ಧರಣೆ) ಪೂರ್ಣಾಕಾರ ತಳೆಯಲು ಮೇಲಕ್ಕೆದ್ದಂತಿ
ಉಬ್ಬಿದ ನೆಲವಾದ ಗುಡ್ಡಬೆಟ್ಟಗಳು ಅತ್ತಿತ್ತ ಓಡಾ
ಇದ್ದಲ್ಲಿಯೇ ತಪಸ್ಸು ಮಾಡುತ್ತಿದ್ದು ಸ್ಥಿರವಾಗಿರುತ್ತವೆ.
ಧರಣಿಯ (ಭೂಮಿ) ಸತ್ಯಾಗ್ರಹದ ಧರಣೆ.

(ಜಲ) ಪೂರ್ಣ-ಸಮುದ್ರದಲ್ಲಿ ಸೇರಲು ಹಾತೊರೆಯು
ರುವ ನೀರು, ಒಂದೆಡೆಗೇ ನೆಲ ಹಿಡಿದು, ನೆಲೆಯಾಗಿ ನಿ
ಇಂಗುತ್ತದೆ; ನೆಲದೊಳಗೆ ಸೆಲೆಯಾಗುತ್ತದೆ; ಮುಗಿಲ ಮೂ
ಯಲ್ಲಿ ಮೋಡವಾಗಿ ತೂಗುಯ್ಯಾಲೆಯಾಡುತ್ತದೆ;
ಮೇಲ್ಗಡೆ ಹೊಳೆಯಾಗಿ ಹರಿಯುತ್ತದೆ; ಓಡುತ್ತದೆ.
ತಡೆದು ಅಡ್ಡಗಟ್ಟಿ "ಪಂಪಿಂಗ್" ಮಾಡಿ ಯಂತ್ರದ ಸ
ಶಕ್ತಿಯಿಂದ ಮೇಲಕ್ಕೇರಿಸಿದರೂ ಆ ನೀರು ಮತ್ತೆ ಅ
ಕಲ್ಪಿಸಿಕೊಂಡು ಇಳಿಕಲ ಕಡೆಗೇ ಓಡಾಡುತ್ತದೆ; ಓಡುತ್ತ
ಇವೆ. ಆಗ "ಗಿರಿಜ್ಯಾಗಿರಿಜಾ ಎಲ್ಲಾಡಿ ಬಂದೆ?"
ಅದನ್ನು ಕೇಳಿದರೆ, ಅದು "ಹಳ್ಳಾ ಕೊಳ್ಳಾ ತಿರುಗಾಡಿ ಬ
ಎಂದು ಉತ್ತರ ಹೇಳುತ್ತಲೇ ಜುಳು-ಜುಳು ಹರಿಯುತ್ತ
ಗಿರಿಜೆಯೆಂದರೆ ಗುಡ್ಡದ ನೀರು, ಪಾರ್ವತಿ; ಅಗಿ
ಭೂಮಿಯ ನೀರು, ಸೀತೆಯೆಂದು ಹೆಸರು. ಈ ಪಾವ
ಸೀತೆಯರ ಕರುಣಾ-ಜಲವಿಲ್ಲದೆ ಕೌಮಾರ್ಯ ವೃದ್ಧಿಸದು; ಆ
ದೊರೆಯದು. ಚರಾಚರವನ್ನು ಸರಸವನ್ನಾಗಿಸಿ ಸಲ
ಮಾತೃ-ಹೃದಯ ನೀರಿನದು.

(ಉರಿ) ಪೂರ್ಣನು ಉರ್ಧ್ವಭಾಗದಲ್ಲಿದ್ದೇ ಇರುವನ
ನಂಬಿದ ತೇಜಸ್ತತ್ತ್ವದ ಉರಿಯು ಭೂಮಿಯ ಮಧ್ಯಭಾಗ

ಜ್ವಾಲಾಮುಖಿಯ ಜ್ವಾಲೆಯಾಗುತ್ತದೆ; ಭೂಮಿಯ ಮೇಲಿಂದ ಶಕೆಯಾಗುತ್ತದೆ; ಇದ್ದಲು ಕಟ್ಟಿಗೆಗಳಿಂದ ಬಿಸಿ ಆಗುತ್ತದೆ; ನೀರ ಮೇಲಿಂದ ಉಗೆ ಆಗುತ್ತದೆ. ಹೀಗಾಗಿ ಅದು ಸದಾ ಮೇಲ್ಗಡೆಗೆ ಜಿಗಿಯಬೇಕೆನ್ನುತ್ತದೆ. ಇದು ಊರ್ಧ್ವ ದೃಷ್ಟಿಯ ತೇಜಸ್ಸಿನ ಹವಣಿಕೆ.

(ಗಾಳಿ) ಪೂರ್ಣನನ್ನು ಸುತ್ತುಮುತ್ತು ಅಲ್ಲಲ್ಲಿ ಹುಡುಕುತ್ತ ಅಲೆಯುತ್ತಿರುವ ಗಾಳಿಯು ಪ್ರಾಣಿಯ ಉಸಿರಾಗಿ, ಟಾಯರ್ ಟ್ಯೂಬಿನ ಹವೆಯಾಗಿ, ಮಲಯದ ಮಂದ ಮಾರುತನಾಗಿ, ಬಯಲಿನ ಝುಂಝಾವಾತವಾಗಿ ಯಾವಾಗಲೂ ಗಮನಶೀಲವಾಗಿದೆ; ಸದಾಗತಿಯಾಗಿದೆ.

(ಗಗನ) ಪೂರ್ಣ ರೀತಿಯಿಂದ ವ್ಯಾಪಕವಾಗಿ ಅಣು-ಅಣುವಿನಲ್ಲಿಯೂ, ಮಹಾ-ಮಹಾ ವಸ್ತುವಿನಲ್ಲಿಯೂ ಆ-ಆ ವಸ್ತುವಿನಲ್ಲಿರುವ ಸ್ಥಾನಾವಕಾಶದ ಆ-ಆ ಆಕಾರವಾಗಿ ವಿಸ್ತರಿಸುತ್ತಿರುವ ಆಕಾಶವು ಘಟಾಕಾಶ ಮಠಾಕಾಶ ಮಹಾಕಾಶ ಎನ್ನಿಸಿಕೊಂಡರೂ, ಟೊಳ್ಳು ಪೊಳ್ಳು ಛಿದ್ರ-ಗುಹೆಯೆನ್ನಿಸಿಕೊಂಡರೂ ತನ್ನಷ್ಟಕ್ಕೆ ತಾನು ಪೂರ್ಣತ್ವಕ್ಕಾಗಿ ವಿಶಾಲವಾಗುತ್ತಲೇ ಇರುತ್ತದೆ. ಘಟ ಮಠಗಳನ್ನು ಒಡೆಯುತ್ತದೆ; ಕೆಡಹುತ್ತದೆ. ಇದು ವಿಶಾಲ ಭಾವದ ವಿಶಾಲತೆಯನ್ನು ಕಲ್ಪಿಸುವ ವಿಶಾಲಾಕಾಶದ ರಹಸ್ಯ.

ಹೀಗೆ ಸಮಗ್ರವಾಗಿ ಕಾಣುವ ಸಮಸ್ತ ಭೂ-ಭಾಗ, ಜಲದ ಬಿಂದು ಉರಿಯ ಸುತ್ತು, ವಾಯುವಿನ ಸುತ್ತುವರೆಯುವಿಕೆ ಹಾಗೂ ತಲೆಯ ಮೇಲಿರುವ ವಿಶಾಲ ಗಗನ—ಎಲ್ಲವೂ ದುಂಡಿನಂತಹ ದುಂಡಿನ ಪೂರ್ಣಾಕಾರವನ್ನೇ ಹೋಲುತ್ತವೆ, ಆಕಾಶಾದಿಗಳು ಶಬ್ದಾದಿಗಳಿಂದ ಪೂರ್ಣತ್ವವನ್ನು ತಿಳಿಯುವಂತೆ ತೋರಿಸುತ್ತವೆ.

ಬ್ರಹ್ಮಾಂಡದಲ್ಲಿ ಜರುಗುತ್ತಿರುವ ಈ ಪಂಚೀಕರಣದ ಪ
ಮಹಾ ಭೂತಗಳ ಕಾರ್ಯಕ್ರಮವು ಪಿಂಡಾಂಡದಲ್ಲಿಯೂ ಜ
ಗುತ್ತಿರುತ್ತದೆ. ಹೃದಯವೆಂಬ ಪೃಥ್ವಿಯಲ್ಲಿ, ರಕ್ತವೆಂಬ ಜ
ಶುದ್ಧೀಕರಣದ ಕ್ರಿಯೆಯು, ಜಠರಾಗ್ನಿಯೆಂಬ ತೇಜಸ್ಸಿ
ಸ್ಫೂರ್ತಿಗೊಂಡು, ಪಂಚ ಪ್ರಾಣವಾಯುವಿನ ಸಹಾಯದ
ಯಿಂದ ಶರೀರಾಕಾಶದ ನರ-ನರಗಳಲ್ಲಿ ರಕ್ತ-ಸಂಚಾರವು
ಯುತ್ತಿರುತ್ತದೆ. ಎದೆ-ಗುಂಡಿಗೆಯಿಂದ ಹೊರಟ ರಕ್ತವು ವ
ಮತ್ತೆ ಅದೇ ಎದೆ-ಗುಂಡಿಗೆಗೆ ಸುತ್ತುವರೆದು ಬಂದು ಅ
[ರಕ್ತವು]ಜೀವಿಯ ಉಸಿರಾಟವನ್ನು ಮಾಡಿಸುತ್ತಿರುತ್ತದೆ. ಅ
ಪುಪ್ಪುಸದ ಸಹಾಯದಿಂದ ಎದೆ-ಗುಂಡಿಗೆಯಿಂದ ಹೊರ
ಮತ್ತೆ ಅಲ್ಲಿಗೆ ವಾಪಸ್ಸು ಬಂದರೆ, ಆ ರಕ್ತದ ಪರಿಕ್ರಮದ ಬ
ಪೂರ್ಣ ಸುತ್ತು ಆದಂತೆ.

ಈ ರೀತಿಯ ಪೃಥ್ವಿಯ ಸ್ಥಿರತೆ, ಜಲದ ಸರಳತೆ, ತ
ಸ್ಸಿನ ಊರ್ಧ್ವದೃಷ್ಟಿ, ವಾಯುವಿನ ಸದಾಗತಿ, ಗಗನದ ವಿಶಾ
ಹಾಗೆಯೇ ಎಲ್ಲಿ ತತ್ವಗಳ ಕ್ರಿಯಾಶೀಲತೆಯನ್ನು ಅರಿತು.
ಗಳಂತೆ ನಿಷ್ಠೆಯಿಂದ ಕಾರ್ಯ ತತ್ಪರರಾಗಿರಬೇಕು.

[ಪುಟ ೯]

" ಜನರೆಟರಿ "ನಿಂದ ಹೊರ-ಹೊರಟ ನೆಗೆಟಿವ್ ಮತ್ತು
ಪೊಜಿಟಿವ್ ವಾಯ್ರ ಸರ್ಕಿಟ್ಟು ಸರ್ಕಲ್ = ಸುತ್ತು;
ಪೂರ್ಣ ಇರೆ, ಪಾವರ್ ವ ಲೈಟ್ ಸ್ವಿಚ್ಚ ಆನ್ ಒತ್ತು.
ಇರಿಸು; ಪೂರ್ಣ ಇರಿಸದೆ ಬಿಡಬೇಡ ಬೇಸತ್ತು.

ಕಾರ್ಯ ತತ್ಪರರಾಗಿರುವ ಶಿವ-ಶಕ್ತಿ, ಪುರುಷ-ಪ್ರ
ಪತಿ-ಪತ್ನಿ, ಸ್ವಾಮಿ-ಸೇವಕ, ದೇವ-ಭಕ್ತ, ಗುರು-ಶಿಷ್ಯ-
ರಿಬ್ಬರಿಗೂ ಪರಸ್ಪರ ಸಹಕಾರ ಸಹಾನುಭೂತಿಗಳಿಲ್ಲದೆ, ಪರಸ್

ೀವನವು ಬೆಳಕಾಗಲಾರದು. ನಿರಂತರ ನಿರಾತಂಕವಾಗಿ ಪ್ರೇಮ ಂದ ಪೂರ್ಣ ಅಗುವಿಕೆಯನ್ನು ಸಾಧಿಸುತ್ತಿದ್ದರೆ ಮಾತ್ರ ಬಾಳು ಬೆಳಕಾಗುವದು; ಪೂರ್ಣಗೊಳ್ಳುವುದು. ಎರಡರ ಸಹಯೋಗ ಸಂಯೋಗ ಭೆಟ್ಟಿ ಬೆರೆಯುವಿಕೆಯಿಲ್ಲದೆ. ಕೇವಲ ಒಂದರಿಂದಲೇ ಯಾವ ಕಾರ್ಯವೂ ಸಾಗದು. ಒಂದೇ ಕೈಯಿಂದ ಚಪ್ಪಾಳೆ ಆಗದು; ಒಂದೇ ಬೆರಳಿನಿಂದ ಚಿಟಿಕೆ ಆಗದು. ಒಂದೇ ಅಣುವಿನಿಂದ ದ್ವ್ಯಣುಕವಾಗದು; ದ್ವ್ಯಣುಕ ಸೇರಿದರೆ, ತ್ರ್ಯಣುಕ. ಒಂದೇ ವ್ಯಕ್ತಿ ಸಮಾಜವಲ್ಲ. ವ್ಯಷ್ಟಿಯಿಲ್ಲದೆ ಸಮಷ್ಟಿಯಿಲ್ಲ. ಅದರಂತೆ, ುಪತ್ತಿನಿಂದ ಅಣು; ಅಣುವಿನಿಂದ ಮಹತ್ತು. ಸಮಷ್ಟಿಯಲ್ಲಿ ವ್ಯಷ್ಟಿ; ವ್ಯಷ್ಟಿಯಿಂದ ಸಮಷ್ಟಿ. ಹಾಗೆಯೇ, ಶಿವನಿಂದ ಶಕ್ತಿ; ಶಕ್ತಿಯಲ್ಲಿ ಶಿವ.

ಶಿವ–ಶಕ್ತಿಯರಿಗೆ ಸಮಾನ ಅರ್ಥವುಳ್ಳ ಪತಿ–ಪತ್ನಿ ಶಬ್ದ ಗಳೆರಡೂ ಸಾಪೇಕ್ಷ ಶಬ್ದಗಳು. ಇವರಲ್ಲಿಯ ಸಾಪೇಕ್ಷತೆಯೇ ಇವರಿಬ್ಬರ ಕರ್ತೃತ್ವಶಕ್ತಿಯ ದ್ಯೋತಕ. ಸಾಪೇಕ್ಷತೆಯೆಂದರೆ ಎರಡರಲ್ಲಿ ಒಂದರಿಂದೊಂದರ ತಿಳಿವಳಿಕೆ. ಪತಿಯೆಂದರೆ ಯಾರ ಪತಿ; ಪತ್ನಿಯೆಂದರೆ ಯಾರ ಪತ್ನಿ ಎಂದು ಕೇಳಿ ತಿಳಿಯಬೇಕೆಂಬ ಬಯಕೆಯಿದ್ದಷ್ಟೇ ಅದು. ಅದರಂತೆ, ಬೆಳಕಾಗಿ ಬೆಳಕಿಗೆ ಬರ ಬೇಕಾದರೆ, ಧನ ವಿದ್ಯುತ್–ಋಣವಿದ್ಯುತ್‌ಗಳೆರಡೂ ಆ–ಆ ಸ್ಥಾನದಲ್ಲಿರುವ ಆ–ಆ ‘ಹೊಲ್‌ಡರಿ’ನಲ್ಲಿರುವಂಥ ಸಾಪೇಕ್ಷತೆ ಯನ್ನು ಹೊಂದಿರಬೇಕು. ಅವೆರಡರ ಮಧ್ಯದ ಸಂಬಂಧ ತಪ್ಪಿರ ಬಾರದು. ಸಮ್ಯಕ್ ಬಂಧವೆ ಸಂಬಂಧ.

ಸಂಬಂಧ ತಪ್ಪಿರಲಾರದ ಮತ್ತು ಕಾರ್ಯಕ್ಷಮತೆಯುಳ್ಳ ಧನ ವಿದ್ಯುತ್ ಮತ್ತು ಋಣವಿದ್ಯುತ್‌ಗಳೆರಡೂ (Positive, Negative Electrode ಅಥವಾ Anode, Cathode)

ಸಾಧನೆ-ಸಲಕರಣೆಗಳ ನೆರವು ಪಡೆದು ನಿರ್ಮಿತದಂತಹ ನಿವಾ
ಬಲ್ಬ್ (Bulb) ಎಂಬ ಗಾಜಿನುಲ್ಲಿ ತಲಪಿಸಿ, ಸುತ್ತಲೂ ಬೆಳಕನ
ಸುವವು.

ಈ ಎರಡೂ ವಿದ್ಯುತ್ಪ್ರಗಳು, ಪೂರ್ಣಾಕಾರದ ದುಂಡು
ನಲ್ಲಿ, ಅಥವಾ ದುಂಡು ಸುತ್ತಳತೆಯಿರುವ ದೀರ್ಘವಾದ ಟ
ನಲ್ಲಿ, ಪರಸ್ಪರ ಸಹಕರಿಸುತ್ತವೆ. ಅಂಥ ಅವು ಸ್ವ-ಸ್ವ ಮಾ
ದಿಂದ ಆಗಮನ-ನಿರ್ಗಮನ ಹಾಗೂ ಆದಾನ-ಪ್ರದಾ
ಕ್ರಿಯೆಯು ಖೋ-ಖೋ ಆಟದ ವಿಧಾನದಿಂದ, ನಿರ್ದಿಷ್ಟ
ಸಂಸಜ್ಜಿತಗೊಳಿಸಿದ ತಂತಿಯ ಮಾಧ್ಯಮದಿಂದ, ವಿಶಿಷ್ಟ ವ
ವರಣದಲ್ಲಿ. ತಂತಿಯು ತಂತು-ವಿಚ್ಛೇದನದ ವರೆಗೂ ಬೆಳ
ನೀಡುತ್ತವೆ. ಈ ಎರಡೂ Wire ಗಳ Circuit circle ಪೂ
ಆದಾಗ ಮಾತ್ರ ಐಚ್ಛಿಕವಾಗಿ, Switch on ಆಗುವಂತೆ
ದಾಗ, ಮನೆಗಳಿಗೆ light ಮತ್ತು ಯಂತ್ರಚಾಲನೆಗೆ Po
ಪ್ರಾಪ್ತವಾಗುತ್ತದೆ.

ವಿಧಿಯ ಅರ್ಥವನ್ನು ವಿಧಿ ಶಬ್ದವೂ, ನಿಷೇಧದ ಅರ್ಥ
ನಿಷೇಧ ಶಬ್ದವೂ ಸ್ವತಂತ್ರವಾಗಿ ತಿಳಿಸುತ್ತಿದ್ದು, ಅವೆರಡ
ವಿವೇಕ-ಜ್ಞಾನೋದಯವಾಗುತ್ತದೆ.

ಎಡಗಾಲು ಎಡಗಡೆಯ ತನ್ನ ಮಾರ್ಗದಲ್ಲಿಯೂ ಹಾಗೂ
ಗಾಲು ತನ್ನ ಬಲ ಮಾರ್ಗದಲ್ಲಿಯೂ ವೈಯಕ್ತಿಕವಾಗಿ ಚ
ತ್ತಿದ್ದು, ಅವೆರಡರಿಂದ ಮಾಮೂಲಾಗಿ ಆ ಮಾನವನ ಶರಿ
ಗಮನಕ್ರಿಯೆ ನಡೆಯುವುದು. ಅದರಿಂದ ಗಮ್ಯಸ್ಥಾನ ಪ
ವಾಗುವುದು.

ಹೀಗೆ ನೆಗೆಟಿವ್ ಹಾಗೂ ಪೊಜೆಟಿವ್ ವಿದ್ಯುತ್ತಿನ ಶಕ್ತಿ
ಆ-ಆ ಮಾರ್ಗದಲ್ಲಿ ಪ್ರವಹಿಸುತ್ತಿದ್ದು, ಪರಸ್ಪರ ಸಹ

ಬಲ್ಬನ್ನು ಬೆಳಗಿ, ಬೆಳಗಿಸುವಂತೆ, ಮಾಡಿ, ಬೆಳಕನ್ನಾಗಿಸುತ್ತದೆ; Heater ನ್ನು ಕಾಯಿಸುತ್ತದೆ; Engine, Fan ಮುಂತಾದವುಗಳ ಚಕ್ರಕ್ಕೆ ಚಾಲನೆ ಕೊಡುತ್ತದೆ.

ಕಾರಣ, ತನ್ನ ಗತಿಯಲ್ಲಿ ತಾನು ನಡೆಯುತ್ತಿದ್ದು, ಇತರೇ ಸಮಾನರೊಡನೆ ಸಾಮಾನ್ಯನಂತೆ ಸರಿಯಾಗಿ ನಡೆದು, ತಮ್ಮಿಬ್ಬರನ್ನು ಪ್ರೋತ್ಸಾಹಿಸಿ, ಅಸ್ತಿತ್ವ ಕಾಯುತ್ತಿರುವ ಮೂರನೆಯವರಿಗೆ ಸಹಾಯ ಮಾಡುತ್ತ ಗೌರವದ ಕಾರ್ಯಕರ್ತರಾಗಿರಬೇಕು.

[ಪುಟ ೧೦]

ಹುಣ್ಣಿಮೆ-ಅಮಾವಾಸ್ಯೆ ಮರುದಿನವೆ ಪ್ರತಿಪತ್ತು.
ಪಂಚಾಕ್ಷರೀ ಮಂತ್ರ ಐದರದೆ ಸಂವಿತ್ತು;
ನೂರೆಂಟು ಸಲ, ಸದಾ [redacted], ಜಪಿಸಿದರು ಸಂಪತ್ತು.
ಜಪಿಸು; ಪೂರ್ಣ ಜಪಿಸದೆ ಬಿಡಬೇಡ ಜೇಸತ್ತು.

ಕಾರ್ಯಕರ್ತರಾದವರು ತಮ್ಮ ಕಾರ್ಯಾಚರಣೆಯಲ್ಲಿ ಎಣಿಕೆ ಮಾಡುತ್ತಿರುವಾಗ ಪ್ರತಿಯೊಂದು ದಶಕದ ಮುಂದೆ ಒಂದರ ಅಂಕೆಯಿಂದ ಆರಂಭಮಾಡುತ್ತಾರೆ. ಹಾಗೆ ಪ್ರತಿಯೊಂದು ಸಂಪೂರ್ಣ ಪೂರ್ಣ ಬೆಳದಿಂಗಳ ರಾತ್ರಿಯ ಮರುದಿನ ಮತ್ತು ಪ್ರತಿಯೊಂದು ಸಂಪೂರ್ಣ ಕತ್ತಲೆಯ ರಾತ್ರಿಯ ಮರುದಿನವು ಒಂದಂಕೆಯ ಪ್ರತಿಪತ್ ತಿಥಿಯು ಬರುತ್ತದೆ. ಕೆಲವೊಂದು ಸಲ ಅದರ ಲೋಪದ ಆಭಾಸವೂ ಆಗಬಹುದು. ಅಂದರೆ, ಕಾಳಿನ ಅಳತೆ ಮಾಡುವಾಗ ಲಾಭ–ಎರಡು–ಮೂರು–ನಾಲ್ಕು– ಐದು ಎಂದು ಮುಂತಾಗಿ ಎಣಿಸಿದರೂ ಮೊದಲಿನ ಒಂದನ್ನು ಬಿಟ್ಟಂತಲ್ಲ. ಬಿಡಲೂ ಬಾರದು. ಒಂದರ ನಂತರ ಇನ್ನೊಂದು ಮತ್ತೊಂದು ಮಗದೊಂದು. ಅಂದರೆ ಒಂದನ್ನು ಬಿಟ್ಟರೆ ಎರಡಾಗದು.

ಮೂಲ ಪ್ರಣವ ಸಹಿತವಾದ ಪಂಚಾಕ್ಷರೀ ಮಂತ್ರದಲ್ಲಿರುವ ಅಕ್ಷರಗಳು ಆರು. ಮೂಲ ಪ್ರಣವವೆಂದರೆ ಓಂಕಾರ; ತಾರೆ. ಓಂಕಾರವೆಂದರೆ ಪೂರ್ಣ. ಪೂರ್ಣವೆಂದರೆ ಅ+ಉ+ಮ್ ಕೂಡಿದ್ದು; ಅ–ಉ–ಮ ಅಂದರೆ ತ್ರಿಮೂರ್ತಿಗಳು. ತ್ರಿಮೂರ್ತಿಗಳೆಂದರೆ ಬ್ರಹ್ಮ–ಹರಿ–ಹರ. ಈ ಮೂವರೆಂದರೆ ಸೃಷ್ಟಿ–ಸ್ಥಿತಿ–ಲಯ ಕರ್ತರು. ಈ ಮೂವರ ವಾಚ್ಯ–ವಾಚಕವಾದದ್ದೇ ಓಂಕಾರ. ಈ ಓಂಕಾರದ ಸಂಕ್ಷಿಪ್ತ ವಿಸ್ತಾರವೇ ಅ–ಉ-ಮ್; ಇದರ ವಿಸ್ತೃತ ವಿಸ್ತಾರವೇ ನಕಾರಾದಿ ಯಕಾರಾಂತದ ಪಂಚ ಅಕ್ಷರಗಳು ಈ ಅಕ್ಷರಗಳಿಗೆ ಒಂದೊಂದು ತತ್ತ್ವದ ಸಂಕೇತವಿದೆ. ನಕಾರಕ್ಕೆ ಪೃಥ್ವೀ ತತ್ತ್ವವೆನ್ನುತ್ತೇವೆ. ಮಃ–ಶಿ–ವಾ–ಮತ್ತು ಯಕಾರಗಳಿಗೆ ಅಪ್-ತೇಜ–ವಾಯು–ಆಕಾಶಗಳು ಕ್ರಮವಾಗಿವೆ.

ಕೈಯಲ್ಲಿ, ಮೂಲ ಪ್ರಣವದ ಸ್ಥಾನವು ಅಂಗೈಯ ಮಧ್ಯಭಾಗ. ನಕಾರಕ್ಕೆ ಕಿರಿಬೆರಳು. ಯಕಾರಕ್ಕೆ ಹೆಬ್ಬೆರಳು. ಅನಾಮಿಕೆ ಮಧ್ಯಮಾ-ತರ್ಜನೀ ಬೆರಳು ಕ್ರಮವಾಗಿ ಮಕಾರಕ್ಕೆ, ಶಿಕಾರಕ್ಕೆ, ವಾಕಾರಕ್ಕೆ.;

ಕರನ್ಯಾಸದ ಪ್ರಸಂಗದಲ್ಲಿ ಪ್ರತಿಯೊಂದು ಕೈಯ ಐದೂ ಬೆರಳಿಗೆ ಜೋಡಿಸುವ ನಕಾರಾದಿ ಪ್ರಣವಕ್ಕೆ ಬಿಂದುವು ಜೊತೆಯಾಗಿರಬೇಕು, ಆ ಬಿಂದು ಸಹಿತದ ನಕಾರಾದಿ ಪ್ರಣವಗಳ ಸ್ಥಾನವು ಆ-ಆ ಬೆರಳಿನ ಮಧ್ಯದ ಗಣಿಕೆ. ಅದರ ಎಡ-ಬಲದ ಗಣಿಕೆಯಲ್ಲಿ ಓಂಕಾರವನ್ನು ಆ–ಆ ಪ್ರಣವದ ರಕ್ಷಣೆಗೆಂದು ಜೋಡಿಸಬೇಕು. ಕೈಯ ಹೆಬ್ಬಟ್ಟಿನಲ್ಲಿ ಎರಡೇ ಗಣ್ಣಿದ್ದರೂ ಮೂರೆಂದು ಭಾವಿಸಬೇಕು. ಅದರಂತೆ ಪಾದಪೂಜೆ ಕೈಕೊಳ್ಳುವ ಪಾದದ ಬೆರಳುಗಳಿಗೂ ಮೂರ್ ಮೂರೆಂದು ಭಾವಿಸಿ ಪ್ರಣವ-ಸಂಬಂಧವನ್ನು ಮಾಡಬೇಕು. ದೇಹನ್ಯಾಸ ಹಾಗು ಅಂಗನ್ಯಾಸದಲ್ಲಿ ನಕಾರಾದಿ ಪ್ರಣವಗಳಿಗೆ ನಿರ್ದಿಷ್ಟ ಸ್ಥಾನವನ್ನು ಮೀಸಲಾಗಿಡಲಾಗಿದೆ. ಚಕ್ರ-

ಚಕ್ರಗಳ ಮೇಲೂ, ಇಡಾ-ಪಿಂಗಳಾ-ಸುಷುಮ್ನೆಗಳ ಸಹಾಯದಿಂದ ಂಡಲಿನೀ ಶಕ್ತಿಯೂ ಜಾಗ್ರತವಾಗಲೆಂದು, ಸರ್ವ ವರ್ಣಾ-ಕ್ಷರಗಳನ್ನು ದಲ-ದಲಕ್ಕೂ ಮೂಡಿಸುವಾಗ ನಕಾರಾದಿ ಪ್ರಣವ ಗಳಿಗೆ ಮಧ್ಯದ ಸ್ಥಾನ ಕೊಟ್ಟು, ಮಧ್ಯಸ್ಥರನ್ನಾಗಿ ಕೂಡ್ರಿಸಿ ಗೌರವಿಸುತ್ತೇವೆ.

ನಕಾರಾದಿ ಯಕಾರಾಂತದ ಐದು ಪ್ರಣವಗಳಿರುವ ಮಂತ್ರವು ಪಂಚಾಕ್ಷರೀ ಮಂತ್ರವು. ಮೂಲ ಪ್ರಣವ ಸಹಿತ ಪಂಚಾಕ್ಷರೀ ಮಂತ್ರಕ್ಕೆ ಶಿವಪಂಚಾಕ್ಷರೀ ಮಂತ್ರವೆಂತಲೂ ಸಾಮಾನ್ಯವಾಗಿ ಕರೆಯುವ ವಾಡಿಕೆ ಇದೆ. ಪಂಚಾಕ್ಷರೀ ಮಂತ್ರದಲ್ಲಿರುವ ನಕಾರವೇ ಮುಂತಾದ ಪ್ರತಿಯೊಂದು ಪ್ರಣವಕ್ಕೂ ಒಂದೊಂದು ಪಂಚಾಕ್ಷರೀ ಮಂತ್ರವಿದೆ. ಈ ಪಂಚಾಕ್ಷರೀ ಮಂತ್ರಕ್ಕೆ ೧. ಪ್ರಸಾದ ಪಂಚಾಕ್ಷರೀ ಮಂತ್ರ ೨. ಮಾಯಾ ಪಂಚಾಕ್ಷರೀ ಮಂತ್ರ ೩. ಸೂಕ್ಷ್ಮ ಪಂಚಾಕ್ಷರೀ ಮಂತ್ರ ೪. ಸ್ಥೂಲ ಪಂಚಾಕ್ಷರೀ ಮಂತ್ರ ೫. ಮೂಲ ಪಂಚಾಕ್ಷರೀ ಮಂತ್ರ ಎಂದುದಾಗಿ ಐದಕ್ಕೂ ಐದು ಮಂತ್ರಗಳಿವೆ.

ಪಂಚಾಕ್ಷರೀ ಮಂತ್ರದ ನಕಾರಾದಿ ಪ್ರಣವಗಳಿಗೆ ಸದ್ಯೋಜಾತಾದಿಯಾಗಿ ಪರಶಿವನ ಪಂಚ ಮುಖಗಳಿವೆ; ರೇಣುಕಾದಿ ಪಂಚ ಗಣಾಧೀಶರಿದ್ದಾರೆ; ವೀರಾದಿ ಪಂಚ ಗೋತ್ರ ಪುರುಷರು ಂಬಲಿಗರಾಗಿದ್ದಾರೆ; ಕಾಮಿಕಾಗಮ (ಪಡ್ವಿಡಿ) ಮುಂತಾದ ಪಂಚ ಸೂತ್ರಗಳಿವೆ; ಋಗ್ವೇದಾದಿ ಶಿವಾಗಮಾಂತದ ಪಂಚ ವೇದಗಳಿವೆ; ಅಶ್ವತ್ಥಾದಿ ಪಂಚ ದಂಡಗಳಿವೆ.—ಹೀಗೆ ಐದಂ ಐದರದೇ ಸಂಪತ್ತು ಶಿವಪಂಚಾಕ್ಷರೀ ಮಂತ್ರಕ್ಕೆ ಇದೆ. ಇದರಿಂದ ಧರ್ಮಾದಿ ಭಕ್ತ್ಯಂತದ ಪಂಚ ಪುರುಷಾರ್ಥಗಳು ಸುಲಭವಾಗಿ ಪ್ರಾಪ್ತವಾಗುತ್ತವೆ. ಈ ಪ್ರಾಪ್ತಿಯಿಂದ ಶಿವ-ಜೀವೈಕ್ಯದ

ಲಿಂಗಾಂಗ ಸಾಮರಸ್ಯದ ಅವಸ್ಥೆಗೆ ಸನ್ನದ್ಧರಾಗಬಲ್ಲೆವು; ಶಿವನಾಗಿ ಶಿವವಾಗಬಲ್ಲೆವು.

ಇಂಥ ನಕಾರಾದಿ ಪಂಚ ಬೀಜಾಕ್ಷರ ಪ್ರಣವಗಳ ಉಗಮ ಸ್ಥಾನವು ಮೂಲ ಪ್ರಣವವಾದಂಥ ಓಂಕಾರವೇ ಆಗಿದೆ. ಈ ಐದೂ ಪ್ರಣವಗಳಿಗೆ ಹೇಳಿದುದೆಲ್ಲವೂ ಓಂಕಾರದಲ್ಲಿವೆಯೆಂಬುದು ಸ್ವಯಂ ಸಿದ್ಧ. ಆದರೂ ಆ ಓಂಕಾರವು ನಿರ್ಗುಣ; ನಿರಾಕಾರ; ನಿರಾಭಾರ; ನಿರಂಜನ; ನಿರವಯುವ.

ಓಂಕಾರವು ಹಾಲು. ನಕಾರಾದಿಗಳು ಹೆಪ್ಪು–ಮೊಸರು–ಮಜ್ಜಿಗೆ–ಬೆಣ್ಣೆ–ತುಪ್ಪ ಇದ್ದಂತೆ. ಹಾಲಿಗೆ ಕೃತ್ರಿಮತೆಯು ಅವಶ್ಯಕತೆ ಇಲ್ಲ. ಆದರಿಂದ ಅದು ನಿರಂಜನ; ನಿರಾಭಾರ. ಹೆಪ್ಪು ಮುಂತಾದುದಕ್ಕೆ ಕಾರ್ಯ ಕ್ಷಮತೆ ಇದೆ; ಗಟ್ಟಿ–ಹುಳಿ–ಸ್ನೇಹ ಪರವಶತೆ ಇದೆ; ಆದುದರಿಂದ ಇವು ಸಾಭಾರ. ಹಾಲು ಪ್ರಕೃತಿ; ಹೆಪ್ಪು ಮುಂತಾದುದು ವಿಕೃತಿ.

ಹಾಲಿನಲ್ಲಿ ತರಲತೆ-ಧಾವಲ್ಯ-ಮಾಧುರ್ಯ–ಮೂರು ಸಹಜವಾಗಿವೆ. ಇವರಲ್ಲಿ ಒಂದರದ್ದಾದರೂ ನ್ಯೂನತೆ ಬಂದರೆ ಅದು ಹಾಲಲ್ಲ. ನಿರಂಜನ ಪ್ರಣವ ಸ್ವರೂಪದ ಓಂಕಾರವು ಅ-ಉ-ಮ್ ಮೂರರಿಂದ ಕೂಡಿಕೊಂಡು ವೇದ್ಯವಾಗುತ್ತಿರುವುದು. ಇವರಲ್ಲಿ ಒಂದು ಕಡಿಮೆಯಾದರೂ ಅದು ಮೂಲ ಪ್ರಣವವಲ್ಲ. ಅಂದರೆ ಹಾಲು, ಹಾಲಾಗಲು ಮೂರು ಗುಣ ಬೇಕು. ಮೂಲ ಪ್ರಣವವು, ಮೂಲ ಪ್ರಣವವಾಗಲು ಮೂರು ವರ್ಣಗಳು ಬೇಕು; ಅವೂ ಸಕ್ರಮವಾಗಿರಬೇಕು. ಒಂದಾಗಿರಬೇಕು.

ನಿರಾಭಾರ ಓಂಕಾರ ಪ್ರಣವಕ್ಕೆ ವ್ಯಂಜನ ಗೌಣ; ಸ್ವರ ಮುಖ್ಯ. ಸಾಭಾರ ಪ್ರಣವಗಳಿಗೆ ವ್ಯಂಜನ ಮುಖ್ಯ; ಸ್ವರ ಗೌಣ. ನಿರಾಭಾರಿಗೆ ಎರಡು ಸ್ವರ + ಒಂದು ವ್ಯಂಜನ(ಅ + ಉ + ಮ್).ಆ ಒಂದು

್ಯಂಜನವೂ ಸಹ ಸ್ವರ–ರಹಿತವಾಗಿರಬೇಕಾಗಿದೆ. ಸಾಭಾರಿಗಳಿಗೆ ೊದಲಿಗೇ ವ್ಯಂಜನ; ತದನಂತರ ಸ್ವರದ ಜೋಡಣೆ. ಇವರಿಗೆ ರಾನುಗ್ರಹವು ವಿಲಂಬವಾಗಿ ಆಗುತ್ತದೆ. ನಿರಾಭಾರಿಗೆ ವಿಸರ್ಗ ಲ್ಲ; ಸಾಭಾರಿಗೆ ವಿಸರ್ಗ ಒಂದಿದೆ. ನಿರಾಭಾರಿಗೆ ಯಾವ ಪ್ರತ್ಯ ುವೂ ವ್ಯತ್ಯಾಸಗೊಳ್ಳುವದಿಲ್ಲ. ಸಾಭಾರಿಗಳಿಗೆ ಎರಡು ಪ್ರತ್ಯಯು ಿವೆ. ಸಾಭಾರಿಯು ವಿಸರ್ಗದ ಕಾರಣದಿಂದಲೇ ಚತುರ್ಥೀ ವಿಭಕ್ತಿ. ವಿಭಕ್ತಿಯಿಂದಲೇ ಶಿವನಿಗೂ ವೀರಶೈವನಿಗೂ ಪೂಜ್ಯ–ಪೂಜಕ ಾವ. ಆ ಭಾವದಿಂದಲೇ ಏಕೋಭಾವ. ಆ ಏಕೋಭಾವ ಂದಲೇ ನಮಸ್ಕಾರ ಮಾಡುವವನ ಅಹಂಕಾರದ ಲೀನತೆ. ಆ ೀನತೆಯಿಂದಲೇ ಲಿಂಗಾಂಗ ಸಾಮರಸ್ಯ. ಆ ಸಾಮರಸ್ಯವೇ ಂಕಾರ ಆಗುವಿಕೆ. ನಕಾರಾದಿಗಳ ಮೂಲ ಗಮ್ಯಸ್ಥಾನವು ಇದೇ ಂಕಾರವು. ಈ ಓಂಕಾರಕ್ಕೆ ಯಾವ ವಿಭಕ್ತಿ–ವಿಭಾಗವೂ ಇಲ್ಲ; ಯಾವ ಪ್ರತ್ಯಯದ ವ್ಯತ್ಯಯವೂ ಇಲ್ಲ. ಅದು ಯಾವಾಗಲೂ ಂದೇ ರೀತಿಯದು.

ಈ ಎಲ್ಲ ಕಾರಣದಿಂದಾಗಿ, ಈ ನಿರಂಜನ ಓಂಕಾರವು ಜಪ ಾಲೆಯ ಶಿರೋಮಣಿಯಾಗಿರುವುದರಿಂದ, ಲೌಕಿಕದಲ್ಲಿ ಇದರ ಣಿಕೆ ಕಡಿಮೆ. ಕಡಿಮೆ ಎಣಿಕೆ ಇದ್ದರೂ ಇದರ ಬಳಕೆ ಬಹಳ. ಪವು ಪ್ರಾರಂಭ ಆಗುವುದೂ ಕೊನೆಗೆ ಮುಗಿಯುವುದೂ ಈ ಂಕಾರ – ಶಿರೋಮಣಿಯಿಂದಲೇ, ಒಳಗಿನ ೧೦೮ ಮಣಿಗಳನ್ನು ಂದೊಂದೇ ಸಲ ಬಳಸಿದರೆ, ಈ ಶಿರೋಮಣಿಯನ್ನು ಆದ್ಯಂತ ಲ್ಲಿ ಎರಡು ಸಲ ಬಳಸುತ್ತೇವೆ. ಹಸ್ತ ಜಪದಲ್ಲಿಯೂ ಸಹ ಂಧ್ಯದ ಎರಡು ಬೆರಳ್–ಗಣ್ಣುಗಳು ಈ ನಿರಂಜನ ಪ್ರಣವಕ್ಕೆ ೀಸಲು.

ಇಷ್ಟೊಂದು ಮಾರ್ಮಿಕ ಅರ್ಥವುಳ್ಳ ನಿರಂಜನ ಪ್ರಣವವು

ತನ್ನ ಗೌರವದಿಂದ ಚ್ಯುತವಾಗಬಾರದು; ವರ್ಣತ್ರಯ ವಿಭಾಗವನ್ನು ಹೊಂದಬಾರದು; ಗುಣಸಂಧಿಯನ್ನು ಪಡೆಬಾರದು; ಕೇವಲ ವ್ಯಂಜನಕ್ಕೇ ಪ್ರಾಧಾನ್ಯತೆ ಕೊಡಬಾರದು. ತನ್ನ ವ್ಯಂಜನವನ್ನು "ಮೋಽನುಸ್ವಾರೋ ಹಲಿ" ಎಂಬ ಪಾಣಿನೀಯ ಸೂತ್ರದಿಂದ ವರದರಾಜನ ವಾರ್ತಿಕದಂತೆ "ಮಾನ್ತಸ್ಯ ಪದಸ್ಯ, ಅನುಸ್ವಾರೋ ಹಲಿ" ಆಗಬೇಕು. ಅಂದರೆ, ಓಂಕಾರದಲ್ಲಿ ಮ್ ಎಂಬ ಅರ್ಧ ಮಾತ್ರೆಯು ವ್ಯಂಜನದ ಮುಂದೆ ಸಾಧಾರಿಯು ಹೊಂದಿದ ಮತ್ತೊಂದು ವ್ಯಂಜನ ಬಂದರೆ, ಆ ನಿರಂಜನ ಓಂ ದ ಮ್ ಕಾರವು ಅನುಸ್ವಾರವಾಗಿಯೇ ಇರಬೇಕು. ಚಂಚಲವಾಗಬಾರದು. ಆ ಮುಂದೆ ಬಂದ ಮತ್ತೊಂದು ವ್ಯಂಜನವನ್ನು ತಿರಸ್ಕರಿಸಬಾರದು; ಅದನ್ನು ಸರಿಯಾಗಿ ಸತ್ಕರಿಸುತ್ತ ತನ್ನ ಪಾವಿತ್ರ್ಯತೆಯನ್ನು ಬೆಳೆಸಿಕೊಳ್ಳುತ್ತಿರಬೇಕು. ಆತ್ಮೀಯತೆಯಿಂದ ವ್ಯವಹರಿಸುತ್ತಿರಬೇಕು. ಆತ್ಮೀಯತೆ ಇದ್ದಲ್ಲಿ ಭೇದ - ಭಾವಕ್ಕೆ, ವಿರಸಕ್ಕೆ ಇಂಬಿಲ್ಲ. ನೆಮ್ಮದಿಯಿಂದ ಬಾಳಿ ಬೆಳಗಬೇಕಾದರೆ ಆ ನಿರಂಜನ ಓಂಕಾರಕ್ಕೆ ಸಹಜತೆ – ಸಮಾನ ಸಹೃದಯ ಸಹಾಸಭೂತಿ ಬೇಕೇ ಬೇಕು. "ಸಹನಾವವತು; ಸಹ ನೌ ಭುನಕ್ತು" (ಉಪನಿಷತ್) ಎನ್ನುತ್ತಿರಬೇಕು. "ಓಂಕಾರ – ಪ್ರಣವೌ ಸಮೌ" (ಅಮರ). ನಿರಾಧಾರ ಓಂಕಾರ ಮತ್ತು ಸಾಧಾರ ಪ್ರಣವಗಳು ತಮ್ಮ ಪರಸ್ಪರರಲ್ಲಿಯ ಸಮಾನವಾದ "ಆಧಾರ"ದ ಆಭಾರಮನ್ನಣೆ ಮಾಡುತ್ತಿರಬೇಕು. ನಿರ್–ಸ–ದಿಂದ ನೀರಸವಾಗದಂತಿರಬೇಕು. "ಆರೇನಂದರೂ ಓರಂತಿಪ್ಪುದೇ ಸಮತೆ" ಯೆಂದು ಸ್ಥಿತಪ್ರಜ್ಞ ಸ್ಥಿತಿಯಲ್ಲಿರಬೇಕು.

ಆ ಓಂಕಾರವು ತನ್ನ ಸಕ್ರಮ ಪರಂಪರೆಯನ್ನು ಕಳಕೊಳ್ಳಬಾರದು; ನಿಜ. "ಶಿವಾಯೋನ್ನಮಃ" ಮುಂತಾದ ಕೆಲವೆಡೆ

ದನ್ನು ಕಳಕೊಂಡಂತೆ ಭಾಸವಾಗುವುದು. ಹಾಗಾಗುವುದು
ಪವಾದ. ಅದು ಪ್ರಣವಸಹಿತ ಪಂಚಾಕ್ಷರೀ ಮಂತ್ರದ ಶುದ್ಧ
ವುದಲ್ಲಿ ಶುದ್ಧವಾಗಿಯೇ ಇರಬೇಕು. ಅಶುದ್ಧವಾದುದನ್ನೂ
ಹ ಸದ್ಭಾವನೆಯಿಂದ ಯಥಾಶಕ್ತಿ ಶುದ್ಧೀಕರಿಸಿಕೊಳ್ಳಬೇಕು.
ದ್ಧೀಕರಿಸಲ್ಪಟ್ಟ ಸಾಭಾರಿ – ಕಬ್ಬಿಣವು ಓಂಕಾರ – ಪರುಷದ
ನ್ನಿಧ್ಯದಿಂದ ಅದೂ ಅದರಂತಾಗುತ್ತದೆ. ಸ್ವಯಂ ಶುದ್ಧ
ಗಿದ್ದು ಶುದ್ಧೀಕರಣ ಮಾಡಲು ಪೂಜೆ ಮಾಡುತ್ತಿರಬೇಕು.
ಜೆಗೆ ಹೊರತಾದ ಸಮಯಕ್ಕಿಂತಲೂ ಪೂಜಾ ಸಮಯದಲ್ಲಿ
ದ್ಧತೆಗೆ ಪ್ರಾಮುಖ್ಯತೆ ಹೆಚ್ಚು.

ಒಟ್ಟಿನ ಮೇಲೆ ಕೇವಲ ಓಂಕಾರವೊಂದರಿಂದ ಪಂಚಾಕ್ಷರೀ
ಂತ್ರ ಆಗಲಾರದು ; ಕೇವಲ ನಕಾರಾದಿಯ ಐದೇ ಅಕ್ಷರಗಳಿಂದ
ಣವ ಸಹಿತ ಶಿವ – ಪಂಚಾಕ್ಷರೀ ಮಂತ್ರವೂ ಆಗಲಾರದು.
ರಮ ಪೂಜ್ಯವಾದ ಓಂಕಾರವು ಲೌಕಿಕ ವಿಷಯದಲ್ಲಿ ಗೌಣ
ದಂತಿದ್ದು ಇನ್ನುಳಿದ ಐದೂ ಪ್ರಣವಗಳನ್ನು ಪೋಷಿಸುತ್ತಿರ
ಕು. ಅವಕ್ಕೆ ಅದು ಸ್ಥಾನವನ್ನು ಕೊಟ್ಟು, ಐದೂ ಬೆರಳುಗಳನ್ನು
ಗ್ಯೆಯು ನಿಯಂತ್ರಿಸುವಂತೆ, ನಿಯಂತ್ರಣವನ್ನು ಹೊಂದಿರ
ಕು. ಅದರಿಂದ ಬೆರಳುಗಳೂ, ಆ ಪೋಷಿತ ಬೆರಳುಗಳಿಂದ
ಅಂಗೈಯೂ ಪರಸ್ಪರ ಪೋಷಣೆ ಹೊಂದುತ್ತವೆ. ಕ್ರಿಯಾ
ಲತೆಯನ್ನು ಹೊಂದಿ ಅವೆರಡೂ ಸಮಸ್ತ ದೇಹವನ್ನು ಮಂತ್ರ-
ಯವನ್ನಾಗಿಸಬಹುದು. ಸಾಭಾರಿ – ನಿರಾಭಾರಿಗಳಿಬ್ಬರೂ
ಮಾಜವನ್ನು ಸುಖಮಯವನ್ನಾಗಿಸಬಹುದು.

ಈ ಐದಕ್ಷರಗಳಿಂದ ಕೂಡಿದ ಪಂಚಾಕ್ಷರೀ ಮಂತ್ರವನ್ನು
ದಿದರೆ, ಅಂದರೆ ಹೊಂದಿ ದೀಕ್ಷಿತನಾದರೆ, ಅದೇ ಅವನಿಗೆ
ಧ್ಯಾತ್ಮ ಜ್ಞಾನದ ಮೊದಲ ನೆಲೆ. ಅಧ್ಯಾತ್ಮದ ಜ್ಞಾನೋದಯ

ವಾಗಬೇಕಾದರೆ, ದೀಕ್ಷಿತನಾಗಿ, ಇಷ್ಟಲಿಂಗ ಧರಿಸಿ, ಲಿಂಗವಂತ ವೀರಶೈವನಾಗಬೇಕು. ಏಕೆಂದರೆ, "ಘಟದೊಳಗಿದ್ದ ಪದಾರ್ಥವು ಆ ಘಟದ ಹೊರಗೆ ಉರಿಯು ಹೊತ್ತಿಸಿದಲ್ಲದೆ ಪರಿಪಕ್ವವಾಗದು. ಹಾಗೆ ಅಂತರಂಗದಲ್ಲಿರ್ದ ಚಿದ್‌ವಸ್ತುವು ಸಂಸ್ಕಾರ ಬಲದಿಂದ [ಇಷ್ಟಲಿಂಗವಾಗಿ] ಹೊರ – ಹೊರಟಲ್ಲದೆ ಅಂತರಂಗದಲ್ಲಿರ್ದ ಭವರೋಗ ಮಾಣದು." (ಚನ್ನಬಸವಣ್ಣ). ಇದು ಕಾರಣ, ಭಾವಲಿಂಗದ ಅನುಸಂಧಾನಕ್ಕೆ, ಪ್ರಾಣಲಿಂಗದ ಅನುಷ್ಠಾನಕ್ಕೆ ಆಶ್ರಯವಾದ ಇಷ್ಟಲಿಂಗವನ್ನು ಪಡೆಯಲೇಬೇಕು. ಮತ್ತು ಪ್ರಣವ ಸಹಿತ ಪಂಚಾಕ್ಷರೀ ಮಂತ್ರವನ್ನು ಜಪಿಸುತ್ತಿರಬೇಕು. ಅದೇ ಪ್ರಣವದ ಐದಕ್ಷರದ ಆದೇ ಮಂತ್ರವನ್ನು ಅದೇ ಧ್ವನಿಯಲ್ಲಿ, ಅದೇ ರೀತಿ, ಮತ್ತೆ-ಮತ್ತೆ, ಯಾವಾಗಲೂ ಜಪಿಸಿದರೆ ಸಂಪದಭಿವೃದ್ಧಿಗೆ ಪ್ರಾಥಮಿಕತೆ ದೊರೆಯುತ್ತದೆ.

ಕಾರಣ, ಮೂಲ ಪ್ರಣವ ಸಹಿತ ಪಂಚಾಕ್ಷರೀ ಮಂತ್ರವನ್ನು ಜಪಿಸುವ ವಿಧಾನವಲ್ಲಿ, ಜಪದ ಮಂತ್ರದಲ್ಲಿ, ಮಂತ್ರದ ಅರ್ಥದಲ್ಲಿ ವೈವಿಧ್ಯತೆ ಇಲ್ಲವೆಂದು ಬೇಸತ್ತು ಜಪಿಸುವುದನ್ನು ಬಿಡಬಾರದು.

[ಪುಟ ೧೧]

> ಪೂಜೆಯನು ಕೈಕೊಳ್ಳ ಇಷ್ಟಲಿಂಗಕು ಮತ್ತು
> ಲಿಂಗ, ಸಾಲಿಗ್ರಾಮಕೂ ಪೂರ್ಣತೆಯು ಸುತ್ತು.
> ಮೂರ್ತಿ–ಪ್ರಭಾವಳಿಯು ಮಿನುಗುವುದು ಮುಖ ಸುತ್ತು
> ಮಿನುಗು; ಪೂರ್ಣ ಮಿನುಗದೆ ಬಿಡಬೇಡ ಬೇಸತ್ತು.

ಜಪಿಸುವುದನ್ನು ಬಿಡಬಾರದೆಂದು ಯಥಾಶಕ್ತಿ ದಿನ–ನಿತ್ಯವೂ ಶಿವಯೋಗಾನುಷ್ಠಾನ ಮಾಡುತ್ತಿರುತ್ತಾನೆ — ಶ್ರೀಗುರುವು. ಅವನಿಂದ ಅವನ ಶಿಷ್ಯನ ಚಿತ್‌ಕಲಾ ರೂಪದ ಇಷ್ಟಲಿಂಗವು ಸಂಸ್ಕರಿಸಲ್ಪಡುತ್ತದೆ. ಅಂಥ ಇಷ್ಟಲಿಂಗವು ಆ ಶಿಷ್ಯನ ಪಶ್ಚಿಮ–

ಖಾ ಚಕ್ರದಲ್ಲಿಂದ ಸಾಕಾರದಂತಾಗಿ ಅವನ ಕರಸ್ಥಲಕ್ಕೆ ಬರುತ್ತದೆ. ದು ಹೀಗೆ ಬರಲು ಗುರುವಿನ ಕೃಪೆ ಬೇಕು. ಗುರು–ಕೃಪೆ ಡೆದುಕೊಂಡ ಶಿಷ್ಯನ ಇಷ್ಟಲಿಂಗವು ದುಂಡಗೇ ಪೂರ್ಣತ್ವದ ೂರ್ಣ ಸಂಕೇತ ರೂಪವಾಗಿದೆ.

ವೀರಶೈವ ಸಂಪ್ರದಾಯಕ್ಕನುಸರಿಸಿ ಗದ್ದಿಗೆ ದೇವಾಲಯು ಟ್ಟುತ್ತಾರೆ. ಮಾಡಬೇಕೆಂದು ಮನಸ್ಸು "ಉಳ್ಳವರು ಶಿವಾಲಯವ ಾಡುವರು". ಶಿವಾಲಯವೆಂದರೆ, ವೀರಶೈವದ ಪರಿಭಾಷೆಯಲ್ಲಿ, ಷ್ಟಲಿಂಗವನ್ನಿಟ್ಟುಕೊಳ್ಳುವ ಕರಡಿಗೆಯು. ಇನ್ನೊಂದು ರೀತಿ ಂದ ಹೇಳುವುದಾದರೆ, ವೀರಶೈವನ "ಕಾಲೇ ಕಂಬ; ದೇಹವೇ ೇಗುಲ; ಶಿರವೇ ಹೊನ್ನ ಕಳಶ". ಇಷ್ಟ–ಪ್ರಾಣ–ಭಾವಲಿಂಗ ಪುಟಿಯೇ ದೇಗುಲದಲ್ಲಿಯ ದೇವರು. ಈ ದೇಗುಲದ ಕಳಸವು ೂರ್ಣತ್ವದ ಪ್ರತೀಕವಾಗಿ ದುಂಡಗಿರುತ್ತದೆ.

ದಿವ್ಯ ದೇವತ್ವದ ಆಹ್ವಾನ ವಿಸರ್ಜನೆಗೆ ತಕ್ಕುದಾಗಿ ದೇವಾ ಯದಲ್ಲಿ ಸ್ಥಾಪಿತವಾದ ಸ್ಥಾವರ ಲಿಂಗವೂ ಸಹ ಪೂರ್ಣವಾಗಿ ರ್ತುಲವನ್ನು ಪಡೆದಿರುತ್ತದೆ. ಅದರಂತೆಯೆ, ಪೀಠದ ಮೇಲಿ ಸಿ ಪೂಜಿಸುವ ಸಾಲಿಗ್ರಾಮಕ್ಕೂ ಪೂರ್ಣತ್ವದ ರೇಖೆ, ಆಕಾರ ಿರುತ್ತವೆ.

ಲಕ್ಷ್ಮಿ – ಸರಸ್ವತಿ – ದುರ್ಗೆಯರ, ವಿಷ್ಣು – ಬುದ್ಧ – ಬಸವ ುಂತಾದವರ ಚಿತ್ರ–ವಿಗ್ರಹ–ಉತ್ಸವಮೂರ್ತಿಯ ಮುಖದ ುತ್ತಲೂ ಗೋಚರಿಸುತ್ತಿರುವ ಪ್ರಭಾ–ಮಂಡಲವೂ ವರ್ತುಳಾ ರದಲ್ಲಿ ಪೂರ್ಣವಾಗಿ ಮಿನುಗುತ್ತಿರುತ್ತದೆ.

ಪ್ರದಕ್ಷಿಣೆ ಮಾಡಿಕೊಳ್ಳುತ್ತಿರುವ ಚೈತ್ಯಾಲಯದ ಸ್ತಂಭಾ ಗಳೂ ಬಿಲ್ವ–ಬನ್ನಿ, ತುಳಸಿ, ಆರಳೀ (ಅಶ್ವತ್ಥ) ಮುಂತಾದ ಲ್ಲ ಗಿಡದ ಬೊಡ್ಡೆಗಳೂ, ಬಳ್ಳಿಗಳು ಕುಡಿ, ಮೊಗ್ಗೆ, ದೇಂಟು

ಮುಂತಾದ ನೈಸರ್ಗಿಕ ವಸ್ತುಗಳ, ಪ್ರಾಣಿಗಳ ಅಂಗಾಂಗಗಳು ಉದ್ದಾಗಿ ಬೆಳೆದರೂ ಅವೆಲ್ಲವುಗಳ ಸುತ್ತಳತೆ ದುಂಡಗಿರುತ್ತದೆ.

ಅಜ್ಜಿ–ಅಜ್ಜರ ಊರುಗೋಲು. ಹೊಗೆ ಸೊಪ್ಪಿನ ಕೊಳವೆ, ಪೂಜ್ಯರ ಬೆತ್ತ ಹಾಗು ಹಾವುಗೆಯ ಅಂಗುಷ್ಠ ಮತ್ತು ಭಿಕ್ಷಾಪಾತ್ರೆ–ಮಜ್ಜನ ಬಟ್ಟಿ–ತಾಟು–ಥಾಲಿ–ಕಮಂಡಲು ಮುಂತಾದ ಕೃತಿಮಾಕೃತಿಗಳ ಸುತ್ತಳತೆಯೂ ಪೂರ್ಣ ದುಂಡಗೇ ಇದೆ.

ಹೀಗೆ ಪೂಜ್ಯ–ಪೂಜಕ ಹಾಗೂ ಪೂಜೆಯ ಸಾಮಗ್ರಿಗಳೆಲ್ಲವೂ ಪೂರ್ಣತ್ವ ಪ್ರಾಪ್ತಿಗೆ ಪ್ರಚೋದಕಗಳಾಗಿರುತ್ತವೆ. ಪೂರ್ಣಾಕಾರದ ವೃತ್ತದ ಸುತ್ತಳತೆಯ ಸಮೆ–ಹಣತೆ-ಆರತಿಯ ಪೂರ್ಣದಂತಹ ದೀಪದ ಪ್ರತಿಬಿಂಬವನ್ನು ಗ್ರಹಿಸುತ್ತಿರುವ ಹಿತ್ತಾಳೆ–ಬೆಳ್ಳಿ ಮುಂತಾದ ಧಾತುಗಳ ಪಾತ್ರೆಗಳೂ ಸಹ, ತಮ್ಮಲ್ಲಿಯೂ ಪೂರ್ಣತ್ವದ ಬೆಳಕಿದೆಯೆಂದು ತಿಳಿಸಲು ಕನ್ನಡಿಯಂತೆ ಬಿಂಬ–ಪ್ರತಿಬಿಂಬವಾಗಿಸಿ ಮಿಂಚುತ್ತಿರುತ್ತವೆ.

ಒಟ್ಟಿನಲ್ಲಿ ದೀಪ-ಸೂರ್ಯರಂತಹ ಸ್ವತಂತ್ರ ಬೆಳಕಿನ ಹಾಗೂ ಕನ್ನಡಿ–ಚಂದ್ರರಂತಹ ಪರತಂತ್ರದ ಬೆಳಕಿನ ವಸ್ತುಗಳ ಬಿಂಬ–ಪ್ರತಿಬಿಂಬಗಳೆಲ್ಲವೂ ಮಿಂಚುವುದು ಪೂರ್ಣವಾಗಿಯೇ,

[ಪುಟ ೧೨]

" ಪೂರ್ಣತೆಯು ಪರಶಿವನೇ ! ಪರಿಹರಿಸು ಕುತ್ತು "
ಎಂದು ಪ್ರದಕ್ಷಿಣೆಯ ಕ್ರಿಯೆಯಿಂದ ತನುವಿತ್ತು
ಭಕ್ತ-ಜನ ತಿರುಗುವರು ದೇವಾಲಯದ ಸುತ್ತು.
ತಿರುಗು ; ಪೂರ್ಣ ತಿರುಗದೆ ಬಿಡಬೇಡ ಬೇಸತ್ತು.

ಪೂರ್ಣವಾಗಿ ಮಿಂಚುತ್ತಿದ್ದರೂ ಸರ್ವ ಪ್ರ–ಪ್ರಥಮದ ತಮ್ಮ ಅವಸ್ಥೆಯಾದ ಆ ಮಹಾ ಕತ್ತಲೆಯು ಬಣ್ಣದವಾಗಿಯೇ ಇರುವ ಈ ಇಷ್ಟಲಿಂಗ ಸಾಲಿಗ್ರಾಮಗಳ ಪೂಜಕನು ತನ್ನ ಬಲ

ಯು ಹೆಬ್ಬೆರಳನ್ನು ಊರ್ಧ್ವಮುಖವಾಗಿಯೂ ಕಿರಿಬೆರಳನ್ನು ಧೋಭಾಗದಲ್ಲಿರುವಂತೆ ಮುಂದಕ್ಕೆ ಚಾಚಿ, ನಡುವಿನ ಮೂರು ರಳನ್ನು ತನ್ನ ಹೃದಯದ ಕಡೆಗೆ ಮುಷ್ಟಿಯಾಗುವಂತೆ ಮಡಿಚಿ ನ್ನ ಕರ-ಸ್ಥಲದ ಇಷ್ಟಲಿಂಗ ಇಲ್ಲವೆ ಪೀಠಸ್ಥ ಸಾಲಿಗ್ರಾಮ ನ್ನು ಅಪಸವ್ಯ, ಪ್ರಸವ್ಯ ಅಥವಾ ಸವ್ಯಾಪಸವ್ಯದ ಕ್ರಮದಿಂದ ಪ್ರದಕ್ಷಿಣೆಯನ್ನು ಮಾಡುತ್ತಾನೆ. ಆ ಪ್ರದಕ್ಷಿಣೆಯ ಕ್ರಮವು ರ್ತುಲಾಕಾರದ ಪೂರ್ಣ ಮಾರ್ಗದ್ದಾಗಿರಬೇಕು.

ಪೂರ್ಣವಾಗಿರಬೇಕೆಂದು ಸೂಚಿಸಲೆಂದೆ ದೇವಾಲಯದ ಗಂಟೆ, ಜಾಗಟೆ, ನಗಾರಿ, ನೌಬತ್ತು, ಕಾಳಿಮುಖ ಶಂಖ, ತಬಲಾ-ದ್ದಳೆ, ತಾಳ-ತಮ್ಮಟೆ, ಗೋಪುರದ ಗುಂಬಜ, ಗುಮ್ಮಟ, ಮೇಲಿನ ಕಳಶ ಮುಂತಾದ ವಸ್ತುಗಳೆಲ್ಲವೂ ದುಂಡಾಗುವಂತಿರುವ ಪೂರ್ಣಾಕಾರವನ್ನು ಪಡೆದಿರುತ್ತವೆ. ಬೆಳಗುವ ಕಳಶ, ಆ ಕಳಶದ ಂಡಿ ಆ ಗಿಂಡಿಯ ಮೇಲಿನ ಕಳಶದ ಮುತ್ತಿನ ತೆನೆ, ಆ ತೆನೆಯ ಮುತ್ತು ಆ ಮುತ್ತಿನ ದಾರದ ಸುತ್ತಿನ ಸುತ್ತುವಿಕೆ ಎಲ್ಲವೂ ಪೂರ್ಣದ ವರ್ತುಲಾಕಾರ. ಸರ್ವವಸ್ತು ಸಹಜವಾಗಿ ಸರ್ವದಾ ರ್ತುಲಾಕಾರದ್ದೆ; ಪೂರ್ಣಾಕಾರದ್ದೆ.

ಪೂರ್ಣಾಕಾರ ಪ್ರದನಾಗಿ ಸರ್ವಜ್ಞತ್ವ ಸರ್ವಕರ್ತೃತ್ವ ಸರ್ವ ಭೋಕ್ತೃತ್ವಾದಿ ಸರ್ವ ಸಾಮರ್ಥ್ಯವುಳ್ಳ ಪರಮೇಶ್ವರನ ಅಂಶ ವಾಗಿದ್ದರೂ ಅವರು ಅವರವರ ಶರೀರ ಧರ್ಮಕ್ಕನುಸರಿಸಿ, ಆಗಾಗ ಬಂದೊದಗುವ ಕುಂದು-ಕೊರತೆ, ಆಪತ್ತು-ವಿಪತ್ತೆಲ್ಲವನ್ನು ಪರಿಹರಿಸಿ, ಒಳ್ಳಿಯದನ್ನಾಗಿಸೆಂದು ಆ ದೇವನನ್ನು ಕುರಿತು, ಶಿವನ ದೇವಾಲಯದ ಸುತ್ತಲೂ ಅದರ ಬಲಭಾಗದಿಂದ ಭಕ್ತಿ-ಶ್ರದ್ಧೆಯಿಂದ ನಡೆದು, ಪ್ರದಕ್ಷಿಣೆ ಮಾಡುವುದನ್ನು ಪೂರ್ಣ-ಗೊಳಿಸಬೇಕು.

[ಪುಟ ೧೩]

ರಕ್ಷಿಸುವ ಚಕ್ರಪಾಣಿಯ ಚಕ್ರಕೂ ಮತ್ತು
ಯಂತ್ರ-ವಾಹನ-ಬಂಡಿ-ಚಕ್ರಗಳಿಗೂ ಸುತ್ತು-
ವರೆಯುವಿಕೆ ಅದರದರ ಚಲಿಸುವಿಕೆಯ ಮಹತ್ತು.
ಚಲಿಸು; ಪೂರ್ಣ ಚಲಿಸದೆ ಬಿಡಬೇಡ ಬೇಸತ್ತು.

ಪೂರ್ಣಗೊಳಿಸುವ ನಿಮಿತ್ತವಾಗಿ ಕಾರ್ಯ-ಬ್ರಹ್ಮನಿಂದ ಸೃಷ್ಟಿಸಲ್ಪಟ್ಟು, ರುದ್ರನ ಸಂಹಾರ ಲೀಲೆಗೊಳಪಡುವವಕ್ಕಿಂತ ಮುಂಚಿನ ಅವಸ್ಥೆಯಲ್ಲಿರುವ ಈ ಚರಾಚರ ವಿಶ್ವವನ್ನು ರಕ್ಷಿಸುವ ಹೊಣೆ ಹೊತ್ತಿರುವ ಶ್ರೀ ವಿಷ್ಣುವಿನ, ದುಷ್ಟ ನಿಗ್ರಹ ಶಿಷ್ಟ ಪರಿಪಾಲನೆಯ ಸಾಮರ್ಥ್ಯವುಳ್ಳ ಶ್ರೀ ಚಕ್ರವು ದುಂಡಗೇ ಪೂರ್ಣಾಕಾರವಾಗಿದೆ.

ಶರೀರಾಂತರ್ಗತವಾಗಿದ್ದು ಯೋಗಗಮ್ಯಗಳಾದ ಮೂಲಾಧಾರಾದಿ ನವಚಕ್ರಗಳೂ ಪೂರ್ಣಾಕಾರದಲ್ಲಿವೆ.

ಆಶ್ರಿತ ವಾಹನದೊಂದಿಗೆ ಸಮ ಸಮವಾಗಿ ಚಲಿಸುವ ಖೇಚರ ಭೂಚರ, ಜಲಚರದ ವಾಹನಗಳೆಲ್ಲದರ ಚಕ್ರಗಳೂ ಅವುಗಳ ಗಡ್ಡೆಗಳೂ ದುಂಡಗಿರುತ್ತವೆ. ಇಲ್ಲಿ ಚಕ್ರದ ಖೇಚರವೆಂದರೆ ಏರೋಪ್ಲೇನ್, ರಾಕೆಟ್, ಅಪೊಲೊ, ಮೆರಿನರ್, ಮುಂತಾದ್ದು, ಭೂಚರವೆಂದರೆ ರೈಲು ಮೋಟರು ಕಾರು ಮುಂತಾದ ಚಕ್ಕಡಿ ಗಾಡಿ ಬಂಡಿ. ಜಲಚರವೆಂದರೆ ಸ್ಟೀಮರ್ ಬೋಟು ಹಾಗೂ "ವಿಕ್ರಾಂತ"ದಂತಹ ದೊಡ್ಡ ಯಂತ್ರದ ಹಡಗುಗಳು. "ಎವರ್ ಡೇನ್"ವಂತಹ ಖೇ-ಭೂ-ಜಲ ಚರಗಳ ಚಕ್ರಗಳೂ ಪೂರ್ಣಾಕಾರದವುಗಳೇ ಆಗಿವೆ.

ಬಹಿರಂಗವಾಗಿ ಇದ್ದ ಸ್ಥಿತಿಯಲ್ಲಿದ್ದು ಆಂತರಿಕವಾಗಿ ಚಲಿಸುತ್ತಿರುವ ವಾಚು, ಮೀಟರು ಮಿಲ್ ಮಿಶನ್ ಮುಂತಾದ ಯಂತ್ರ

ಯಂತ್ರಗಳ ಗಾಲಿಗಳೂ ಪೂರ್ಣತ್ವದ ರೂಪು.

ಅಂಥ ರೂಪದ ಚಕ್ರಗಳ, ದುಂಡಾಗಿ ಅಂದರೆ ಪೂರ್ಣ ವರ್ತುಲಾಕಾರವಾಗಿ, ತಿರುಗುವಿಕೆಯೇ ಪೂರ್ಣತ್ವದ ಸಂಕೇತದ ಚಲಿಸುವಿಕೆಯ ಮಹತ್ವದ ಮಹತ್ವ.

ಪೂರ್ಣದಿಂದ ಜನಿಸಿದ, ಪೂರ್ಣ ಜಗದ, ಪೂರ್ಣ ಮಾನವನು ತನ್ನ ಪೂರ್ಣತ್ವದ ಪ್ರಾಪ್ತಿಗೆ ಜೀವಿಸುವ ಸಲುವಾಗಿ ಉಣ್ಣುವ ಅನ್ನದ ತಂತ್ರು–ಇಡ್ಲಿ–ದೋಸೆ–ಉಂಡಿ–ಹೋಳಿಗೆ, ಅವನು ತಿನ್ನುವ ರೊಟ್ಟಿ, ಅದನ್ನು ಬೆಯಿಸುವ ರೊಟ್ಟೀ ಹಂಚು. ಆ ರೊಟ್ಟಿಯನ್ನಿಡುವ ರೊಟ್ಟೀ ಬುಟ್ಟಿ–ಈ ಎಲ್ಲದರ ದುಂಡಗಿನ ಆಕಾರ ಪೂರ್ಣತ್ವದ ಪ್ರತೀಕ.

[ಪುಟ ೧೪]

ಗ್ರಹಣವಿಲ್ಲದ ಪೂರ್ಣ ಹುಣ್ಣಿಮೆಯು ಶಶಿ ಮತ್ತು
ದಿನ–ದಿನದ ರವಿ ರೂಪು ಪೂರ್ಣ ರೂಪದ ಸುತ್ತು ;
ಪೂರ್ಣ ರೂಪವ ಪಡೆದು, ಬೆಳಗಿಸುವವು ಜಗತ್ತು.
ಬೆಳಗು; ಪೂರ್ಣ ಬೆಳಗದೆ ಬಿಡಬೇಡ ಬೇಸತ್ತು.

ಪೂರ್ಣತ್ವದ ಪ್ರತೀಕದಂತೆ ದುಂಡಾಗಿರುವ ಹುಣ್ಣಿಮೆಯ ರಾತ್ರಿ ಚಂದ್ರನಿಗೂ, ಅಮಾವಾಸ್ಯೆಯ ದಿನ ಸೂರ್ಯನಿಗೂ ಗ್ರಹಣ ಹಿಡಿದರೆ ಅವು ದುಂಡಾಗಿ ಪೂರ್ಣಕಾಣುವುದಿಲ್ಲ. ಅದೇ ಗ್ರಹಣದ ಯೋಗವಿಲ್ಲದ ಪೂರ್ಣ ಹುಣ್ಣಿಮೆಯ ತಿಥಿಯ ಚಂದ್ರನು ಪೂರ್ಣಾಕಾರದಿಂದ ದುಂಡಾಗಿ ಕಾಣುತ್ತಾನೆ. ದಿನ ನಿತ್ಯದ ಸೂರ್ಯನೂ ಪೂರ್ಣ ದುಂಡಾಗಿಯೇ ಕಾಣುತ್ತಾನೆ.

ತಮ್ಮ ಸ್ವಾಭಾವಿಕ ಆಕಾರದಿಂದ ಸ್ವಾಭಾವಿಕವಾಗಿ ವರ್ತುಲಾ ಕಾರವಾಗಿಯೇ ಇರುವ ಸೂರ್ಯ–ಚಂದ್ರರಿಗೂ ಸಹ ಅರೆ–ಕೊರೆ

ಯನ್ನಾಗಿಸಿ ಕಾಣಿಸುವ ದೇಶೀಯದ ಇಬ್ಬರಿಗೂ ಗ್ರಹ ಹಿಡಿಯುತ್ತದೆ.

ಚಂದ್ರಗ್ರಹಣವು ಚಂದ್ರನ ಪೂರ್ಣ ಕಲೆಯ ದಿನವಾದ ಹುಣ್ಣಿಮೆಯ ದಿನ. ಸೂರ್ಯಗ್ರಹಣವು ಸೂರ್ಯ-ಚಂದ್ರರು ಪರಸ್ಪರ ಭೆಟ್ಟಿ ಆಗುವ ದಿನವಾದ ಅಮಾವಾಸ್ಯೆಯ ಯಾವುದೋ ಒಂದು ದಿನ. "ಅಮಾವಾಸ್ಯಾತ್ವಮಾವಾಸ್ಯಾದರ್ಶಃ ಸೂರ್ಯೇಂದು ಸಂಗಮಃ" ಅಂದರೆ ಸೂರ್ಯಚಂದ್ರರ ಪರಸ್ಪರ ಭೆಟ್ಟಿಯ ದಿನವೇ ಅಮಾವಾಸ್ಯೆ. ಆಗ ಚಂದ್ರನ ಕಲೆ ಕಾಣಿಸಿದರೆ "ಸಿನೀವಾಲೀ" ಅಮಾವಾಸ್ಯೆ ಎಂದು ಹೆಸರು. ಕಲೆ ಕಾಣಿಸಲಾರದ ಅಮಾವಾಸ್ಯೆಯ ಹೆಸರು "ಕುಹೂಃ" ಅಮಾವಾಸ್ಯೆ.

ಹುಣ್ಣಿಮೆಗೆ ಹುಣ್ಣಿವೆ ಪೂರ್ಣಿಮೆ ಪೌರ್ಣಮಾಸಿ ಎಂದು ಹೆಸರು. ಒಂದು ಕಲೆ ಕಡಿಮೆ ಆದ ಹುಣ್ಣಿಮೆ 'ಅನುಮತಿ' ಹುಣ್ಣಿಮೆ. ಪೂರ್ಣ ಚಂದ್ರನುಳ್ಳ ಹುಣ್ಣಿಮೆ ರಾತ್ರಿಗೆ 'ರಾಕಾ' ಎಂದು ಕರೆಯುವ ವಾಡಿಕೆ.

ಗ್ರಹಣ ಶಬ್ದಕ್ಕೆ 'ಉಪರಾಗ' 'ಗ್ರಹ' ಎಂದು ಮುಂತಾದ ಬೇರೆ ಶಬ್ದಗಳು ಪರ್ಯಾಯ ಶಬ್ದಗಳಾಗಿವೆ. ಗ್ರಹಣವೆಂದರೆ (೧) ಆಧುನಿಕ ಭೌತಿಕ ವಿಜ್ಞಾನದ ಪ್ರಕಾರ ಸೂರ್ಯಗೋಲ-ಚಂದ್ರಗೋಲ-ಭೂಗೋಲಗಳ ನೆರಳು ಬೀಳುವಿಕೆ; (೨) ದೈವಿಕ ವಿಜ್ಞಾನದ ರೀತಿಯಲ್ಲಿ ಸೂರ್ಯ-ಚಂದ್ರ ದೇವತೆಗಳು ರಾಹು ಕೇತು ರಾಕ್ಷಸರ ಬಂಧನಕ್ಕೊಳಗಾಗುವಿಕೆ; ಅಂದರೆ ಅಮೃತ ಪಾನದ ಸಂದರ್ಭದ ಪ್ರಕರಣದಲ್ಲಾದ ಅಪಮಾನದ ಪ್ರತೀಕಾರಕ್ಕಾಗಿ ಯತ್ನಿಸುತ್ತಿದ್ದ ರಾಹುರಾಕ್ಷಸನು ಕತ್ತರಿಸಲ್ಪಟ್ಟು, ರಾಹು ಕೇತುವೆಂಬ ಎರಡು ರೂಪದಿಂದ ಸೂರ್ಯ-ಚಂದ್ರರನ್ನು ಸೆರೆಹಿಡಿಯಲು ಮಾಡುತ್ತಿರುವ ಕುಸ್ತಿ. (೩) ಆತ್ಮ ವಿಜ್ಞಾನದ

ಕಾರ ಪರಮಾತ್ಮ - ಜೀವಾತ್ಮರಿಬ್ಬರಿಗೆ ಮುಸುಕುವ
ಾಯೆಯು ಹಾಗೂ ಅವಿದ್ಯೆಯು ವ್ಯಾಮೋಹದ ಪ್ರತಿಕ್ರಿಯೆಯ
ದ್ಯೋತಕ.

ದಿವೆ ಹಗಲು; ರಾತ್ರಿ ನಿಶೆ. ದಿವೆ ಆಗಲು ಕಾರಣನಾದವನು
ವಾಕರ, ಸೂರ್ಯ; ರವಿ. ನಿಶೆಗೆ ಕರ್ತನಾದವನು ನಿಶಾಕರ;
ಂದ್ರ; ಶಶಿ. ಈ ದಿವಾಕರ-ನಿಶಾಕರರಿಬ್ಬರೂ ವಿಧಿ-ವಶದಿಂದ
ೋಪಪ್ಲವೋಪರಕ್ತರಾಗುತ್ತಾರೆ. ಅಂದರೆ ಅವರಿಬ್ಬರೂ ರಾಹು
ವಿನಿಂದ ಆಪತ್ತಿಗೊಳಗಾಗುತ್ತಾರೆ. "ವಿಧಿರಹೋ! ಬಲವಾನಿತಿ
ಮೇ ಮತಿಃ". ವಿಧಿ-ವಿಲಾಸ ವಿಶಾಲ.

ಕಲೆಯು ಹೆಚ್ಚು ಪರಿಶಿತದ ಚಂದ್ರನಿಗೆ ಗ್ರಹಣದ ಪರಿಮಾಣ
ಪರಿಣಾಮ ಹೆಚ್ಚು. ಅಂಥ ಚಂದ್ರನ ಭೆಟ್ಟಿಯ ಸಾನ್ನಿಧ್ಯದ
ಫಲವಾಗಿ ಸ್ವಯಂ-ಪ್ರಕಾಶವುಳ್ಳ ಸೂರ್ಯನಿಗೂ ಗ್ರಹಣ ತಪ್ಪಿ
ದ್ದಿಲ್ಲ. "ಸಂಸರ್ಗಜಾ ದೋಷ-ಗುಣಾ ಭವಂತಿ".

ಹುಣ್ಣಿಮೆಯ ದಿನ ಹುಣ್ಣಿಮೆಯ ಚಂದ್ರನಿಗೆ ಗ್ರಹಣ; ಅಮಾ
ವಾಸ್ಯೆಯ ದಿನ ಅಮಾವಾಸ್ಯೆಯ ಸೂರ್ಯಗ್ರಹಣ. ಸೂರ್ಯ
ಗ್ರಹಣದ ದಿನ ಚಂದ್ರ-ಗ್ರಹಣವಿಲ್ಲ; ಚಂದ್ರಗ್ರಹಣದ ದಿನ
ಸೂರ್ಯ-ಗ್ರಹಣವಿಲ್ಲ. ಎರಡೂ ಗ್ರಹಣಕ್ಕೆ ಕನಿಷ್ಟ ಪಕ್ಷ ಹದಿ
ನೈದು ದಿನಗಳ ಅಂತರ ಇದ್ದೇ ಇರುತ್ತದೆ; ಇಂಥ ಗ್ರಹಣದ ಅವ
ಧಿಯ ವ್ಯವಧಾನ ವರ್ಷಕ್ಕೆ ಬಹಳ-ಬಹಳವೆಂದರೆ ಕೇವಲ
ಮೂರ್-ನಾಲ್ಕು.

ಸೂರ್ಯ-ಚಂದ್ರರೂ ಸಹ ಗ್ರಹಣದ ಸಮಯದ ತಮ್ಮ
ಅರೆ-ಕೊರೆಯ ರೂಪವನ್ನು ಮತ್ತೆ ಮೊದಲಿನಂತೆ ಪೂರ್ಣರೂಪ
ವನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸುತ್ತಿರುತ್ತಾರೆ. ಪ್ರಣವ
ಸ್ವರೂಪನಾದ ಷಟ್‌ಸ್ಥಲ ಬ್ರಹ್ಮಯು ಪೂರ್ಣನೆ ಆಗಿದ್ದರೂ

ನಿಯೋಗಾನುಷ್ಠಾನವನ್ನು ಮುಂದುವರೆಸಿ ಪೂರ್ಣನಾಗಲು ಪ್ರಯತ್ನಿಸುತ್ತಿರುತ್ತಾನೆ.

ತನ್ನ ರೂಪಾಕೃತಿಯು ಪೂರ್ಣ ಆದಾಗ, ಗ್ರಹಣ ಹಿಡಿಯುತ್ತದೆಂದು ಚಂದ್ರನಿಗೆ ತಿಳಿದಿದ್ದರೂ ಸಹ, ಅವನು ಅರ್ಧಚಂದ್ರನಾಗಿಯೇ ಇರದೆ, ಪ್ರತಿ ತಿಂಗಳೂ ಪೂರ್ಣನಾಗಬಯಸುತ್ತಿರುತ್ತಾನೆ. ಪೂರ್ಣಾಕಾರನಾಗುವಾಗ ವಿಘ್ನ ಬಂದರೂ ಪೂರ್ಣನಾಗುವುದನ್ನು ಬಿಡಬಾರದು.

ಸೂರ್ಯ-ಚಂದ್ರರಂತೆ ಖಗೋಳದ ಎಲ್ಲ ಗ್ರಹ-ನಕ್ಷತ್ರಗಳೂ ಪೂರ್ಣಾಕಾರದಲ್ಲಿವೆ. ಅಗ್ನ್ಯುತ್ಪಾತವೂ ಉಪಾಹಿತವೂ ಆದ ಧೂಮಕೇತುವಿಗೂ ಪ್ರಾರಂಭದಲ್ಲಿ ಪೂರ್ಣಾಕಾರದ ಚಿಹ್ನೆ ಇದೆ. ಆಕಾಶಗಂಗೆಯೂ ಪೂರ್ಣವಾಗಿ ಗೋಚರಿಸಿದಾಗ ಪೂರ್ಣದ ಒಂದು ಸುತ್ತಾಗಿ ಕಾಣಬಲ್ಲುದು.

ನಭೋಮಂಡಲದಲ್ಲಿ ಸುದೂರ ಚಲಿಸುವ ಅಪೊಲೊ-ರಾಕೆಟ್-ವಿಮಾನ ಮೊದಲಾದವುಗಳು ಮತ್ತು ಉಪಗ್ರಹಗಳು ಭೂಭಾಗದಿಂದ ಹೊರಟು ಅಂತರಿಕ್ಷದಲ್ಲಿ ತಿರುಗುತ್ತಿದ್ದರೂ ಸಹ. ಅವು ದೂರದಲ್ಲಿ ಕಾಣಿಸುವ ಕಾರಣದಿಂದಾಗಿ, ಪೂರ್ಣತ್ವದ ಆಕಾರದಲ್ಲಿ ಕಾಣತೊಡಗುತ್ತವೆ. ಹದ್ದು ಕಾಗೆ ಪಾರಿವಾಳದಂತಹ ದೂರಗಾಮಿ ಪಕ್ಷಿಗಳು ಅತಿ ದೂರದಲ್ಲಿ ರೆಕ್ಕೆ ಬಡಿದು ಹಾರಾಡುತ್ತಿದ್ದರೂ, ಅವುಗಳನ್ನು ಹಾಗೆಯೇ ಬರಿಗಣ್ಣಿನಿಂದ ನೋಡಿದರೆ ಅವು ದುಂಡಾಗಿದ್ದಂತೆ ಕಾಣುತ್ತವೆ.

ಪೃಥ್ವೀ-ತತ್ತ್ವವು ಆಕಾಶ-ತತ್ತ್ವಕ್ಕೆ ಸಮೀಪಿಸಿದಾಗ ಪೂರ್ಣತ್ವದ ಪೂರ್ಣಾಕೃತಿಯನ್ನು ಸಹಜವಾಗಿಯೇ ಹೊಂದುತ್ತದೆ. ಅಂತೆಯೇ ಸುದೂರ ನಭೋ-ಮಂಡಲದಲ್ಲಿರುವ ಆಕಾಶಕಾಯಗಳೂ ಭೌತಿಕ ಉಪಗ್ರಹಗಳೂ ಚಂದ್ರಾದಿಗಳೂ ಪೂರ್ಣತ್ವದ

ಪೂರ್ಣ ರೂಪವನ್ನು ಪಡೆದಿರುತ್ತವೆ; ಅವಕ್ಕೆ ಸ್ವಯಂಪ್ರಕಾಶ ಇಲ್ಲದಿದ್ದರೂ ಆ ಸೂರ್ಯ-ಚಂದ್ರರ ಪ್ರಕಾಶದಿಂದ ಅವು ಬೆಳಗುತ್ತವೆ. ಬೆಳಕನ್ನೀಯುವ ಆ ಸೂರ್ಯ-ಚಂದ್ರರೂ ಸಹ ಪರಂಜ್ಯೋತಿಯಿಂದ ಪ್ರಕಾಶಿಸುತ್ತಾರೆ. ಎಲ್ಲವೂ ಪರಂಜ್ಯೋತಿಯಿಂದಲೇ ಜ್ಯೋತಿಃಪ್ರದವಾಗಿರುತ್ತದೆ. "ತಸ್ಯ ಭಾಸಾ ಸರ್ವಮಿದಂ ವಿಭಾತಿ". ಅಂದರೆ ಬಿಸಿಲಲ್ಲಿಯ ಕನ್ನಡಿಯು ಪ್ರತಿಬಿಂಬಿಸುವಂತೆ ಆ ಪೂರ್ಣನಿಂದ ಬೆಳಗನ್ನು ಕಂಡು ಆ ಸೂರ್ಯ ಚಂದ್ರರು ಚರಾಚರ ಜಗ-ಜೀವನವನ್ನು ಬೆಳಗಿಸುತ್ತಾರೆ. ಕುಮಾರ ಶಿವಯೋಗಿಯಾಗಿ ಬೆಳಕನ್ನು ಕಂಡ ಮಹಾತ್ಮನು. ಆ ತನ್ನ ಬೆಳಗಿನಿಂದ, ವಟುಕುಮಾರರನ್ನೂ ಶಿವಯೋಗಿಗಳನ್ನೂ ಬೆಳಗಿಸುತ್ತಾನೆ,

[ಪುಟ ೧೫]

ನೀರೊಳಗೆ, ನೀರ್‌ಮೇಲೆ ಗಾಳಿ ಬೀಸಲು ಮತ್ತು
ಕೆರೆ, ಭಾವಿ ನೀರಲ್ಲಿ ಕಲ್ಲು ಬೀಳಲು ಸುತ್ತು
ದುಂಡನೆಯ ತೆರೆಯೆದ್ದು ಚಲಿಸುತ್ತಲಿವೆ, ಗೊತ್ತು.
ಚಲಿಸು; ಪೂರ್ಣ ಚಲಿಸದೆ ಬಿಡಬೇಡ ಬೇಸತ್ತು.

ಬೆಳಗಿಸಲು ಸರಸವಾಗಿರುವ, "ರಸೋ ವೈ ಸಃ" ಎನ್ನುವ, ಜಲ ತತ್ತ್ವವೂ ಸಹ ಪರ್ಯಾಯದಿಂದ ಪೂರ್ಣದ ತತ್ತ್ವದಿಂದಾಗಿದೆ. "ಆತ್ಮನಃ ಆಕಾಶಃ ಸಂಭೂತಃ; ಆಕಾಶಾದ್ ವಾಯುಃ; ವಾಯೋರಗ್ನಿಃ; ಅಗ್ನೇರಾಪಃ" ಅಂದರೆ, ಪರಮಾತ್ಮನಿಂದ ಆಕಾಶವು ವಿಕಸಿತವಾಯಿತು. ಆ ಆಕಾಶದಿಂದ ವಾಯುವಿಗೆ ಉಸಿರು ಬಂದಿತು. ಆ ವಾಯುವಿನಿಂದ ಬೆಂಕಿ ಬಿಸಿ ಕಂಡಿತು. ಆ ಬೆಂಕಿಯಿಂದ ನೀರು ಸರಸವಾಯಿತು. ಹೀಗೆ ಆತ್ಮ ವಂಶದ ಸಂತಾನವು ಜಲ. ಜಲಕ್ಕೆ ಕಾರಣವಾದದ್ದು ಆತ್ಮ. ಆತ್ಮಕ್ಕೂ ಕಾರಣವಾದದ್ದು ಶಿವತತ್ತ್ವ.

"ಕಾರಣದ ಗುಣವನ್ನು ಕಾರ್ಯವೂ ಹೊಂದುತ್ತದೆ" ಗೋಧಿಯಿಂದಾದ ಹಿಟ್ಟು ಗೋಧಿ-ಹಿಟ್ಟು; ಅಕ್ಕಿಯಿಂದಾದದ್ದು ಅಕ್ಕಿಹಿಟ್ಟು. ಕಾಳಿನಿಂದ ಹಿಟ್ಟು ನೇರವಾಗಿ ಆಗುವುದಿಲ್ಲ; ಕಾಳಿನ ಹೋಳು, ದೊಡ್ಡ ನುಚ್ಚು, ಸಣ್ಣ ನುಚ್ಚು, ರವೆ-ಇವು ಹಿಟ್ಟು ಆಗುವುದಕ್ಕಿಂತ ಮುಂಚಿನ ರೂಪ-ತತ್ತ್ವಗಳು. ಆತ್ಮಾದಿ-ಅಗ್ನ್ಯಂತವಾದ ತತ್ತ್ವ-ರೂಪಗಳು ಜಲತತ್ತ್ವದ ಪೂರ್ವಜವಾದ ಹಿರಿ ತತ್ತ್ವಗಳು.

ಪೂರ್ಣದಿಂದಾದ ಜಲದಲ್ಲಿಯೂ ಆನುವಂಶಿಕವಾದ ಪೂರ್ಣದ ಗುಣಗಳಿವೆ. ಕೆರೆ-ಭಾವಿಯ, ಸರೋವರ-ಸಮುದ್ರದ ನೀರಿನ ಮೇಲ್ಮೈಯು ಸಮಾನ ಸಮತಲದಲ್ಲಿರುತ್ತದೆ. ಅದು ಪೂರ್ಣಾಕಾರದಲ್ಲಿ ಹಬ್ಬಿರುತ್ತದೆ. ಆಧಾರವನ್ನು ಚೌಕಾಗಿ ಕಟ್ಟಿಸಿದ್ದರೂ ಕಾಲಾಂತರದಲ್ಲಿ ಆ ಕಟ್ಟಡವು ಹಾಳು ಬಿದ್ದಂತಾಗಿ, ನೀರಿನ ಮಟ್ಟ ಪೂರ್ಣಾಕಾರವಂತಾಗಿ ದುಂಡಗೆ ಕಾಣುತ್ತದೆ.

ಸಹಜವಾಗಿ ಪೂರ್ಣಾಕಾರವನ್ನೇ ಬಯಸುತ್ತಿರುವ ಈ ನೀರನ್ನು ಉಪಯೋಗಿಸುವ ಥಾಲಿ-ತಂಬಿಗೆ, ಕೊಡ-ಹಂಡೆ, ಮಗಿ-ಮಡಕೆ, ಹರ್ವಾಣ-ಹರವಿ ಮುಂತಾದ ಸಾಧನ ಸಲಕರಣೆಗಳೂ ದುಂಡಗೇ ಪೂರ್ಣಾಕೃತಿಯಲ್ಲಿರುತ್ತವೆ.

ಈಳಿ-ನಿಂಬೆ, ಮಾವು-ಮಾದಲ, ತೆಂಗು ಮುಂತಾದ ಹೆಚ್ಚು ರಸಭರಿತವಾದ ಫಲಗಳೂ ಸಹ ಪ್ರಾಯಃ ವರ್ತುಲಾಕಾರದಲ್ಲಿರುತ್ತವೆ. ಇದರಲ್ಲಿಯ ಜಲಾಂಶವು ತನ್ನ ಪೂರ್ಣದಲ್ಲಿ ಸೇರಲು ಕ್ರಮೇಣ ಕೆಲ ಕಾಲದ ನಂತರ ಕಡಿಮೆಯಾಗುತ್ತ ಹೋಗುತ್ತದೆ. ಹೀಗಾದರೆ ಅದು ಬತ್ತಿದೆಯೆನ್ನುತ್ತೇವೆ. ಅಥವಾ ತೆಂಗಿನಲ್ಲಿಯ ಜಲವೇ ಪರಿಪಾಕದಿಂದಾಗಿ ತಾನೇ ಗಟ್ಟಿಯಾಗಿ ಕೊಬ್ಬರಿ ಆಗಬಹುದು. "ಅದ್ಭ್ಯಃ ಪೃಥ್ವೀ" ಅಂದರೆ ನೀರಿನಿಂದ ಭೂಮಿ

(ಪೃಥ್ವೀ) ತತ್ತ್ವದ ಉದಯವಾಗುತ್ತದೆಂಬುದಕ್ಕೆ ಇದು ಸ್ಪಷ್ಟ ವಾದ ದೃಷ್ಟಾಂತ.

ಜಲಾಶಯದಲ್ಲಿಯ ಜಲದ ಒಳಭಾಗದಲ್ಲಿಂದ ಮೀನಾದಿಗಳು ಯಾವುದೇ ರೀತಿಯಿಂದ ಉಸುರಿದರೆ, ಅವರ ಮೇಲ್‌ಭಾಗದಲ್ಲಿ ದುಂಡಾಕಾರದ ಬೊಬ್ಬುಳಿಕೆ, ಗುರುಳಿ ಹಾಗು ತೆರೆಗಳೇಳು ತ್ತವೆ. ನೀರಿನ ಮೇಲ್‌ಗಡೆ ಸಹಜವಾದ ಜೋರಾದ ಗಾಳಿ ಬೀಸಿದರೂ ಅದರ ರಭಸಕ್ಕೆ ವರ್ತುಲಾಕಾರದ ತರಂಗಗಳುಂಟಾ ಗುತ್ತವೆ. ಪಿಂಡಾಂಡದ ವಾಯುಗಳು : ಪ್ರಾಣ-ಅಪಾನ-ಸಮಾನ- ಉದಾನ-ವ್ಯಾನ-ಕೃಕರ-ಧನಂಜಯ ಮುಂತಾದವು. ಆವಹ- ನಿವಹ-ಸಂವಹ-ಅನುವಹ-ಪ್ರವಹ-ಉದ್ವಹ-ಪರಿವಹ - ಇವು ಬ್ರಹ್ಮಾಂಡದ ವಾಯುಗಳು. ಇಂಥ ವಾಯುಗಳು ಪರಿಸ್ಥಿತಿಗನು ಸರಿಸಿ ನೀರಿನಲ್ಲಿ ಅಥವಾ ನೀರಮೇಲೆ ಸೂಕ್ಷ್ಮವಾಗಿ ಅಥವಾ ಸ್ಥೂಲವಾಗಿ ತರಂಗಗಳನ್ನೆಬ್ಬಿಸುತ್ತವೆ.

ಕೆರೆ-ಭಾವಿ, ಹಳ್ಳ-ಕೊಳ್ಳ ಎಲ್ಲಿಯೋ ಆಗಲಿ ಆ ನೀರಿನ ಮೇಲೆ ಭಾರವಾದ ಭೌತಿಕ ವಸ್ತು ಬಿದ್ದರೆ ಅದರ ಗಾತ್ರ ಮತ್ತು ಪಾತ್ರಕ್ಕೆ ತಕ್ಕಂತೆ ಪೂರ್ಣದ ವರ್ತುಲಾಕಾರವನ್ನು ತಾಳಿದ ತರಂಗಗಳು ಚಲಿಸುತ್ತ ತಮ್ಮ ದಂಡೆಯೆಂಬ ಗಮ್ಯ ಸ್ಥಾನವನ್ನು ಹೊಂದುತ್ತವೆ.

ನಿಂತು ತಪಿಸುತ್ತಿರುವ ನೀರು ತನ್ನ ಅತ್ಯಂತ ನಿಕಟದ ಜನನ- ಸ್ಥಾನವಾದ ಅಗ್ನಿಯ ಬಳಿಗೆ ಆವಿಯಾಗಿ ಹಾರಿ ಹೋಗು ತ್ತದೆ. ಅಥವಾ, ಆ ಅಗ್ನಿಗೂ ಜನನ-ಸ್ಥಾನವಾದ ವಾಯುವಿನಲ್ಲಿ ಆರಿ ಹೋಗುತ್ತದೆ. ಅದು ಹಾಗೆ ಆಗದಾಗ ಒಟ್ಟಾಗಿ ಸೇರಿ ಸಂಘ ಶಕ್ತಿಯನ್ನು ಬೆಳೆಸಿಕೊಂಡು, ಪೂರ್ಣನ ಪೂರ್ಣ ಸಾಗರ ದಲ್ಲಿ ತಲ್ಲೀನವಾಗಲು ಹೊಳೆಯಾಗಿ ಇಳುಕಲ ಕಡೆಗೆ ಚಲಿಸಬಲ್ಲು

ಸಾತ್ತ್ವದೆ. ಹೀಗೆ ನೀರಿನ ಕಾರ್ಯ ಕ್ಷೇತ್ರವು ವಿಶಾಲವಾದದ್ದು.

[ಪುಟ ೧೬]

ಜಲನಿಧಿಯು ಜಲ-ಬಿಂದು ಉಗೆ, ಮೇಘ, ಮಳೆ ಮತ್ತು
ಹಳ್ಳ, ಹಿರಿ-ಹೊಳೆ ಆಗಿ, ಮರಳಿ ಬರಲಿದೋರ್ ಸುತ್ತು.
ಸುತ್ತುತ್ತ ಜಗವನ್ನ ಸಲಹುವುದು ತೋರ್ಪಿತ್ತು.
ಸಲುಹು; ಪೂರ್ಣ ಸಲುಹದೆ ಬಿಡಬೇಡ ಬೇಸತ್ತು.

ವಿಶಾಲ ವಿಶ್ವವಾದ ಬ್ರಹ್ಮಾಂಡವು ವಿಶಾಲ; ಅದರ ಸಂಕ್ಷಿಪ್ತ ರೂಪವೆ ಪಿಂಡಾಂಡ. ವಿರಾಟ್ ರೂಪವು ವಿಶ್ವರೂಪ; ಅದರ ಸಣ್ಣ ರೂಪವೆ ಸಮ್ರಾಟ್. ವಿರಾಟ್ ಪರಮಾತ್ಮ; ಸಮ್ರಾಟನೆ ಜೀವಾತ್ಮ.

ವಿರಾಟ್ ರೂಪವೂ ವಿಶ್ವರೂಪವೂ ಪೂರ್ಣವೂ ಆದ ಬ್ರಹ್ಮಾಂಡದ ಮಹದ್ರೂಪವನ್ನು ತಿಳಿಯುವುದು ಆವಶ್ಯಕ. ಅದರ ಸಲುವಾಗಿ ಆ ಮಹದ್ರೂಪದ್ದೆ ಆದರೂ ಅಣುರೂಪದಂತಿರುವ ಪಿಂಡಾಂಡದ ರೂಪ, ರೂಪೋತ್ಪತ್ತಿ, ಉತ್ಪತ್ತಿ-ಕ್ರಮ, ಕ್ರಮದ ಪರಿಕ್ರಮಾದಿಗಳನ್ನು ತಿಳಿದಿರುವುದಂತೂ ಅತ್ಯಾವಶ್ಯಕ. ಪುಸ್ತಕಕ್ಕೆ ಮುಂಚೆ ಪರಿವಿಡಿಯನ್ನು ಓದಿರಬೇಕು. ಅರ್ಥಕೋಶಕ್ಕೆ ಮುಂಚೆ ವರ್ಣಮಾಲೆ ತಿಳಿದಿರಬೇಕು.

ಪೂರ್ಣತ್ವದಲ್ಲಿ ಜಲಬಿಂದುವೆಂದರೆ ನೀರ-ಹನಿಯೆಂದು ರೂಢ ಶಬ್ದದ ಅರ್ಥ. ಅದರಂತೆ, ಅದೇ 'ಜಲ-ಬಿಂದು' ಶಬ್ದಕ್ಕೆ "ಪುರುಷನ ಶುಕ್ಲ-ರೇತಸ್ಸು" ಎಂಬುದೂ ಒಂದು ಅರ್ಥ; ಇದು 'ಜಲ-ಬಿಂದು' ಶಬ್ದದ ಯೌಗಿಕ-ರೂಢವೆರಡರ ಅರ್ಥ. ವಾತ್ಸ್ಯಾಯನ-ಶಾಸ್ತ್ರದಲ್ಲಿ ಶುಕ್ಲ ರೇತಸ್ಸಿಗೆ 'ಜಲ-ಬಿಂದು'ವೆನ್ನುವುದು ಪ್ರಸಿದ್ಧವಾಗಿದೆ.

ಶಾಸ್ತ್ರದ ಪ್ರಕಾರ: ಕ್ರೀಡಾ-ವಿನೋದದಲ್ಲಿ ತೊಡಗಿದ

ೇತಸ್ಸನ್ನು ರಜಸ್ಸು ನುಂಗುತ್ತದೆ. ಆ ಶುಕ್ಲ ರೇತಸ್ಸೇ ಪ್ರಾಣಿಗಳ ಲುವಾಗಿರುತ್ತವೆ; ಪ್ರತಿಯೊಬ್ಬರ ಎಲುವು ಬೆಳ್ಳಗಿರುವುದು ನೇ ಕಾರಣದಿಂದ. ಆ ರೇತಸ್ಸನ್ನು ಸ್ವಾಹಾ ಮಾಡಿಕೊಂಡು ಜನ್ನು ಸುತ್ತುವರೆದು. ಬಂಧಿಸಿದಂತಿಟ್ಟುಕೊಂಡು, ಅದ ೊಂದಿಗೆ ತಾನೂ ಬೆಳೆದ ಆ ರಜಸ್ಸೇ ಆ ರೇತೋದ್ಭವ ಪ್ರಾಣಿಯ ಮಜ್ಜ-ಮಾಂಸಾದಿಗಳು. ಇದರ ವಿಸ್ತೃತ ಸ್ಪಷ್ಟೀಕರ ಕ್ಕೆ ಭೃಂಗಿಯ ಮೂರು ಕಾಲಿನ ಪ್ರಸಂಗದ ಪೌರಾಣಿಕ ಥೆಯನ್ನು ಮತ್ತು ಆ ಸಂದರ್ಭದ ಶಿವ-ಪಾರ್ವತಿಯರ ಂವಾದವನ್ನು ಜ್ಞಾಪಿಸಿಕೊಳ್ಳಬಹುದು.

ಜಲ-ನಿಧಿಯ (ಗಂಡಸಿನ) 'ಜಲ-ಬಿಂದು'ವು, ಅದು ಸನೋದವಲ್ಲಿ, ಶಕ್ತಿ-ಸ್ವರೂಪಳ ಸಾನ್ನಿಧ್ಯದಲ್ಲಿ ಸ್ಫೂರ್ತಿಗೊಂಡು ುಗೆಯಂತಾಗಿ, ಊರ್ಧ್ವಗತಿ ಹೊಂದುತ್ತದೆ. ಸಮುದ್ರದಿಂದ ೇಲಕ್ಕೇರಿದ ಉಗೆಯು ಅಲ್ಲಿಯ ವಿವಿಧ ವಾತಾವರಣದಿಂದ ೋಘವಾಗುವಂತೆ, ಉದ್ರೇಕಗೊಂಡು ಮೋಘದಂತಾದುದರ ರಿಣಾಮವಾಗಿ, 'ಸದಾಗತಿ'ಯ ಸಹಾಯದಿಂದ ಆ ಶುಕ್ಲ ೇತಸ್ಸು ದ್ರವೀಭವಿಸಿ, ದ್ರಾವಣ-ಕ್ರಿಯೆಯಿಂದ ಮಳೆಯಾಗಿ, ೂಮಿಯಂತೆ ಆಶ್ರಯಸ್ಥಾನವಾಗಿರುವ ಸುಸಜ್ಜಿತವಾದ ಜಸ್ಸನ್ನು ಆಶ್ರಯಿಸುತ್ತದೆ. ಅಲ್ಲಿಯ ಆ ರಜಸ್ಸಿನೊಡನೆ ಸೇರಿದ ೇತಸ್ಸು ಹಳ್ಳದಂತೆ ಗರ್ಭಾಶಯದತ್ತ ಹರಿಯುತ್ತದೆ. ಅಲ್ಲಿ ದು ತನ್ನ ಇಚ್ಛಿತ ಪೂರ್ಣಾಕಾರ ಪಡೆಯುವವರೆಗೂ ಗರ್ಭಸ್ಥ ಾಗಿ, ಬೆಳೆಯುತ್ತಿರುತ್ತದೆ. ಅಲ್ಲಿದ್ದ ಅದು. ಮೊದಲು ತಾನು ್ರವೇಶಿಸುವಾಗ ಪ್ರತ್ಯೇಕ ಒಂದೇ ಒಂದಾಗಿದ್ದಾಗ ಕಣ್ಣಿಗೆ ಾಣಿಸಲಾರದಷ್ಟು ಅಣುವಿನಾಕಾರದಲ್ಲಿದ್ದದ್ದು, ಅದೇ ಕೊನೆಗೆ ವ ಮಾಸ-ನವ ದಿವಸ ತುಂಬಿದಾಗ, ಅದು ಪ್ರತ್ಯಕ್ಷ ನೋಡು

ಪವರಿಗೆ, ಹಾಗು ಸ್ವಯಂ ತಾನೂ ನೋಡುತ್ತಿದ್ದು, ಕಣ್ಣಿಗೆ ಕಾಣುವಷ್ಟು ಹಿರಿಯದಾಗಿ ಕಣ್ಣಿಗೆ ಹೊಳೆಯುವ ದೊಡ್ಡ ಆಕಾರದ ಕೂಸಾಗಿ, ತಾನು ತನ್ನ ತಂದೆಯ ಬಳಿ ಆಡಲು, ಭೂಮಿಗೆ ಬರುತ್ತದೆ. ಆಗ ಆ 'ಜಲ-ಬಿಂದು'ವಿಗೆ ಒಂದು ಸಂತೃಪ್ತಿಯಂತೆ. ಅದು ತನ್ನ ಒಂದು ಸುತ್ತನ್ನು ಪೂರ್ಣ ಮಾಡಿದಂತೆ.

ಅಂದರೆ, ತಂದೆಯಾಗಲಿರುವ ಪುರುಷನಿಂದ ಹೊರಟ ಶುಕ್ಲ ರೇತಸ್ಸು ತಾಯಿಯಾಗಲಿರುವ ಸ್ತ್ರೀಯ ರಜಸ್ಸಿನೊಡನೆ ಬೆರೆತು, ಅವಳ ಗರ್ಭಾಶಯದಲ್ಲಿ ಡಿಂಭವಾಗಿ ಬೆಳೆ–ಬೆಳೆದು 'ದಿನ ತುಂಬಿ'ದ ಮೇಲೆ ಅವಳ ಆ ಗರ್ಭಾಶಯದಿಂದ ಮರಳಿ ಹೊರಗೆ ವಾಪಸು ಮಗುವಾಗಿ ಬರುತ್ತದೆ—ಆ "ಜಲ–ಬಿಂದು" ಹೆಸರಿನ ರೇತಸ್ಸು. "ಆತ್ಮಾ ವೈ ಜಾಯತೇ ಪುತ್ರಃ" ಎಂಬುದಾಗಿ ಉಪನಿಷತ್ತಿನ ಮಂತ್ರ ಹೇಳುವುದೂ ಇದೇ ಭಾವಾರ್ಥವನ್ನೇ.

ಹೀಗೆ ತನ್ನ ತಂದೆಯಿಂದ ಹೊರಟು, ತನ್ನ ತಾಯಿಯಲ್ಲಿದ್ದು, ಹೊರ ಬಂದು ಮಗುವಾಗಿರುವ ಆ "ಜಲ—ಬಿಂದು"ವೇ ಮತ್ತೊಂದು ಸುತ್ತಿನಲ್ಲಿ, ಅದು ತಾನೇ ತಂದೆಯಾಗಿ, ತನ್ನ ಪತ್ನಿಯ ಗರ್ಭಾಶಯದಲ್ಲಿದ್ದು. ಹೊರಬರುತ್ತದೆ. ಹೀಗೆಯೇ ಅವರ ಮಗು: ಅವರವರ ಮಗು; ಅವರವರ ಮಗುವಿನ ಅವರವರ ಮಗು; ಮತ್ತೆ–ಮತ್ತೆ ಅದೇ ಪ್ರಕಾರ ಸುತ್ತುತ್ತ–ಸುತ್ತುತ್ತ ಸೃಷ್ಟಿಕ್ರಮವನ್ನು ಮುಂದುವರೆಸುತ್ತ ಇನ್ನೂ ಮುಂದುವರೆಸುತ್ತ ಸಂತಾನೋತ್ಪತ್ತಿಯ ಸಾಮರ್ಥ್ಯದ ತರ್ಪಿತ್ತು ಜಗವನ್ನು ಸಲಹುತ್ತಿರುತ್ತದೆ– 'ಜಲ—ಬಿಂದು'.

ತಂದೆ–ತಾಯಿ ಎಂಬರ್ಥದ ಪಿತೃ–ಮಾತೃ ಶಬ್ದಗಳ ಅರ್ಥದ ವ್ಯುತ್ಪತ್ತಿಯೂ ವ್ಯಾಪ್ತಿಯೂ ಇದನ್ನೇ ('ಜಲ–ಬಿಂದು'ವಿನ

ಸಂತಸ್ಮೃತಿಕೆಯನ್ನೇ) ಸಂಕ್ಷಿಪ್ತವಾಗಿ ಸೂಚಿಸುತ್ತದೆ. ಕನ್ನಡದಲ್ಲಿಯು 'ತಂದೆ' ಶಬ್ದದ ಅರ್ಥ ಹೀಗೆ: 'ಜಲ-ಬಿಂದು'ವನ್ನು ಪತ್ನಿಗೆ ಒಪ್ಪಿಸಿ, ಅವಳಿಂದ ಕೆಲ ದಿನದ ನಂತರ ಮಗುವನ್ನಾಗಿ ಮರಳಿ ವಾಪಸ್ಸು 'ತಂದೆ'ನು ಎನ್ನುತ್ತಾನೆ– ಆ ಮಗುವಿನ ತಂದೆ. ತಾಯಿ ಯೆಂದರೆ ಪಡೆದವಳು=ಪಡೆವವಳು; ತನ್ನ ಗಂಡನಿಂದ 'ಜಲ-ಬಿಂದು'ವನ್ನು ಮಗುವನ್ನಾಗಿಸಲು ಪಡೆದಿದ್ದವಳು. ಸಂಸ್ಕೃತದಲ್ಲಿ ಭ್ವಾದಿಗಣದ ಪರಸ್ಮೈ ಪದದ ದೀರ್ಘವಾದ ತೃ (ತರ) ಧಾತು ವಿನಿಂದ 'ಪಿತೃ' ಮತ್ತು ಮಾತೃ' ಶಬ್ದಗಳೆರಡರ ಸಿದ್ಧಿಯಾಗು ತ್ತದೆ. ಪಿ ಎಂದರೆ ಭೂಮಿ; ತೃ ಅಂದರೆ ದಾಟು, ಅಡ್ಡಾಡು; ಮಾ ಅಂದರೆ ನಿಷೇಧಾರ್ಥದ ಅವ್ಯಯವಾದ ಕ್ರಿಯಾ-ವಿಶೇಷಣ. ಪಿ+ತೃ=ಪಿತೃ=ಮಗುವಾಗಿ ಭೂಮಿಯಲ್ಲಿ ಅಡ್ಡಾಡು ಎನ್ನು ವವನು. ಮಾ+ತೃ=ಮಾತೃ=ಮಗುವಾಗುವ ವರೆಗೂ ಅಡ್ಡಾಡಬೇಡ ಎನ್ನುವವಳು. ಅಂದರೆ, ಮಗುವಾಗಿ ಭೂಮಿ ಯಲ್ಲಿ ತಿರುಗಾಡು, ಅಡ್ಡಾಡು, ದಾಟು ಎನ್ನುವುದರಿಂದಲೇ ಪಿತೃ ಶಬ್ದದ ಪ್ರಯೋಗ; ಆದರಂತೆ, ದಿನ ತುಂಬಿ ಪೂರ್ಣ ಮಗುವಾ ಗುವ ವರೆಗೆ ತನ್ನ ಗರ್ಭದಲ್ಲಿಯೇ ಇರಲಿ, ಹೊರಗೆ 'ಅಡ್ಡಾಡು ವುದು ಬೇಡ' ಎನ್ನುವವಳೇ ತಾಯಿ ಅರ್ಥದ ಮಾತೃ ಶಬ್ದದ ಬಳಕೆ.

ಜನಿಸುವ ಸ್ಥಾನದಲ್ಲಿಂದಲೇ ಎಲ್ಲರೂ ಜನಿಸುವರಲ್ಲದೆ 'ಕರ್ಣ ದಲ್ಲಿ ಜನಿಸಿದವರುಂಟೆ, ಜಗದೊಳಗೆ?' ಎಂದು ಪ್ರಶ್ನೆ ಮಾಡಿ ಕೊಂಡು, " 'ಜಲ-ಬಿಂದು'ವಿನ ವ್ಯವಹಾರ ಒಂದೇ,...ಇದು ಕಾರಣ ಕೂಡಲ ಸಂಗಮದೇವ, ಲಿಂಗ-ಸ್ಥಲವನರಿದವನೇ ಕುಲ ಜನು" ಎಂಬುದಾಗಿ ಹೇಳುವಾಗಿನ ಶ್ರೀ ಬಸವಣ್ಣನ ವಚನದಲ್ಲಿ 'ಜಲ-ಬಿಂದು'ವಿನ ಪ್ರಸ್ತಾಪ ಬಂದಿದೆ. ಆ ವಚನದ ಪೂರ್ಣ ಪಾಠ ಹೀಗಿದೆ :–

"ಹೊಲೆ ಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ.
'ಜಲ-ಬಿಂದು' ವಿನ ವ್ಯವಹಾರ ಒಂದೇ.
ಆಶೆಯಾಮಿಷ ಹರುಷ ರೋಷ ವಿಷಯಾದಿಗಳೆಲ್ಲ ಒಂದೇ.
ಏನನೋದಿ, ಏನ ಕೇಳಿ, ಏನು ಫಲ ?
ಕುಲಜನೆಂಬುದಕ್ಕೆ ಆವುದು ದೃಷ್ಟ ?

ಗ್ರಂಥ :

ಸಪ್ತ-ಧಾತುಂ-ಸಮಂ ಪಿಂಡಂ
ಸಮ-ಯೋನಿ-ಸಮುದ್ಭವಮ್ ।
ಆತ್ಮ-ಜೀವ-ಸಮಾಯುಕ್ತಂ
ವರ್ಣಾನಾಂ ಕಿಂ ಪ್ರಯೋಜನಮ್ ॥

ಎಂದುದಾಗಿ,

ಕಾಶಿ ಕಮ್ಮಾರನಾದ ;
ಬೀಸಿ ಮಡಿವಾಳನಾದ ;
ಹಾಸನಿಕ್ಕಿ ಸಾಲಿಗನಾದ ;
ವೇದವನೋದಿ ಹಾರುವನಾದ !
ಕರ್ಣದಲ್ಲಿ ಜನಿಸಿದವರುಂಟೇ ಜಗದೊಳಗೆ ? !
ಇದು ಕಾರಣ, ಕೂಡಲ ಸಂಗಮದೇವ.
ಲಿಂಗ-ಸ್ಥಲವನರಿದವನೇ ಕುಲಜನು."

ಆದರೆ. ಪ್ರತಿಯೊಂದು ಮಾನವ ಜೀವದ "ಜಲ-ಬಿಂದು" ವು ಆ-ಆ ಸ್ತ್ರೀಯಳ ಗರ್ಭದಲ್ಲಿ ನೆಲೆ ನಿಂತು, ಮಗುವಾಗಿ ಹೊರ ಬರಬೇಕಾದರೆ. ಅವಳ ರಜಸ್ಸಿಲ್ಲದೆ ಸಾಧ್ಯವಿಲ್ಲ. ಅವಳು 'ಹೊಲೆ' ಗಾಣಬೇಕು ; ದೊಡ್ಡವಳಾಗಿರಬೇಕು. ಮುಂದೆಯೂ ಗರ್ಭ ನಿಲ್ಲುವ ವರೆಗೂ ಅವಳು ಮಾಸ-ಮಾಸಕ್ಕೆ ಋತುಮತಿಯಾಗು

ಂಘವಳಿರಬೇಕು. ಅವಳವಳ ಶರೀರ ಧರ್ಮಕ್ಕನುಸರಿಸಿ, ಚಾಂದ್ರ ಾಸದಂತೆ ರಜಸ್ವಲೆಯಾಗುತ್ತಿರುವ ಯೋಗ್ಯತೆಯುಳ್ಳವಳಿರ ೇಕು. ಕೌಮಾರ್ಯಾವಸ್ಥೆ ಹಾಗು ವಾರ್ಧಕ್ಯಾವಸ್ಥೆಯಲ್ಲಿ ಹಾಗಾ ುವುದು ಅಪವಾದ. 'ಜಲ—ಬಿಂದು'ವನ್ನು ರಕ್ಷಿಸಿಕೊಳ್ಳುವ ಯೋಗ್ಯತೆಯಿದ್ದರೇನೇ ಅದು ಅಲ್ಲಿ ಪಿಂಡವಾಗುತ್ತದೆ. ವಿದ್ಯೋ ದೇಶವನ್ನು ಗ್ರಹಿಸಿ. ತಿಳಿಕೊಳ್ಳುವ ಯೋಗ್ಯತೆಯಿದ್ದರೇನೇ ಷ್ಯನು ವಿದ್ಯಾವಂತನಾಗುತ್ತಾನೆ. ಅಂತೆಯೇ 'ಜಲಬಿಂದು ವಿನ ವ್ಯವಹಾರಕ್ಕೆ ಅವಳು "ಹೋಲಿಗಂಡಲ್ಲದೆ, ಪಿಂಡದ ನೆಲಿಗಾವು ರುವಿಲ್ಲ!" ವಚನದಲ್ಲಿಯ ಇನ್ನುಳಿದ ಪಂಕ್ತಿಯ ಅರ್ಥ ಸರಳವಿದೆ.

ನೈಸರ್ಗಿಕವಾಗಿ ಚಲಿಸಬಯಸುವ ನೀರು ಹಳ್ಳ-ಕೊಳ್ಳ ಕೆರೆ- ಾಗರಾದಿಗಳಲ್ಲಿಂದ ಸೂರ್ಯನ ಶಾಖದ ನೆರೆಯಿಂದ ಸ್ವಾಭಾವಿಕ ಾಗಿಯೂ, ಚರಾಚರಗಳ ಕೃತ್ರಿಮ ಅಗ್ನಿಯ ಪ್ರಚೋದನೆಯ ವಿನಿಂದ ಪ್ರೋತ್ಸಾಹದ ಹೆಚ್ಚಿನ ಚೈತನ್ಯ ಪಡೆಯುತ್ತದೆ.

ಮಾನವನು ಬಾಲ್ಯಾದಿ ಐದು ಅವಸ್ಥೆಗಳನ್ನು ಪಡೆಯುತ್ತಾನೆ. ೀ ನೀರಿಗೂ ತನ್ನದೇ ಆದ ಐದು ಅವಸ್ಥೆಗಳಿವೆ. ನೀರು ಬೆಂಕೆಯ ೋತ್ಸಾಹನದ ಪ್ರಕಾರ ೧) ಉಗಿಯಾಗಿ ಮೇಲೆ ಮೇಲೇರು- ದೆ, ಅಲ್ಲಿ ಅದು ವಾತಾವರಣಕ್ಕನುಸರಿಸಿ, ೨) ಮೋಡದ ಕಾರ ತಾಳುತ್ತದೆ. ಆ ಮೋಡವು ಗಾಳಿಯ ಪ್ರಭಾವದ ಹೇಳಿ ಯುಂತೆ ೩) ಮಳೆ-ಹನಿಯಾಗಿ ಭೂಮಿಗಿಳಿಯುತ್ತದೆ. ಹೀಗಿಳಿದ ೀರು ಇಳುಕಲ್ ಜಾಗದ ಸಹಾಯದಿಂದ ೪) ಹಳ್ಳವಾಗಿ ಹರಿ ುತ್ತದೆ. ಈ ಹಳ್ಳ-ಕೊಳ್ಳಗಳ ಸಂಘ ಶಕ್ತಿಯ ಫಲವಾಗಿ ಆ ರಿಯುವ ನೀರು ೫) ಹಿರಿಹೊಳೆಯಾಗುತ್ತದೆ. ಅದು ಮತ್ತೆ -ಸ್ಥಾನವಾದ ಸಮುದ್ರಕ್ಕೇ ಬಂದು, ಕೆಲ ಹೊತ್ತು ವಿಶ್ರಾಂತಿ ಡೆಯುತ್ತದೆ. ಇದರಲ್ಲಿಯ ಮೊದಲಿನ ಮೂರವಸ್ಥೆಗಳನ್ನು

ಕುದಿಯುತ್ತಿರುವ ಅನ್ನದ ಪಾತ್ರೆಯ ಮುಚ್ಚಳದ ಒಳಭಾಗದಲ್ಲಿ ಪ್ರತ್ಯಕ್ಷ ಕಾಣಬಹುದು.

ಹೀಗೆ ಉಗೆಯಾಗಿ ಹೊರಟು, ಮತ್ತೆ ಸಾಗರಕ್ಕೆ ಸೇರುವ ಮಾರ್ಗದಲ್ಲಿ ನಾನಾ ರೀತಿಯಲ್ಲಿ ತಣಿಸುತ್ತ ಜಗವನ್ನು ಸಲು ಹಲು ಸುತ್ತುವ ನೀರಿನ ಕರ್ತವ್ಯವು ಚೆನ್ನಾಗಿ ಪೂರ್ಣವಾಗುವ ದೆಂದು ಎಲ್ಲರಿಗೂ ಮನವರಿಕೆಯಾಗುತ್ತದೆ. ದೂರ ಸಮುದ್ರದ ವರೆಗೆ ಹರಿಯುವ ನದಿಯ ನೀರು, ತನ್ನ ಪೂರ್ಣತ್ವದ ನೆನಪಾಗಿ ನದಿ ಪ್ರವಾಹ ಮಧ್ಯದಲ್ಲಿ ನಿಶ್ಚಿತ ಸ್ಥಾನದಲ್ಲಿ ತಿರುಗಣೆಯು ಮಡು ವಾಗಿ, ಅಲ್ಲಿ ಒಳ ಉಸುರಿನ ಪೂರ್ಣ ಚಕ್ರಾಕಾರವಾಗಿ ದುಂಡಗೆ ಸುಳಿ–ಸುಳಿಯಾಗಿ ತಿರು-ತಿರುಗಿ, ಆಟವಾಡುತ್ತ ಮುಂದೆ ಸಾಗು ತ್ತದೆ. ನಡು-ನಡುವೆ ಅಡ್ಡಿ ಬಂದರೂ ನಿಂತು, ಏರಿ, ಇಳಿದು ಮುಂದಕ್ಕೆ ಓಡುತ್ತಿರುತ್ತದೆ; ಜಲನಿಧಿಯನ್ನು ಮುಟ್ಟುವ ವರೆಗೂ ವೇಗವನ್ನು ಮುಂದುವರಿಸುತ್ತಿರುತ್ತದೆ. ಸಮುದ್ರ ದಲ್ಲಿಯೂ ಸಹ ಕೆಲವೊಂದು ಸಲ ಪ್ರವಾಹದ ದೊಡ್ಡ ಪ್ರವಾ ಣದ ಗುರುತನ್ನು ಸೂಕ್ಷ್ಮವಾಗಿ ಕಾಣಬಹುದು. ಅಲ್ಲಿಂದ ಅದು ಮತ್ತೆ ಉಗೆಯಾಗಿ ಭೂಮಿಯ ಮೇಲಿನ ಪ್ರವಾಸವನ್ನು ಕೈಕೊಳ್ಳಬಲ್ಲದು. ಈ ಪ್ರಯತ್ನ ಶೀಲತೆಯ ಕಾರಣದಿಂದಾಗಿಯೂ ಮತ್ತು ತಂಪನ್ನೀಯುವ ಗುಣದಿಂದಾಗಿಯೂ "ಶೀತ ಸ್ಪರ್ಶ- ವತ್ಯಃ, ಆಪಃ" ಎಂದಿರುವ ತಾರ್ಕಿಕ ನೈಯಾಯಿಕರೂ ನೀರಿಗೆ ಗೌರವಾರ್ಥವಾಗಿ ಯಾವಾಗಲೂ ಬಹುವಚನದ ಪ್ರಯೋಗ ವನ್ನೇ ಮಾಡುತ್ತಾರೆ.

ಇಲ್ಲಿ ಜಲದ ಅವಸ್ಥೆಯನ್ನು ಬಿಂದು ಉಗೆ ಮೇಘ ಮಳೆ ಹಳ್ಳ ಹರಿ ಹೊಳೆ ಜಲನಿಧಿ ಎಂದು ಸೂಚಿಸಲಾಗಿದೆ. "ಸರ್ವಂ ಖಲ್ವಿದಂ ಬ್ರಹ್ಮ"ದ ಭಾಮಿನೀ ಷಟ್ಪದಿ ಸ್ತೋತ್ರದ ಶ್ಲೋಕವೊಂದರಲ್ಲಿ

ಳೆಯು ಧಾನ್ಯದ ಅವಸ್ಥೆಯು ಜೊತೆಗೆ, ಜಲಬಿಂದುವಿನ ಪೂರ್ವದ ಾಗೂ ತದನಂತರದ ಅವಸ್ಥೆಗಳನ್ನು ವಿಸ್ತರಿಸಿ ಹೇಳಿದ್ದೇನೆ.

"ಫಳಕು ನೀನೇ, ಬೀಜ ನೀನೇ;
ಚಳಿಯು ನೀನೇ, ಮೊಳಕೆ ನೀನೇ;
ಸೆಳವು ನೀನೇ, ಸಸಿಯು ನೀನೇ;
ಮಂಜು ಬೆಳೆ ನೀನೇ।
ಮಳೆಯು ನೀನೇ, ತೆನೆಯು ನೀನೇ;
ಹೊಳೆಯು ನೀನೇ, ಕಾಳು ನೀನೇ;
ಜಲಧಿ ನೀನೇ, ಶಕ್ತಿ ನೀನೇ.
ಈ ಕ್ರಮವು ನೀನೇ ||"

ೀಜ, ಮೊಳಕೆ, ಸಸಿ, ಬೆಳೆ, ತೆನೆ, ಕಾಳು, ಶಕ್ತಿ ಮತ್ತೆ ಬೀಜ ೊಳಕೆ ಮುಂತಾಗಿ ಬೆಳೆಯು ಕ್ರಮ ಸುತ್ತು)

ಫಳಕು ಚಳಿಯು ಸೆಳವು ಮಂಜು ಮಳೆಯು ಹೊಳೆಯು ಲಧಿ ಈ ಏಳೂ ನೀರಿನ ಅವಸ್ಥೆಗಳು. ಈ ಅವಸ್ಥೆಯ ವ್ಯವಸ್ಥೆ ೀಗೆ : ವಾಡವಾಗ್ನಿ ಮುಂತಾದ ಪ್ರಾಕೃತಿಕ ಕ್ರಿಯೆಯಿಂದ ಸಾಗ ರಲ್ಲಿ ಮೊಟ್ಟ ಮೊದಲು ಫಳಕು ಉಂಟಾಗುತ್ತದೆ. ಅದರಿಂದ ಮವಾಗಿ ಚಳಿ, ಸೆಳವು, ಮಂಜು, ಮಳೆಹನಿ, ಹೊಳೆಯಾಗಿ ವಹಿಸಿ, ಕೊನೆಗೆ ಅದೇ ಸಾಗರ ಆಗುತ್ತದೆ. ಹೀಗೆಯೇ ತ್ತೆ-ಮತ್ತೆ ಆರೋಹ ಅವರೋಹ ಕ್ರಮದಿಂದಾಗುವ ನೀರಿನ ತ್ತು ಪೂರ್ಣತ್ವದ ಸುತ್ತು. ಈ ಸುತ್ತಿನ ಸರ್ವ ಮೂಲ ವೇ ಸತ್ಯಂ, ಶಿವಂ, ಸುಂದರಮ್.

[ಪುಟ ೧೭]

ಮುತ್ತೈದೆಯು ಕರಿ-ಮಣಿ, ತಾಳಿ, ಸರ, ಬಳೆ, ನತ್ತು,
ಕುಂಕುಮದ ಬೊಟ್ಟು ಸಹ ಪೂರ್ಣತೆಯ ಕಳೆ ಹೊತ್ತು,
ಸತ್ಯ-ಶಿವ-ಸುಂದರತೆ ಬೆಳೆಸುವವು ಗೆಲುವಿತ್ತು:
ಬೆಳೆಸು; ಪೂರ್ಣ ಬೆಳೆಸದೆ ಬಿಡಬೇಡ ಬೇಸತ್ತು.

"ಸತ್ಯಂ ಶಿವಂ ಸುಂದರಂ" ಆಗಿದ್ದಾನೆ—ಪರಶಿವನು. ಅವನ ಶಕ್ತಿಯೇ ಅವನ ಪರಾಶಕ್ತಿ. ಆ ಶಕ್ತಿಯೇ ಅವನ ಧರ್ಮಪತ್ನಿಯಾಗಿದ್ದಾಳೆ. "ಎಲ್ಲರ ಮೇಲೆ ಸ್ವಾಮಿಯು ತಾನು; ಅಲ್ಲದೆ ಸ್ವಾಮಿಯು ಶಕ್ತಿಯು ತಾನು. ಶಕ್ತಿಯೇ ತಾಯಿ; ಸ್ವಾಮಿಯೇ ತಂದೆ. ಭಕ್ತ ಶಾಂತಿಗಳ ನೆಲೆಯುವರೆಂದೆ; ಶಾಂತನ ಇಚ್ಛೆಯು ಸಿದ್ಧಿಯೇ ಶಕ್ತಿ; ಇಂತಿವರೇ ಹುಟ್ಟಿನ ಶಿವ-ಶಕ್ತಿ." (ಮಧುರಚೆನ್ನ) ಅಂದರೆ ಅವಳು ತನ್ನ ಪೂರ್ಣನ ಪೂರ್ಣತ್ವವಾಗಿದ್ದಾಳೆ. ತತ್ತ್ವ ಸಂತಾನಕ್ಕೆ ಸಂತಾನದ ಸಂತಾನಕ್ಕೆ ಜನಿಸಲು ಆ ಪರಶಿವನಿಗೆ ಅವನ ಆ ಶಕ್ತಿಯೇ ಪ್ರಧಾನ ಕಾರಣಳು. ಅವಳಿಲ್ಲದೆ ಅವನಿಂದ ಸಂತಾನ ಪರಂಪರೆ ಜನಿಸದು. "ಏಕೋಽಹಂ ಬಹು ಸ್ಯಾಂ ಪ್ರಜಾಯೇಯ" ಎಂದುಕೊಂಡ ಮಾತ್ರಕ್ಕೆ, ಒಬ್ಬಂಟಿಗನಾದ ಆ ಮೂಲ ಪರಶಿವನು ಪತಿಯಾಗಬೇಕಾದರೆ, ಆ ಪರಾಶಕ್ತಿಯು ಅವನಿಗೆ ಇಚ್ಛಾ-ಜ್ಞಾನ-ಕ್ರಿಯಾರೂಪದ ಪತ್ನಿಯಾಗಬೇಕು. ಆಗ ಮಾತ್ರ ಅವರಿಬ್ಬರ ಐಕ್ಯತೆಯ, ಅವಿನಾಭಾವದ, ದಾಂಪತ್ಯದ ಸಂಬಂಧದಿಂದ ತತ್ತ್ವರೂಪದ ಪುತ್ರ-ಪೌತ್ರ-ಪ್ರಪೌತ್ರ ಮುಂತಾಗಿ ಬಳಗದ ಬಳ್ಳಿಯು, ಮೂವತ್ತಾರು ತಲೆಮಾರಿನ ವರೆಗೂ, ಬೆಳೆಯುತ್ತದೆ.

ಸುಗ್ಗಿ ಮುಗಿದಾಗ ಬಳ್ಳಿಯು ಬಾಡುತ್ತದೆ; ಒಣಗುತ್ತದೆ. ಬಾಡುವ ಬಳ್ಳಿಯು ತುದಿ ಕುಡಿಯಿಂದ ಬೊಡ್ಡೆಯಕಡೆಗೆ ಒಣ

ಗುತ್ತ ಹೋಗುತ್ತದೆ. ನೆಲದಲ್ಲಿ ಯಾವಾಗಲೂ ಹಸಿ ಇರುವದರಿಂದ ಮೂಲಬೇರು ಯಾವಾಗಲೂ ಹಸಿ ಇರುತ್ತದೆ. ಅದರಿಂದ ನೆಲದೊಳಗಿನ ಗಡ್ಡೆ ಯಾವಾಗಲೂ ಹಸಿಯಾಗಿರುತ್ತದೆ. ಅದೇ ಮತ್ತೆ ಸುಗ್ಗಿಯ ಕಾಲಕ್ಕೆ ಚಿಗಿತು-ಚಿಗಿತು ಮತ್ತೆ ಮತ್ತೆ ಮೂವತ್ತಾರು ಕುಡಿಯಾಗುತ್ತದೆ. ಶಿವ-ಶಕ್ತಿಯರ ಮಂತ್ರ-ತತ್ತ್ವ-ಬಳ್ಳಿಯೂ ಹೀಗೆಯೇ.

ಶಿವ-ಶಕ್ತಿಯರ ಲೀಲಾ-ಸುಗ್ಗಿ ಮುಗಿದಾಗ ತತ್ತ್ವ ಬಳ್ಳಿಯು ಬಾಡುತ್ತದೆ; ಸಂಕುಚಿತವಾಗುತ್ತದೆ. ಸಂಕೋಚಗೊಳ್ಳುತ್ತಿರುವ ತತ್ತ್ವ-ಬಳ್ಳಿಯು ಪೃಥ್ವೀ ತತ್ತ್ವವೆಂಬ ತುಟ್ಟ ತುದಿಯ ಕುಡಿಯಿಂದ ಶಕ್ತಿ-ಬೊಡ್ಡೆಯ ಕಡೆಗೆ ಒಣಗುತ್ತ ನಿಃಸತ್ತ್ವವಾಗುತ್ತ ಹೋಗುತ್ತದೆ. ಮೂಲ ಸ್ಥಿತಿಯ ನೆಲೆಯು ನೆಲದಲ್ಲಿ ಯಾವಾಗಲೂ ಸಚ್ಚಿದಾನಂದ ನಿತ್ಯ ಪರಿಪೂರ್ಣತ್ವದ ಹಸಿ ಇರುವುದರಿಂದ ಮೂಲ ಪರಶಿವ ಬೇರು ಯಾವಾಗಲೂ ಹಸಿಯಾಗಿಯೇ ಇರುತ್ತದೆ. ಆ ನೆಲದೊಳಗಿನ ಆ ಗಡ್ಡೆ ಯಾವಾಗಲೂ–ಅಂದರೆ, ಲೀಲಾ ಸುಗ್ಗಿ ಇದ್ದಾಗಲೂ ಇಲ್ಲದಾಗಲೂ–ಹಾಗೆಯೇ ಇರುತ್ತದೆ. ಅದೇ ಮತ್ತೆ ಸುಗ್ಗಿಯ ಕಾಲಕ್ಕೆ ಬೇರೆ ಬೀಜದ ಅವಶ್ಯಕತೆ ಇಲ್ಲದೇನೇ ಸ್ವಯಂಭುವಾಗಿ ತತ್ತ್ವ ತತ್ತ್ವದ ಸತ್ತ್ವ ಸಾರಯುತ ಮೂವತ್ತಾರು ಕುಡಿಯ ಬಳ್ಳಿ ಆಗುವ ವರೆಗೂ ಚಿಗಿಯುತ್ತದೆ. ಅದೇ ಬಳ್ಳಿ ಮತ್ತೆ ಮತ್ತೆ ಸುಗ್ಗಿ ಮುಗಿದಾಗ ಬಾಡುತ್ತದೆ, ಒಣಗುತ್ತದೆ. ಲೀಲಾ ಸುಗ್ಗಿಗೆ ಮತ್ತೆ ಚಿಗಿಯುತ್ತದೆ; ಮತ್ತೆ ಬಾಡುತ್ತದೆ, ಮತ್ತೆ ಚಿಗಿಯುತ್ತದೆ. ಇದಕ್ಕೆ ಕೊರತೆ ಇಲ್ಲ.

ಕೊರತೆಯಿಲ್ಲದ ಪೂರ್ಣವೆಂಬ ಬಳ್ಳಿಯು ಮೂವತ್ತಾರು ಕುಡಿಗಳಾಗಿ ವಿಕಸಿತವಾಗಿ ಹಬ್ಬಿದಾಗ ಅದಕ್ಕೆ ಪೂರ್ಣದ ಪೂರ್ಣತ್ವವೆನ್ನುತ್ತೇವೆ; ವಿಶ್ವವೆನ್ನುತ್ತೇವೆ. ಆ ಬಳ್ಳಿಯು ಬೆಳೆ

ಯುವ ಕಾಲವು ಸೃಷ್ಟಿ; ಅದು ಶೋಭಿಸುತ್ತಿರುವ ಸಮಯವು ಸ್ಥಿತಿ; ಅದೇ ಸಂಕುಚಿತವಾಗಿ ಬಾಡುವ ವೇಳೆಯು ಪ್ರಲಯ. ಈ ಮೂರು ದಿನದ ವಿಶ್ವವೆಂಬ ಪೂರ್ಣತ್ವದ ಬಳ್ಳಿ ಕುಡಿಗಳು ಬಾಡಿ ಬತ್ತಿ ಸಂಕುಚಿತವಾದಾಗ ಮತ್ತೆ ಪೂರ್ಣವೆಂಬುದಾಗಿ ಪರಿಣತಿ ಹೊಂದುತ್ತವೆ. ಅಂದರೆ, ಪ್ರತಿಯೊಂದು ತತ್ತ್ವವು ಸಕ್ರಮವಾಗಿ, ಪರಿಣಾಮವಾದದ ಪ್ರಕಾರ, ವಿಲೋಮ-ಅನು ಲೋಮ ಅಥವಾ ಆರೋಹ–ಅವರೋಹ ಕ್ರಮದಿಂದ, ಪರಿಣತಿ ಯನ್ನು ಹೊಂದುತ್ತಲೇ ಇರುತ್ತದೆ.

ಬ್ರಹ್ಮ ಸೂತ್ರದ ಜನ್ಮಾದ್ಯಧಿಕರಣದಲ್ಲಿಯ "ಜನ್ಮಾದ್ಯಸ್ಯ ಯತಃ" ಸೂತ್ರದಿಂದ ಶಕ್ತಿಸಹಿತ ಶಿವನೇ ಮೂವತ್ತಾರು ತತ್ತ್ವ ಗಳಾಗುತ್ತಾನೆಂದೂ, ಕೊನೆಗೆ ಅವುಗಳನ್ನು ಲೀನವಾಗಿಸಿ ಒಬ್ಬನೇ ಆಗುತ್ತಾನೆಂದೂ, ಮತ್ತು ಜನ್ಮಾದಿ–ಅನುಗ್ರಹಾಂತದ ಪಂಚ ಕೃತ್ಯಗಳಿಗೂ ಅವನೇ ಕಾರಣನೆಂದೂ ತಿಳಿದುಬರುತ್ತದೆ. ಇದೇ ಭಾವವನ್ನು ತೈತ್ತಿರೀಯೋಪನಿಷತ್ತು ಹೀಗೆ ಹೇಳಿದೆ:-

"ಯತೋ ವಾ ಇಮಾನಿ ಭೂತಾನಿ ಜಾಯಂತೇ; ಯತ್ ಪ್ರಯಂತ್ಯಭಿಸಂವಿಶಂತಿ".

ಪ್ರಕೃತ್ಯಧಿಕರಣದ "ಆತ್ಮಕೃತೇಃ ಪರಿಣಾಮಾತ್" ಎಂಬ ಸೂತ್ರದಿಂದಲೂ ಮತ್ತು "ತದಾತ್ಮಾನಂ ಸ್ವಯಮಕುರುತ" ಎನ್ನುವ ತೈತ್ತಿರೀಯ ಮಂತ್ರದಿಂದಲೂ ಅಂಥ ಶಿವನೇ ಪರಿಣತಿ ಹೊಂದುತ್ತಾನೆಂದು ಸ್ಪಷ್ಟವಾಗುತ್ತದೆ.

ಪರಿಣತಿಯನ್ನು ಹೊಂದುವುದೆಂದರೆ ಪರಿಣಾಮವನ್ನು ಹೊಂದುವುದು. ಅಂದರೆ ಸಶಕ್ತಿ ಶಿವನೇ ವಿಶ್ವವಾಗುವುದು; ವಿಶ್ವವೇ ಮತ್ತೆ ಆ ಶಿವನಾಗುವುದು, ಶಿವನು ವಿಶ್ವವಾಗಿ ಪರಿಣ ಮಿಸಿದ್ದಾನೆಂಬ ಪ್ರಕ್ರಿಯೆಯಿಂದ ಅವನು ಪರಿಣಾಮಿನಿತ್ಯನಾಗಿ

ಮತ್ತೆ ಸ್ವ-ಸ್ವರೂಪವಾಗಿ ಪರಿಣತನಾಗುತ್ತಾನೆ. ಅಂದರೆ, ಪೃಥ್ವಿ ಮುಂತಾದ ತತ್ತ್ವಗಳು ವ್ಯಾಪರಿಸುತ್ತಲೇ ಇದ್ದರೂ ಅವು ಎಂದೆಂದಿಗೂ ನಾಶವಾಗುವುದಿಲ್ಲ. ಆದುದರಿಂದ ಎಲ್ಲವೂ ನಿತ್ಯ; ಪೂರ್ಣವೂ ನಿತ್ಯ; ನಿತ್ಯವೂ ಪೂರ್ಣ ಪೂರ್ಣವಂತೂ ಪೂರ್ಣವೇ. ಅಂತೆಯೇ ಪೂರ್ಣವು ಸತ್ಯ; ಅದರ ಪೂರ್ಣತ್ವವೂ ಸತ್ಯ.

ಈ ಸತ್ಯದ ಸತ್ಯವನ್ನು ತಿಳಿಸಲು ಆ ಶಿವನ ಮಾತೃದೇವಿಯಾದ ಶಕ್ತಿಯು ತನ್ನ ಪೂರ್ಣದ ಪೂರ್ಣತ್ವದಿಂದ, ತನ್ನ ಇನ್ನುಳಿದ ಮೂವತ್ನಾಲ್ಕು ತತ್ತ್ವಗಳನ್ನು ಷಡಧ್ವದ ಪ್ರಕಾರ ಪೂರ್ಣತೆಯ ಕಲೆ ಹೊತ್ತು ಮೆರೆಯುವಂತೆ ಮಾಡುತ್ತಿರುತ್ತಾಳೆ.

ಲೀಲಾ-ವಿನೋದದಿಂದಿರುವ ದಂಪತಿಗಳು ತಮ್ಮ ಸಂತಾನಕ್ಕೆ ಬೇರೆ-ಬೇರೆ ರೀತಿಯ ಉದ್ಯೋಗ ಮಾರ್ಗ ಕಲ್ಪಿಸಿಕೊಡುತ್ತಾರೆ; ತಾವೂ ತಮ್ಮ ಕೈಲಾದ ಮಟ್ಟಿಗೆ ಅದನ್ನು ನಡೆಸುತ್ತಾರೆ. ಶಿವ-ಶಿವಾ ದಂಪತಿಗಳು ತಮ್ಮ ತತ್ತ್ವ-ಸಂತಾನಕ್ಕೆ ಆರು ರೀತಿಯ ಷಡಧ್ವದ ಉದ್ಯೋಗ ಕಲ್ಪಿಸಿದ್ದಾರೆ. ಅದನ್ನೇ ಬೇರೇ ರೀತಿಯಿಂದ ಮೂರನ್ನಾಗಿ ವಿಭಾಗಿಸಿ ಅಧ್ವತ್ರಯವೆನ್ನಲೂಬಹುದು.

ಷಡಧ್ವವೆಂದರೆ ಷಟ್ + ಅಧ್ವ; ಆರು ರೀತಿಯ ವಿಭಾಗ. (೧) ಭುವನಾಧ್ವ (೨) ಪದಾಧ್ವ (೩) ವರ್ಣಾಧ್ವ (೪) ಕಲಾಧ್ವ (೫) ತತ್ತ್ವಾಧ್ವ (೬) ಮಂತ್ರಾಧ್ವ. ಕೇವಲ ಮೂರೇ ಅಧ್ವಗಳನ್ನಾಗಿ ಸಂಕ್ಷಿಪ್ತಗೊಳಿಸುವುದೂ ಉಂಟು: ಒಂದನೆಯದು ಶುದ್ಧಾಧ್ವ; ಎರಡನೆಯದು ಮಿಶ್ರಾಧ್ವ; ಅಶುದ್ಧಾಧ್ವವು ಮೂರನೆಯದು.

ಶಿವದೀಕ್ಷೆ—ಅಯ್ಯಾಚಾರ ಮಾಡುವಾಗ ನಾವು ಷಡಧ್ವದ ಪ್ರಕಾರ, ೨೨೪ ವಾಕ್ಯಗಳನ್ನುಚ್ಚರಿಸಿ ಭುವನಾಧ್ವನ್ಯಾಸವನ್ನು ಮಾಡುತ್ತೇವೆ; ಅದರಂತೆ, ೮೧ ವಾಕ್ಯಗಳು ಪದಾಧ್ವ ನ್ಯಾಸಕ್ಕೆ;

ವರ್ಣಾಧ್ವನ್ಯಾಸಕ್ಕೆ ೫೧ ವಾಕ್ಯಗಳು; ೬ ವಾಕ್ಯಗಳು ಕಲಾಧ್ವನ್ಯಾಸಕ್ಕೆ; ತತ್ತ್ವಾಧ್ವನ್ಯಾಸಕ್ಕೆ ೩೬ ವಾಕ್ಯಗಳು; ೧೨ ವಾಕ್ಯಗಳು ಮಂತ್ರಾಧ್ವ ನ್ಯಾಸಕ್ಕೆ.

ಅಧ್ವತ್ರಯದ ವಿಭಾಗದಲ್ಲಿ ೩೬ ತತ್ತ್ವಗಳನ್ನು ಮೂರು ಗುಂಪುಗಳನ್ನಾಗಿ ಮಾಡುತ್ತೇವೆ. ಶುದ್ಧಾಧ್ವದಲ್ಲಿ ಐದು ತತ್ತ್ವಗಳನ್ನು ಸೇರಿಸುತ್ತೇವೆ; ಮಿಶ್ರಾಧ್ವಕ್ಕೆ ಏಳು ತತ್ತ್ವಗಳು; ಇಪ್ಪತ್ನಾಲ್ಕು ತತ್ತ್ವಗಳು ಅಶುದ್ಧಾಧ್ವಕ್ಕೆ.

ಐದನೆಯ ಅಧ್ವವಾದ ತತ್ತ್ವಾಧ್ವದಲ್ಲಿ ಮೂವತ್ತಾರೂ ತತ್ತ್ವಗಳನ್ನು ಸ್ಮರಿಸುತ್ತೇವೆ, ಈ ಎಲ್ಲ ಷಟ್‌ತ್ರಿಂಶತ್ ತತ್ತ್ವಗಳನ್ನು ಶ್ರೀ ಹಾನುಗಲ್ಲ ಕುಮಾರೇಶ್ವರ ಪುರಾಣದ ಪದ್ಯವೊಂದರಲ್ಲಿ ವ್ಯಾಂಪುರ ಚನ್ನ ಕವಿಯು ಹೀಗೆ ಹೇಳಿದ್ದಾನೆ:—

"ವರ ಪಂಚ ಭೂತಗಳು ಪಂಚ ತನ್ಮಾತ್ರೆಗಳು,
ನೆರೆವೈದು ಕರ್ಮೇಂದ್ರಿಯಂಗಳುಂ, ಪಂಚ ಭಾ-
ಸುರ ಬುದಿಂದ್ರಿಯಂಗಳುಂ, ಮಾನಸಾಹಂಕಾರ
ಬುದ್ಧಿ ಗುಣ ರಾಗ ವಿದ್ಯೆ ।
ಸುರುಚಿರ ನಿಯತಿ-ಕಲಾ-ಕಾಲ-ಪ್ರಕೃತಿಗಳುಂ,
ಪುರುಷಮೀಶ್ವರ-ಸದಾಶಿವ-ಶಕ್ತಿ-ಶಿವಗಳಿಂ-
ಬುರುತರದೊಳೆಸೆವ ಮೂವತ್ತಾರು ತತ್ತ್ವ"ಗಳುಂ.

ಅಂದರೆ, ಅವುಗಳ ಕ್ರಮ ಹೀಗೆ :— ಶಿವ-ಶಕ್ತಿ-ಸದಾಶಿವ-ಈಶ್ವರ-ಶುದ್ಧವಿದ್ಯಾ-ಮಾಯಾ-ಕಲಾ- ವಿದ್ಯಾ-ರಾಗ - ಕಾಲ-ನಿಯತಿ - ಪುರುಷ - ಪ್ರಕೃತಿ - ಬುದ್ಧಿ - ಅಹಂಕಾರ-ಮನಃ-ಶ್ರೋತ್ರ-ತ್ವಕ್-ನೇತ್ರ-ಜಿಹ್ವಾ - ಘ್ರಾಣ - ವಾಕ್ - ಪಾಣಿ-ಪಾದ-ಪಾಯು-ಉಪಸ್ಥ-ಶಬ್ದ-ಸ್ಪರ್ಶ-ರೂಪ - ರಸ -ಗಂಧ-

ಆಕಾಶ–ವಾಯು–ಅಗ್ನಿ– ಜಲ–ಪೃಥ್ವಿ — ಇವು ಒಟ್ಟು ಮೂವತ್ತಾರು ತತ್ತ್ವಗಳು.

ಬೇರೆ–ಬೇರೆ ದಾರ್ಶನಿಕರು ತತ್ತ್ವಗಳ ವಿಭಾಗವನ್ನು ಬೇರೆ–ಬೇರೆಯಾಗಿ ಮಾಡಿದ್ದನ್ನು ಕಾಣುತ್ತೇವೆ, ಒಂದು, ಎರಡು, ಮೂರು, ಐದು, ಏಳು, ಇಪ್ಪತ್ತೈದು—ಹೀಗೆ ಮಾಡಿದ ವಿಭಾಗದ ರೀತಿ ಅವರವರಿಗೆ ಸುಲಭವಾಗಿ ಸ್ವಲ್ಪದರಲ್ಲಿ ಅಥವಾ ವಿಸ್ತಾರವಾಗಿ ತಿಳಿಸಲೆಂಬುದೇ ಮುಖ್ಯ ಉದ್ದೇಶ. ತತ್ತ್ವವು ತತ್ತ್ವವೇ. ಇರಲಿ.

ಈ ಮೂವತ್ತಾರು ತತ್ತ್ವಗಳ ವಿಭಾಗದಲ್ಲಿ ಕೊನೆಯ ತತ್ತ್ವವು ಪೃಥ್ವೀ ತತ್ತ್ವವು. ಸರ್ವ ಪ್ರಥಮ ತತ್ತ್ವವು ಶಿವ–ತತ್ತ್ವವು,

ಈ ಶಿವತತ್ತ್ವವಾದ ಶಿವನು ಲೀಲೆಯಿಂದ ಶಕ್ತಿಯೂ ಆಗಿ, ಆ ಶಕ್ತಿಯಿಂದೊಡಗೂಡಿ ಎಲ್ಲ ತತ್ತ್ವಗಳ ನಿರ್ಮಾಣ ಮಾಡುತ್ತಾನೆ. ಶಿವನು ಪತಿ; ಶಕ್ತಿ ಪತ್ನಿ. ಕಾರಣ, ಶಕ್ತಿಯು ಮುತ್ತೈದೆ.

ಮುತ್ತೈದೆಯೆಂದರೆ ತನ್ನ ಪತಿಯ ಕೃಪಾ–ಸಹಾಯದಿಂದ ತನ್ನ ಗರ್ಭದಲ್ಲಿಂದ ತನ್ನ ಸಂತಾನವನ್ನು ಉತ್ಪತ್ತಿ ಮಾಡುವ ಸಾಮರ್ಥ್ಯದ ಆನಂದವನ್ನು ಹೊಂದಿದವಳು ಮುತ್ ಅಂದರೆ ಆನಂದ. "ಮುತ್ ಪ್ರೀತಿಃ ಪ್ರಮದೋ ಹರ್ಷಃ" (ಅಮರ ಕೋಶ, ಕಾಲವರ್ಗ). ಮುತ್ = ಮುತ್ತು + ಐದೆ = ಮುತ್ತೈದೆ.

ಸಂಸ್ಕೃತ ಮುತ್ ಶಬ್ದದ ರೂಪವು ಕನ್ನಡದಲ್ಲಿ ಮುತ್ತು (ಮುಕ್ತಾ ಎಂಬರ್ಥದ 'ಮುತ್ತು' ಶಬ್ದ ಬೇರೆ) ಎಂಬ ರೂಪವನ್ನು ತಾಳುತ್ತದೆ. ಉದಾಹರಣೆ: ಆಪತ್–ವಿಪತ್ ಸಂಪತ್–ಸಂಸತ್ ಮರುತ್-ಮಹತ್, ಸತ್–ಹೃತ್, ಉಪನಿಷತ್-ಪ್ರತಿಪತ್ ಮುಂತಾದ ತಕಾರಾಂತದ (ತ್ ಎಂಬ ಹಲಂತದ) ಸಂಸ್ಕೃತದ ಶಬ್ದಗಳು ಕನ್ನಡದಲ್ಲಿ 'ತು'ಕಾರಾಂತದ ರೂಪದವುಗಳಾಗು

ತ್ರವೇ. ಮೇಲಿನ ಈ ಶಬ್ದಗಳ ಕನ್ನಡದ ರೂಪವು ಅನುಕ್ರಮವಾಗಿ ಹೀಗೆ: ಆಪತ್ತು-ವಿಪತ್ತು, ಸಂಪತ್ತು-ಸಂಸತ್ತು, ಮರುತ್ತು-ಮಹತ್ತು, ಸತ್ತು-ದ್ಯುತ್ತು, ಉಪನಿಷತ್ತು ಪ್ರತಿಪತ್ತು.

ಶಬ್ದಮಣಿದರ್ಪಣಕಾರನ ಮತದಂತೆ. ಸಂಸ್ಕೃತದ ತಕಾರಾಂತದ ಶಬ್ದಗಳಿಗೆ ಕನ್ನಡದ ಕಾರಕ ಪ್ರತ್ಯಯಗಳು ಹತ್ತುವ ಪೂರ್ವದಲ್ಲಿ ಆ ಅಂತ್ಯದ ಹಲ್ ತಕಾರಕ್ಕೆ ದ್ವಿತ್ವ ಆಗುತ್ತದೆ. ಅನಂತರದ ಆ ತಕಾರವೆರಡರ ಮುಂದೆ ಕನ್ನಡ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿ ವ್ಯವಹರಿಸಬೇಕು. ಅಂತೆಯೇ, ಮುತ್ + ತ್ + ಉ = ಮುತ್ತು; ಮುತ್ತು + ಐದೆ = ಮುತ್ತೈದೆ. ವಾಗರ್ಥ-ಪ್ರತಿಪತ್ತಿಯ ಬಗ್ಗೆ ಸಾಧ್ಯವಾದ ಮಟ್ಟಿಗೆ ವ್ಯಾಕರಣವನ್ನನುಸರಿಸುವುದು ಲೌಕಿಕ.

ಲೌಕಿಕದಲ್ಲಿ ಧರ್ಮಪತ್ನಿಯಾದ ಮುತ್ತೈದೆಯು ತನ್ನ ಮುಟ್ಟಿ ಕುರುಹಾದ ಕರಿಮಣಿ, ತಾಳಿಯ ಜೊತೆಗೆ ಮುಕ್ತಾಮಣಿಯ ಸರ, ಪವನದ ಸರ, ಏಕಾವಳೀಸರ ಚಂದ್ರಹಾರ, ಗುಂಡಿನ ಟೀಕೆ—ಮುಂತಾದ ಮಾಲೆಗಳನ್ನು ತನ್ನ ಕೊರಳಲ್ಲಿ ದುಂಡಗೆ ಸುತ್ತುವರಿದಿರುವಂತೆ ಧರಿಸುತ್ತಾಳೆ. ಕಂಕಣ, ಬಳೆಗಳನ್ನು ಮುಂಗೈಯಲ್ಲಿ; ತೋಳಿನಲ್ಲಿ ತೋಳುಬಂದಿಯನ್ನು; ಕೈ ಬೆರಳಲ್ಲಿ ಕೈಉಂಗುರವನ್ನು; ಕಾಲುಂಗುರ ಬಿಲ್ಲಿಯನ್ನು ಕಾಲ್ಬೆರಳಲ್ಲಿ; ಕಾಲಲ್ಲಿ ತೋಡೆ ಪೈಜಣವನ್ನು; ನಡುಪಟ್ಟಿಯನ್ನು ನಡುವಿಗೆ, ಮೂಗಿಗೆ ನತ್ತನ್ನು; ಬೆಂಡೋಲೆಯನ್ನು ಕಿವಿಗೆ ಧರಿಸುತ್ತಾಳೆ. ಹಣೆಗೆ ಭ್ರೂಮಧ್ಯದಲ್ಲಿ ಗಂಧ-ಅರಿಷಿಣ, ಕುಂಕುಮ, ತಿಲಕದ ಬೊಟ್ಟನ್ನು ಸಹ ಪೂರ್ಣ ರೂಪದ ಆಕೃತಿಯನ್ನಾಗಿ ದುಂಡಗೇ ಧರಿಸುತ್ತಾಳೆ. ಅವಳ ಈ ಆಭರಣಗಳೆಲ್ಲವು ಪೂರ್ಣವಾಗಿ ದುಂಡಾಗಿಯೇ ಕಾಣುತ್ತವೆ. ಮತ್ತು ಹೊಸ ಮೊದಲಗಿತ್ತಿಯಾದ ಈ ಮುತ್ತೈದೆಯ ಸಹಜ

ಕೊಡಗಳೂ ಕೂಡ ಪೂರ್ಣಾಕಾರದಲ್ಲಿ ಶೋಭಿಸುತ್ತವೆ.

ಶೋಭಿಸುತ್ತಿರಲೆಂದು ತಾನು ಬಯಸದೆ, ತನ್ನ ಕರ್ತವ್ಯವೆಂದು ಸಹಜವಾಗಿಯೆ ಶಿವನಿಗೆ ಸಹಾಯಕಳಾಗಿ ಶೋಭಿಸುತ್ತಿರುವ ಶಕ್ತಿಯು ತನ್ನ ಮಾತೃತ್ವದ ಕುರುಹಾದ ಇಚ್ಛಾ, ಜ್ಞಾನ, ಕ್ರಿಯೆಗಳನ್ನು ಓತ ಪ್ರೋತವಾಗಿರುವಂತೆ ಧರಿಸುವದಲ್ಲದೆ, ತನ್ನ ಪ್ರತಿಯೊಂದು ಅಂಗಕ್ಕೂ ವಿಶಿಷ್ಟ ಆಭರಣ ಧರಿಸಿದ್ದಾಳೆ. ಅಂದರೆ. ಆಕಾಶವೆಂಬ ಅಂಗಕ್ಕೆ ಶಬ್ದವೆಂಬ ಆಭರಣ ಧರಿಸಿದ್ದಾಳೆ; ವಾಯು ವಿಗೆ ಶಬ್ದಸ್ಪರ್ಶಗಳು; ಶಬ್ದ. ಸ್ಪರ್ಶ ರೂಪ್ಪಗಳು ಅಗ್ನಿಗೆ; ನೀರಿಗೆ ಶಬ್ದ. ಸ್ಪರ್ಶ, ರೂಪ, ರಸಗಳು. ಪೃಥ್ವಿಗೆ ಈ ನಾಲ್ಕರ ಜೊತೆಗೆ ಗಂಧವು. ಹೀಗೆ ಜಗನ್ಮಾತೆಯಾದ ಶಕ್ತಿ ದೇವತೆಯು ಇನ್ನೂಳಿದ ತತ್ತ್ವರೂಪದ ಅಂಗಾಂಗಗಳಿಗೆ ಬೇರೆ–ಬೇರೆಯಾಗಿ ಹೇಳಿದ ಆಭರಣಗಳು ಶೋಭಿಸುತ್ತಿವೆಯೆಂದು ತಿಳಿದಿರಬೇಕು.

ಮುತ್ತೈದೆಯಾಗಿರುವ ಜಗನ್ಮಾತೆ ಅಥವಾ ಜನ್ಮದಾತೆಯಾದ ಆ–ಈ ತಾಯಿಯು ತನ್ನ ಬಾಹ್ಯ ಆಭರಣಗಳಿಂದಲೂ ಮತ್ತು ಆಂತರಿಕ ಸದ್ಗುಣಗಳಿಂದಲೂ ಆ ಸತ್ಯ-ಶಿವ-ಸುಂದರತೆಯನ್ನೇ ಮತ್ತಷ್ಟು ಹೆಚ್ಚಿಗೆ ಚೆಲುವಿತ್ತು, ಗೆಲುವಿತ್ತು ಬೆಳೆಸುತ್ತಾಳೆ. ಕಾರಣ, ಎಲ್ಲರೂ ಸದ್ಗುಣಿಗಳಾಗಿ, ಕಳೆಯು ಶೋಭೆಯನ್ನು ಬೆಳೆಸುತ್ತಿರಬೇಕು.

[ಪುಟ ೧೮]

ಜಪಮಾಲೆ, ಶಿವದಾರ, ಜನಿವಾರಗಳ ಮತ್ತು
ಸುತ್ತಿದೆಲ್ಲ ರುಮಾಲು ಪಟಗ, ಶೆಲ್ಲೆಯ ಸುತ್ತು.
ವರ್ತುಳದ್ದುದಕಾಗಿ ಪರಿಪೂರ್ಣತೆಯ ಸುತ್ತು.
ಧರಿಸು; ಪೂರ್ಣ ಧರಿಸದೆ ಬಿಡಬೇಡ ಬೇಸತ್ತು.

ಕಳೆಯ ಶೋಭೆಯನ್ನು ಬೆಳೆಸಿಕೊಳ್ಳಲು ಮತ್ತು ಅವರಿಂದ

ನಾದ-ಬಿಂದುಗಳನ್ನು ತಿಳಿದು, ಅದರಂತೆ ಆಚರಿಸಿ, ಶಿಷ್ಯರನ್ನುದ್ಧರಿಸುವುದಕ್ಕಾಗಿ ಮಾಡುತ್ತಿರುವ ಹಸ್ತ ಜಪಕ್ಕಿಂತಲೂ, ಸಂಖ್ಯಾಕ್ರಮದಿಂದಲೇ ಮಾಡುತ್ತಿರುವುದು ಸರಳ ಆಗುವುದೆಂದು ಮನಗಂಡ ಸಾಧು—ಸಂತರು ಜಪಿಸುವ ಜಪಮಾಲೆಯು ಪೂರ್ಣಾಕಾರದ ವ್ಯಷ್ಟಿ ಮಣಿಗಳಿಂದ ಕೂಡಿಕೊಂಡು, ಸಮಷ್ಟಿರೂಪದಲ್ಲಿಯೂ ಪೂರ್ಣ ದುಂಡಾಕಾರದ್ದೇ ಆಗಿರುತ್ತದೆ.

ಪರಿಪೂರ್ಣ ಶಿವನ ಸ್ವರೂಪದ ಚಿತ್‌ಕಲೆಯು ಶಿವಲಿಂಗವನ್ನಿಟ್ಟು ಧರಿಸುವ ಕರಡಿಗೆಯು ಶಿವದಾರವು ದುಂಡಾಕಾರ ತಾಳಿರುತ್ತದೆ.

ಕೊರಳಲ್ಲಿ ಅಥವಾ ಎಡಗೈಯಲ್ಲಿ ಸುತ್ತಿದ "ಲಿಂಗದ ವಸ್ತ್ರ"ದ ಸುತ್ತುವಿಕೆಯು ಗೋಲಾಕಾರದ್ದು.

ಉಪನಯನದಿಂದ ವೇದಾಧ್ಯಯನ ಮಾಡಿ, ಯಜ್ಞ-ಯಾಗಾದಿ ಕರ್ಮ-ಕಾಂಡದ ಅಧಿಕಾರ ಪಡೆದ ದೀಕ್ಷಿತನ ಜನಿವಾರವೂ ವರ್ತುಲಾಕಾರದ್ದು. ಉಡುದಾರವೂ ಹಾಗೆಯೇ. ಮತ್ತು ಸೈನಿಕನು ಧರಿಸಿದಾಗಿನ ಪಟ್ಟಿಯೂ ಕೂಡ ಅದೇ ಪೂರ್ಣಾಕಾರದ್ದೇ.

ಜಪಿಸಲು ಯೋಗ್ಯವಾದ ಸಮಷ್ಟಿ ರೂಪದ ಜಪಮಾಲೆಯ ತುಲಸಿಮಣಿ- ರುದ್ರಾಕ್ಷಿ-ಸ್ಫಟಿಕ ಮಣಿಗಳೂ ವ್ಯಷ್ಟಿ ರೂಪದಿಂದಲೂ ಅವು ದುಂಡಗಿರುತ್ತವೆ. ಅವುಗಳನ್ನು ಪೋಣಿಸುವ ದಾರ ಅಥವಾ ತಂತಿಯು ದೀರ್ಘವಾಗಿದ್ದರೂ, ಅದರ ಸುತ್ತಳತೆಯು ದುಂಡಗೆ ಇರುತ್ತದೆ.

ಮೊದಲು ದೀರ್ಘಾಕಾರದಲ್ಲಿದ್ದರೂ ತಲೆಗೆ ಪೂರ್ಣ ಸುತ್ತಿದ ನಂತರದ ರುಮಾಲು ಪಟಗಗಳೂ, ಹೆಗಲ ಮೇಲಿಂದ ಬಗಲಿಗೆ ಹೊದೆದ ಶೆಲ್ಲೆಯೂ ವರ್ತುಳದ್ದಾಗಿರುತ್ತವೆ. ಟೊಪ್ಪಿಗೆ ಕಿರೀಟಗಳ ಸುತ್ತು ಸಹ ತಲೆಯ ಮೇಲೆ ದುಂಡಾಗಿರುತ್ತವೆ. ಅವಕ್ಕಾಗಿಯೇ

ಅವೆಲ್ಲಕ್ಕೆ ಪೂರ್ಣಾಕಾರದ ತಲೆಯಮೇಲೆ ಪರಿಪೂರ್ಣತೆಯು ಸುತ್ತು ಪ್ರಾಪ್ತವಾಗುತ್ತದೆ. ಪೂರ್ಣ ಧರಿಸದಿದ್ದರೆ ಪೂರ್ಣ ದುಂಡಾಗಿ ಕಾಣಲಾರವು. ಕಾರಣ, ಪೂರ್ಣ ಧರಿಸಿ, ಪೂರ್ಣತ್ವ ಪಡೆಯಲು ಪೂರ್ಣ ವೇಷದ ಪೂರ್ಣ ರೂಪರಾಗಬೇಕು.

[ಪುಟ ೧೯]

ಆರು ಅರಿಗಳ ಗೆದ್ದು, ಮೂರ್ ತಿಳಿದ ಅರುವತ್ತು +
ಮೂರು (೬೩) ಪ್ರಮಥಗಣದ ಸಂಖ್ಯೆ ಪೂರ್ಣದ ಸುತ್ತು.
ವ್ಯಕ್ತಿ ಸಂತುಷ್ಟ ಇರೆ, ಮುಕ್ತಿ, ಸುಖ ತಾ ತೊತ್ತು.
ಸುಖಿಸು; ಪೂರ್ಣ ಸುಖಿಸದೆ ಬಿಡಬೇಡ ಬೇಸತ್ತು.

ಪೂರ್ಣರೂಪರಾಗಲೇಬೇಕೆಂದು ಪ್ರತಿಯೊಬ್ಬರೂ ಬಯಸುತ್ತೇವೆ, ಬಯಸಿದ್ದುದನ್ನು ಬರಮಾಡಿಕೊಳ್ಳಲು ಬಾಳಿನುದ್ದಕ್ಕೂ ಬಡಿದಾಡಬೇಕಾಗುತ್ತದೆ; ಬದುಕಬೇಕಾಗುತ್ತದೆ. ಬದುಕಲು ಹೋರಾಡಬೇಕಾಗುತ್ತದೆ. ಹೋರಾಟದಲ್ಲಿ ತೊಡಗಿದಾಗ ಅಳಿವು ಉಳಿವುಗಳ ಪ್ರಶ್ನೆ ಮುಂಬರುತ್ತದೆ. ಆ ಪ್ರಶ್ನೆಗೆ ಉತ್ತರ ದೊರೆಯುವುದು ಬೇರೆ-ಬೇರೆ ಮುಖದಿಂದ ಬೇರೆ–ಬೇರೆಯೆ. ಆ ಅಳಿವು–ಉಳಿವುಗಳೆರಡರಲ್ಲಿ ಎಲ್ಲರೂ ಬಯಸುವುದು ಉಳಿವನ್ನೇ; ಅಳಿವನ್ನಲ್ಲ. ಅಳಿವನ್ನು ಯಾರೂ ಬಯಸದಿದ್ದರೂ, ಅದು ಹೋರಾಟದಲ್ಲಿದ್ದು ನೀತಿ ತಪ್ಪಿದವರಿಗೆ, ಸಮೀಪ ಬಂದಂತಾಗುವುದು ಅನಿವಾರ್ಯ. ಅನಿವಾರ್ಯವಾಗಿ ಹೋರಾಟಕ್ಕಿಳಿಸುವ ಈ ಅಳಿವು-ಉಳಿವುಗಳ ಸಮತ್ವವು ಸಮತೂಕದ್ದಾಗಿರಬೇಕಾದರೆ ದೇಶ ಕಾಲ–ಪರಿಸ್ಥಿತಿಗಳೂ ಅನುಕೂಲವಾಗಿರಬೇಕು. "ಸಮತ್ವಂ ಯೋಗ ಉಚ್ಚ್ಯತೇ" ಎಂಬ ಭಾವನೆಯೂ ಬೇಕು; ಭಾವನೆಗೆ ತಕ್ಕ ಸದಾಚಾರವೂ ಕಾರ್ಯಗತವಾಗಿರಬೇಕು. ಬೆಣ್ಣೆಯನ್ನು ಬೆಂಕಿಯ ಮೇಲಿಟ್ಟು, ಅದು ಕರಗಬಾರದೆಂದುಕೊಂಡರೆ ಹೇಗೆ ? ಬೆಣ್ಣೆಯ

ಕರಗುವಿಕೆ ಮತ್ತು ಬೆಂಕಿಯು ಕರಗಿಸುವಿಕೆ ಅದರದರ ಸಹಜ ಸ್ವಾಭಾವಿಕ ನೈಸರ್ಗಿಕ ಗುಣ—ಪರಸ್ಪರ ಸಮೀಪಿಸಿದರೆ ಮಾತ್ರ. ಅನಿವಾರ್ಯವಾಗಿ ಅವು ಸಮೀಪಿಸಿದಾಗ ಆ ಕರಗುವ ಬೆಣ್ಣೆಯನ್ನು ತುಪ್ಪವನ್ನಾಗಿಸಿಕೊಳ್ಳುವುದೇ ಅಳಿವನ್ನು ಬಿಟ್ಟು ಉಳಿವನ್ನು ಉಳಿಸಿಕೊಳ್ಳುವಿಕೆ.

ಪಂಚ ಮಹಾ "ಮಹಾ ಭೂತ"ಗಳನ್ನು ನಮ್ಮ ರಕ್ಷಣೆಯ ಪಂಚ "ವಿಭೂತಿ"ಗಳನ್ನಾಗಿ ಮಾರ್ಪಡಿಸಿಕೊಳ್ಳಬೇಕಾದರೆ, ನಮ್ಮಲ್ಲಿ ಸದ್ವಿಚಾರ – ಸದಾಚಾರಗಳಿರಬೇಕು. **(ಪೃಥ್ವಿ)** – ಬಂಜರದ ಮರು–ಭೂಮಿಯನ್ನು ಸತ್ಕರಿಸಿ, ಸಂತೈಸಿ, ಅದರಿಂದ ಕಾಳು–ಕಡಿ ಪಡೆಯುತ್ತಿದ್ದೇವೆ; ಗಿಡಗಂಟಿಯ ಕಾಡು ಭೂಮಿಯನ್ನು ಕಂಟಕರಹಿತವನ್ನಾಗಿ ಮಾಡಿ. ಅದರಿಂದ ಹಣ್ಣು – ಹಂಪಲ ತರುತ್ತಿದ್ದೇವೆ. **(ಅಪ್)**—ಎತ್ತರದ ಗುಡ್ಡದಿಂದ ಬೀಳುವ ಶರಾವತಿಯನ್ನು ತಡೆದು. ರಕ್ಷಿಸಿ, ಬೇರೆ ಸರಳ ಮಾರ್ಗದಿಂದ ಇಳಿಸಿಕೊಂಡು. ಅದರಿಂದ ವಿದ್ಯುತ್ ಬೆಳಕನ್ನು ಕಾಣುತ್ತಿದ್ದೇವೆ; ಬಿಡುವಿಲ್ಲದೆ ಸಾಗುತ್ತಿರುವ ಕೃಷ್ಣೆ–ಮಲಪ್ರಭೆಯರನ್ನು ನಿಲ್ಲಿಸಿ, ವಿಶ್ರಾಂತಿಗೊಳಿಸಿ, ಅವರಿಂದ ಆಹಾರಧಾನ್ಯವನ್ನು ಹೆಚ್ಚಿಗೆ ಪಡೆಯುತ್ತಿದ್ದೇವೆ. **(ತೇಜಃ)**–ಮುಟ್ಟಿದರೆ ಸುಟ್ಟು ಬೂದಿಮಾಡುವ ಕಿಚ್ಚಿಗೆ ಉರಿಯನ್ನು ಒಲೆಯಲ್ಲಿಟ್ಟು ಬೆಳೆಸಿ, ಅದರ ಸಹಾಯದಿಂದ ಪಂಚ ಪಕ್ವಾನ್ನ ಭಕ್ಷ್ಯವನ್ನು ಪಕ್ವಗೊಳಿಸುತ್ತಿದ್ದೇವೆ; ಧಗಿ–ಧಗಿಯಾಗಿ ಝಗ–ಝಗಿಸುವ ಬೆಂಕಿಯ ಕೆಂಡಗಳನ್ನು ಕಬ್ಬಿಣದ ದೊಡ್ಡ ದುಂಡು ಡಬ್ಬಿಯಲ್ಲಿಡಿಸಿ, ಕಾಯ್ದು, ಅದರಿಂದ ಉಗಿಯನ್ನಾಗಿಸಿ, ಎಂಜಿನನ್ನು ನಡೆಸುವಂತಾಗಿಸುತ್ತಿದ್ದೇವೆ. **(ವಾಯು)**–ಕೈಯ ಹಿಡಿತಕ್ಕೆ ಸಿಗದ ಮನಸ್ಸಿನಂತಿರುವ "ಸುದುಷ್ಕರ"ವಾದ [ಭಗವದ್ ಗೀತೋಕ್ತಿ] ಮತ್ತು ಸದಾ ಚಂಚಲ

ಗತಿಹೊಂದಿದ ಸದಾಗತಿ ಗಾಳಿಯನ್ನು, ಮತ್ತನ್ನ ಟಾಯರ್ ಟ್ಯೂಬಿನಲ್ಲಿರುವಂತೆ ಮಾಡಿ, ಅದರಿಂದ ವಾಹನಗಳು ಹಗುರಾಗಿ ಸುಗಮವಾಗಿ ಓಡಾಡುತ್ತಿರುವಂತಾಗಿಸಿದ್ದೇವೆ; ಸರ್ವತ್ರ ಓಡಾ ಡುವ ಗಾಳಿಯನ್ನು, ಇಲೆಕ್ಟ್ರಿಕ್ ಬಲ್ಬಿನಲ್ಲಿ ಜಾಗ್ರತವಾಗಿರಲಾರ ದಂತೆ ಕೀಳಿಕೊಂಡು, ಅದರಿಂದ ಪ್ರಕಾಶವನ್ನು ಮಿಂಚುವಂತೆ ಮಾಡಿದ್ದನ್ನು ಮನಗಾಣುತ್ತಿದ್ದೇವೆ. (ಆಕಾಶ)-ರೂಪವಿಲ್ಲದ ರಿಂದ ಕಣ್ಣಿಗೆ ಕಾಣದ ಆಕಾಶವನ್ನು ಮೇಲಕ್ಕೆತ್ತಿ. ಮೇಲಂತಸ್ತಿನ ಮನೆ-ಮಠ ಕಟ್ಟಿ. ವಾಸವಾಗಿರಲು ಜಾಗ ಮಾಡಿಕೊಂಡಿದ್ದೇವೆ; ತಾನಾಗಿಯೇ ಕೆಳಕ್ಕಿಳಿಯುವ ಆ ಆಕಾಶವನ್ನು ಕೋಲಾರದಂತಹ ಆಳವಾದ ಖಣಿಗಳಲ್ಲಿಯೂ ಇರುವಂತೆ ಮಾಡಿದ್ದನ್ನು ನೆನೆಸು ತ್ತಿದ್ದೇವೆ. ಅಂದರೆ, ನಾವು ಉಳಿಯಲು ಎಲ್ಲವೂ ನಮಗೆ ಅನು ಕೂಲವಾಗಿರಲೆಂದು ಬಯಸಿ, ಅದರಂತೆ ಪ್ರಯತ್ನಿಸುತ್ತಿದ್ದೇವೆ.

ಅವರವರು ಬಯಸಿ, ಪ್ರಯತ್ನಿಸುತ್ತಿರುವ ಉಳಿವನ್ನೇ ಇತರ ಮಾನವರ ಬಗ್ಗೆಯೂ ಅದು ಇರಲೆಂದು ಪ್ರಯತ್ನಿಸಿದರೆ, ಅಳಿವು ತನ್ನಷ್ಟಕ್ಕೆ ತಾನೇ ಅಳಿದು ಹೋಗುತ್ತದೆ; ಉಳಿವೇ ಉಳಿಯು ತ್ತದೆ. ಈ ಉಳಿವನ್ನು ಉಳಿಸಿಕೊಳ್ಳಲು ಅವರವರ ಸದ್ ವಿಚಾರ – ಸದಾಚಾರಗಳೇ ಕಾರಣ. " ನ ಕಶ್ಚಿತ್ ಕಸ್ಯಚಿನ್ ಮಿತ್ರಂ; ನ ಕಶ್ಚಿತ್ ಕಸ್ಯಚಿದ್ ರಿಪುಃ । ವ್ಯವಹಾರೇಣ ಮಿತ್ರಾಣಿ ಜಾಯಂತೇ ರಿಪವಸ್ತಥಾ॥ " ಅಂದರೆ, ಅವರವರ ವಿಚಾರ-ಆಚಾರ ಗಳಿಗೆ ತಕ್ಕಂತೆ ಅವರವರ ನೆರೆ – ಹೊರೆಯವರು ಅವರವರಿಗೆ ಮಿತ್ರರೊ ಅಥವಾ ಶತ್ರುಗಳೊ ಆಗುತ್ತಾರೆ: ಹುಟ್ಟಿನಿಂದಲೇ ಯಾರೂ ಹಾಗೆ – ಹಾಗೆಯೇ ಇರಲಾರರು. "ಭಾರತೀ ಚೀನೀ ಭಾಯೀ ಭಾಯೀ" ಘೋಷಣೆಯು ಪೋಷಣೆ ಹೊಂದದೆ, ಮಾವೋ ಲಾಯೀ "ಹಾಯ್ – ಹಾಯ್" ಆದದ್ದನ್ನು

ಅನುಭವಿಸಿದ್ದೇವೆ; ಹೀಗೆಯೇ ತದ್ವಿರುದ್ಧ ಅಥವಾ ತದನುಕೂಲವಾಗುವುದು – ಅವರವರ ಸದ್ ವಿಚಾರ – ಸದಾಚಾರಗಳಿಂದಲೇ.

ಸದ್‌ವಿಚಾರ – ಸದಾಚಾರಗಳನ್ನೊಂದಾಗಿಸಿ, ಸದ್‌ಭಕ್ತನಾಗಿರಬೇಕು. ಸದ್‌ಭಕ್ತನೆಂದರೆ ಗುರು-ಹಿರಿಯರ ಬಗ್ಗೆ, ಜನನೀ-ಜನ್ಮಭೂಮಿಯ ಬಗ್ಗೆ, 'ವಸುಧೈವ ಕುಟುಂಬಕಂ' ತತ್ತ್ವದ ಬಗ್ಗೆ ನಿಷ್ಠೆಯುಳ್ಳವನಾಗಿರಬೇಕು. ಏಕೆಂದರೆ, ಆ ಸದ್‌ಭಕ್ತನ "ಭಕ್ತಿಯೆಂಬ ಪೃಥ್ವಿಯ ಮೇಲೆ... ವಿಚಾರವೆಂಬ ಹೂವಾಗಿ, ಆಚಾರವೆಂಬ ಕಾಯಾಗಿ, ನಿಷ್ಪತ್ತಿಯೆಂಬ ಹಣ್ಣಾ"ಗುತ್ತದೆ. ಈ ಹಣ್ಣಿಗೆ ಕಾರಣವಾದದ್ದು ಸದ್‌ವಿಚಾರ-ಸದಾಚಾರಗಳು.

ಸದ್‌ವಿಚಾರದಿಂದೊಡಗೂಡಿದ ಸದಾಚಾರವನ್ನು ಐದು ವಿಭಾಗಗಳನ್ನಾಗಿ ಮಾಡಿದ್ದೇವೆ. ಅವುಗಳಿಗೆ ಪಂಚಾಚಾರಗಳೆನ್ನುತ್ತೇವೆ. (೧) ಲಿಂಗಾಚಾರ (೨) ಸಮಯಾಚಾರ (೩) ಶಿವಾಚಾರ (೪) ಗಣಾಚಾರ ಮತ್ತು (೫) ಭೃತ್ಯಾಚಾರ.

ಈ ಪಂಚಾಚಾರಗಳು ಧಾರ್ಮಿಕ; ಮಾರ್ಮಿಕ; ನೈತಿಕ; ಸಾಮಾಜಿಕ. ಅಂತೆಯೇ ಸರ್ವಜನಾದರಣೀಯ, ಇವನ್ನು ಆಚರಿಸಬೇಕು. ಇವುಗಳ ಕ್ರಮಾಚರಣೆಯ ಲಕ್ಷಣವನ್ನು ಎಂಟುನೂರು ವರ್ಷಕ್ಕೆ ಮುಂಚೆಯೇ ಚನ್ನಬಸವಣ್ಣನು ಕ್ರಮವಾಗಿ ಹೀಗೆ ತಿಳಿಸಿದ್ದಾನೆ:

"ಲಿಂಗವನಲ್ಲದೆ ಅನ್ಯವನರಿಯದಿಹುದೆ ಲಿಂಗಾಚಾರ.
ಸಜ್ಜನ ಕಾಯಕದಿಂದ ಗುರು–ಲಿಂಗ–ಜಂಗಮಕ್ಕೆ
ಮಾಡಿ ಸತ್ಯವಾಗಿಹುದೆ ಸಮಯಾಚಾರ.
ಶಿವಭಕ್ತರಲ್ಲಿ ಜಾತಿ–ವರ್ಣಾಶ್ರಮವನರಸವೆ
ಅವರೊಕ್ಕುದ ಕೊಂಬುದೆ ಶಿವಾಚಾರ.
ಶಿವಾಚಾರದ ನಿಂದೆಯನ್ನು ಕೇಳದಿಹುದೆ ಗಣಾಚಾರ.

ಶಿವಶರಣರೆ ಹಿರಿಯರಾಗಿ ತಾನೆ ಕಿರಿಯನಾಗಿ
ಭಯ-ಭಕ್ತಿಯಿಂದಾಚರಿಸುವುದೆ ಭೃತ್ಯಾಚಾರ."

— ಇವು ಪ್ರತಿಯೊಬ್ಬರಿಗೂ ಗ್ರಾಹ್ಯವಾದ ಪಂಚಾಚಾರಗಳು. ಈ ಪಂಚಾಚಾರಗಳಿಂದ ಪಂಚ ಪುರುಷಾರ್ಥಗಳು ಸಿದ್ಧಿಸುತ್ತವೆ. ಇವು ಶಿಷ್ಟಾಚಾರದ ಪಂಚಾಚಾರಗಳು. ಇವುಗಳನ್ನು ಆಚರಿಸ ಬೇಕು. ಇವುಗಳ ಆಚರಣೆಗೆ ಪ್ರಧಾನ ಕಾರಣ ಶಿಷ್ಟಾಚಾರ.

ಶಿಷ್ಟಾಚಾರಕ್ಕೆ ಹೊರತಾದ ದುಷ್ಟಾಚಾರದ ಐದು ಆಚಾರ ಗಳನ್ನು ಸಹ ನಾವು ಕೇವಲ ತಿಳಿದಿರಬೇಕು; ಆಚರಿಸಬಾರದು. ಅತ್ಯಾಚಾರ-ಅನಾಚಾರ-ದುರಾಚಾರ- ಭ್ರಷ್ಟಾಚಾರ-ವ್ಯಭಿಚಾರ ಗಳೆಂದು ಆ ನಿಷಿದ್ಧ ಆಚಾರಗಳ ಐದು ಹೆಸರು. ಈ ಐದರಲ್ಲಿಯೇ ಎಲ್ಲ ಕೆಟ್ಟ ಆಚಾರಗಳ ಸೇರ್ಪಡೆ. ದುರ್ಜನರ, ದುಷ್ಟತನದ, ದುಃಖದಾಯಕವಾದ ದುಷ್ಟಾಚಾರ-ಪಂಚಕದಿಂದ ಪಂಚ ಮಹಾ ಪಾತಕ ನಾಯಕ ನರಕ ತಪ್ಪುವುದಿಲ್ಲೆಂದು ಬಲ್ಲ ಹಿರಿಯರು ಹೇಳುತ್ತಾರೆ.

ಪಥ್ಯದಿಂದಲೇ ಇರಬೇಕೆಂದು ಹೇಳುವ ವೈದ್ಯನು, ರೋಗಿಗೆ ಅಪಥ್ಯದ ಪರಿಜ್ಞಾನವನ್ನೂ ಮಾಡಿಕೊಡುತ್ತಾನೆ. ಹೆಣ್ಣಿನ ಬಗ್ಗೆ ರಾಮನಂತೆ ಆಚರಿಸಬೇಕು; ರಾವಣನಂತೆ ಕೂಡದೆಂದು ಇತಿಹಾ ಸಕಾರನು ಹೇಳುತ್ತಾನೆ. "ಸತ್ಯವ ನುಡಿವುದೇ ದೇವಲೋಕ; ಮಿಥ್ಯವ ನುಡಿವುದೇ ಮರ್ತ್ಯಲೋಕ" ಎಂದು ನೀತಿಕಾರ (ಬಸವಣ್ಣ)ನ ವಿಧಿ-ವಿಧಾನದ ನೀತಿಯ ವಚನ. ಇಲ್ಲಿಯ ಪಥ್ಯ-ರಾಮ-ಸತ್ಯಗಳು ಮಾತ್ರ ಗ್ರಾಹ್ಯವಾಗಿವೆಯಾದರೂ, ತ್ಯಾಜ್ಯ ಗಳಾದ ಅಪಥ್ಯ-ರಾವಣ-ಮಿಥ್ಯದ ಬಗ್ಗೆಯೂ ನಾವು ತಿಳಿದಿದ್ದರೆ ಇನ್ನೂ ಹೆಚ್ಚಿನ ಲಾಭವಾಗುತ್ತದೆ; ತ್ಯಾಜ್ಯವಾದವುಗಳನ್ನು ಅವುಗಳ ಕೆಡಕಿನ ಜ್ಞಾನದಿಂದ ನಿಜಕ್ಕೂ ತ್ಯಜಿಸುತ್ತೇವೆ. ಕೊಳ್ಳಿ

ಯಲ್ಲಿದ ಬೆಂಕೀ ಕೆಂಡವನ್ನು ನೇರವಾಗಿ ಅಂಗೈಯಲ್ಲಿಟ್ಟುಕೊಂಡರೆ. ಕೈ ಸುಟ್ಟು ಬಾಧೆಯಾಗುತ್ತದೆಂಬ ಕೆಡಕಿನ ಜ್ಞಾನವಿರುವುದರಿಂದಲೇ ಬೆಂಕಿಯ ಕೆಂಡದ ನೇರಸ್ಪರ್ಶವನ್ನು ತ್ಯಜಿಸುತ್ತಿದ್ದೇವೆ. ಜೀವಿಸಲು ತ್ಯಜಿಸಲೇಬೇಕು. ಆದ್ದರಿಂದ ತ್ಯಾಜ್ಯವಾದ ಆ ದುಷ್ಟಾಚಾರಗಳಿಂದ ದೂರವಿರಲು ಅವುಗಳ ಹೆಸರು-ಲಕ್ಷಣಗಳನ್ನು ಸ್ವಲ್ಪ ಮಟ್ಟಿಗಾದರೂ ತಿಳಿದಿರಬೇಕು, ಹಾವಿನ ವಿಷದ ಕೆಡಕು ಕೇಳಿದ್ದರೆ, ಆ ಹಾವಿನಿಂದ ದೂರ ಇರುತ್ತೇವೆ. ಹಾವಿನಂತಹ ಆ ಐದು ದುಷ್ಟಾಚಾರಗಳಿವು: ಅತಿಯಾದ ಆಚಾರ = ಅತ್ಯಾಚಾರ; ಆಚಾರ ಇಲ್ಲದಿರುವಿಕೆ = ಅನಾಚಾರ. ಅಥವಾ ಆಚಾರಕ್ಕೆ ವಿರುದ್ಧವಾದದ್ದು = ಅನಾಚಾರ ("ಧರ್ಮ – ವಿರುದ್ಧೋಽಧರ್ಮಃ" ಎಂಬಂತೆ ನಞ್-ತತ್ಪುರುಷ-ಸಮಾಸ); ದುಃಖದಾಯಕವಾದ ಆಚಾರ = ದುರಾಚಾರ; ಪಥದಿಂದ ಭ್ರಷ್ಟವಾದ ಆಚಾರ = ಭ್ರಷ್ಟಾಚಾರ; ವಿಶೇಷತಃ ಅಭಿ (= ಸಮಗ್ರವಾಗಿ) ಚರಿಸುವಿಕೆಯೇ = ವ್ಯಭಿಚಾರ. ಚರ ಧಾತುವಿನಿಂದಾದ ಈ ಐದೂ ದುಷ್ಟಾಚಾರಗಳಿಗೆ ಒಳ್ಳೆಯ ಶಬ್ದವಿರದ ಕರ್ಮವೇ ಪ್ರಾಧಾನ್ಯ. ಇಲ್ಲಿ ನಾಲ್ಕನೆಯದರ ಹೊರತಾಗಿ ಎಲ್ಲದಕ್ಕೂ ಎರಡೆರಡು ಉಪಸರ್ಗ; ಸಂಧಿಯ ಸಂಧಾನವು ಮತ್ತು ಸಮಾಸವು ಪ್ರತಿಯೊಂದಕ್ಕೂ ಬೇರೆ – ಬೇರೆಯೇ. ಆದುದರಿಂದ ದುಷ್ಟ-ಪ್ರವೃತ್ತಿಯೂ ಈ ದುಷ್ಟಾಚಾರಗಳನ್ನು ಆಚರಿಸಬಾರದು.

ಲಿಂಗಾಚಾರಾದಿ ಪಂಚಾಚಾರಗಳು ಒಳ್ಳೆಯವು. ಇವುಗಳಲ್ಲಿ ಯಾವುದಕ್ಕೂ ಒಂದು ಉಪಸರ್ಗವಿಲ್ಲ. ಇವೆಲ್ಲವಕ್ಕೂ ಒಂದೇ ರೀತಿಯ ಸಂಬಂಧದ ಷಷ್ಠೀ ತತ್ಪುರುಷ ಸಮಾಸ: ಒಂದೇ ರೀತಿಯ ಸವರ್ಣ-ದೀರ್ಘದ ಸಂಧಿ. ಲಿಂಗದ ಆಚಾರ = ಲಿಂಗಾ-ಚಾರ. ಹೀಗೆಯೇ ಸಮಯದ, ಶಿವನ, ಗಣದ ಹಾಗೂ ಭೃತ್ಯನ

ಆಚಾರ. ಈ ಪಂಚಾಽಽಚಾರಗಳೇ ಆಚರಣೀಯ ಪಂಚಾಚಾರ ಗಳು. ಈ ಶಿಷ್ಟ ಸಂಪ್ರದಾಯದ, ಶಿಷ್ಟ ಪ್ರವೃತ್ತಿಯ, ಶಿಷ್ಟಾಚಾರದ ಪಂಚಾಚಾರಗಳನ್ನು ಆಚರಿಸುತ್ತಿರಬೇಕು. ಈ ಲಿಂಗಾಚಾರಾದಿ ಪಂಚಾಚಾರಗಳೇ ವೀರಶೈವ ಧರ್ಮಕ್ಕೆ ಪಂಚ ಪ್ರಾಣ ಗಳಂತಾಗಿರುತ್ತವೆ.

"ಆಚಾರ ಬಲು ಕಷ್ಟ;
ಆಚಾರ ಬೇಡೆಂಬ
ಆಚಾರ ನಡೆಸದಿಹ ವೀರಶೈವ।...
ಅರೆ ವೀರಶೈವ...।

ಆಚರಿಪ ಲಿಂಗಾದಿ;
ಆಚಾರ ಪಂಚಕದ
ಆಚಾರ ನಡೆಸುತಿಹ ವೀರಶೈವ।...
ಪರ ವೀರಶೈವ..॥"

ಕಾರಣ, ಪೂರ್ಣ ವೀರಶೈವನಾಗಲು ಪಂಚಾಚಾರಗಳನ್ನು ಸಾಧ್ಯವಾದ ಮಟ್ಟಿಗೆ ತ್ರಿಕರಣಪೂರ್ವಕವಾಗಿ ಆಚರಿಸಬೇಕು; ಏಕೆಂದರೆ ಆಚರಣೆಯ ಕ್ರಿಯೆಯಿಲ್ಲದ ಜ್ಞಾನ ವ್ಯರ್ಥವಾಗುತ್ತದೆ.

"ಅಂತರಂಗದಲ್ಲಿ ಅರಿವಾದಡೇನಯ್ಯ
ಬಹಿರಂಗದಲ್ಲಿ ಕ್ರಿಯೆಯಿಲ್ಲದನ್ನಕ್ಕ?
ದೇಹವಿಲ್ಲದಿರ್ದಡೆ ಪ್ರಾಣಕ್ಕಾಶ್ರಯವುಂಟೆ?
ಕನ್ನಡಿಯಿಲ್ಲದಿರ್ದಡೆ ತನ್ನ ಮುಖವ ಕಾಣಬಹುದೆ?"

(ಚನ್ನ ಬಸವಣ್ಣ)

ಅಂದರೆ, ಜ್ಞಾನ-ಕರ್ಮ ಸಮುಚ್ಚಯದಿಂದ ಜೀವನ ಸಾಗಿಸಬೇಕಲ್ಲದೆ, ಕೇವಲ"ಜ್ಞಾನಾದ್ ಏವ ತು ಕೈವಲ್ಯಂ" (ಉಪನಿಷತ್)

ಎಂದು ಬರೀ ಬಾಯಿಂದ ಬಡಬಡಿಸುತ್ತಿರುವ ಜ್ಞಾನದಿಂದ ಕೈವಲ್ಯವು ಕೇವಲ ಕೈವಲ್ಯವಾಗಿಯೇ ಇರುತ್ತದೆ. ಕೈವಲ್ಯಾನುಭೂತಿಯೆಂಬ ಕೆಂಡವನ್ನು ಪಡೆಯಲು ದೇಹದ ಆಚಾರವೆಂಬ ಸಂದಂಶವು ಬೇಕೇ ಬೇಕು. "ಶರೀರಮ್ ಆದ್ಯಂ ಖಲು ಧರ್ಮ-ಸಾಧನಂ" (ಕಾಳಿದಾಸ) ಧರ್ಮಾಚರಣೆಗೆ ಸಾಧನವಾದ ಶರೀರವು ಸರಿಯಾಗಿ ಇರಬೇಕಾದರೆ ಸರಿಯಾದ ಆಚಾರ ಇರಬೇಕು. ಸರಿಯಾದ ಆಚಾರ ಇದ್ದವನೇ ವೀರಶೈವನು.

"ವೀರಶೈವನಾದಡೆ, ಪರ-ಸ್ತ್ರೀಯರ ಮುಟ್ಟದಿರಬೇಕು.
ಮಿಂತೂ ಪರ-ಹಿಂಸೆಯನೆಸಗದಿರಬೇಕು.
ಒಡಲಳಿದಡೆಯೂ ಹಿಡಿದಾಚಾರವ ಬಿಡದಿರಬೇಕು."

(ಚನ್ನಬಸವಣ್ಣ)

ಹಿಡಿದ ಲಿಂಗಾಚಾರಾದಿ ಪಂಚಾಚಾರಗಳನ್ನು ಕೊನೆಯ ವರೆಗೂ ಆಚರಿಸುತ್ತಿದ್ದರೆ ಅವನು ನಿಜವಾದ ಭಕ್ತ. ನಿಜವಾದ ಭಕ್ತನ ಲಕ್ಷಣ ಹೀಗೆ:

"ಭಕ್ತನು ಶಾಂತನಾಗಿರಬೇಕು;
ತನ್ನ ಕುರಿತು ಬಂದ ತಾಪಿನಲ್ಲಿ
ಸತ್ಯವಾಗಿ ನುಡಿಯಬೇಕು;
ಗುರುಲಿಂಗ ಜಂಗಮದೆಡೆಯಲ್ಲಿ
ನಿಂದೆಯಿಲ್ಲದಿರಬೇಕು;
ಭೂತ ಹಿತವಹ ವಚನವ ನುಡಿಯಬೇಕು;
ಸಕಲ ಪ್ರಾಣಿಗಳ ತನ್ನಂತೆ ಕಾಣಬೇಕು;
ತನು-ಮನ-ಧನವ-ಗುರುಲಿಂಗಜಂಗಮಕ್ಕೆ ಸವೆಸಬೇಕು;
ಅಪಾತ್ರ ದಾನವ ಮಾಡಲಾಗದು;

ಸಕಲೇಂದ್ರಿಯಂಗಳೆ ತನ್ನ ವಶವ ಮಾಡಬೇಕು " (ಅವನೇ) ಸಕಲ ಇಂದ್ರಿಯಗಳನು ಅಂದರೆ ಐದು ಕರ್ಮೇಂದ್ರಿಯ + ಜ್ಞಾನೇಂದ್ರಿಯ ಐದು + ಮನವೊಂದು—ಹೀಗೆ ಹನ್ನೊಂದು ಇಂದ್ರಿಯಂಗಳನ್ನು ತನ್ನ ವಶ ಮಾಡಿಕೊಳ್ಳಬೇಕು; ಕಾಯಕನಿರತ ಶರಣನಾಗಬೇಕು. ಅರ್ಥಾತ್ ಬಹಿರಂಗ ಅಂತರಂಗಗಳ ಶುದ್ಧೀಕರಣ ಮಾಡಿಕೊಳ್ಳಬೇಕು. ಆದುದರಿಂದ

"ಕಳಬೇಡ;
ಕೊಲಬೇಡ;
ಹುಸಿಯ ನುಡಿಯಲು ಬೇಡ;
ಮುನಿಯ ಬೇಡ ;
ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸ ಬೇಡ;
ಇದಿರ ಹಳಿಯಲು ಬೇಡ." (ಬಸವಣ್ಣ)

ಯಾಕೆಂದರೆ,

"ಹೊಯ್ದರೆ ಹೊಯ್ಗಳು ಕೈಯಮೇಲೆ.
ಬಯ್ದರೆ ಬೈಯ್ಗಳು ಕೈಯಮೇಲೆ.
ಹಿಂದಣ ಜನನವೇನಾದರಾಗಲಿ
ಇಂದಿನ ಭೋಗವು ಕೈಯ ಮೇಲೆ" (ಅವನೇ)

"ತ್ರಿಭಿರ್ವರ್ಷೈಃ, ತ್ರಿಭಿರ್ಮಾಸೈಃ,
ತ್ರಿಭಿಃ ಪಕ್ಷೈ, ತ್ರಿಭಿರ್ದಿನೈಃ।
ಅತ್ಯುತ್ಕಟೈಃ ಪಾಪ-ಪುಣ್ಯೈಃ
ಇಹೈವ ಫಲಮ್ ಅಶ್ನುತೇ ||" (ಸುಭಾಷಿತ)

ಎಂದುದರಿಂದ,

"ಹೊಯ್ದವರೆನ್ನ ಹೊರೆದವರೆಂಬೆನು ;
ಬೈದವರೆನ್ನ ಬಂಧುಗಳೆಂಬೆನು;
ನಿಂದಿಸಿದವರೆನ್ನ ತಂದೆ–ತಾಯಿಗಳೆಂಬೆನು ;
ಆಳಿಗೊಂಡವರೆನ್ನ ಆಳ್ದರೆಂಬೆನು ;
ಜರಿದವರೆನ್ನ ಜನ್ಮ ಬಂಧುಗಳೆಂಬೆನು " (ಬಸವಣ್ಣ)
ಎಂದುಕೊಂಡು,

"ನ್ಯಾಯ-ನಿಷ್ಠುರಿ; ದಾಕ್ಷಿಣ್ಯಪರನಲ್ಲ; ಲೋಕ-ವಿರೋಧಿ-ಶರಣನಾರಿಗಂಜುವನಲ್ಲ" (ಅಪಸೇ) ಎಂದು ಧೈರ್ಯದಿಂದ ಲಿಂಗಾಚಾರಾದಿ ಪಂಚಾಚಾರಗಳನ್ನು ಆಚರಿಸುವ ವೀರಶೈವನಿಗೆ, ವಿಚಾರಿಸುವ ಮಾತಿದು:

"ಕಾಮವೇಕೋ ಲಿಂಗ–ಪ್ರೇಮಿಯೆನಿಸುವಂಗೆ ?
ಕ್ರೋಧವೇಕೋ ಶರಣ–ವೇದ್ಯನೆನಿಸುವಂಗೆ ?
ಲೋಭವೇಕೋ ಭಕ್ತಿ–ಲಾಭವ ಬಯಸುವಂಗೆ ?
ಮೋಹವೇಕೋ ಪ್ರಸಾದ–ವೇದ್ಯನೆನಿಸುವಂಗೆ ?
ಮದ-ಮತ್ಸರವುಳ್ಳವಂಗೆ ಹೃದಯ ಶುದ್ಧವಿಲ್ಲಯ್ಯಾ!
ಹದುಳಿಗರಾದಲ್ಲಿ ಇಪ್ಪ ಕೂಡಲ ಸಂಗಮದೇವ"
(ಅಪಸೇ)

ಹದುಳವೆಂದರೆ ಪದುಳ, ಕ್ಷೇಮ, ಶುಭ, ಶಾಂತಿ, ಅಥವಾ ಸಮಾಧಾನ. ಹದುಳವುಳ್ಳವರು ಹದುಳಿಗರು. ಹದುಳಿಗರಾದವರೆಂದರೆ ಅಂತರಂಗ-ಬಹಿರಂಗ ಶುದ್ಧವಾದವರು. ಈ ಶುದ್ಧವಾಗುವಿಕೆಯೇ ಕೂಡಲ ಸಂಗಮದೇವನನ್ನು ಒಲಿಸುವ ಪರಿ.

ಈ ಒಲಿಸುವ ಪರಿಯನ್ನು ಸಾಧಿಸಬೇಕೆನ್ನುವವರು ಕಾಮ-ಕ್ರೋಧ-ಲೋಭ-ಮೋಹ-ಮದ-ಮತ್ಸರಗಳೆಂಬ ಆರೂ ಗುಣ

ಗಳನ್ನು ಹದವರಿತು ಬಳಸುವುದನ್ನು ಕಲಿತಿರಬೇಕು; ಜಿತೇಂದ್ರಿಯರಾಗಿರಬೇಕು. ಅಂದರೆ, ಈ ಕಾಮಾದಿ ಗುಣಗಳನ್ನು ಸಂಪೂರ್ಣ ಬಿಟ್ಟೇ ಬಿಡಬೇಕೆಂದು ಅರ್ಥವಲ್ಲ. ಖಾರ – ಖಾರವಾಗಿರುವ, ಖಾರದ ಮೆಣಸು-ಮೆಣಸಿನಕಾಯಿ, ಅಲ್ಲ-ಶುಂಠಿಗಳನ್ನು ಕೇವಲ ಅವನ್ನೇ ಹೊಟ್ಟೆ ತುಂಬ ತಿನ್ನಲೂ ಬಾರದು; ಮುಟ್ಟದೆ ಬಿಡಲೂ ಬಾರದು. ಅಲ್ಲ-ಶುಂಠಿಯ ಕಷಾಯವಿಲ್ಲದೆ ನೆಗಡಿ ಜ್ವರದ ಶಮನ ವಿಲಂಬ. ಹಾಗೆ ಈ ಆರೂ ಕಾಮಾದಿಗಳನ್ನು ಒಳ್ಳೆಯ ರೀತಿಯಲ್ಲಿ, ಇತರರಿಗೆ ಕೇಡಾಗದಂತೆ, ಬಳಸುವುದನ್ನು 'ಅರಿತು ಮೆರೆಯುತ್ತಿರಬೇಕು.

ಕಟು-ಕಷಾಯಾದಿ ಷಡ್ರಸದ ಆಹಾರಧಾನ್ಯದ ಭಕ್ಷ್ಯ-ಭೋಜ್ಯಗಳ ಸೇವನೆಯಿಲ್ಲದೆ, ಪ್ರಾಣಾಪಾನಾದಿ ಪಂಚಪ್ರಾಣದ ಶರೀರ ಪುಷ್ಟಿಯಾಗುವುದಿಲ್ಲ. ಭಕ್ತಾದಿ ಷಟ್‌ಸ್ಥಲದ ಏಕತ್ವ ಜ್ಞಾನ-ಕ್ರಿಯಾ ಸಮುಚ್ಚಯದ ಶಿವಾನುಭವ ಜ್ಞಾನದ ಬಳಕೆಯಿಲ್ಲದೆ, ಲಿಂಗಾಚಾರಾದಿ ಪಂಚಾಚಾರವೇ ಪ್ರಾಣವಾಗುಳ್ಳ ವೀರಶೈವ ಧರ್ಮದ ಪುಷ್ಟಿಯಾಗುವುದಿಲ್ಲ. ಈ ಕಾಮ-ಕ್ರೋಧ-ಲೋಭಾದಿಗಳೆಂಬ ಅರರ ಬಳಗವಿಲ್ಲದೆ. ಪೃಥ್ವಿಯು ಅಂಶವೆ ಮೊದಲಾದ ಪಾಂಚ-ಭೌತಿಕ ಶರೀರದ, ಇಂದ್ರಿಯಗಳ, ಮನಸ್ಸಿನ, ಮಜ್ಜ-ಮಾಂಸಾದಿ ಧಾತುಗಳ ಸರ್ವಾಂಗ ಪುಷ್ಟಿಯಾಗುವುದಿಲ್ಲ. ಕಾರಣ, ಈ ಕಾಮಾದಿ ಷಡ್‌ಗುಣಗಳನ್ನು ಹತೋಟಿಯಲ್ಲಿರುವಂತೆ ಮಾಡುವುದೇ ಶಿವಪೂಜೆಯೆಂಬ ಶಿವಯೋಗ ಸಾಧನೆಯ ಹಿನ್ನೆಲೆ. ರಭಸದಿಂದ ವ್ಯರ್ಥವಾಗಿ ಹರಿಯುವ ಹೊಳೆ-ಹಳ್ಳಗಳನ್ನು ಅಣೆ ಕಟ್ಟಿನಿಂದ ನಿಯಂತ್ರಿಸಿ, ಕಾಲುವೆ ಮೂಲಕವಾಗಿ, ಹರಿಬಿಟ್ಟು ಅವುಗಳಿಂದ ಹೆಚ್ಚು ಫಲ ಪಡೆಯಬೇಕು. ಈ ಕಾಮಾದಿ ಹೊಳೆ-ಹಳ್ಳಗಳನ್ನು ಹರಿಯದಂತೆ ತಡೆಗಟ್ಟುವುದೆಂದರೆ

ನಿರುಪಾಯವಾದ ಅಪಾಯದ ಮಾತು. ತಡೆಗಟ್ಟಲ್ಪಟ್ಟ ಆ ಹೊಳೆ-ಹಳ್ಳಗಳು ಒಟ್ಟಾಗಿ ಮುನ್ನುಗ್ಗಿ ಏಕಾಏಕ ಹೊಂದಿ. ಆ ತಡೆದ ಒಡ್ಡನ್ನೇ ಕಿತ್ತುಕೊಂಡು ಹೋಗುತ್ತವೆ. ಹಾಗೆ ಹೋಗುವಾಗ ಅವರ ಮಾರ್ಗ-ಮಧ್ಯದಲ್ಲಿದ್ದವುಗಳೆಲ್ಲ ಹೇಳ ಹೆಸರಿಲ್ಲದಂತಾಗುತ್ತವೆ. ಕಾರಣ ಆ ರಭಸದ ವೇಗವನ್ನು ತಡೆಯಲು ದೇಶ-ಕಾಲ-ಪರಿಸ್ಥಿತಿಯನ್ನನುಸರಿಸಿ, ಹದವರಿತು ಸಂಗ್ರಹವನ್ನು ಬಳಸುತ್ತಿರುವುದು ಅನಿವಾರ್ಯ. ಸದ್ಭಾವನೆಯಿಂದ ಕಾಲ್ಪದ ಕಾಮಾದಿ ಗುಣಗಳು ದುರ್ಗುಣಗಳಾಗಿ ಪರಿಣಮಿಸದಂತೆ ಮಾಡಿ, ಸದ್ಗುಣಗಳಾಗಿ ಪರಿಣಮಿಸುವಂತೆ ಮಾಡಲು ಬರುತ್ತದೆ. ಮಾಡಿಕೊಳ್ಳಬೇಕು.

ಈ ಆರೂ ಕಾಮಾದಿ ಪ್ರಾಣಿಗಳನ್ನು ಸಾಕುಪ್ರಾಣಿಗಳನ್ನಾಗಿಸಿ, ಸಾಕಿ ಸಲಹುತ್ತಿರಬೇಕು. ಹಿತ-ಮಿತವಾಗಿ ಸಾಕಿ ಸಲಹಿದ ಕಾರಣದಿಂದಾಗಿ, ಸಾಕಿದವನಿಗೆ ಒಂದು ವಿಧದ ಆತ್ಮೀಯ ಆನಂದ; ಆ ಪ್ರಾಣಿಗೂ ಒಂದು ರೀತಿಯ ಕೃತಜ್ಞತೆ ಭಾವ. ಆದರೆ, ಸಾಕಿದ ಆ ಪ್ರಾಣಿಯ ಬಗ್ಗೆ ಎಷ್ಟು ಸಲುಗೆ ಅಥವಾ ಸಿಟ್ಟು ಬೇಕೋ? ಅಷ್ಟೇ ಹಿತಮಿತವಾದ ಸಲುಗೆ, ಸಿಟ್ಟು ಈ ಕಾಮಾದಿ ಪ್ರಾಣಿಯ ಬಗ್ಗೆಯೂ ಇರಬೇಕು. ನಿಯಂತ್ರಣವಿಲ್ಲದಿದ್ದರೆ, 'ಗುಡಿಸಲಿಗೆ ಬಂದ ಒಂಟೆ'ಯ ಕಥೆಯಂತಾಗುವುದು. ಆ-ಆ ಪ್ರಾಣಿಗಳನ್ನು ಆ-ಆ ಸ್ಥಾನದಲ್ಲಿರಿಸಿ ಸಲುಗೆಯಿಂದಿರಬೇಕು. ಕ್ರೋಧ-ಶಾರ್ದೂಲವು ಕಬ್ಬಿಣದ ಗಟ್ಟಿ ಪಂಜರದಲ್ಲಿರಲಿ; ಮತ್ಸರ-ಮತ್ಸ್ಯವು ನೀರಿನ ದೋಣಿಯಲ್ಲಿರಲಿ. ಪ್ರಾಸಂಗಿಕವಾಗಿ ಇಲ್ಲಿ ಹೇಳಬೇಕಾಗಿರುವ ಮುಖ್ಯ ತಾತ್ಪರ್ಯ ಇಷ್ಟೇ: ಆ-ಆ ಕಾಮಾದಿ ಪ್ರಾಣಿಗಳನ್ನು ಸೌಮ್ಯಸ್ವಭಾವದವುಗಳನ್ನಾಗಿಸಿಕೊಳ್ಳಬೇಕಲ್ಲದೆ, ಅವನ್ನು ಕೊಲ್ಲಲು ಅಥವಾ ಬಲಾತ್ಕಾರದಿಂದ

ಬಂಧಿಸಿಡಲು ಬಿಂಬಿಸಬಾರದು. ತ್ರಿವಿಧದಾಸೋಹದಿಂದ ಲಿಂಗ ಭೋಗೋಪಭೋಗಿಯಾಗಿರುವುದೇ ಈ ಸತ್ಯವಾದ ಜಗತ್ತಿನ ಬಗೆಗಿರುವ ವೀರಶೈವ ಸಿದ್ಧಾಂತದ ಅನುಭವದ ಮಾತು. "ತೇನ ತ್ಯಕ್ತೇನ ಭುಂಜೀಥಾಃ ಮಾ ಗೃಧಃ ಕಸ್ಯಸ್ವಿದ್ ಧನಮ್" (ಉಪನಿಷತ್).

ಪೂರ್ಣ ಸ್ವರೂಪನ ಓಂಕಾರಾದಿ ಷಡಕ್ಷರವಿಲ್ಲದ ಷಡಕ್ಷರಿಯಿಲ್ಲ. ಆ ಷಡಕ್ಷರಿಯಲ್ಲಿ 'ಜಾಯತೇ' ಇತ್ಯಾದಿ ಷಡ್ಭಾವ-ವಿಕಾರವಿಲ್ಲದ ಜಗತ್ತಿಲ್ಲ. ಆ ಜಗತ್ತಿನಲ್ಲಿ ಉಪಕ್ರಮಾದಿ ಷಡ್ಲಿಂಗವಿಲ್ಲದ ಶಾಸ್ತ್ರವಿಲ್ಲ. ಆ ಶಾಸ್ತ್ರದಲ್ಲಿ ಭಕ್ತಾದಿ ಷಟ್-ಸ್ಥಲವಿಲ್ಲದ ವೀರಶೈವ ಧರ್ಮವಿಲ್ಲ. ಆ ಧರ್ಮದಲ್ಲಿ ಆಚಾರ ಲಿಂಗಾದಿ ಮಹಾಲಿಂಗಾಂತದ ಷಡ್ಲಿಂಗವಿಲ್ಲದ ವೀರಶೈವನಿಲ್ಲ. ಆ ವೀರಶೈವನಲ್ಲಿ ಮಧುರಾದಿ ಷಡ್ರಸವಿಲ್ಲದ ಪ್ರಸಾದವಿಲ್ಲ. ಹಾಗೆ ಈ ಕಾಮ – ಕ್ರೋಧಾದಿಗಳಿಲ್ಲದ ಜೀವಿಯೋ ಜೀವಿಸಲಾರ. ಜೀವಿಸುವ ಆ – ಆ ಜೀವಿಯು ಅಂಗಾಂಗಗಳು ಆ–ಆ ಸಮಯಕ್ಕನುಸರಿಸಿ, ಅವರ ವಶವರ್ತಿಯಾಗಿ, ಕಾರ್ಯನಿರ್ವಹಿಸಲು. ಸಮರ್ಥವಾಗಿದ್ದರೆ ಮಾತ್ರ, ಆ ಜೀವಿಗೆ ಕ್ಷೇಮ ಹೇಗೋ ಹಾಗೆ, ಈ ಕಾಮಾದಿಗಳೂ ಆ ಜೀವಿಗೆ ಸ್ವಾಧೀನವಾಗಿ ಇದ್ದರೆ, ಆ ಜೀವಿಗೆ ಆ ಕಾಮಾದಿಗಳಿಂದ ಯಾವ ಅಡ್ಡಿಯೂ ಇಲ್ಲ. ಇದು ಸಾಧನೆ ಬಲದಿಂದ ಸಾಧ್ಯವಾಗುತ್ತದೆ. ಇದಕ್ಕೂ ಹೆಚ್ಚಿನದಾದ, ಅತಿ ಚಂಚಲವಾದ, ಹಿಡಿದಿಡಬೇಕೆಂದರೆ "ವಾಯೋರಿವ ಸು-ದುಷ್ಕರ"ವಾದ ಮನಸ್ಸು "ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ"(ಭಗವದ್ಗೀತಾ) ಎಂದಿರುವಾಗ, ಈ ಕಾಮಾದಿಗಳನ್ನು ಹತೋಟಿಯಲ್ಲಿಡುವುದು ಅಷ್ಟೇನೂ ಕಷ್ಟದ ಕೆಲಸವಲ್ಲ. ವೈರಾಗ್ಯದಿಂದಾಗದಿದ್ದರೂ ಅಭ್ಯಾಸದ ಬಲದಿಂದ ಸರಳವಾಗುತ್ತದೆ.

ಬೆಳಕು-ಕತ್ತಲೆ, ಸದ್ಗುಣ-ದುರ್ಗುಣ, ಕೂಡಿಸುವಿಕೆ-ಕಳೆಯುವಿಕೆ, ಗುಣಿಸುವಿಕೆ-ಭಾಗವಹಿಸುವಿಕೆ-ಹೀಗೆ ಒಳ್ಳೆಯದು-ಕೆಟ್ಟದ್ದು ಪರಸ್ಪರ ಸಾಪೇಕ್ಷವಾಗಿ ವೇದ್ಯವಾಗುತ್ತವೆ; ತಿಳುವಳಿಕೆಗೆ ಬರುತ್ತವೆ "ಸಚ್ಚಿದಾನಂದ-ರೂಪಾಯ ಸದಸದ್ವ್ಯಕ್ತಿಹೇತವೇ । ನಮಃ ಶಿವಾಯ ಸಾಂಬಾಯ ಸಗಣಾಯ ಸ್ವಯಂಭವೇ ॥" ಎಂದಿರುವ ಸಿದ್ಧಾಂತ ಶಿಖಾಮಣಿಯ ಈ ಮಂಗಲ ಶ್ಲೋಕದಲ್ಲಿ ಹೇಳಿದಂತೆ, ಶಿವನು ಸ್ವಯಂ ಜನಿಸಿದವನೂ ಸತ್-ಚಿತ್-ಆನಂದ ಸ್ವರೂಪನೂ ಗಣಸಹಿತನೂ ಅಂಬಾಯುಕ್ತನೂ ಆಗಿ ಸದ್ವಸ್ತುವಿನ ವ್ಯಕ್ತಿತ್ವಕ್ಕೆ ಕಾರಣವಾದ ಹಾಗೆಯೇ ಅಸದ್ವಸ್ತುವಿನ ವ್ಯಕ್ತಿತ್ವಕ್ಕೂ ಅದೇ ಶಿವನೇ ಕಾರಣನಾಗಿದ್ದಾನೆ. ಮತ್ತು "ಮನ ಏವ ಮನುಷ್ಯಾಣಾಂ ಕಾರಣಂ ಬಂಧ-ಮೋಕ್ಷಯೋಃ" ಎಂಬಲ್ಲಿಯೂ ಮನಸ್ಸು ಮೋಕ್ಷಕ್ಕೆ ಹೇತುವಾಗಿದ್ದಂತೆ, ಬಂಧನಕ್ಕೂ ಅದೇ ಮನಸ್ಸೇ ಹೇತುವಾಗಿರಬಲ್ಲುದು. ಮುಳ್ಳುಗಳು ಕಾಲಿಗೆ ಚುಚ್ಚಲೂಬಹುದು; ಅವೇ ಬೇಲಿಯಾಗಿ ರಕ್ಷಿಸಲೂಬಹುದು. ಆದ್ದರಿಂದ ಆ ಕಾಮಾದಿಗಳನ್ನು ಅನುಕೂಲವಾಗಿ ಮಾಡಿಕೊಳ್ಳಲು ಪ್ರಯತ್ನಿಸಲೇಬೇಕು. ಈ ಹಿಂದೆಯೇ ಹೇಳಿದಂತೆ, ಇದು ಅಭ್ಯಾಸದಿಂದ ಸತ್ಸಂಗದಿಂದ ಗುರುಕೃಪೆಯಿಂದ ಸಾಧ್ಯವಾಗುತ್ತದೆ.

ಕಾಮ-ಕಾಮಿಯನ್ನು (ಬೆಕ್ಕನ್ನು) ವಾಹನವನ್ನಾಗಿ ಬಳಸದೆ, ಅಧರ್ಮದ ಇಲಿಗಳಿಂದ ರಕ್ಷಣೆ ಪಡೆಯಲು ಬಳಸಬೇಕು. ಕ್ರೋಧ-ಶಾರ್ದೂಲವನ್ನು ಕೊಟ್ಟಿಗೆ ಕಾಯಲು ಕಟ್ಟದೆ, ನಿಷ್ಠೆಯ ಸರ್ಕಸ್ಸಿನಲ್ಲಿ ಬಳಸಬೇಕು. ಲೋಭ-ಗಾರ್ದಭವನ್ನು ಒಕ್ಕಲತನಕ್ಕಾಗಿ ಬಳಸದೆ. ಉಪದೇಶದ ಬಟ್ಟೆ ಹೊರಲು ಬಳಸಬೇಕು. ಮೋಹ-ಮಹಿಷವನ್ನು ರಸ್ತೆಯ ವಾಹನವನ್ನಾಗಿ ಬಳಸದೆ, ನೀತಿ-ನಿಯಮದ ಕೆಸರಿನಲ್ಲಿ ಜಗ್ಗಿಸುವಂತೆ ಬಳಸಬೇಕು. ಮದ-

ಮದ್ದಾನೆಯನ್ನು ಹೈನಕ್ಕಾಗಿ ಗುಡಿಸಲೊಳಗೆ ಕಟ್ಟದೆ, ಸುಧಾರಣೆಯ ಉತ್ಸವಾದಿಗಳ ಶೋಭೆಗೆ ಬಳಸಬೇಕು. ಮತ್ಸರ-ಮತ್ಸ್ಯವನ್ನು ನಿರ್ಜಲ-ಜಾಗದಲ್ಲಿಡದೆ, ನಿಜ ಧರ್ಮ-ಜಲದ ಶುದ್ಧಿಗಾಗಿ ಇರಿಸಬೇಕು. ಹೀಗೆ ಆ-ಆ ಕಾಮಾದಿ-ಪ್ರಾಣಿಗಳನ್ನು ಆ-ಆ ಸಂದರ್ಭೋಚಿತವಾಗಿ ಬಳಸುತ್ತಿರಬೇಕು.

“ಕಾಮ ಬೇಡ; ಕ್ರೋಧ ಬೇಡ; ಲೋಭ ಬೇಡ; ಮೋಹ ಬೇಡ; ಮದ ಬೇಡ; ಮತ್ಸರ ಬೇಡ. ಶಿವಭಕ್ತಿಯುಳ್ಳವಂಗೆ ಕಾಮ ಬೇಕು; ಕ್ರೋಧ ಬೇಕು; ಲೋಭ ಬೇಕು; ಮೋಹ ಬೇಕು; ಮದ ಬೇಕು; ಮತ್ಸರ ಬೇಕು. ಬೇಕೆಂಬುವುದಕ್ಕಾವ ಗುಣ? ಬೇಡೆಂಬುವುದಕ್ಕಾವ ಗುಣ? ಬೇಡೆಂಬುದಕ್ಕೆ—ಕಾಮ ಬೇಕು ಲಿಂಗವಲ್ಲಿ; ಕ್ರೋಧಬೇಕು ಕರಣಂಗಳಲ್ಲಿ; ಲೋಭ ಬೇಕು ಪಾದೋದಕ-ಪ್ರಸಾದದಲ್ಲಿ; ಮೋಹ ಬೇಕು ಗುರು-ಲಿಂಗ-ಜಂಗಮದಲ್ಲಿ; ಮದ ಬೇಕು ಶಿವಾಚಾರದಿಂದ ಘನವಿಲ್ಲವೆಂಬಲ್ಲಿ; ಮತ್ಸರ ಬೇಕು ಹೊನ್ನು-ಹೆಣ್ಣು-ಮಣ್ಣಿನಲ್ಲಿ ಇಂತೀ ಷಡ್ಗುಣವಿರಬೇಕು. ಬೇಡೆಂಬುದಕ್ಕೆ-ಕಾಮಬೇಡ ಪರಸ್ತ್ರೀಯರಲ್ಲಿ; ಕ್ರೋಧ ಬೇಡ ಗುರುವಿನಲ್ಲಿ; ಲೋಭ ಬೇಡ ತನು-ಮನ-ಧನದಲ್ಲಿ; ಮೋಹ ಬೇಡ ಸಂಸಾರದಲ್ಲಿ; ಮದ ಬೇಡ ಶಿವಭಕ್ತರಲ್ಲಿ; ಮತ್ಸರ ಬೇಡ ಸಕಲ ಪ್ರಾಣಿಗಳಲ್ಲಿ ಇಂತೀ ಷಡ್ಗುಣವನರಿದು ಮರೆಯಬಲ್ಲಡೆ, ಆತನೇ ಸಹಜಭಕ್ತ ಕಾಣಾ ಕೂಡಲ ಚೆನ್ನ ಸಂಗಮದೇವಾ !” ಎಂದಿರುವ ಚೆನ್ನ ಬಸವಣ್ಣನ ಈ ವಚನದಲ್ಲಿ “ಬೇಕು-ಬೇಡ”ಗಳ ಕ್ರಮ ಹೀಗೆ:—

ಕಾಮ ಬೇಕು ಲಿಂಗದಲ್ಲಿ ;
ಕಾಮ ಬೇಡ ಪರಸ್ತ್ರೀಯರಲ್ಲಿ.

ಕ್ರೋಧ ಬೇಕು ಕರಣಂಗಳಲ್ಲಿ ;
ಕ್ರೋಧ ಬೇಡ ಗುರುವಿನಲ್ಲಿ.

ಲೋಭ ಬೇಕು ಪಾದೋದಕ – ಪ್ರಸಾದದಲ್ಲಿ ;
ಲೋಭ ಬೇಡ ತನು – ಮನ – ಧನದಲ್ಲಿ.

ಮೋಹ ಬೇಕು ಗುರು – ಲಿಂಗ – ಜಂಗಮದಲ್ಲಿ ;
ಮೋಹ ಬೇಡ ಸಂಸಾರದಲ್ಲಿ.

ಮದ ಬೇಕು ಶಿವಾಚಾರದಿಂದ ಘನವಿಲ್ಲವೆಂಬಲ್ಲಿ ;
ಮದ ಬೇಡ ಶಿವಭಕ್ತರಲ್ಲಿ.

ಮತ್ಸರಬೇಕು ಹೊನ್ನು–ಹೆಣ್ಣು–ಮಣ್ಣಿನಲ್ಲಿ ;
ಮತ್ಸರ ಬೇಡ ಸಕಲ ಪ್ರಾಣಿಗಳಲ್ಲಿ.

—"ಇಂತೀ ಷಡ್‌ಗುಣವನರಿದು ಮೆರೆಯಬಲ್ಲಡೆ, ಆತನೇ ಸಹಜ ಭಕ್ತ."

ಕಾಮಾದಿ–ಷಟ್ಕದ ಬಗ್ಗೆ ವಿಶದವಾಗಿ ವಿವರಿಸಿದ ಚನ್ನ ಬಸವಣ್ಣನ ಈ ವಚನವು, "ಜ್ಞಾನದಲ್ಲಿ ಚನ್ನ ಬಸವಣ್ಣ" ಎಂಬ ಪ್ರಸಿದ್ಧಿಯನ್ನು ಅವನಿಗೆ ಉಳಿಸಿಕೊಡಲು ಪೂರ್ಣ ಸಹಾಯಕವಾಗಿದೆ. "ಷಟ್ ಗುಣವನ್ನು ಅರಿದು ಮೆರೆಯಬಲ್ಲಡೆ, ಆತನೇ ಸಹಜ ಭಕ್ತ" ಎಂದಿದ್ದಾನೆ ಅವನು. ಅವನು ಕಾಮಾದಿಗಳಿಗೆ "ಷಡ್ ವೈರಿ" "ಅರಿಷಟ್ ವರ್ಗ" ಅಥವಾ ಮತ್ತಾವುದೋ ಹಗೆತನದ ಅರ್ಥದ ಶಬ್ದವನ್ನು ಬಳಸಿಲ್ಲ. ಕಾಮಾದಿಗಳು ಪ್ರತಿಯೊಬ್ಬ ಮನುಷ್ಯನಲ್ಲಿ (ಶರಣ-ಸ್ಥಲ-ಸ್ಥಿತಿಗೇರಿದ ಶರಣನಲ್ಲಿಯೂ ಸಹ) ಇರಲೇಬೇಕಾದ ಗುಣಗಳು. ನಕ್ಷತ್ರಗಳಿಲ್ಲದ ಮಹಾಕಾಶವೇ ಇಲ್ಲ. ಬೆಳಕಿನಲ್ಲಿಯೂ ಅವು ಇದ್ದೇ ಇರುತ್ತವೆ. ಬೆಳಕನ್ನೀಯುವ ಉದಾತ್ತ ಜೀವನದ ಶಿವಶರಣರಲ್ಲಿಯೂ ಕಾಮಾದಿ-

ನಕ್ಷತ್ರಗಳು ಇದ್ದೇ ಇರುತ್ತವೆ. ಆದರೆ, ಸಕಲ ಜೀವಾವಳಿಗೆ ಲೇಸನ್ನು ಬಯಸುವ ಕಾಯಕ ವೃತ್ತಿಯಲ್ಲಿರುವ ಅವರ ಶುದ್ಧಾತ್ಮ ದಿವಾಕರನ ಬೆಳಕಿನಲ್ಲಿ ಆ ಕಾಮಾದಿ-ನಕ್ಷತ್ರಗಳು ಪ್ರತ್ಯಕ್ಷ ಗೋಚರಿಸುವುದಿಲ್ಲ. ಅಂತೆಯೇ ಚೆನ್ನಬಸವಣ್ಣನು ಆ ಕಾಮಾದಿಗಳಿಗೆ "ಷಡ್‌ಗುಣ" ಅಂದರೆ ಆರೂ ಗುಣಗಳು ಎಂದಿದ್ದಾನೆ. ಗುಣಗಳೆಂದರೆ ಉತ್ಕರ್ಷಕ್ಕೆ ಹೇತುವಾದವುಗಳು. ಷಡ್‌ಗುಣ ಶಬ್ದದ ಮುಂದಿನ ಪ್ರತ್ಯಯವನ್ನು 'ಅನ್ನು' ಎಂಬ ದ್ವಿತೀಯಾ ವಿಭಕ್ತಿಯ ಏಕ ವಚನವನ್ನೇ ಬಳಸಿದ್ದಾನೆ; ಬಹುವಚನದ 'ಗಳನ್ನು'ವನ್ನಲ್ಲ. ಕಾಮಾದಿಗಳು ಆರು ಇದ್ದರೂ, ಅವನ್ನು ಒಟ್ಟಾಗಿ ಒಂದೇ ಸಮನಾಗಿ ಸಮತಾ ಭಾವನೆಯಿಂದ ಹದವರಿತು ಅಳವಡಿಸಿಕೊಂಡಿರಬೇಕೆಂಬಭಿಪ್ರಾಯದಿಂದ, "ಅರಿತು ಮರೆಯಬೇಕು." ಅಂದರೆ. ಕಾಮಾದಿಗಳನ್ನು ವೈರಿಯೆಂದು ತಿಳಿಯಬಾರದು; ಅವುಗಳ ವಿರುದ್ಧ ವ್ಯರ್ಥ ಹೋರಾಡಬಾರದು; ಅವುಗಳನ್ನು ಪಳಗಿಸಬೇಕು; ಅವುಗಳ ಸದ್ ವಿನಿಯೋಗದ ನಿಯಂತ್ರಣದಿಂದ ಸಕಲ ಜೀವಾತ್ಮರಿಗೂ, ಅದರೊಂದಿಗೆ ತನಗೂ, ಲೇಸನ್ನು ಬಯಸಬೇಕು. ಇದೆಲ್ಲವೂ ನಿಷ್ಕಾಮ ಕರ್ಮದ ಭಾವನೆಯ ಕಾಯಕದಿಂದ ಸಾಧ್ಯವಾಗುತ್ತದೆ. ಸಾಧ್ಯವಾದದ್ದು ನಮಗೆ ಅರವತ್ಮೂರು ಪ್ರಮಥ ಗಣದ ಚರಿತ್ರೆಯಿಂದ ತಿಳಿದುಬರುತ್ತದೆ.

ಕಾಮಕ್ರೋಧಾದಿಗಳನ್ನು ಆತ್ಮೀಯ ಸದ್‌ಭಾವದ ಸಾಧನೆಯ ಬಲದಿಂದ ಅವುಗಳನ್ನು ಅಂಕಿತದಲ್ಲಿಟ್ಟುಕೊಳ್ಳಬೇಕೆಂಬುದಾಗಿ, ಲಿಂಗಾಚಾರಾದಿ ಪಂಚಾಚಾರಗಳೇ ಪಂಚ ಪ್ರಾಣವಾಗಿರುವ ವೀರಶೈವ ಧರ್ಮದ ಪ್ರಸಿದ್ಧ ಸಿದ್ಧಾಂತದ ಪ್ರಕಾರ ಜ್ಞಾನ-ಕರ್ಮ ಸಮುಚ್ಚಯವನ್ನು ಸ್ಪಷ್ಟೀಕರಿಸುವ ಸಲುವಾಗಿ, ಇದುವರೆಗೂ ಸುದೀರ್ಘವಾಗಿ ಇಲ್ಲಿ ಚರ್ಚಿಸಲಾಯಿತು. ಆ 'ಆರು

ಅರಿಗಳ ಗೆದ್ದು' ಆ ಸೋಲಿಸಿದ ಆರನ್ನೂ ಆರು ಗುಣಗಳನ್ನಾಗಿಸಿಕೊಂಡು, ಆ "ಷಡ್‌ಗುಣವನರಿದು, ಮರೆಯಬೇ"ಕಾದರೆ, ಪ್ರತಿಯೊಬ್ಬರೂ ಸತ್‌ಸಂಗ, ಸದಸದ್ ವಿವೇಕಬುದ್ಧಿ, ಜಪ-ತಪ ಹಾಗು ಶಿವಾನುಭವ ಸಾಧನೆಗಳಿಂದ ಮುಂದುವರೆಯಬೇಕು. ಸ್ಥಿತಪ್ರಜ್ಞರಾಗಿ ಭಕ್ತಿ-ಜ್ಞಾನ-ವೈರಾಗ್ಯ ಮಾರ್ಗದಿಂದ. ಸತ್ತ್ವ, ರಜೋ-ತಮೋ- ಗುಣಗಳನ್ನು ಕಾಯಾ – ವಾಚಾ – ಮನಸಾ, ಭೂತ-ಭವಿಷ್ಯದ್-ವರ್ತಮಾನಕ್ಕೆ ಯೋಗ್ಯವಾಗಿಸಬೇಕು. ಬ್ರಹ್ಮ-ವಿಷ್ಣು-ರುದ್ರರ ಸೃಷ್ಟಿ ಸ್ಥಿತಿ-ಲಯದ ರಹಸ್ಯವನ್ನು ತಿಳಿದಿರಬೇಕು. ಹೀಗೆಂದುಕೊಂಡು ಸಾಧಿಸಿ, ಎಲ್ಲ ಸದ್‌ಗುಣಗಳನ್ನು ಬೆಳೆಸಿಕೊಳ್ಳುತ್ತ, ಪರಶಿವನ ಇಚ್ಛಿಸಿದ ತಿರೋಧಾನ-ಅನುಗ್ರಹವನ್ನು ಪ್ರಕಟಗೊಳಿಸಿದ ಪುರಾತನ ಪ್ರಮಥ ಗಣರು ಅರುವತ್ಮೂರು ವ್ಯಕ್ತಿಗಳೆಂದು ಪ್ರಸಿದ್ಧರಾಗಿದ್ದಾರೆ. ನೂತನ ಪ್ರಮಥರ ಶಿವಶರಣರ ಸ್ವಾಮಿಗಳ ಸಾಧುಸಂತರ ಸಂಖ್ಯೆ ಇಲ್ಲಿ ಅಪ್ರಸ್ತುತ.

"ವ್ಯವಹಾರೇಣ ಮಿತ್ರಾಣಿ ಜಾಯಂತೇ ; ರಿಪವಸ್ತಥಾ" ಎಂದು ಈ ಮೊದಲು ಹೇಳಿದಂತೆ. ವ್ಯಕ್ತಿ-ವ್ಯಕ್ತಿಯು ಸಂತೋಷ ಚಿತ್ತದಿಂದ, ಗೆಳೆತನದಿಂದ, ಆತ್ಮೀಯತೆಯಿಂದ ಜೀವನ ವ್ಯವಹಾರ ಸಾಗಿಸುತ್ತಿದ್ದರೆ. ಅಂಥ ಅವರಿಬ್ಬರೂ ೬೩ ರ ಸಂಖ್ಯೆಯಂತೆ ಒಮ್ಮುಖವಾಗಿ ಒಕ್ಕಟ್ಟಿನಿಂದ ಅನ್ಯೋನ್ಯ ಆತ್ಮೀಯತೆಯಿಂದಿದ್ದಾರೆನ್ನುತ್ತೇವೆ.

ಆದರೆ. ಅವರಿಬ್ಬರಲ್ಲಿ ಒಬ್ಬರಿಗೊಬ್ಬರನ್ನು ಕಂಡರೆ ಆಗದಿದ್ದರೆ, ಅಥವಾ ಅವರಿಬ್ಬರಲ್ಲಿ ಒಬ್ಬರಲ್ಲಿಯಾದರೂ ವಿರೋಧಭಾವ ಬೆಳೆದಿದ್ದರೆ. ಅವರಿಬ್ಬರ ಇರುವು ೩೬ ಸಂಖ್ಯೆಯಂತೆ ವಿರುದ್ಧ ದಿಕ್ಕಿಗೆ ಮುಖಮಾಡಂತಾಗಿ, ಅವರಿಬ್ಬರಿಗೂ ಮತ್ತು ಅವರಿಬ್ಬರ ಸಂಗಡಿಗರಿಗೂ ಸುಖ ಶಾಂತಿ ದೊರೆಯಲಾರದು.

ಕಾರಣ, ಪೂರ್ಣತ್ವದ ಆಕಾರವನ್ನು ಹೋಲುವ ೬೩ (ಅರುವತ್ಮೂರು) ಸಂಖ್ಯೆಯಂತೆ ಪರಸ್ಪರ ಸಹಕಾರ ಸಹಾನುಭೂತಿಯಿಂದ, ಅನ್ಯೋನ್ಯ ಆತ್ಮೀಯತೆಯಿಂದ ಬಾಳಿ ಸುಖಶಾಂತಿಯನ್ನು ನೆಲೆಗೊಳಿಸಬೇಕು.

[ಪುಟ ೨೦]

ಕನ್ನಡದ "ಓಂ"-ಪೂಜಿ ಅರಮನೆ ವಸತಿ ಮತ್ತು
ಆಶ್ರಯ ಪಡೆದು; ಪದದ ಮೊದಲ ನೆಲೆ ಕಳೆದತ್ತು,
'ಜಾ'ದ ರೂಪ ತಳೆದು ನಿಜ-ನಿಜತೆ ಅಳಿವುದು ಗೊತ್ತು.
ಗಳಿಸು; ಪೂರ್ಣ ಗಳಿಸದೆ ಬಿಡಬೇಡ ಬೇಸತ್ತು.

ಸುಖ-ಶಾಂತಿಯನ್ನು ನೆಲೆಗೊಳಿಸಬೇಕಾದರೆ, ಅಕ್ಷರಾಭ್ಯಾಸದಿಂದ ಜ್ಞಾನ-ಪ್ರಸಾರ ಪ್ರಚಾರ ಮಾಡಲು, ಭಾಷೆಯು ಅವಶ್ಯಕ. ಆ ಭಾಷೆಯನ್ನು ಗ್ರಂಥಸ್ಥವನ್ನಾಗಿಸಲು ಅದರ ವರ್ಣಮಾಲೆಯು ಲಿಪಿಯು ಹಾಗೂ ಅದರ ವ್ಯಾಕರಣದ ಬಗ್ಗೆ ಸರಿಯಾಗಿ ತಿಳಿದಿರಬೇಕು.

ಭಾರತೀಯ ಸಂಸ್ಕೃತಿಯ ಕನ್ನಡಿಯಂತಿರುವ ಕನ್ನಡದ ಲಿಪಿಯಲ್ಲಿ ಪೂರ್ಣ ಪರಬ್ರಹ್ಮ ಪರಶಿವನ ಶಬ್ದ- ಸ್ವರೂಪವಾಗಿ ಓಂಕಾರವನ್ನು ಬರೆಯುವುದು— ದೀರ್ಘವಾದ ಓ ಸ್ವರದ ಮುಂದೆ ಅನುಸ್ವಾರದ ಪೂಜಿಯನ್ನಿಟ್ಟು. (ಅನುಸ್ವಾರ ಶಬ್ದದ ವ್ಯುತ್ಪತ್ತಿಯ ಬಗ್ಗೆ ಇಪ್ಪತ್ತೆರಡನೆಯ ಪದ್ಯದ ಭಾಷ್ಯದಲ್ಲಿ ವಿಶೇಷವಾಗಿ ವಿಸ್ತರಿಸಲಾಗುವುದು).

ಸಂಸ್ಕೃತಾದಿ ಭಾಷೆಗಳ ದೇವನಾಗರೀ ಲಿಪಿಯಲ್ಲಿ ಓಂಕಾರವನ್ನು ಅದರ ವರ್ಣಮಾಲೆಯ ಪ್ರಕಾರ ओं ಎಂಬುದಾಗಿಯೂ ಮತ್ತು ಅದರದೇ ಪ್ರತ್ಯೇಕವಾದ ಒಂದು ಚಿಹ್ನೆ ॐ ಆಗಿಯೂ ಎರಡು ವಿಧದಲ್ಲಿ ಬರೆಯುತ್ತೇವೆ. ಆದರೆ, ಕನ್ನಡ ಲಿಪಿಯಲ್ಲಿ

ಓಂಕಾರವನ್ನು ಕೇವಲ ವರ್ಣಮಾಲೆಯ ಪ್ರಕಾರ ಒಂದೇ ವಿಧವಾದುದನ್ನು ಬರೆಯಲು ಬಳಸುತ್ತೇವೆ.

ಓಂ ಎಂಬುದರ ಬಗ್ಗೆ. "ಸುಪ್-ತಿಙಂತಂ ಪದಂ" ಮುಂತಾಗಿ ಪಾಣಿನೀಯ ಸೂತ್ರದ, ಕಾರಕ-ವಿಭಕ್ತಿಯ, ಪ್ರತ್ಯಯಾ-ಪ್ರತ್ಯಯದ, ಲಿಂಗದ, ವಚನದ ಇನ್ನೂ ಮುಂತಾದವುಗಳ ಯಾವ ಬಂಧನವೂ ತನ್ನ ಕಾರ್ಯವನ್ನು ಮಾಡಲಾರದು. 'ಓಂಕಾರ' ಎಂಬಲ್ಲಿಯ "ಕಾರ"ವಿದ್ದ ಕಾರಣವೂ ಸಹ, "ಹ-ಯ-ವ-ರ-ಟ್"ದಿ ಮಾಹೇಶ್ವರ ಸೂತ್ರಗಳಲ್ಲಿರುವ ಅಕಾರದಂತೆ ಉಚ್ಚಾರಣೆಯ ಸೌಲಭ್ಯ ಮಾತ್ರದ್ದಾಗಿದೆ. ವಸ್ತ್ರದ ಮಧ್ಯದಿಂದ. ಹುಡುಗರು ದೋಷವಿಲ್ಲದೆಂಬಂತೆ, ಕಡಿದು ಮಾಡುವ "ಗುಬ್ಬಿ ಎಂಜಲು"; ಅದರಂತೆ, ನವಸಾಗರ ಮತ್ತು ಜಸ್ತು ಅಥವಾ ತವರಿನ ಮಧ್ಯಸ್ಥಿಕೆಯಿಂದ ಅಮ್ಲ-ಮಿಶ್ರಿತ-ವಸ್ತುವು ಕಿಲುಬದಿರಲೆಂದು ತಾಮ್ರಾದಿಲೋಹ ಪಾತ್ರೆಗೆ ಮಾಡುವ ಕಲಾಯಿಯಿರುತ್ತದೆ. ಈ ಗುಬ್ಬಿ ಎಂಜಲು ಮತ್ತು ಕಲಾಯಿಗಳಿಂದ ನೇರವಾಗಿ. ಎಂಜಲು ಹಾಗೂ ಕಿಲುಬು ಆಗುವುದಿಲ್ಲ. ಹೀಗೆ ಮಧ್ಯಸ್ಥವಾಗಿ ಬರುವ ಮಧ್ಯಂತರದ ವಸ್ತ್ರ ಹಾಗೂ ಕಲಾಯಿಯಂತೆ 'ಕಾರ' ಪ್ರತ್ಯಯದಂತಹ ಶಬ್ದವು ಓಂ ಎಂಬುದಕ್ಕೆ ಸೇರಿದನಂತರ, ಅದರ ಮುಂದೆ. ವಿಭಕ್ತೀ ಪ್ರತ್ಯಯಗಳು ಸೇರುತ್ತವೆ. ಉದಾ: ಓಂ+ಕಾರ+ಉ (ಅನ್ನು+ಇಂದ-ಕ್ಕೆ-ಇಂದ-ಅ-ಅಲ್ಲಿ) = ಓಂಕಾರವು ಎಂಬ ವ್ಯವಹಾರ ಯೋಗ್ಯವಾದ ಶಬ್ದದ ರೂಪವಾಗುತ್ತದೆ.

ಕನ್ನಡ ಲಿಪಿಯ ಈ ಓಂಕಾರದಲ್ಲಿಯ ಪೂಜಿಯ ಅಂದರೆ ಅನುಸ್ವಾರವು ಓ ಎಂಬ ಅರಮನೆಯಂತಿರುವ. ಅರಮನೆಯಲ್ಲಿ ಆಶ್ರಯ ಪಡೆದರೆ, ಅಂದರೆ ವಸತಿ ಸೌಕರ್ಯ, ಸುಖ-ಸಾಧನೆ, ಗೌರವಾದರ ಮುಂತಾದ ಮತ್ತೇನೇನೋ ವೈಭವ ಸಿಗುವದೆಂಬ

ಆಶೆಯಿಂದ ಆ ಓದ ಒಳಭಾಗದಲ್ಲಿ, ಆ ಪೂಜಿಯು ಸೇರ್ಪಡೆ ಹೊಂದಿದರೆ. ಆಗ ಓಂ ಎಂದಾಗದೆ, ಙ ಎಂದಾಗುತ್ತದೆ; ಅಂದರೆ. ಕವರ್ಗದ ಅಂತಿಮ ವರ್ಣವಾದ ಅನುನಾಸಿಕವಾಗುತ್ತದೆ.

ಅಪೇಕ್ಷಿತವಾದ ಪೂಜ್ಯ ಓಂಕಾರಕ್ಕೂ ಮತ್ತು ಅನಪೇಕ್ಷಿತ ಙ-ಕಾರಕ್ಕೂ ಬಹಳ-ಬಹಳ ಮಹದಂತರವಿದೆ. ಓಂಕಾರವು ಪರಬ್ರಹ್ಮದ ವಾಚ್ಯ-ವಾಚಕವು; ಶಬ್ದ ಬ್ರಹ್ಮ; ಅ-ಉ-ಮ್ ಕೂಡಿ ಆದದ್ದು; ಹರಿ-ಹರ-ಬ್ರಹ್ಮರ ಸಂಕೇತಸೂಚಕವೂ ಆಶ್ರಯ ಸ್ಥಾನವೂ ಆದದ್ದು; ಇದು ಸರ್ವ ಮಂತ್ರಕ್ಕೂ ಮೂಲವಾದದ್ದು; ಮೂಲ ಪ್ರಣವ; ಮೂಲ ತಾರೆ; ಇದು ಆದಿ ಸ್ವರ ಮತ್ತು ಐದನೆಯ ಸ್ವರಗಳೆರಡೂ ಕ್ರಮವಾಗಿ ಕೂಡಿಕೊಂಡು, ಗುಣವಾಗಿ. ವರ್ಗೀಯಾಂತಿಮ ವರ್ಣದಿಂದ ಸಹಕೃತ ಆದದ್ದು; ವೇದದ ಮೊದಲಿಗೂ ಕೊನೆಗೂ ಇದರದೇ ಉಚ್ಚಾರಣೆ; ಈ ಮೂಲ ಪ್ರಣವವಿಲ್ಲದ ಪ್ರಣವ-ಪಂಚಾಕ್ಷರೀ-ಮಂತ್ರವಿಲ್ಲ; (ಹತ್ತನೆಯ ಪದ್ಯದ ಭಾಷ್ಯವನ್ನು ನೋಡಬಹುದು). ಗಾಯತ್ರಿಯಲ್ಲಿಯ ತತ್ ಇದೇ; ಲೌಕಿಕದಲ್ಲಿ ಸಾಮಾನ್ಯ ಬಳಕೆಯ ಮಾತಿನಲ್ಲಿ ಓಂ ಎಂದರೆ ಒಪ್ಪಿಗೆ. ಸರಿ, ಅಹುದು, ಒಳ್ಳೇದು ಎಂಬಂತಹ ಅರ್ಥವಾಗುತ್ತದೆ; ಸಹಮತಿ ಸೂಚಕವಾದ ಹೂಂ ಎಂದಂತಾಗುತ್ತದೆ.

ನಂಬಿ ಕರೆದೊಡೆ ಓ! ಎನ್ನುವ ಸಂಬೋಧನೆ ಸೂಚಕವಾದ ದೀರ್ಘ ಸ್ವರವಾದ ಗುಣದ ಓ ಕಾರದ ಅಂತೇವಾಸಿಯಾಗಿ. ಶಿಷ್ಯನಾಗಿ ಪೂರ್ಣದ ದುಂಡು ಪೂಜಿಯಾಗಿಯೋ ಅನುಸ್ವಾರವಾಗಿಯೋ ಇರುವ ಪೂಜಿಯಿಂದ ಆ ಓಕಾರಕ್ಕೂ ಆ ಓ-ಕಾರದಿಂದ ಆ ಪೂಜಿಗೂ ಅಂಧ-ಪಂಗು-ನ್ಯಾಯದಂತೆ, ಗುರು ಶಿಷ್ಯರಿಗೆ (ಗುರು ಶಿಷ್ಯರಂತಿರುವ ಈ ಓ-ಕಾರ ಹಾಗೂ ಪೂಜಿಗೆ) ಭಕ್ತರಿಂದ ದೊರೆಯುವ ಪೂಜೆ-ಪೂಜ್ಯತೆಯಂತೆ ಈ ಎರಡೂ ವರ್ಣಗಳಿಗೆ

(ಅಂದರೆ ಓ-ಕಾರಕ್ಕೂ ಪೂಜಿಗೂ) ಪರಸ್ಪರ ಅನ್ಯೋನ್ಯಾಶ್ರಯವು ಇರಬೇಕಲ್ಲದೆ. ದಿಕ್ಕಿಗೊಂದಾಗಿರಬಾರದು ; ಗುರು ಓ – ಮತ್ತು ಶಿಷ್ಯ–ಪೂಜಿ ಅಥವಾ ಓ–ಗುರು ಪೂಜಿ-ಶಿಷ್ಯ ಇಬ್ಬರ ಸ್ಥಾನ ಸಕ್ರಮವಾಗಿರಬೇಕು. ಪರಸ್ಪರವಾಗಿ ಒಂದರಿಂದ ಇನ್ನೊಂದರ ಅಸ್ತಿತ್ವಕ್ಕೆ ಧಕ್ಕೆ ಬರದಂತಿರಬೇಕು; ಐಕ್ಯ ಇರುವಂತಿರಬೇಕು.

ಸಂಸ್ಕೃತದಲ್ಲಿ ಅನುಸ್ವಾರವು ಪೂಜಿಯಾಗಿಯೂ ಅನುನಾಸಿಕವಾಗಿಯೂ ಉಪಯೋಗಿಸಲ್ಪಡುವುದು. ಹೆಚ್ಚಾಗಿ ಅದು ಮೂಲ ರೂಪದಲ್ಲಿ ಮಾತ್ರವಲ್ಲ ಮೂಲ ಪ್ರಣವದ ಚಿಹ್ನೆಯಲ್ಲಿ ಚಂದ್ರ ಬಿಂದುವಾಗಿಯೂ ಅಂದರೆ ಚಂದ್ರಾಕಾರದ ಗೆರೆಯಮೇಲೆ ಬಿಂದುವಾಗಿಯೂ ಸ್ಪಷ್ಟ ರೂಪದ ಪೂರ್ಣಾಕಾರವಾಗಿ ತೋರುತ್ತದೆ.

ಆದರೆ, ಇಷ್ಟೊಂದು ಯೋಗ್ಯತಾ ಸಂಪನ್ನವಾದ ಈ ಪೂಜಿಯು ತನ್ನ ಸ್ವತಂತ್ರ ಅಸ್ತಿತ್ವವನ್ನು ಕಳೆದುಕೊಂಡು ಪರಕೀಯರ ಆಶ್ರಯದಲ್ಲಿ ಸುಖ ಪಡೆಯಬೇಕೆಂದುಕೊಂಡು. ಕನ್ನಡದ ಓದ ಒಳಗೆ ಸೇರಿಕೊಂಡದ್ದೇ ಆಗಿ. ಕವರ್ಗದ್ದಾದ ಙ-ಕಾರವಾದರೆ, ಆ ಓಕಾರಕ್ಕೂ ಆ ಪೂಜಿಗೂ ಎಳ್ಳಷ್ಟು ಮರ್ಯಾದೆ ಇಲ್ಲದಾಗುತ್ತದೆ. 'ತನ್ನತನ ಕಳೆದವಗೆ ಉನ್ನತಿಯು ಕಳೆಯಿಲ್ಲ. ಸನ್ಮತಿಯು ಸನ್ಮಾನ ಮುನ್ನವಿಲ್ಲ.'

ಅಂ ಎಂಬ ಅನುಸ್ವಾರವೂ ಮತ್ತು ಅನುನಾಸಿಕವಾದ ಙಕಾರವೂ ನಾಸಿಕ ಸ್ಥಾನದಿಂದ ಉಚ್ಚರಿಸಲ್ಪಡುತ್ತವೆ. ಆದರೆ. ಅನುಸ್ವಾರಕ್ಕೆ (ಪೂಜಿಗೆ) ನಾಸಿಕವೊಂದೇ ಅದರ ಉಚ್ಚಾರಣೆಯ ಸ್ಥಾನವಾಗಿರುತ್ತದೆ. ಇನ್ನು, ಪಂಚ ವಿಂಶತಿ ಸ್ಪರ್ಶ–ವರ್ಣಸಮೂಹಗಳಲ್ಲೊಂದಾಗಿ ಅನುನಾಸಿಕವೆಂದೆನ್ನಿಸಿಕೊಳ್ಳುವ ಕವರ್ಗದ ಙಕಾರವು ಮುಖ–ಸಹಿತವಾದ ನಾಸಿಕದಿಂದ ಉಚ್ಚರಿಸಲ್ಪಡುತ್ತದೆ.

ಓಂ ಎಂದಿರದೆ ಙ ಆದ ಮಾತ್ರಕ್ಕೆ ತನ್ನತನ ಹಾಗು ತನ್ನ ಸಂಗ

ಡಿಗರ-ತನವನ್ನು ಕಳೆದುಕೊಂಡು ಹೀನತನಕ್ಕಿಂಬು ಕೊಟ್ಟಂತಿರುವ ಙ-ಕಾರದಿಂದ ಪ್ರಾರಂಭವಾಗುವ ಯಾವ ಶಬ್ದವೂ, ಯಾವ ಶಬ್ದಕೋಶದಲ್ಲಿಯೂ, ಎಲ್ಲಿಯೂ ದೊರೆಯಲಿಕ್ಕಿಲ್ಲ, ಯಾವದಾದರೂ ಬೇರೆ ಶಬ್ದದ ನಡು-ನಡುವೆ ಬೇಕೆನಿಸಿದಾಗ ಮಾತ್ರ ಅಲ್ಲಲ್ಲಿ, ಹೆಚ್ಚಾಗಿ ಸಂಸ್ಕೃತದ ಪದ್ಧತಿಯಲ್ಲಿ, ಙ-ಕಾರದ ಪ್ರಯೋಗವನ್ನು ಪ್ರಯಾಸದಿಂದ ಕಾಣಬಹುದು. ಉದಾ: ಸುಖಙ್ಕರ ಶಙ್ಕರನ ಮಙ್ಗಲ ಸಂಗೀತವೇ ಓಙ್ಕಾರವು. ಇಲ್ಲಿ ಙ-ಕಾರಕ್ಕೆ ಜಾಗ ಸಿಕ್ಕಿದ್ದಾದರೂ ತನ್ನ ಸ್ವಂತದ ಯೋಗ್ಯತೆಯಿಂದಲ್ಲ; ತನ್ನ ರಕ್ತ ಸಂಬಂಧಿಕನಾದ ಅಫೀಸರನಿಂದ ತನಗೆ ನೌಕರೀ-ಸ್ಥಾನ ದೊರೆತಂತಾಗಿದೆ. ಬೇರೆ ವರ್ಗದ 'ವರ್ಣ'ದ ಅಫೀಸರನಿದ್ದರೆ, ಆ ಙ-ಕಾರಕ್ಕೆ ಸ್ಥಾನವೇ ಸಿಗುವದಿಲ್ಲ. ಯೋಗ್ಯತೆಯುಳ್ಳವರಿಗೆ ಯಾವ ವರ್ಗದವರಿದ್ದರೂ ಅಷ್ಟೆ! ಅವರಿಗೆ ಸ್ಥಾನ ಮಾನ ದೊರೆಯುತ್ತದೆ. "ವಿದ್ವಾನ್ ಸರ್ವತ್ರ ಪೂಜ್ಯತೇ". ಆದರೆ, ಯೋಗ್ಯತೆಯಿಲ್ಲದ ವಶೀಲಿ ಬಂಟನಿಗೆ ತನ್ನವರೆಂಬುವವರಿಂದಲೂ ಒಮ್ಮೊಮ್ಮೆ ತಿರಸ್ಕಾರದ ಪುರಸ್ಕಾರ ದೊರೆಯಬಹುದು. ಉದಾ: ಕಿಂಕರನಿಗೆ ಕಿಂಕರತ್ವವಿಲ್ಲದಿದ್ದರೆ, ಧ್ವನಿಯಿಲ್ಲದ ಸಂಗೀತವೆನ್ನಬಹುದು! ಅಂದರೆ, ಓದ ಮುಂದಿನ ಪೂಜಿಯು ಆ ಓ ವರ್ಣದ ಒಳ ಸೇರಿ, ಙ-ಕಾರವಾಗಿ, ತನ್ನ ಮತ್ತು ಆ ಓದ ಯೋಗ್ಯತೆಗೆ ಕುಂದು ತಂದಂತಾಗುವದರಿಂದ, ಕಲಂಕೀ ಚಂದ್ರನಂತಾದ, ಆ ಙ-ಕಾರಕ್ಕೆ ಮೊದಲ ಗೌರವದ ಸ್ಥಾನಮಾನ ಮುಂವರ್ಣದೆ ದೊರೆಯುವದು ಸಾಧ್ಯವೇ ಇಲ್ಲ. "ಸ್ಥಾನ-ಭ್ರಷ್ಟಾ ನ ಶೋಭಂತೇ". ತನಗಿದ್ದ ಸ್ಥಾನ ಮಾನಗಳನ್ನುಳಿಸಿಕೊಂಡು ಬಾಳಿ ಬೆಳಗುತ್ತ, ಇತರರಿಗೆ ಆದರ್ಶವಾಗಿರುವದೇ ತನ್ನತನ ಕಾಯ್ದುಕೊಂಡುದರ ಕುರುಹು, ಓಂ ನಂತಹ ಪ್ರೋನ್ನತ

ಹುಟ್ಟಿದಂಥ ಪ್ರಕಾರದಂತಹ ಅವಸ್ಥೆಯು ನಿರುಪಯುಕ್ತ ರೂಪ ತಾಳಬಾರದು. ಓಂ ಓಮ್ ಆಗಿಯೇ ಇರಬೇಕು. "ಓಂ ಇತ್ಯೇ-ಕಾಕ್ಷರಂ ಬ್ರಹ್ಮ" (ಉಪನಿಷತ್ತು).

ಓಂಕಾರದ ಓಮ್ ಎಂಬ ರೂಪದ ಮಕಾರವು ಆ ಓಂಕಾರದ ಚಿಹ್ನೆಯಾದ ಓದಲ್ಲಿ ಚಂದ್ರ, ರೇಖೆಯು ನಾದ ಬಿಂದು ವಾಗಿ ಪ್ರಣತ್ವ ರೂಪದಲ್ಲಿ ಸರ್ವಶ್ರೇಷ್ಠವಾದ ಸರ್ವೋನ್ನತ ಸ್ಥಾನದಲ್ಲಿ ಪೂರ್ಣ ಪ್ರಾಜ್ಞವಾಗಿ, ಆ ಚಿಹ್ನೆಯು ಉತ್ತಮಾಂಗ ವೆನಿಸುತ್ತದೆ; ಅದರ ಶಿರಸ್ಸೆನಿಸುತ್ತದೆ.

ಆ ಮಕಾರವು ಪದ ಅಥವಾ ಉಪಪದದ ಕೊನೆಯಲ್ಲಿದ್ದು, ಅದರ ಮುಂದೆ ಯಾವುದಾದರೂ ವರ್ಗೀಯ ವ್ಯಂಜನ ಬಂದರೆ, ಆ ಮಕಾರ ಅಥವಾ ಅದರಂತಹ ಬೇರೆ ಸ್ಥಾನದ ಮಕಾರವು ವಿಕಲ್ಪದಿಂದ ಅನುಸ್ವಾರವಾಗುತ್ತದೆ; ಕೆಲವೊಂದು ಸಲ ಅದು ಅನುನಾಸಿಕವೂ ಆಗಬಹುದು. ಆದರೆ, ಶ–ಷ–ಸ–ರ–ಹ ವರ್ಣಗಳ ಮುಂದಿದ್ದ ಆ ಮಕಾರವು ಪ್ರಣತ್ವ ರೂಪದ ಪ್ರಾಜ್ಞವಾದ ಅನುಸ್ವಾರವಾಗಲೇಬೇಕು.

ಇದೇ ಮಹತ್ವ ವೈಯಾಕರಣ ಪಾಣಿನಿಯುಂ ತನ್ನ ರೀತಿಯಲ್ಲಿ ಹೀಗೆ ತಿಳಿಸಬಹುದು: ಓಮ್ ಮಹೇಶಸೂತ್ರಗಳಲ್ಲಿರುವ "ಅನುಸ್ವಾರಸ್ಯ ಯಯಿ ಪರಸವರ್ಣಃ" ಎಂಬ ಪಾಣಿನೀಯ ಸೂತ್ರ ತಿಳಿದು ಬರುವಂತೆ, ಮಹೇಶ್ವರನ ಹದಿನಾಲ್ಕು ಸೂತ್ರಗಳಲಿ ಹಕಾರ ಹೊರತಾಗಿ ಐದನೆಯ ಸೂತ್ರದಿಂದ ಹನ್ನೆರಡನೆಯ ಸೂತ್ರದ ವರೆಗಿನ ಸೂತ್ರಗಳಲ್ಲಿರುವ ವರ್ಣಗಳಲ್ಲಿ ಯಾವುದಾದರೂ ಮುಂದೆ ಬಂದರೆ, ಆ ಅನುಸ್ವಾರವು ಪಕ್ಷಿಕವಾಗಿ ಆ–ಆ ವರ್ಣದ ವರ್ಗದ ಅನುನಾಸಿಕವಾಗುತ್ತದೆ.

ಆ ಅನುಸ್ವಾರವು ಪದಾಂತವಾಗಿದ್ದರೆ: ಅಂದರೆ, ಪ್ರತ್ಯಯ

ಸೇರಿದ ಅಥವಾ ಸೇರಿದಂತಿರುವ ಪದ ಶಬ್ದಗಳ ಕೊನೆಯಲ್ಲಿದ್ದರೆ, ಅದು ವಿಕಲ್ಪದಿಂದ ಅನುನಾಸಿಕವಾಗುತ್ತದೆ. ಈ ಸಂದರ್ಭದಲ್ಲಿ "ಹೇ ಮಪರೇ ವಾ" ಮುಂತಾದ ಸೂತ್ರಗಳನ್ನೂ "ಯವಲಪರೇ ಯವಲಾ ವಾ" ಮುಂತಾದ ವೃತ್ತಿ–ವಾರ್ತಿಕಾದಿಗಳನ್ನೂ ನೆನೆಸಿಕೊಳ್ಳಬೇಕು. ಇಟ್ಟಿನಲ್ಲಿ ಮುಖ್ಯವಾಗಿ ಹೇಳುವ ತಾತ್ಪರ್ಯ ಇಷ್ಟೇ ; ಪೂಜಿ ಪೂಜಿಯವಾಗಿಯೇ ಇರಬೇಕಲ್ಲದೆ ಅಪೂಜ್ಯವಾಗಬಾರದು. ಪೂಜ್ಯನು ಪೂಜ್ಯನಾಗಿರಬೇಕು.

ಹೀಗೆ ಅಪ್ರಿಯ ಬಯಸಿ, ಶಬ್ದಬ್ರಹ್ಮದ ತನ್ನ ಮೊದಲ ಪದವ ಅಂದರೆ, ಓಂಕಾರದ ಮೊದಲ ನೆಲೆ ಕಲೆಯನ್ನು ಕಳೆದು + ಅತ್ತು ದೂಡಿಸಿ, ತನ್ನ ನಿಜವಾದ ನೈಜತೆಯನ್ನು ಕಳಕೊಂಡ ಈ ಓಂಕಾರದ ಈ ಪೂಜೆಯು ಓ ಕಾರದ ಒಳ ಸೇರಿದರೆ, ಜ-ಕಾರವಾಗಿ ಗುಲಾಮನಂತಾಗಿ ಕೊರಗುತ್ತದೆ. ಪಂಜರದಲ್ಲಿ ಬಂಧಿತವಾದ ಅರಗಿಳಿಯಂತಾಗುತ್ತದೆ. ಅದರಂತಾಗದೆ, ಪ್ರತಿಯೊಬ್ಬರೂ ಸ್ವಕೀಯ ವ್ಯಕ್ತಿತ್ವವನ್ನು ಕಾಯ್ದು ಕೊಳ್ಳುತ್ತಿದ್ದು. ತಾವು ವಾಸಿಸುತ್ತಿರುವ ರಾಜ್ಯವನ್ನು ರಾಷ್ಟ್ರವನ್ನು ಸ್ವತಂತ್ರವಾಗಿ ಗೌರವದಿಂದ ಬಾಳುವಂತೆ ಮಾಡಬೇಕು. ಅದರ ಉದ್ದಿಷ್ಟವಾಗಿ ಎಲ್ಲ ರೀತಿಯ ಪೃಥ್ವೀತತ್ತ್ವಾದಿ-ಮಂತ್ರ–ಮಂತ್ರಿಗಳ ಸಹಕಾರ ಗಳಿಸಬೇಕು. ಅಂದರೆ, ನಂ–ಮಂ–ಶಿಂ– ಇತ್ಯಾದಿಯಾಗಿ ನ್ಯಾಸಾದಿಗಳಲ್ಲಿ ಅಗ್ರಸ್ಥಾನ ಪಡೆಯುವಂತಾಗಬೇಕು; ಪೂರ್ಣರೂಪನಾಗಿರಬೇಕು,

ಕಾರಣ, ತನ್ನ ಸಾತ್ತ್ವಿಕ ಸ್ವಾಭಿಮಾನದ ಜೊತೆಗೆ, ಸ್ವಕೀಯ ರಾಷ್ಟ್ರಾಭಿಮಾನವೂ ಬೆಳೆಯಬೇಕು. ಇದರಿಂದ ವ್ಯಕ್ತಿ–ವ್ಯಕ್ತಿಯ ಸಮಾಜ-ಸಮಾಜದ ಗೌರವದೊಂದಿಗೆ ಸರ್ವ ಸಾಮಾನ್ಯರಿಗೂ ಸುಖವಾಗುತ್ತದೆ.

[ಪುಟ ೨೧]

ಎಱೆಯು = ದೊರೆ; ಎರೆಯು = ಹಾಲ್ ಎರೆಯುವಾತನು ಸತ್ತು.
ಕನ್ನಡದ ರಳ-ಕುಳದ ರೇಫದಾಕೃತಿ ಮತ್ತು
'ಗುರು' ಪದದ ರೇಫವೂ ಸಹ ಪೂರ್ಣ ಗೆರೆ ಸುತ್ತು.
ಸುತ್ತು; ಪೂರ್ಣ ಮುಗಿಸದೆ ಬಿಡಬೇಡ ಬೇಸತ್ತು.

ಸರ್ವರಿಗೂ ಸುಖ-ಶಾಂತಿ ದೊರೆಯುವಂತೆ ಮಾಡಿ ಸಮಾಜದ
ಗೌರವಾದರಗಳನ್ನು ಬೆಳೆಸುತ್ತಿರಬೇಕಾದರೆ. ಆ ಸಮಾಜದಲ್ಲಿಯ
ಪ್ರತಿಯೊಬ್ಬ ವ್ಯಕ್ತಿಯು ತನ್ನ ಮಾತೃಭಾಷೆಯನ್ನು ಕೈಲಾದ
ಮಟ್ಟಿಗೆ ಸರಿಯಾಗಿ ತಿಳಿದಿರಬೇಕು; ಹಾಗೆ ತಿಳಿಯಲು, ತಿಳಿಸಲು
ಸರಳವಾಗಲೆಂದು ಆ ಭಾಷೆಯನ್ನು ಕಾಲಕ್ಕನುಸರಿಸಿ, ರೀತಿ
ಗನುಸರಿಸಿ, ದೇಶ-ವಿಭಾಗಕ್ಕನುಸರಿಸಿ ಹೆಸರಿಸಿ ವಿಭಾಗಿಸುವ
ದುಂಟು. ಹಾಗೆ ಕಾಲಕ್ಕನುಸರಿಸಿ ವಿಭಾಗಿಸಿದ ನಮ್ಮ ಕನ್ನಡವ
ಮೂರು ಹೆಸರಿನದು; (೧) ಹಳಗನ್ನಡ; (೨) ಹೊಸಗನ್ನಡ;
ಈ ಎರಡರ ಮಧ್ಯಕಾಲದ ಕನ್ನಡ (೩) ನಡುಗನ್ನಡವು. ಈ
ಹಳಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡದ ಪದಗಳ
ರೂಪ-ಅರ್ಥ-ಅಭಿವ್ಯಕ್ತಿ-ಬಳಕೆ-ಗ್ರಹಿಕೆಗಳು ಆಗಾಗ್ಗೆ ಅಲ್ಪ
ಸ್ವಲ್ಪ ವ್ಯತ್ಯಸ್ತವಾಗುತ್ತಿರುತ್ತವೆ: ಆವಾಗ-ಈಗ, ನಮ್ಮಗಳಿಂದ
ನಮ್ಮಿಂದ, ಅತ್ತಣಿಂದ-ಅತ್ತಿಂದ ಮೊದಲಾದವುಗಳಲ್ಲಿ ಭಾವಾಭಿ
ವ್ಯಕ್ತಿ ಒಂದೇ ಆದರೂ ಶಬ್ದ-ರೂಪಾಕೃತಿಯು ಪ್ರತ್ಯಯಾದಿ-
ವೇಷದಲ್ಲಿ ವ್ಯತ್ಯಾಸವು ಭಿನ್ನ-ಭಿನ್ನ ಆಗುತ್ತಿರುತ್ತದೆ. ಕಬ್ಬಿನ
ಮಧುರ ರಸ ಒಂದೇ. ಆದರೂ ಅದರಿಂದಾದ ಬೆಲ್ಲದ ಮತ್ತು
ಸಕ್ಕರೆಗಳ ರಸಾನುಭೂತಿ-ಗುಣ ವಿವಿಧ ಮಧುರವಾದದ್ದು.
ಮೂಲ ಕಬ್ಬಿನ ರಸಾನುಭವವೂ ಒಂದು ವಿಧ.

ಸಿಹಿಯು ಒಂದೇ ಆಗಿದ್ದರೂ ಕಬ್ಬಿನ ಸಿಹಿ, ಬೆಲ್ಲದ ಸಿಹಿ,

ಸಕ್ಕರೆಯು ಸಿಹಿ ಎಂದು ಮೂರೆರ ಆಗಿವೆಯೆನ್ನುತ್ತೇವೆ. ಕನ್ನಡವೂ ಒಂದು. ಆದರೂ ಅದನ್ನು ಹಳಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡವೆನ್ನುತ್ತೇವೆ. ಈ ವಿಭಾಗದಿಂದ ಬಹಳ ಲಾಭ ವುಂಟಾಗುತ್ತದೆ. ಕಬ್ಬನ್ನೇ ನೇರವಾಗಿ ಕಡಿದು ರಸ ಹೀರಿದರೆ ಕಾಮಾಲೆ ರೋಗ ದೂರ ಆಗುತ್ತದೆ; ಬೆಲ್ಲದಿಂದ ಕೆಮ್ಮು ಬಂದಂತಾಗುತ್ತದೆ; ಸಕ್ಕರೆಯಿಂದ ನೋಡಲೂ ಸವೆಯಲೂ ಆನಂದ ಹೆಚ್ಚು. ಹಳಗನ್ನಡದಲ್ಲಿ ಸಹಜತೆ ಮುಖ್ಯ; ನಡುಗನ್ನಡ ದಲ್ಲಿ ಹಳೆ-ಹೊಸತರ ಅಥವಾ ಹೊಸ-ಹಳೆದರ ಒಂದು ಮಿಶ್ರಣ ದಿಂದಾಗಿ ಸಮ್ಮನೇ ಕೆಮ್ಮನೆಯು, ಆಭಾಸ; ಹೊಸಗನ್ನಡ ಸರಳ, ಹೊಸ-ಹೊಸ ಅನುಭವ ಕೊಡಬಲ್ಲದು.

ಈ ಮೂರೂ ಕನ್ನಡದ ಶಬ್ದ ರೂಪಗಳಲ್ಲಿ ಉಪಯೋಗಿಸಲ್ಪ ಡುವ ಪ್ರತಿಯೊಂದು ರೇಫವು ಸಮಾನದ ಉಚ್ಚಾರವನ್ನು ಹೊಂದಿ ದಂತಿದ್ದರೂ ಈ ರೇಫ, ರಕಾರ ಅಥವಾ ರವರ್ಣದ ಆಕಾರವು ಸ್ವಲ್ಪೇ ಬೇರೆಯಾದಂತಿದ್ದರೂ ಅದು ಮುಖ್ಯವಾಗಿ ಪೂರ್ಣತ್ವದ ದ್ಯೋತಕವಾಗಿ, ದುಂಡಗೇ ಇರುತ್ತದೆ.

ದುಂಡಗೇ ಇರುವ ಪೂರ್ಣತ್ವದ ದ್ಯೋತಕವಾದ ಮೂರ ಎಂಬ ಲ್ಲಿಯ ರಕಾರವು ತನ್ನ ಪೂರ್ಣರೂಪದ ಗರ್ಭದಲ್ಲಿ ಮತ್ತೊಂದು ಪೂರ್ಣತ್ವದ ಕುರುಹನ್ನು, ವೀರಶೈವನು ತನ್ನ ದುಂಡು ಕರಡಿಗೆಯ ಗರ್ಭದಲ್ಲಿ ತನ್ನ ದುಂಡು ಇಷ್ಟಲಿಂಗವನ್ನು ಅಳವಡಿಸಿಟ್ಟು ಕೊಂಡಂತೆ, ಅಳವಡಿಸಿಕೊಂಡು ಕನ್ನಡದಲ್ಲಿಯ 'ರ' ಆಗುತ್ತದೆ. "ಈಶ್ವರಃ ಸರ್ವ–ಭೂತಾನಾಂ ಹೃದ್–ದೇಶೇಽರ್ಜುನ ತಿಷ್ಠತಿ" ಎಂಬುದಕ್ಕೆ ಸಮಾನವಾದ ಅಭಿಪ್ರಾಯದಂತೆ, ರಕಾರವು ತಾನು ಪೂರ್ಣಾಕಾರದ್ದಿದ್ದು, ಅಂಥದೇ ಮತ್ತೊಂದು ಪೂರ್ಣಾಕಾರದ ಸಣ್ಣ ಬಿಂದು ಚುಕ್ಕೆಯನ್ನು ತನ್ನ ಹೃದಯದಲ್ಲಿ ಹೃದಯಂಗಮ

ವಾಗುವಂತೆ ಧರಿಸಿರುವುದರಿಂದಲೇ ಮರ ಶಬ್ದವು 'ಮಠ' ಎಂದು ಆಗುತ್ತದೆ. ಮರದಿಂದ ಮಠವಾಗುತ್ತದೆ. ಅಂದರೆ ಮರದ ಕಡ-ಕಂಬ ಮೊದಲಾದವುಗಳ ಸಲಕರಣೆಗಳ ಸಹಾಯದಿಂದ ಕಲ್ಲು ಮಣ್ಣಿನ ಮಠವಾಗುತ್ತದೆ. ಸಿಮೆಂಟು-ಗಚ್ಚು ಗಾರೆ ಹಂಚು ಟೈಲ್ಸ ಮೊದಲಾದದ್ದು ಒಂದು ರೀತಿಯಿಂದ ಕಲ್ಲು ಮಣ್ಣಿನ ವಿಕೃತ ರೂಪ.

ಮಠಗಳು ಪೂರ್ಣತ್ವ ಸಾಧನೆಗೆ ಯೋಗ್ಯವಾದ ಆಧ್ಯಾತ್ಮಿಕ ಕೇಂದ್ರಗಳು. ಮನೆಗಳಲ್ಲಿ ಪೂರ್ಣತ್ವ ಸಾಧಿಸಲು ಬರುತ್ತದಾದರೂ ಸ್ವಲ್ಪ ಕಷ್ಟದ ಕಾರ್ಯ. ನಿಷ್ಠೆಯುಳ್ಳ ಭಕ್ತನು ನಟ್ಟಡವಿಯಲ್ಲಿದ್ದರೂ ಪಟ್ಟಣದಲ್ಲಿದ್ದಷ್ಟು ಸೌಲಭ್ಯ ಪಡೆದು ಪೂರ್ಣ ಶಾಂತ ಮನದವನಾಗಿರಬಹುದು. ಮನೆ-ಮಕಾನ್, ನಿಲಯ-ನಿಕೇತನ, ಗೃಹ-ಗೇಹ ಶಬ್ದಗಳಲ್ಲಿಯೂ ಸಹ ಪೂರ್ಣತ್ವದಂತಹ ಲೇಶವ ಪೂರ್ಣ ದುಂಬಾದ ರೂಪಾಕೃತಿಯಿಲ್ಲವೆಂದ ಮೇಲೆ ಆ ಹೆಸರಿನ ಮೂರ್ತ ಕಟ್ಟಡಗಳಲ್ಲಿರುವ ಸಾಂಸಾರಿಕ ನಿವಾಸಿಯು ಪೂರ್ಣತ್ವವನ್ನು ಪಡೆಯಲು ಬಹಳ-ಬಹಳ ಶ್ರಮಪಡಬೇಕು. ಆದರೆ, 'ಮಠ' ಎಂಬ ಶಬ್ದದಲ್ಲಿಯೂ ಅವರ ಹೆಸರಿನ ಮಠ ನಾಮಕ ಕಟ್ಟಡಗಳಲ್ಲಿಯೂ ಪೂರ್ಣತ್ವವು ಶ್ರದ್ಧಾ ಭಕ್ತಿಯ ಜ್ಞಾನ-ಕರ್ಮ ಸಮುಚ್ಚಯದಿಂದ, ಸುಲಭ ಸಾಧ್ಯವಾಗುತ್ತದೆ.

ಭಾಸಿ ರತರಾದ ಭಾರತೀಯರ ಸಂಸ್ಕೃತಿಯ ಪ್ರಕಾರ, ಮಠಗಳೇ ಆಧ್ಯಾತ್ಮಿಕ ಸಾಧನೆಗೆ ಪವಿತ್ರ ವಾತಾವರಣದ ಕೇಂದ್ರಗಳಾಗಿವೆ. ಶಾಸ್ತ್ರಿಗಳ ಶಿವಾನುಭವ-ಪ್ರವಚನ-ಪುರಾಣ ಶ್ರವಣಾದಿಗಳಿಂದ, ಗುರುಗಳಿಂದಾಗುವ ದೀಕ್ಷಾದಿಗಳಿಂದ, ಮತ್ತು ಜಂಗಮರಿಂದಾಗುವ ಅನುಗ್ರಹದಿಂದ ಪೂರ್ಣತ್ವದ ಸಾಧಕರಿಗೆ ಪೂರ್ಣ ಮಾರ್ಗದರ್ಶನವಾಗಿ, ಪೂರ್ಣತ್ವದ ಸಾಧನೆ ಸರಳವಾಗಿ,

ಪೂರ್ಣ ಸಿದ್ಧಿಸುತ್ತದೆ. ಪೂರ್ಣತ್ವವನ್ನು ಸಾಧಿಸಲು ಮಂತ್ರಗಳು ಸರ್ವ ಸಮರ್ಥಗಳೆಂದು ತನ್ನಷ್ಟಕ್ಕೆ ತಾನೇ ನಂಬುಗೆಯಾಗುತ್ತದೆ. ನಂಬುಗೆಯಿಂದ ಸಾಧನೆಯನ್ನು ಮುಂದುವರೆಸಬೇಕು, ಅಷ್ಟೆ! ಹೀಗೆ ನಂಬಲು ಸರ್ವಸಾಧಾರಣವಾದ, ರೋಚಕವಾದ, ಪ್ರತ್ಯಕ್ಷವಾಗಿ ಕಾಣುತ್ತಿರುವ ಹಾಗೂ ಅಷ್ಟೊಂದು ಶಿಕ್ಷಿತರಲ್ಲದವರಿಗೂ ಸಹ ಸಹಜವಾಗಿ ತಿಳಿಯುವ ಒಂದು ಸಣ್ಣ ದೃಷ್ಟಾಂತವೆಂದರೆ: ಕನ್ನಡ ಲಿಪಿಯಲ್ಲಿ ಮತ್ತು ಸಂಸ್ಕೃತಾದಿಗಳ ದೇವನಾಗರೀ ಲಿಪಿಯಲ್ಲಿ ಮಂತ್ರ ಶಬ್ದದ ತಕಾರವನ್ನು ಮಂತ್ರ मन्त्र ಎಂದು ಎರಡೂ ಲಿಪಿಗಳಲ್ಲಿ ಪೂರ್ಣತ್ವದಾಕಾರದ್ದೆಂಬಂತೆ ದುಂಡಾದ त-ತ-ತಕಾರಗಳನ್ನೇ ಬರೆಯುತ್ತೇವೆ. ಆ ತಕಾರದ ಸಂಯುಕ್ತಾಕ್ಷರ (ಒತ್ತಕ್ಷರ)ದ ಗುರುತು ಕೂಡ ತ-ತ್ರ-त्र ಎಂಬುದಾಗಿ ದುಂಡಾಗಿ ಪೂರ್ಣವಾದದ್ದಿರುತ್ತದೆ. ಮಂತ್ರ ಶಬ್ದದಲ್ಲಿಯೂ ಪೂರ್ಣತ್ವದ ದುಂಡಾಕಾರ ಇದೆಯೆಂದ ಮೇಲೆ, ಆ ಶಬ್ದದಿಂದ ತಿಳಿಯಲ್ಪಡುವ ಮಂತ್ರದಲ್ಲಿಯೂ ಪೂರ್ಣತ್ವ ಪ್ರಾಪ್ತಿಯು ಸುಲಭವೆಂದುಕೊಳ್ಳಬೇಕು. ಪ್ರಯತ್ನ ಮುಂದುವರೆಸಬೇಕು. ಪಾರ್ವತೀ-ಪರಮೇಶ್ವರರು ಯಾವಾಗಲೂ ಅವಿನಾಭಾವ ಸಂಬಂಧದಿಂದಿರುವಂತೆ, ವಾಕ್ ಮತ್ತು ಅರ್ಥ-ಎರಡೂ ಸರ್ವದಾ ಸಂಪೃಕ್ತ ಆಗಿರುತ್ತವೆ. ದವಾಖಾನೆಯೆಂದರೆ ಅನಾರೋಗ್ಯ ನಿವಾರಣೆ ಮಾಡಿ, ಆರೋಗ್ಯ ಬೆಳೆಸುವ ಔಷಧ ವಿತರಣೆಯ ಕಟ್ಟಡವೆಂದು ಅರ್ಥವಾಗುತ್ತದೆ; ಗೃಹವೆಂದರೆ ಗೃಹಿಣಿಯಿಂದೊಡಗೂಡಿರಬಹುದಾದ ಸಾಂಸಾರಿಕನ ಮನೆ; ಅರಮನೆ ಅರಸನಿರುವ ಮನೆ; ಧ್ಯಾನಧಾಮವೆಂದರೆ ಧ್ಯಾನ-ಧಾರಣ-ಸಮಾಧಿ ಪ್ರಭೃತಿ-ಅಧ್ಯಾತ್ಮ ಅಧ್ಯಯನ ಅಧ್ಯಾಪನೆಗೆ ಯೋಗ್ಯವಾದದ್ದು; ಶಿವಯೋಗ ಮಂದಿರವೆಂದರೆ, ಶಿವಯೋಗವನ್ನು ಪ್ರಾಧಾನ್ಯವಾಗಿರಿಸಿ, ಐದೂ ಯೋಗಗಳನ್ನು

ಸಾಧನೆ ಮಾಡಲು ಯೋಗ್ಯವಾದ ಯೋಗದ ಮಂದಿರವೆಂದು, ಹೆಸರಿನ ಜೊತೆಗೇ ಅದರ ಅರ್ಥವಾಗುತ್ತಿರುತ್ತದೆ. ಅಂದರೆ. ಆ-ಆ ಶಬ್ದದ ಉಚ್ಚಾರದಿಂದಲೇ ಆ-ಆ ಮೂರ್ತ ಅಥವಾ ಅಮೂರ್ತ ವಸ್ತುವಿನ ಅರ್ಥಾಭಿವ್ಯಕ್ತಿಯಾಗುತ್ತದೆ. ಅದರಂತೆ 'ಮಠ' ಎಂದ ಮಾತ್ರಕ್ಕೆ ಎಲ್ಲರಿಗೂ ಪವಿತ್ರ ಭಾವನೆಯುಂಟಾಗಿ, ಪೂರ್ಣತ್ವ ಸಾಧನೆಯ ಕೇಂದ್ರವೆಂದು ನಂಬುಗೆಯುಂಟಾಗುತ್ತದೆ- ಮಠಾಧಿಪತಿಗಳು ಮಠಾಧಿಪತಿಗಳಾಗಿದ್ದರೆ ಮಾತ್ರ.

ಮಠವೆಂಬ ಶಬ್ದವನ್ನು ಬರೆಯುವಾಗ ಎಷ್ಟೇ ಅವಸರದಲ್ಲಿ, ಹೇಗಾದರೂ ಬರೆದರೂ ಆ ಠಕಾರವು ದುಂಡಾಗಿ ಪೂರ್ಣಾಕಾರ ವಾಗಿಯೇ ಕಾಣುತ್ತಿರುತ್ತದೆ. ಅದರಂತೆ ಮಠಾಧಿಪತಿಯು ಎಷ್ಟೇ ಅವಸರವಾದಿಯಾಗಿದ್ದರೂ ಮಠದ ಮೇಲಿನ ಪಾವಿತ್ರ್ಯ ಭಾವನೆ ಯು ಪೂರ್ಣವಾಗಿರುತ್ತದೆ; ಪೂರ್ಣತ್ವ-ಪ್ರಾಪ್ತಿಗೆ ಸಹಾಯಕ ವಾಗಿರುತ್ತದೆ.

ತಾನು ಪಡೆದ ಉಪದೇಶದಲ್ಲಿಯ ವರ್ಣದ ಕ್ರಮವನ್ನು ಮರೆ ತಿದ್ದರೂ, ತನ್ನ ಪವಿತ್ರ ಭಾವನೆಯ ನಂಬುಗೆಯಿಂದ ಜಪಿಸುವಾಗ ಮರ ಮರಾ ಮರಾ ಮರಾ ಮರಾ ಎಂದ ವಾಲ್ಮೀಕಿಯು 'ರಾಮ ರಾಮ ರಾಮ' ನಾಮವನ್ನು ಜಪಿಸಿದಂತಾಗಿ ತನಗೆ ಬೇಡರ ಸಹವಾಸ ಬೇಡವಾಗಿ, ಅದನ್ನು ತೊರೆದು 'ಆದಿ ಕವಿ ವಾಲ್ಮೀಕಿ' ಯಾಗಿದ್ದಾನೆ. ಪೂರ್ಣತ್ವದ ಶ್ರೀರಾಮನ ರಾಮ ಶಬ್ದದ ವಿಪರೀತ ಕ್ರಮವಾದಂತಾಗಿದ್ದು, ಅದೇ ರಾಮನನ್ನು ಸ್ಮರಿಸುವಂತೆ ಮಾಡಿದ ಆ ಮರ ಶಬ್ದವೇ ರಾಮನಾಮ ಆಗಿದೆ, ಅದರಲ್ಲಿಯ ರ ಠಕಾರವಾಗಿದೆ; ಪೂರ್ಣತ್ವದ ಆ ಠಕಾರದ ಸಾಕಾರ ವಾದ ಮಠವಾಗಿದೆ; ಅದರಿಂದ ಪೂರ್ಣತ್ವ ದೊರೆಯುವುದರಲ್ಲಿ ಸಂದೇಹವೇ ಇಲ್ಲ. ಮಠಾಧಿಪತಿಗಳಿಗೂ ಮಠದ ಶಿಷ್ಯ-ಭಕ್ತ

ರಿಗೂ ಮಂತದ ದಿವ್ಯ ಭವ್ಯ ಪರಂಪರೆಯ ಬಗ್ಗೆ ಪವಿತ್ರ ವಾತಾವರಣವನ್ನು ಕಾಯ್ದುಕೊಂಡು ಬರಬೇಕೆಂಬ ಭಾವನೆ ಜಾಗ್ರತ ಇದ್ದರೆ, ಅದು ನಿಜವಾಗಿಯೂ ಪೂರ್ಣತ್ವದ ಕೇಂದ್ರವೇ ಆದಂತೆ.

ಪೂರ್ಣತ್ವ ಕೇಂದ್ರದ ಒಡೆಯ ಸ್ವಾಮಿ ಎಂಬರ್ಥದ 'ಎಜಿರೆಯ' ಶಬ್ದದಲ್ಲಿಯ ರ – ವರ್ಣವೂ, ಹನಿಸು, ಸುರಿಸು ಎಂಬರ್ಥ ಕೊಡುವ 'ಏರೆ' ಪದದಲ್ಲಿಯ ರಕಾರವೂ ಮತ್ತು 'ಗುರು' ಮುಂತಾದ ಶಬ್ದಗಳ ರೇಫವೂ ಸಹ ಪೂರ್ಣವಾಗಿ ವರ್ತುಲಾಕಾರವನ್ನು ಹೋಲುತ್ತವೆ. ರವರ್ಣ, ರಕಾರ ಹಾಗೂ ರೇಫವೆಂದರೆ ಒಂದೇ.

'ಗುರು' ಎಂಬಲ್ಲಿಯ ರೇಫಕ್ಕೆ ಅಜ್ಞಾನಾಂಧಕಾರವನ್ನು ಬದಿಗೊತ್ತಿ, ಸುಜ್ಞಾನ – ಜ್ಯೋತಿ ಪ್ರಕಾಶವನ್ನು ಬೀರುವ ಸಾಮರ್ಥ್ಯ ಇದೆ. ಗುಕಾರವು ಅಂಧಕಾರದಂತಿದ್ದರೆ, ಆ ಅಂಧಕಾರದ ನಿರೋಧಕವು 'ರು'ಕಾರವಾಗಿದೆ. ಗುರುವು ಸರ್ವ ಸಮರ್ಥನೆಂದು ಅರ್ಥ ಹೇಳುವ ಈ ಮಾತಿನ ಈ ರಕಾರಕ್ಕೆ ಅಂದರೆ ರೇಫಕ್ಕೆ ಇಷ್ಟೊಂದು ಮಹತ್ವ ಬಂದದ್ದು – ಆ 'ರ' ಅಕ್ಷರಕ್ಕೆ ಇರುವ ಪೂರ್ಣ ದುಂಡಾಕಾರದ ಬಲದಿಂದ.

ಇಲ್ಲಿ 'ರಳ' ಎಂದರೆ ಅಟ್ – ಉಟ್ – ಕಟ್ – ಮುಟಿ – ಕೊಟಿ – ಮಾಟ್ಕೆ ಮುಂತಾದ ಶಬ್ದಗಳಲ್ಲಿಯ ಟಕಾರವು. ಅಳಿ – ಆಳ್ – ಬಳೆ – ಬೆಳೆ – ತಿಳಿ ಮುಂತಾಗಿರುವ ಪದಗಳಲ್ಲಿಯ ಳಕಾರವು 'ಕುಳ' ಎನ್ನಿಸಿಕೊಳ್ಳುತ್ತದೆ. ನಳಿನ – ಜಳಧಿ – ಕಾಳಿದಾಸ ಮೊದಲಾದ ಶಬ್ದಗಳು (ಸಂಸ್ಕೃತ ಶಬ್ದಗಳು ಕನ್ನಡದಲ್ಲಿ ಬಳಕೆಯಾದಾಗ ಅವುಗಳ ಲಕಾರವು ಳಕಾರವಾಗುವ ಪದ್ಧತಿಯನ್ನು ನೋಡುತ್ತೇವೆ; ಲ – ಳ, ರ – ಳ, ರ – ಡ, ವ – ಬ ಹೆಚ್ಚಿಗೆ ಭೇದವಿಲ್ಲೆಂದು ವ್ಯವಹರಿಸುತ್ತೇವೆ.) ಲಕಾರಕ್ಕೆ ಳಕಾರ

ವಾಗಿದ್ದರೆ ಅವುಗಳಿಗೆ ಕ್ಷಳವೆಂದು ಹೆಸರು. ಹೀಗೆ ರಳ, ಕುಳ ಹಾಗೂ ಕ್ಷಳವೆಂದು ಮೂರುಬಗೆಯ ಸಂಕೇತ ಬಳಕೆಯಲ್ಲಿವೆ.

ಹಳಗನ್ನಡದಲ್ಲಿ ಶಿವಶರಣರ ಪ್ರಾಚೀನ ವಚನಗಳನ್ನು ಬರೆಯುವಾಗ ಬಂಡಿಯ ರಕಾರವನ್ನು (ಶಕಟ ರೇಫವನ್ನು) ಬಳಸಲೇ ಬೇಕು. ಏಕೆಂದರೆ, "ಅಱಿದೊಡೆ ಶರಣ; ಮಱೆದೊಡೆ ಮಾನವ" ಎಂದುದಾಗಿ ಬರೆದರೆ, ಅದು ಶುದ್ಧ ಬರೆವಣಿಗೆ. ಅಱಿದೊಡೆ ಅಂದರೆ ತಿಳಿದೊಡೆ ಎಂದರ್ಥ. ಇದು ಇರಲೇ ಬೇಕಾದದ್ದೇ. ಅದರೆ 'ಅರಿದೊಡೆ' ಶರಣ, ಎಂದು ಬರೆದರೆ 'ಕತ್ತರಿಸಿದೊಡೆ' ಶರಣ. ಎಂದಾಗುತ್ತದೆ. ಕತ್ತರಿಸಿದೊಡೆ ಅರ್ಥಾತ್ ಅಜ್ಞಾನವನ್ನು ಪರಿಹಾರ ಮಾಡಿಕೊಂಡರೆ ಎಂದುದಾಗಿ ಅರ್ಥಮಾಡಿಕೊಳ್ಳಲು ಬರುತ್ತದಾದರೂ ಇದು ಇಲ್ಲಿ ಅಪ್ರಸ್ತುತ.

ಈ ರಳ – ಕುಳ – ಕ್ಷಳಗಳನ್ನು ಉಚ್ಚರಿಸುವಾಗ ಹೆಚ್ಚು ವ್ಯತ್ಯಾಸ ಅನ್ನಿಸದಿದ್ದರೂ, ಆ - ಆ ಸ್ಥಾನಕ್ಕೆ ತಕ್ಕಂತೆ ಬರೆಯುವಾಗ, ಮುದ್ರಿಸುವಾಗ ಈ ಮೂರನ್ನೂ ಸಮಯೋಚಿತವಾಗಿ ಉಪಯೋಗಿಸಬೇಕು.

ಕಾರಣ, ಯಾವುದೇ ವರ್ಣಮಾಲೆಯ ಸುತ್ತಿನ ಅಕ್ಷರವನ್ನು ಬರೆಯುವಾಗ ಸಾಧ್ಯವಾದ ಮಟ್ಟಿಗೆ ಸುಂದರವಾಗಿ, ಸ್ಪಷ್ಟ ತಿಳಿಯುವಂತೆ ಬರೆಯಬೇಕು. ಅದರಿಂದ ಓದಲು ಸರಳವಾಗಿ ಅರ್ಥಾಭಿವ್ಯಕ್ತಿಯ ಶಕ್ತಿಯೂ ಬಲಗೊಳ್ಳುತ್ತದೆ.

[ಪುಟ ೨೨]

'ಅಂ'ದಲ್ಲಿ ಇಹುದೆಂದೆ ಪದ–ಬಹು ವಚನ ಮತ್ತು
'ಕಾಯ ಕೇಲೇ ಪಾಹಿಜೇ'ದಲ್ಲಿ 'ಅಂ' ತೆತ್ತು,
'ಆತಾಂ' ಮರಾಠಿ ನುಡಿ ಲಿಖಿಸುವೆವು ಜೆಲೆ ಇತ್ತು.
ಲಿಖಿಸು; ಪೂರ್ಣ ಲಿಖಿಸದೆ ಬಿಡಬೇಡ ಜೇಸತ್ತು.

ಶಕ್ತಿಯ ಬಲದಿಂದ ಶಿವನು ಕಾರ್ಯ ತತ್ಪರನಾಗಿರುವಂತೆ ಕಂಠೋಷ್ಠಸ್ಥಾನದ ಈ ಓಂಕಾರದ ಮುಂದೆ ನಾಸಿಕಾ-ಸ್ಥಾನೋದ್ಭವವಾದ ಅನುಸ್ವಾರವು (ಪೂಜಿಯು) ಯಾವಾಗಲೂ ಇರುವುದರಿಂದಲೇ ಆ ಓಕಾರವು ಶಬ್ದ ಸೃಷ್ಟಿಯ ಪ್ರತೀಕದ ಓಂಕಾರ ಆಗುತ್ತದೆ. ಅಂದರೆ, ಪೂಜಿ ಇಲ್ಲದೇನೇ ಪೂಜೆಗೊಳ್ಳುವ ಪೂಜ್ಯತ್ವವು ಆ ಗುರುವಾದ (ಲಘುವಲ್ಲದ) ಓಕಾರಕ್ಕೆ ಲಭ್ಯವಾಗುವುದಿಲ್ಲ.

ಕ್ರಮವಾಗಿ ಓಕಾರ-ಮಕಾರದಿಂದ ಕೂಡಿ, ಜೋಡಿಯಿಂದಾದ ಓಂಕಾರಕ್ಕೆ ಪೂಜಿಯಿಂದ ಮಹತ್ವ ಬರುತ್ತದೆ. ಇಂಥ ಪೂಜೆಯೇ ಅನುಸ್ವಾರವು. ಈ ಅನುಸ್ವಾರವು ಭಾರತೀಯ ಭಾಷೆಯ ವರ್ಣಮಾಲೆಯಲ್ಲಷ್ಟೇ ಇದ್ದುದನ್ನು ಕಾಣುತ್ತೇವೆ. ಭಾರತೀಯೇತರ ಭಾಷೆಯ ಲಿಪಿಯಲ್ಲಿ ಅನುಸ್ವಾರವನ್ನು ಅನುಸ್ವಾರವನ್ನಾಗಿಯೇ ಹೇಳಲು, ಅನುಸ್ವಾರದಷ್ಟು ತೂಕದ ಪೂರ್ಣ ಸಮಾನಾರ್ಥದ ವರ್ಣಗಳಿಲ್ಲ. ಅಲ್ಲಿ ಬೇರೇ ವರ್ಣಗಳಿಂದ ಹೇಗೋ ಆ ಕಾರ್ಯ ಸಾಗಿಸುತ್ತಾರೆ. ಉದಾಹರಣೆಗೆ : ಇಂಗ್ಲೀಷಿನಲ್ಲಿ ಎಮ್‌ದ ಮೇಲೆ ಪೂರ್ಣತ್ವರೂಪದ ಒಂದು ಸಣ್ಣ ಚುಕ್ಕೆಯನ್ನಿಡುತ್ತಾರೆ. ಉರ್ದುವಿನ ಹರ್ಫ-ಲಬ್‌ಜಗಳಲ್ಲಿ ಪೂರ್ಣತ್ವದ ಬಿಂದುವನ್ನೊಳಗೊಂಡ 'ನೂನ್'ದಿಂದ ಸಂತುಷ್ಟರಾಗಬೇಕಾಗುತ್ತದೆ.

ಸ್ವಂತದ ಅಸ್ತಿತ್ವವನ್ನು ವ್ಯಕ್ತಿತ್ವವನ್ನು ಮಹತ್ವವನ್ನು ಕಾಯ್ದುಕೊಂಡು ತನ್ನ ಗುರು ರೂಪದ ಮಹಿಮಾತಿಶಯವನ್ನು ಹೆಚ್ಚಾಗುವಂತೆ ಬೆಳೆಸುತ್ತಿರುವ ಅನುಸ್ವಾರಕ್ಕೆ ಅಕಾರಾದಿ ಬೇರೆ-ಬೇರೆ ಸ್ವರ ವರ್ಣಗಳಿಲ್ಲದೆ ಉಚ್ಚಾರಣೆಯೇ ಆಗದಂತಿದ್ದರೂ ಸಹ, ಪೂರ್ಣಾಕಾರದಿಂದ ದುಂಡಾಗಿರುವ ಸಲುವಾಗಿಯೆ ಆ ಪೂಜಿಗೆ

ಗುರುತ್ವ ಸಂಜ್ಞೆಯು ಬಂದಿದೆಯೆನ್ನಲಡ್ಡಿಯಿಲ್ಲ. ಈ ತನ್ನ ವರ್ತುಲಾಕಾರದ ಪ್ರಭಾವದಿಂದಲೇ ಅನುಸ್ವಾರ ಮತ್ತು ವಿಸರ್ಗ ಜಿಹ್ವಾಮೂಲೀಯ-ಉಪಧ್ಮಾನೀಯಗಳೆಲ್ಲವೂ ಎರಡೆರಡು ಮಾತ್ರೆಗಳುಳ್ಳದಾಗಿವೆ. ಅಂದರೆ ಗುರು ಸಂಜ್ಞೆ ಹೊಂದಿವೆ. ಇನ್ನುಳಿದ ಸ್ವರ ಹಾಗೂ ಅರ್ಧ ಮಾತ್ರೆಯವುಗಳಾದ ವ್ಯಂಜನಗಳ ಜೊತೆಗೆ ಸರಿ-ಸಮಾನತೆಯ ಗೆಳೆತನ ಮತ್ತು ಗುರು-ಪೂಜ್ಯತೆಯು ಪಕ್ಕಾ ಈ ಅನುಸ್ವಾರಾದಿಗಳಿಗೆ ಇದ್ದೇ ಇದೆ. ಒಮ್ಮೊಮ್ಮೆ ಸಮಾನ ಸ್ಥಾನ-ಪ್ರಯತ್ನಗಳಿಲ್ಲದಿದ್ದರೂ ಲಘುಗಳಾಗಿರುವ ಹ್ರಸ್ವ ಸ್ವರಗಳಿಗೂ ವ್ಯಂಜನಗಳಿಗೂ ಪೂಜೆಯ ಬಲದಿಂದ ಅವುಗಳಿಗೆ ಪೂಜ್ಯತೆ ಅದ್ಯತೆ ಪ್ರಾಪ್ತವಾಗುತ್ತದೆ. ವರ್ಣಗಳಿಗೆ ಸ್ಥಾನವೆಂದರೆ ಕಂಠ-ತಾಲ್ವಾದಿಗಳು; ಪ್ರಯತ್ನವೆಂದರೆ, ಘೋಷ ಸಂವಾರಾದಿ ಬಾಹ್ಯಾಭ್ಯಂತರ ಪ್ರಯತ್ನಗಳು. ಈ ಎಲ್ಲ ಕಾರಣಗಳಿಂದಾಗಿ ಅನುಸ್ವಾರದ ಬಲದಿಂದ ಹ್ರಸ್ವಸ್ವರವಿದ್ದ ವರ್ಣಗಳೂ ಸಹ ಛಂದಃಶಾಸ್ತ್ರದ ರೀತಿಯಿಂದ ಮಾತ್ರಾ-ದ್ವಯದ ಗುರು-ವರ್ಣಗಳಾಗುತ್ತವೆ. ಅಂತೆಯೇ ಅವು ಪೂರ್ಣದ ಪೂಜೆಯ ಕೃಪೆಯಿಂದ ಮಾತ್ರಾಗಣದಲ್ಲಿ ಅಥವಾ ಅಕ್ಷರಗಣದಲ್ಲಿ ಸ್ಥಾನ ಪಡೆಯುತ್ತವೆ. ಇದೆಲ್ಲವೂ ಪೂರ್ಣತ್ವದಾಕಾರದ ಪೂಜೆಯೆಂಬ ಅನುಸ್ವಾರದ ಬಲದಿಂದ.

ಅನುಸ್ವಾರದ (ಪೂಜೆಯ) ನಿಜವಾದ ಅರ್ಥವನ್ನು ಅದೇ ಅನುಸ್ವಾರ ಶಬ್ದದ ವ್ಯುತ್ಪತ್ತಿಯ ವಾಚ್ಯಾರ್ಥದಲ್ಲಿ ನಿಚ್ಚಳವಾಗಿ ಗೋಚರಿಸುವುದನ್ನು ಕಾಣಬಹುದು. ಅನು + ಸ್ವ + ಅರಃ = ಅನುಸ್ವಾರಃ; ಅನು = ಅನುಸೃತ್ಯ, ಸ್ವ = ಸ್ವರೂಪೇಣ, ಅರೋ ಭವತೀತಿ, ಅನುಸ್ವಾರಃ. ಅರಃ = ಬಂಡೀಗಾಲಿಯ ಬುಟೆ. ಅನುಸರಣದಿಂದಲೂ ಸ್ವರೂಪದಿಂದಲೂ ಬುಟೆಯಾಗಿದ್ದದ್ದು

ಅನುಸ್ವಾರವು; ಪೂಜಿಯು. ಅಂದರೆ ತನ್ನ ಮೊದಲಿನ ಓಕಾರಾದಿ ವರ್ಣಗಳನ್ನು ಅನುಸರಿಸುತ್ತ ಸ್ವ-ಸ್ವರೂಪದ ಸಾಮರ್ಥ್ಯದಿಂದ ಮತ್ತೊಂದಕ್ಕೆ ಆಶ್ರಯವಾಗಿಯೂ ಹಾಗೆಯೇ ತಾನೂ ಅದರಿಂದ ಆಶ್ರಿತವಾಗಿಯೂ ಇದ್ದುದೇ ಅನುಸ್ವಾರವೆಂಬುವ ಪೂಜಿಯು. ಎತ್ತಿನ ಗಾಡಿಯು ಗಾಲಿಗಿರುವ ಗಡ್ಡೆಗೆ ಆಶ್ರಯ ವಾಗಿಯೂ, ತಾನು ಆ ಗಡ್ಡೆಗೆ ಆಶ್ರಿತವಾಗಿಯೂ ಪರಸ್ಪರವಾಗಿ ಹೊಂದಾಣಿಕೆಯ ಸಹಾಯದಿಂದ ಅಸ್ತಿತ್ವವನ್ನು ಕಾಯ್ದುಕೊಂಡಿ ರುವ ಬುಟೆಯಂತೆಯೇ (ಅದರಂತೆಯೇ) ಈ ಅನುಸ್ವಾರವು ತನ್ನ ಯೋಗ್ಯತೆಯ ಕಾರ್ಯಶೀಲತೆಯನ್ನು ಕಾಪಾಡಿಕೊಳ್ಳುತ್ತಿರು ತ್ತದೆ. "ಅನ್ಯೈಃ ಸಂಧಾರ್ಯತೇ ಸಾಭಿಃ; ನಾಭೌ ಚ ಅರಾಃ ಪ್ರತಿಷ್ಠಿತಾಃ".

ಘನತೆಯಿಂದ ಗೋಲಾಕಾರವಾಗಿರುವ ಗಡ್ಡೆಗೆ ತನ್ನ ಸಂಘ ಟನಾ ಶಕ್ತಿಯ ಬಲದಿಂದ ತಾನು ಚಕ್ರಾಕಾರವಾಗಿ, ಆ ಚಕ್ರದ ನೇಮಿಯ ನಿಯಮನದಿಂದ ವರ್ತುಲಾಕಾರವಾಗಿರುವಂತೆ ಕಾಣುವ ಅರದಂತೆ (ಬುಟೆಯಂತೆ) ಅನುಸ್ವಾರವೂ ಸಹ ಅನ್ಯೋನ್ಯಾಶ್ರಯಕ್ಕೆ ಯೋಗ್ಯವಾಗಿ ಪೂರ್ಣತ್ವವನ್ನು ಸುಸ್ಪಷ್ಟ ಗೊಳಿಸುವ ತಕ್ಕುದಾಗಿದೆಯೆಂದು ಮುಂತಾಗಿ ಲಕ್ಷ್ಯಾರ್ಥ- ವ್ಯಂಗ್ಯಾರ್ಥಗಳು ವ್ಯಕ್ತವಾಗುತ್ತವೆ.

ಹೀಗೆ ತನಗಿಂತ ಬೇರೆಯಾದ ವರ್ಣಗಳ ಜೊತೆಗೆ ಹಿತ- ಮಿತವಾಗಿ ವ್ಯವಹರಿಸುತ್ತಿರುತ್ತದೆಂದೇ ಮರಾಠಿ ಹಿಂದಿ ಮುಂತಾದ ಭಾಷೆಯ ಬಹುವಚನದ ಶಬ್ದದ, ಪ್ರತ್ಯಯ- ಸಹಿತದ ಕ್ರಿಯಾಪದಗಳ ಹಾಗೂ ಅವ್ಯಯ ಪದಗಳ ತಲೆಯ ಮೇಲೆ ಬಿಂದುವಿನ ಆಕಾರದಲ್ಲಿ ಪೂರ್ಣತ್ವದ ಸಣ್ಣ-ಸಣ್ಣ ಚುಕ್ಕೆಗಳನ್ನು ಮೇಲಿನ ಮಟ್ಟದಲ್ಲಿರಿಸಿ, ವ್ಯವಹರಿಸುತ್ತಿದ್ದೇವೆ.

ಬದಲತ್ಯಾ ಕಾಳಾಚ್ಯಾ ಓಘಾಬರೋಬರ ಆಜಚೀ ವಾಚಕ ಜನತಾ ಪ್ರಗತೀಚೀ ವಾಟ ಚಾಲತ ಆಹೇ. ತಿಚ್ಯಾ ಗರಜಾ ವಾಢತ ಆಹೇತ; ವಿಚಾರ-ಸರಣೀ ಬದಲತ ಆಹೇ. ನವ್ಯಾಚಾ ಶೌಕ ತಿಲಾ ಹವಾ ಆಹೇ. ಅಶಾ ವೇಳೀ "ಪೂರ್ಣತ್ವ" ಬದ್ದಲ್ ನವ-ನವೀನ ಪ್ರಕಾರಚ್ಯಾ ಸರ್ವ ಪದ-ವಸ್ತು ಏಕಾಚ ಠಿಕಾಣೀ ಮಿಳಾಲ್ಯಾ, ತರ ಜನತಾ ತ್ಯಾ ಯೋಜನೇ ಚೇ ಸ್ವಾಗತಚ ಕರೀಲ. ತ್ಯಾಮುಳೇ ತಿಚ್ಯಾತ, ಶ್ರಮಾತ ಆಣಿ ವೇಳೇತ ಕಿತೀ, ತರೀ ಬಚತ ಹೋಈಲ. ಯಾ ಕಲ್ಪನೇತೂನಚ "ಪೂರ್ಣ-ತ್ವ"ಚೀ ಕಲ್ಪನಾ ಆಜ ಪ್ರತ್ಯಕ್ಷಾತ ಆಲೀ ಆಹೇ. ಏಕಚ ಗ್ರಂಥಾ ಮಧ್ಯೇ ಸರ್ವ ವಸ್ತು-ಪದ ಮಿಳಣ್ಯಾಚೀ ಆಮಚೀ ವಾಚಕ ಜನತೇಚೀ ಅಪೇಕ್ಷಾ "ಪೂರ್ಣತ್ವ" ಪೂರ್ಣ ಕೇಲೀ ಆಹೇ. ತ್ಯಾ ಸಾಠೀ ಆತಾ ಪೂರ್ಣ ಕಾಮ ಕೇಲೇ ಪಾಹಿಜೇ. ಬಿಂದು ಮುಂತಾಗಿ ಇಷ್ಟನ್ನೇ ಹೇಳುವಾಗ ಉಪಯೋಗಿಸಲ್ಪಟ್ಟ ಬಿಂದುಗಳ ಸಂಖ್ಯೆ ಬಹಳ. ಪೂರ್ಣತ್ವದ ಬಿಂದು ಇದ್ದದ್ದರಿಂದಲೇ ಈ ಮೇಲಿನ ವಾಕ್ಯಗಳ ಮಧುರವಾದ ಅರ್ಥಾಭಿವ್ಯಕ್ತಿಯು ಪ್ರಭಾವಯುಕ್ತವಾಗುತ್ತದೆ.

ಪೂರ್ಣ ಬಿಂದುವಿಗೆ ಸಮಾನವಾದ ಅನುಸ್ವಾರ ಅಥವಾ ಪೂಜೆಯು ಗೆಳೆತನವಿಲ್ಲದ ಮಂತ್ರವೇ ಇಲ್ಲವೆನ್ನಬಹುದು. ಮಂತ್ರಕ್ಕೆ ಪ್ರಣವದ ಸಹಕಾರ ಬೇಕು. ಮಂತ್ರಗಳು ನಾನಾ; ಕೋಟಿ, ಕೋಟಿ. ಅಂಥ ಸಪ್ತ ಕೋಟಿ ಮಹಾಮಂತ್ರಗಳಲ್ಲಿ (ಮಂತ್ರಗಳು ಪುಲ್ಲಿಂಗ, ಸ್ತ್ರೀಲಿಂಗ ಹಾಗೂ ನಪುಂಸಕವುಗಳೂ ಇವೆಯೆಂದು ಆಗಮದಲ್ಲಿ ಅವುಗಳ ವಿಸ್ತಾರದ ಪ್ರಸ್ತಾಪ ಇದೆ.) ಶಿರೋಮಣಿ ಆಗಿದೆ—ಪ್ರಣವ ಸಹಿತ ಪಂಚಾಕ್ಷರೀ ಮಹಾ ಮಂತ್ರ. ಆ ಷಡಕ್ಷರ ಮಂತ್ರದಲ್ಲಿಯೂ ಮೊದಲ

ಸ್ಥಾನವು ಓಂಕಾರಕ್ಕೆ. ಈ ಓಂಕಾರದ ಸಂಸ್ಕೃತದ ಚಿಹ್ನೆಯು ತಲೆಗೆ ಕಿರೀಟಪ್ರಾಯವಾಗಿದೆ—ಈ ಅನುಸ್ವಾರದ ಪೂರ್ಣ ಬಿಂದುವು.

ಕಾರಣ, ಅದೆಷ್ಟೇ ಉನ್ನತದ ಸ್ಥಾನಕ್ಕೇರಿದರೂ ಪೂರ್ಣ ಸ್ವಭಾವದವರಾಗಿರಬೇಕು. ಸ್ಥಾನ–ಮಾನ–ಮರ್ಯಾದೆ ಕಾಯ್ದು ಕೊಳ್ಳುತ್ತಿರಬೇಕು; ಗರ್ವಕ್ಕಿಂಬಿರಬಾರದು.

[ಪುಟ ೨೩]

ಬಂಗಾಲಿ ಅಂ, ಅಃ ವ ಚಂದ್ರ ಬಿಂದುವು, ಮತ್ತು
ಅದರಂತೆ 'ಯ–ರ–ಡ–ಢ ದ ಕೆಳಗೆ ಬಿಂದುವನಿತ್ತು,
ಶಕ್ತಿ ಸಾಹಿತ್ಯಾರ್ಥ ಹೇಳುವೆವು ಮನವಿತ್ತು.
ಹೇಳು; ಪೂರ್ಣ ಮುಗಿಸದೆ ಬಿಡಬೇಡ ಬೇಸತ್ತು.

ಗರ್ವಕ್ಕಿಂಬಿರದಂತೆ ಬಾಳಬೇಕಾದರೆ, ಅವರವರಿಗೆ, ಅವರವರ ಭಾಷೆಗೆ, ಅವರವರ ಭಾವನೆಗೆ ತಕ್ಕುದಾದ ಸ್ಥಾನ ಮಾನ ಮರ್ಯಾದೆಯನ್ನು ಸಲ್ಲಿಸಬೇಕಾಗುತ್ತದೆ.

ಮೊದಲು "ಸುಜಲಾಂ ಸುಫಲಾಂ...ಸಸ್ಯ–ಶ್ಯಾಮಲಾಂ... ಮಾತರಂ ವಂದೇ" ಎಂಬುದಾಗಿ ಪೂರ್ಣತ್ವದ ಬಿಂದುವಿನ ಉಚ್ಚಾರಣೆಯೇ ಪ್ರಧಾನವಾಗಿದ್ದ "ವಂದೇ ಮಾತರಂ" ಎಂಬ ಸಂಸ್ಕೃತ ಭಾಷೆಯ ಗೀತೆಯಿಂದ ಭಾರತ–ಮಾತೆಯ ಗುಣಗಾನ ಮಾಡಿ, ನಮ್ಮ–ನಮ್ಮ ರಾಷ್ಟ್ರಭಕ್ತಿಯನ್ನು ವ್ಯಕ್ತ ಮಾಡುತ್ತಿದ್ದೆವು. ಆದರೆ, ಇದೀಗ "ಪಂಜಾಬ ಸಿಂಧು...ವಂಗ...ತರಂಗ" ಎಂದು ಮುಂತಾಗಿ "ಜನ–ಗಣ–ಮನ–ಅಧಿನಾಯಕ! ಜಯಹೇ!" ಎಂದು ಬಂಗಾಲೀ ಭಾಷೆಯಿಂದಾದ ಭಾರತದ ರಾಷ್ಟ್ರಗೀತೆಯನ್ನು ಹಾಡುತ್ತಿದ್ದೇವೆ. ಆ–ಈ ಎರಡೂ ಗೀತಗಳಲ್ಲಿ ಪೂರ್ಣತ್ವದ ಧ್ವನಿಯು ಸುಸ್ಪಷ್ಟವಾಗಿದೆ; ರಾಷ್ಟ್ರದ ಬಗ್ಗೆ ಪೂರ್ಣ ಅಭಿಮಾನವನ್ನು ಹೆಚ್ಚಿಗಾಗುವಂತೆ ಮಾಡಿಸಲು ಸಮರ್ಥ ಆಗಿವೆ.

ಭಾರತೀಯ ವರ್ಣಮಾಲೆಯ ಪದ್ಧತಿಯನ್ನನುಸರಿಸಿ, ವ್ಯವಹಾರದಲ್ಲಿರುವ ಇನ್ನುಳಿದ ಭಾಷಾ ಲಿಪಿಗಳಲ್ಲಿದ್ದಂತೆ, ಬಂಗಾಲಿ ಲಿಪಿಯಲ್ಲಿಯೂ ಅನುಸ್ವಾರ, ವಿಸರ್ಗಗಳಂತೆ ಚಂದ್ರಬಿಂದುವಿಗೂ ಸಣ್ಣ ಬಿಂದುವನ್ನಿತ್ತು ಬರೆಯುತ್ತೇವೆ. ಬಂಗಾಲಿ ಲಿಪಿಯಲ್ಲಿ ಚಂದ್ರ ಬಿಂದುವೆಂದರೆ ಈ ಮೊದಲು ಹೇಳಿದಂತೆ ಸಂಸ್ಕೃತದ ಶ್ರೀ ಚಿಹ್ನೆಯಲ್ಲಿ ಮೇಲಿನ ಅರ್ಧಚಂದ್ರಾಕೃತಿಯ ಗೆರೆ ಹಾಗೂ ಅದರ ಮೇಲಿರುವ ಬಿಂದು. ಎರಡೂ ಚಂದ್ರಬಿಂದು ಎಂದು ಕರೆಯುತ್ತೇವೆ.

ಈ ಮೂರೂ ವರ್ಣಗಳಲ್ಲದೆ ಬಂಗಾಲೀ ಲಿಪಿಯಲ್ಲಿಯ ಆ ಭಾಷೆಯ ಶಬ್ದಗಳನ್ನು. ಆ ಲಿಪಿಯಲ್ಲಿಯೇ ಬರೆಯುವಾಗ ಯ-ರ - ಡ - ಢ ಅಕ್ಷರಗಳ ಕೆಳಭಾಗದಲ್ಲಿ ಪೂರ್ಣ ಪೀತ ರೂಪದ ಬಿಂದುವನ್ನಿತ್ತು ನವದುರ್ಗಾಶಕ್ತಿಯ ಉಪಾಸನಾ-ಪ್ರಧಾನವಾದ ವಂಗ ಸಾಹಿತ್ಯವನ್ನು ಬರೆದು ಹೇಳುವ ಪದ್ಧತಿ ಇದೆ. ಈ ಪದ್ಧತಿಯು ಜುಗ - ಜುಗಾಂತರಕ್ಕೂ ಸಕ್ರಮವಾಗಿ ಪ್ರಗತಿಶೀಲ ಆಚ್ಛೆ.

[ಪುಟ ೨೫]

ಉರ್ದು ಬೆ-ಪೆ-ತೆ-ಸೆ-ಜೀಮು-ಚೆ-ಖೆ-ಜಾಲ್-ಜೆ-ಷೀನ್ ಮತ್ತು
ಜ್ವಾದ್-ಜೊ-ಗೈನ್-ಫೇ-ಕಾಫ್ ವ ನೂನ್‌ಗೆ ಬಿಂದುವನಿತ್ತು,
ಲಿಖಿಸುನೆವು ; 'ಹೆ' ಅಂತು, ಪೂರ್ಣ ಪೂರ್ಣದ ಗೊತ್ತು.
ಲಿಖಿಸು ; ಪೂರ್ಣ ಲಿಖಿಸದೆ ಬಿಡಬೇಡ ಬೇಸತ್ತು.

ಪ್ರಗತಿಶೀಲವೂ ಅಚ್ಛ - ಕೀರ್ತಿಪ್ರದಾಯಕವೂ ಆದ ಭಾರತೀಯ ಪದ್ಧತಿಯನ್ನು ಬಿಡದೆ, ನವೀನತೆಯನ್ನು ಅನುಸರಿಸಿಕೊಂಡು ಬಾಳುತ್ತಿರುವ ಭಾರತೀಯರಾದ ನಾವು, ೯೮೭೬೫೪೩೨೧=೦೦ ಎಂದು ಮುಂತಾದ ದೀರ್ಘ ಸಂಖ್ಯೆಯನ್ನು ಓದುವಾಗ ಮಾತ್ರ, ಏಕಂ- ದಶ-ಶತಂ-ಸಹಸ್ರಂ-ದಶಸಹಸ್ರಂ - ಲಕ್ಷಂ - ದಶಲಕ್ಷಂ - ಕೋಟಿಃ - ದಶಕೋಟಿಃ, ಎಂಬು

ದಾಗಿ ಮೊತ್ತ ಮೊದಲು, ಓದುವವರು ತಮ್ಮ ಬಲದಿಂದ ಎಡಕ್ಕೆ ಓದಿಕೊಂಡ ನಂತರ, ಕೊನೆಯಲ್ಲಿ ಒಟ್ಟಿಗೆ, ತೊಂಭತ್ತೆಂಟು ಕೋಟಿ ಎಪ್ಪತ್ತಾರು ಲಕ್ಷ– ಐವತ್ನಾಲ್ಕು ಸಾವಿರ – ಮೂರು ನೂರಾ ಇಪ್ಪತ್ತೊಂದು (ರೂಪಾಯಿಗಳು) ಎಂದು ಓದುತ್ತೇವೆ.

ಉರ್ದು (ಮುಸಲ್ಮಾನಿ) ಲಿಪಿಯನ್ನೆಲ್ಲ ಸಂಪೂರ್ಣವಾಗಿ ಬಲದಿಂದ ಎಡಗಡೆಗೆ ಬರೆದರೂ ಸಹ, ಆ ಉರ್ದೂ ಲಿಪಿಯಲ್ಲಿ ಬರವಣಿಗೆ ಮಾಡುವವರು ಪೂರ್ಣತ್ವದ ಆಕಾರವಾದ ದುಂಡು ಪೂಜಿಯನ್ನು ಮಾತ್ರ ತಮ್ಮ ವರ್ಣಮಾಲೆಯಲ್ಲಿಯೂ ಬರೆಯುತ್ತಿರುವುದನ್ನು ಕಾಣುತ್ತೇವೆ. ಅವರ ಅಂಕೆಯ ನಿಯಮ ಬೇರೆ ಇದ್ದರೂ ಅವರು ದಸ್ ಬೀಸ್ ತೀಸ್ ಮುಂತಾದ ಹತ್ತು–ಹತ್ತರ ದಶಕದ ಸಂದರ್ಭದಲ್ಲಿ ಬರೆಯುವಾಗ ಅನುಸ್ವಾರದಂತಹ ಪೂರ್ಣತ್ವದ ದುಂಡು ಪೂಜಿಯನ್ನೇ ಬರೆಯುತ್ತಾರೆ.

'ಪೂರ್ಣತ್ವ' ಪುಸ್ತಕದಲ್ಲಿ ಪ್ರತಿಪಾದಿಸಲ್ಪಟ್ಟ ತತ್ತ್ವಗಳು ಮೂವತ್ತಾರು. ಅವರಲ್ಲಿಯ 'ತ್ತ'ಕಾರದ ಪ್ರಯೋಗವು ಒಂದು ನೂರಾ ಮೂವತ್ತಾರು ಸಲ ಆಗಿದೆ. ಈ ಸಂಖ್ಯೆಯಲ್ಲಿಯ ನೂರರ ಒಂದೆಂಬ ಅಂಕೆಯು ನಿರ್ಲಿಪ್ತವಾಗಿ ಒಂದೇ ಒಂದೆಂಬ ಅಂಕೆಯನ್ನು ಹೋಲುವಾಗಿನ, ಪೂರ್ಣತ್ವಕ್ಕೆ ಅತಿ ನಿಕಟವಾದ, ಪೂರ್ಣಾಕಾರವಾಗದ, ಒಂದಂಕೆ. ಮೂವತ್ತಾರೆಂಬುದು ಶತಮಾನಕ್ಕೆ ಊನ– ಊನವಾದದ್ದು ; ದಶ ದಶಕಕ್ಕೆ ಒಳಗೊಂಡದ್ದು. ಶಿವಾದಿ ಪೃಥ್ವ್ಯಂತಮಾದ ಸಮಸ್ತ ವಿಶ್ವವಾದ ಪೂರ್ಣತ್ವದ ಸಂಕೇತ. ಶತಮಾನಕ್ಕೊಳಪಟ್ಟು ನಿರವಯವ ಸ್ಥಿತಿಗೆ ಒಂದಾಗಿರುವ ಒಂದಂಕೆ+ಮೂವತ್ತಾರು ತತ್ತ್ವಗಳು ಹೀಗೆ (೧೦೦+೩೬=೧೩೬) ಒಂದ ನೂರಾ ಮೂವತ್ತಾರು.

ಮೂವತ್ತಾರೆಂಬುದು ಕನ್ನಡದಲ್ಲಿ ಮೂರ್ × ಹತ್ತು =

ಮೂವತ್ತು (೩×೧೦×೩೦); ಮೂವತ್ತು + ಆರು = ಮೂವತ್ತಾರು (೩೦+೬+೩೬); ಎಂದು ೩೬ನ್ನು ಸಿದ್ಧಿಸಿ ಬಳಸುತ್ತೇವೆ. ಅಂದರೆ, ಕನ್ನಡದಲ್ಲಿ ದಶಕದ ಮುಂದೆ ಬಿಡಿ–ಬಿಡಿ ಅಂಕೆಗಳನ್ನು ಜೋಡಿಸಿ ಸಂಖ್ಯೆಯನ್ನಾಗಿಸಿ ವ್ಯವಹರಿಸುತ್ತೇವೆ. ತೆಲುಗಿನಲ್ಲಿ ಮುಪ್ಪತ್ + ಆರು = ಮುಪ್ಪೈಯಾರು; ತಮಿಳಿನಲ್ಲಿ ಮುಪ್ಪತ್ತು + ಆರು = ಮೂಪ್ಪತ್ತಾರು; ಪ್ರಚಲಿತವಿರುವ ಇಂಗ್ಲೀಷಿನಲ್ಲಿಯೂ ಹೀಗೆಯೇ ಥರ್ಟೀ + ಸಿಕ್ಸ್ = ಥರ್ಟೀ–ಸಿಕ್ಸ್; ದಶಕ + ಬಿಡಿ = ದಶಕದ ಜೊತೆಯ ಬಿಡಿ. ಆದರೆ, ಪಂಚ ದ್ರಾವಿಡೇತರ ಭಾಷೆಗಳಲ್ಲಿ (ಇಂಗ್ಲೀಷಿನದು ಅಪವಾದ) ಸಂಸ್ಕೃತ ಮತ್ತು ಸಂಸ್ಕೃತೋದ್ಭವ ಭಾಷೆಗಳಲ್ಲಿ ಮೊತ್ತಮೊದಲು ಬಿಡಿ ಅಂಕೆ, ತದನಂತರ ದಶಕದ ಅಂಕೆ. ಸಂಸ್ಕೃತ: ಷಟ್ + ತ್ರಿಂಶತ್ = ಷಟ್‌ತ್ರಿಂಶತ್; ಮರಾಠಿ: ಸಹಾ + ತೀಸ = ಸಾತೀಸ್; ಹಿಂದೀ: ಛಹ + ತೀಸ = ಛತ್ತೀಸ್; ಉರ್ದುವೂ ಹೀಗೆಯೇ.

ಉರ್ದೂ ಲಿಪಿಯ ವರ್ಣಮಾಲೆಯಲ್ಲಿಯ ಕೆಲವೊಂದು ವರ್ಣಗಳಿಗೆ ಪೂರ್ಣತ್ವದ ದುಂಡು ಬಿಂದುವನ್ನು ಪ್ರಯೋಗಿಸುತ್ತಿರುವುದನ್ನು ಕಾಣಬಹುದು. ಬೆ–ಪೆ ವರ್ಣಗಳ ಕೆಳಭಾಗದಲ್ಲಿ; ತೆ–ಸೆ–ಖೆ–ಜಾಲ್–ಜೆ–ಶೀನ್–ಜ್ವಾದ್–ಜೊಯೇ–ಗೈನ್–ಫೆ–ಕಾಫ್ ವರ್ಣಗಳ ಮೇಲ್‌ಭಾಗದಲ್ಲಿ; ಮತ್ತು ಜೀಮ್–ಚೆ–ನೂನ್ ವರ್ಣಗಳ ಮಧ್ಯಭಾಗದಲ್ಲಿ ಪೂರ್ಣತ್ವದ ದುಂಡು ಬಿಂದುವನ್ನಿತ್ತು ಬರೆಯಲಾಗುತ್ತದೆ. (ಈ "ಉರ್ದೂ ಜಿಪೆ" ಪದ್ಯದ ಅಸಲು ಲಿಪಿಯನ್ನು ಇಪ್ಪತ್ನಾಲ್ಕನೆಯ ಪುಟದಲ್ಲಿ ನೋಡಬಹುದು.)

ಪೂರ್ಣ ದುಂಡಾಕಾರದಲ್ಲಿರುವ 'ಹೆ' "೦" ಎಂಬುದಂತೂ ಉರ್ದೂ ವರ್ಣಮಾಲೆಯಲ್ಲಿರುವ ಪೂರ್ಣತ್ವದ ಒಂದು ವಿಶಿಷ್ಟವಾದ ಗುರುತಾಗಿದೆ. ಆ 'ಹೇ' '೦' ವರ್ಣವನ್ನು ಎಡದಿಂದ

ಪ್ರಾರಂಭಿಸಿ ಬಲಕ್ಕೆ ಅಥವಾ ಬಲದಿಂದ ಎಡಕ್ಕೆ, ಹೇಗಾದರೂ ತಿಳಿದು ಅಥವಾ ತಿಳಿಯದಲೆ ಬರೆದರೂ ಅದು ದುಂಡಾಕಾರದ್ದೇ ಆಗಿರುತ್ತದೆ. ಪೂರ್ಣವು ಪೂರ್ಣವೇ. ಸುಡುವ ಅಗ್ನಿ ಸುಡುವ ಅಗ್ನಿಯೇ. "ಮುದ್ದಯೀ ಲಾಖ್ ಬುರಾ ಚಾಹೇ ತೋ ಕ್ಯಾ! ಹೋತಾ ವಹೀ ಹೈ ಜೋ, ಖುದಾ ಕೀ ಮರ್ಜೀ ಹೈ" ಅರ್ಥಾತ್ "ಭಾಗ್ಯಂ ಫಲತಿ ಸರ್ವತ್ರ"; ಅಂದರೆ "ಕೂಡಲ ಸಂಗಮ ದೇವನು ಬರೆದ ಬರೆಹವ ತಪ್ಪಿಸುವೊಡೆ ಹರಿ–ಬ್ರಹ್ಮಾದಿಗೆ ಅಳವಲ್ಲ". ಬೆಂಕಿ ಬೆಂಕಿಯಾಗಿದ್ದು, ಬೆಂಕಿಯಾಗಿ ಇದ್ದರೇನೇ ಅದಕ್ಕೆ ಬೆಂಕಿಯೆನ್ನುತ್ತೇವೆ. ಅದೇ ಬೆಂಕಿ ಇಲ್ಲದ ಬೆಂಕಿ ಕೆಂಡವಾದರೆ ಕರಿ ಇದ್ದಲು; ಅಥವಾ ಅದೇ ಬೆಂಕಿ–ಇಲ್ಲದ ಬೆಂಕಿ ಪುಡಿ ಆದರೆ ಬೂದಿ. ಅದ್ದರಿಂದ ಬೆಂಕಿ ಇದ್ದದ್ದೇ ಬೆಂಕಿ.

ಕಾರಣ, ಪೂರ್ವೇತರ ದಿಕ್ಕಿನ ಕಡೆಗೆ ಮುಖಮಾಡಿ, ಉಪಾಸನೆ ಮಾಡಿದರೂ, ಮತ್ತು ಸಾಕಾರ ಚಂದ್ರಶೇಖರ ಮೂರ್ತಿಯನ್ನು ಗುರುತಿಸದೆ, ಕೇವಲ ಅರ್ಧಚಂದ್ರ–ಸಂಕೇತವನ್ನು ಗುರುತಿಸುತ್ತಿದ್ದರೂ ಕೂಡ, ಪೂರ್ಣತ್ವವನ್ನು ಬಿಡಲು ಯಾರಿಂದಲೂ ಆಗದು. ಆದರೂ ಸಹ ಪೂರ್ಣತ್ವವನ್ನು ಪಡೆಯಲು ಪ್ರಯತ್ನಿಸುತ್ತಿದ್ದಾರೆಂದಮೇಲೆ ಅವರೊಂದಿಗೂ ಸಹಾನುಭೂತಿಯನ್ನು ತೋರಿಸಬೇಕು.

[ಪುಟ ೨೭]

ಅರಬಿ ಫಾರ್ಸೀ ಶಬ್ದ, ಸ್ವೀಕರಿಸಿ, ವಿಧಿ ಇತ್ತು;
ದೇವನಾಗರಿ ಲಿಪಿಗೆ ಸಮ ಮನ್ನಣೆಯನಿತ್ತು,
ಕ–ಖ–ಗ–ಜ–ಡ–ಢ–ಫ ಬೆರೆಸು ಬಿಂದು–ಗಂಗೆಯನಿತ್ತು.
ಬೆರೆಸು; ಪೂರ್ಣ ಬೆರೆಸದೆ ಬಿಡಬೇಡ ಬೇಸತ್ತು.

ಸಹಾನುಭೂತಿಯನ್ನು ತೋರಿಸುತ್ತ ಭಾರತೀಯೇತರ ಸಂಸ್ಕೃತಿ

ಯನ್ನೂ ಸಹ ಅಲ್ಲಗಳೆಯದಿರುವ ನಾವು ನಮ್ಮಂತೆಯೇ ಪೂರ್ಣತ್ವದಲ್ಲಿ ಅಭಿಮಾನವನ್ನಿರಿಸಿ, ಪ್ರಯತ್ನಿಸುತ್ತಿರುವ ಯವನರ ಉರ್ದು ಮತ್ತು ಫಾರ್ಸಿ ಶಬ್ದಗಳನ್ನು ಸ್ವೀಕರಿಸುತ್ತಿರಬೇಕು; ಮತ್ತು ನಮ್ಮ ಶಬ್ದಗಳನ್ನು ಅವರೂ ಸ್ವೀಕರಿಸುತ್ತಿರಲೇಬೇಕಾಗಿದೆ.

ಪರಸ್ಪರ ಆದಾನ-ಪ್ರದಾನ ಕ್ರಿಯೆಯಿಲ್ಲದೆ, ಸಾಮಾಜಿಕ ಜೀವನ ವ್ಯವಹಾರ ಸಾಗಲಾರದು. ಭಾರತದ ನಮ್ಮ ಆಧ್ಯಾತ್ಮ ಜ್ಞಾನವು ಭಾರತೇತರ ರಾಷ್ಟ್ರಗಳಿಗೆ ಪ್ರಸರಿಸಬೇಕು; ಅವುಗಳ ಭೌತಿಕ ವಿಜ್ಞಾನ ಭಾರತಕ್ಕೆ ಪ್ರಾಪ್ತವಾಗಬೇಕು. ಗುರುಗಳ ಆಶೀರ್ವಾದವು ಶಿಷ್ಯನಿಗಿರಬೇಕು ; ಶಿಷ್ಯನ ಭಕ್ತಿಯು ಗುರುಗಳಿಗೆ ಸಲ್ಲುತ್ತಿರಬೇಕು. "ದುದೋಹ ಗಾಂ ಸ ಯಜ್ಞಾಯ; ಸಸ್ಯಾಯ ಮಘವಾ ದಿವಮ್".

ಹಾಗೆ ಪೇಟೆಯಿಂದ ತಂದ ವಸ್ತುಗಳನ್ನು ಸಂಸ್ಕರಿಸಿ, ಹಸನು ಮಾಡಿ, ಶುದ್ಧತೆಗೆ ಮಡಿಗೆ ಯೋಗ್ಯವಾಗುವಂತೆ ಮಾಡಲು ಗಂಗಾಜಲ ಬಿಂದುವನ್ನು ಸಿಂಪಡಿಸಿ, ಶುದ್ಧೀಕರಿಸಿ ಹೇಗೆ ಆ ವಸ್ತುಗಳನ್ನು ಸ್ವೀಕಾರ ಮಾಡುತ್ತೇವೆಯೋ ಹಾಗೆ ಆ ಫಾರ್ಸೀ ಮತ್ತು ಉರ್ದು ಶಬ್ದಗಳನ್ನು ಅವುಗಳ ಅರ್ಥಕ್ಕೆ ನ್ಯೂನತೆ ಬಾರದಂತೆ ಉಪಯೋಗಿಸುವುದಕ್ಕಾಗಿ, ನಮ್ಮ ಸಂಸ್ಕೃತದ ಹಿಂದೀ ದೇವನಾಗರೀ ಲಿಪಿಯಲ್ಲಿ ಎತ್ತಿ ಬರೆಯುವಾಗ ಆ-ಆ ಉರ್ದೂ ಮುಂತಾದ ಭಾಷೆಗಳ ಆ-ಆ ವರ್ಣಗಳ ಕೆಳಭಾಗದಲ್ಲಿ, ಅಂದರೆ, ಉರ್ದೂ-ಫಾರಸೀ ಭಾಷೆಯ ಶಬ್ದಗಳಾಗಿದ್ದರೆ ಮಾತ್ರ, ಕ-ಖ-ಗ-ಜ-ಡ-ಢ-ಫ ವರ್ಣಗಳ ಕೆಳಗೆ, ಪೂರ್ಣಾಕಾರದ ಬಿಂದುವನ್ನು ಬರೆ-ಬರೆದು ವ್ಯವಹರಿಸುತ್ತೇವೆ; ಸಾಹಿತ್ಯ ಕ್ಷೇತ್ರವನ್ನು ಬೆಳೆಸುತ್ತೇವೆ.

ಕಾರಣ ಅವರವರ ಪದ್ಧತಿಯನ್ನು ಕೆಡಿಸಲಾರದಂತೆ ಅವರವರೊಂದಿಗೆ ಅವರವರ ಗೌರವಕ್ಕೆ ತಕ್ಕಂತೆ ನಡೆಯಬೇಕು.

[ಪುಟ ೨೭]

ಇಂಗ್ಲೀಷ-ಏ-ಬೀ-ಸಿ ಮುಂತಾದ ಇಪ್ಪತ್ತು
ಆರು ವರ್ಣದ ಪೈಕಿ, ಮುದ್ರಿಸಿದರೂ ಮತ್ತು
ಲಿಖಿಸದರು 'ಓ' (= 0) ಒಂದೆ ಪೂರ್ಣದಾಕೃತಿ ಸುತ್ತು.
ಲಿಖಿಸು; ಪೂರ್ಣ ಲಿಖಿಸದೆ ಬಿಡಬೇಡ ಬೇಸತ್ತು.

ಗೌರವಕ್ಕೆ ತಕ್ಕಂತೆ ನಡೆಯುತ್ತಲಿರಬೇಕು; ಆ ನಡೆಯೊಂದಿಗೆ ಸಹಕರಿಸುವ ನುಡಿಯಿರಬೇಕು; ನಡೆನುಡಿಯೊಂದಾದ ಬಾಳು ಬಾಳಬೇಕೆಂದು ಬಯಸುತ್ತಿರುವ ಜನತೆಯಿರುವ ಭಾರತಾದಿ ದೇಶಗಳಿಗೆ ರಾಜಕೀಯ ಸ್ವಾತಂತ್ರ್ಯವನ್ನು ಮತ್ತೆ ವಾಪಸ್ಸು ಒದಗಿಸಿಕೊಟ್ಟ ಇಂಗ್ಲೀಷರ ವಿದ್ಯಾ ಪ್ರಸಾರಕ್ಕೆ ಕೇವಲ ಇಪ್ಪತ್ತಾರು ವರ್ಣಗಳುಳ್ಳ ವರ್ಣಮಾಲೆಯಿದೆ.

ಇಂಗ್ಲೀಷರು ತಮ್ಮ ತಕ್ಕಡಿಯ ಉದ್ಯೋಗದ ಮಾಧ್ಯಮದಿಂದ ಭೂಗೋಲದಲ್ಲಿ ನಾಲ್ಕು ನಿಟ್ಟಿಗೆ ತಮ್ಮ ರಾಜ್ಯ ಶಾಸನವನ್ನು ಮೊದಲು ನಡೆಸುತ್ತಿದ್ದರು; ಅದರಂತೆ, ಅವರು ತಮ್ಮ ವರ್ಣಮಾಲೆಯನ್ನು ನಾಲ್ಕು ನಿಟ್ಟಿನಿಂದ ವಿಭಾಗಿಸಿ, ನಾಲ್ಕು ವಿಧವನ್ನಾಗಿಸಿದ್ದಾರೆ. ಒಂದನೆಯದು ಮುದ್ರಿಸುವ 'ಕೆಪಿಟಲ್' ವರ್ಣಗಳದ್ದು (ಮುದ್ರಿಸುವ ದೊಡ್ಡಕ್ಷರದ್ದು); ಮುದ್ರಿಸುವ ಸಣ್ಣಕ್ಷರದ್ದು ಎರಡನೆಯದು; ಮೂರನೆಯದು ಬರೆಯುವ ದೊಡ್ಡಕ್ಷರದ್ದು, ಬರೆಯುವ ಸಣ್ಣಕ್ಷರದ್ದು ನಾಲ್ಕನೆಯದು.

ಹೀಗೆ, ಒಂದೇ ವಿಧದ ವರ್ಣಮಾಲೆಯನ್ನು ಮುದ್ರಿಸಲು ಮತ್ತು ಬರೆಯಲೆಂದು ಎರಡು ವಿಧ; ಆ ಎರಡು ವಿಧದಲ್ಲಿಯೂ ಪ್ರತಿಯೊಂದಕ್ಕೂ ದೊಡ್ಡ ಮತ್ತು ಸಣ್ಣ ಭೇದದಿಂದ ಮತ್ತೆ

ರಡು ವಿಧ; ಒಟ್ಟು ನಾಲ್ಕು ವಿಧ. ಈ ವಿಧಿ–ವಿಧಾನವು ಸರಳವಾಗಿ ಓದಲಿಕ್ಕೂ ಹಾಗೂ ಸರಳವಾಗಿ ಬರೆಯಲಿಕ್ಕೂ ಅನುಕೂಲವಾಗಲೆಂದು ನಿರೂಪಿಸಲ್ಪಟ್ಟಿದೆ. ಇದು ಎಲ್ಲ ಕಡೆಗೂ ಪ್ರಚಲಿತವಿದೆ.

ಇಂಗ್ಲೀಷರು ಬರೆಯುವ ವಿಧಾನದಲ್ಲಿ ಯಾವುದೇ ಆದರೂ ಆ ಒಂದು ಶಬ್ದ ಮುಗಿಯುವವರೆಗೂ ಲೇಖನಿಯನ್ನೆತ್ತದೆ ಬರೆಯುತ್ತಾರೆ; ಆ ಶಬ್ದ ಮುಗಿಯದೆ ನಿಲ್ಲುವುದು ಆಗದಿರಲೆಂದು ಹಾಗೆ ಕಲ್ಪಿಸಿದ್ದಾರೆ; ಇದು ಸರಳ. ಸರಳತೆಗಾಗಿ ಮಾಡಿದ ಇವರ ಬರೆವಣಿಗೆಯ ವಿಧಾನವು ವರ್ಣವರ್ಣಗಳು ಕೂಡಿ ಆದ ಶಬ್ದದಲ್ಲಿಯೇ ಏಕತ್ವವನ್ನು, "ಯುನಿಟ್ಟ"ನ್ನು ನಂಬುತ್ತಾರೆ. ಭಾರತೀಯರು ವರ್ಣಮಾಲೆಯ ಬರವಣಿಗೆಯ ವಿಧಾನವು ಪ್ರತಿಯೊಂದು ವರ್ಣವನ್ನೂ ವಿಂಗಡಿಸಿ ಬೇರೆ–ಬೇರೆ ಬರೆಯುವುದರಿಂದ ಪ್ರತಿಯೊಬ್ಬ ಮಾನವನಿಗೂ, ಅವನವನ ಯೋಗ್ಯತೆಗೆ ತಕ್ಕಂತೆ, ಅವನವನ ಅಸ್ತಿತ್ವ ಪ್ರತ್ಯೇಕವಾಗಿ ಇದೆ; ಪ್ರತಿಯೊಬ್ಬನೂ ಪೂರ್ಣತ್ವದ ಒಂದೊಂದು ಪ್ರತೀಕ; ಪ್ರತಿಯೊಬ್ಬನೂ ಒಬ್ಬರನ್ನೊಬ್ಬರ ಆಶ್ರಯಿಸದೇ ಪ್ರತ್ಯೇಕವಾಗಿ ಸ್ವತಂತ್ರವಾಗಿ ಬಾಳಬಹುದು; ಅದರಿಂದ ಮತ್ತೊಬ್ಬರ ಕಾಟ ಅವನಿಗಿಲ್ಲ; ಅವನಿಂದಾಗುವ ಕಾಟ ಇನ್ನೊಬ್ಬರಿಗಿಲ್ಲ; ಕೇವಲ ಸಂಯುಕ್ತಾಕ್ಷರದ ಜೋಡಿಯಿದ್ದರೆ, ಅದು ಅವನವನ ವೈಯಕ್ತಿಕ. ಅಂದರೆ, ಈ ಏ–ಬೀ ಮುಂತಾದ ಇಪ್ಪತ್ತಾರು ವರ್ಣದ ಮಾಲೆಯನ್ನಷ್ಟೇ ನಂಬಿರುವ ಇಂಗ್ಲೀಷರು ತಮ್ಮ ಧರ್ಮದ ಉಪಾಸನಾ ವಿಧಾನವನ್ನು ವೈಯಕ್ತಿಕವಾಗಿ ಮಾಡುವುದು ಪ್ರಾಯಃ ಕಡಿಮೆ; ಅಂತೆಯೇ ಅವರು ರಜೆಯ ದಿನದಂದು ಚರ್ಚಿನಲ್ಲಿ ಸಾಮೂಹಿಕವಾಗಿ ಪ್ರಾರ್ಥನೆ ಮಾಡುತ್ತಾರೆ; ಅದಕ್ಕಾಗಿಯೇ ಅವರು

ಬರೆಯುವಾಗ ಎಲ್ಲ ವರ್ಣ ಸೇರಿಸಿ ಒಂದು ಶಬ್ದ ಮುಗಿಯುವ ವರೆಗೂ ಕೈ ಎತ್ತುವದಿಲ್ಲ. ಆದರೆ ವರ್ಣಗಳನ್ನು ವಿಂಗಡಿಸಿ ಬೇರೆ-ಬೇರೆ ಬರೆಯುವ ವರ್ಣಮಾಲೆಯುವರು ಬರೆಯುವಾಗಲೂ ವರ್ಣಗಳೆಲ್ಲವನ್ನೂ ಬೇರೆ-ಬೇರೆಯಾಗಿ ವಿಂಗಡಿಸಿ ಬರೆಯುವಂತೆ, ಬೇರೆ-ಬೇರೆಯಾಗಿ ವೈಯಕ್ತಿಕವಾಗಿ ತಮ್ಮ-ತಮ್ಮ ನಿವಾಸ ದಲ್ಲಿಯೇ ಪ್ರತ್ಯೇಕವಾಗಿದ್ದು, ಗುಂಪಿಲ್ಲದೇನೇ, ಶಿವಪೂಜಾದಿ ಧಾರ್ಮಿಕ ಕಾರ್ಯಗಳನ್ನು ಮಾಡಬಲ್ಲರು. ಅಂತೆಯೇ ಈ ಪ್ರತ್ಯೇಕ ವರ್ಣಗಳ ಸಂಯೋಜನೆ ಮಾಡಿ ಬರೆಯುವದರ ವಾದ ಸ್ತುತ್ಯ.

ಎಲ್ಲ ವರ್ಣಮಾಲೆಯಲ್ಲಿಯೂ 'ಅ' ಎಂಬರ್ಥದ ಅಕಾರವೇ ಮೊದಲಿನದಾಗಿರುತ್ತದೆ. ಉದಾ: ಕನ್ನಡ ಸಹಿತ ಸಮಸ್ತ ಭಾರತೀಯ ವರ್ಣಮಾಲೆ: ಅ-ಆ-ಇ-ಈ; ಇಂಗ್ಲೀಷ: ಏ-ಬೀ ಸಿ-ಡಿ; ಉರ್ದೂ: ಅಲೀಫ್-ಬೆ-ಟೆ; ಇತ್ಯಾದಿ. ಈ ಅಕಾರವೇ ಎಲ್ಲ ವರ್ಣಮಾಲೆಯಲ್ಲಿ ಮೊದಲಿನದ್ದಾಗಿರು ವುದಕ್ಕೆ ಮುಖ್ಯ ಕಾರಣವೆಂದರೆ: ಪೂರ್ಣವಾದ ಓಂಕಾರವಲ್ಲಿ ಗೋಚರಿಸುವ ಪೂರ್ಣತ್ವದ ಅ-ಉ-ಮ್ ಎಂಬ ಮೂರಕ್ಷರಗಳಲ್ಲಿ ಮೊತ್ತ ಮೊದಲಿನದೆ " ಅ " ಕಾರವು. ಅದಕ್ಕೆ ಅಂಥ ಪೂರ್ಣ ತ್ವದ ದ್ಯೋತಕವಾಗಿ ಅಕಾರವೆ ಎಲ್ಲ ವರ್ಣಮಾಲೆಗೂ ಮೊದಲನೇ ಸ್ಥಾನದಲ್ಲಿರುತ್ತದೆ. ಅಂತೆಯೇ " ವರ್ಣಾನಾಂ " " ಅ " ಕಾರೋಽಸ್ಮಿ " ಎಂದಿದೆ ಭಗವದ್ಗೀತೆ.

ಆಂಗ್ರೇಜಿಯ ಈ ಬರೆಯುವ ಮತ್ತು ಮುದ್ರಿಸುವ ವರ್ಣ ಗಳಲ್ಲಿ 'ಎ' ಎಂಬುದು ಬರೆವಣಿಗೆಯ ರೀತಿಯಲ್ಲಿದ್ದಾಗ (a) ಪೂರ್ಣತ್ವದ ಪೂರ್ಣಾಕಾರವಾಗಿ ಕಾಣುತ್ತದೆ; 'ಬಿ' ಎಂಬುದು ಮುದ್ರಿಸುವ ರೀತಿಯಲ್ಲಿದ್ದಾಗ (B) ದುಂಡು; ಆದರೆ. ಓ

ಎಂಬ ಸ್ವರವು (O) ಬರೆದಾಗಲೂ ಮತ್ತು ಮುದ್ರಿಸಿದಾಗಲೂ-ಎರಡೂ ರೀತಿಯ ವಿಧಾನದಲ್ಲಿ ಒಂದೇ ವಿಧದ ಪೂರ್ಣಾಕಾರದ ವರ್ತುಲಾಕಾರವನ್ನೇ ಹೊಂದಿರುತ್ತದೆ. ಅಂದರೆ. "ಓ"ವರ್ಣವು ವಾಕ್ಯದ ಮೊದಲಿಗೆ ಬಂದ ಪಂಕ್ತಿಯ ಪ್ರಾರಂಭದಲ್ಲಿ, 'ಓ.ಕೆ.' ಯಂತಹ ಅಥವಾ "ಓ ಮೈ ಗಾಡ್" ದಂತಹ ಅನ್ಯಯ ದಂತಹ ಭಾವವಾಚಕ ಪ್ರಯೋಗದಲ್ಲಿ;ಮತ್ತು ಶಿರೋನಾಮೆಯಲ್ಲಿ ಇನ್ನೂ ಮುಂತಾದೆಡೆಯಲ್ಲಿ ದೊಡ್ಡ ಆಕಾರದ ವರ್ತುಲದ ದುಂಡಾಗಿರುತ್ತದೆ. ಇನ್ನೂ ಶಬ್ದಗಳ ನಡುವೆ ಸಣ್ಣ ಆಕಾರದ ಆ 'ಓ' ದ ಪ್ರಯೋಗವಾಗುತ್ತದೆ. ಯಾವುದೇ ಸ್ಥಾನದಲ್ಲಿಯೇ ಆಗಲಿ ಪ್ರಯೋಗಿಸಲ್ಪಟ್ಟ "ಓ" ಕಾರದ ಆಕಾರ ಸಣ್ಣದೇ ಇರಲಿ, ದೊಡ್ಡದೇ ಇರಲಿ, ಆ "ಓ" ಕಾರದ ಪೂರ್ಣ ಆಕಾರ ಮಾತ್ರ ಪೂರ್ಣತ್ವವನ್ನು ತಿಳಿಸಲು ಪೂರ್ಣ ದುಂಡಾಕಾರ ವಾಗಿಯೇ ಇರುತ್ತದೆ. ಒಟ್ಟಿನಲ್ಲಿ ಇಂಗ್ಲೀಷ ವರ್ಣಮಾಲೆ "ಓ" ಸ್ವರವು ಪೂರ್ಣತ್ವದ ತನ್ನ ಆಕಾರವನ್ನು ಬದಲಿಸಿಕೊಳ್ಳುವುದಿಲ್ಲ; ಏಕರೂಪವಾಗಿಯೇ ಇರುತ್ತದೆ. "ಮಹತಾಂ ಏಕರೂಪತಾ".

ಕಾರಣ, ಸುಖ-ದುಃಖಾದಿ ದ್ವಂದ್ವದಲ್ಲಿಯೂ ಇಂಗ್ಲೀಷಿನ ಈ "ಓ" ಸ್ವರದಂತೆ ಪೂರ್ಣತ್ವ ಪ್ರಾಪ್ತಿಗಾಗಿ ಏಕರೂಪದವ ರಾಗಿರಬೇಕು.

[ಪುಟ ೨೯]

ಇಂಗ್ಲೀಷ ಎಮ್ (= M) ಸಹಸ್ರ ; ಸಿ (= C) ನೂರು ;
ಎಕ್ಸ್ (= X) ಹತ್ತು ;
ಐದು (= V) ವೀ ; ಐವತ್ತು (= L) ಎಲ್ ; - ಒಳಬಳಕೆ ಮತ್ತು
ಬಿಂದು ಇರದ ಕೆಪಿಟಲ್ 'ಸ್ವಾರ್ಥಿ' ಐ (= I) ಹಿರ್ ಸೊತ್ತು.
ಇರಿಸು ; ಪೂರ್ಣ ಇರಿಸದೆ ಬಿಡಬೇಡ ಬೇಸತ್ತು.

ಏಕರೂಪತೆಯನ್ನು ಸಾಧಿಸುವ ದೃಷ್ಟಿಯಿಂದ ಅಥವಾ ಹೆಚ್ಚಿನ ಅಕ್ಷರಾಭ್ಯಾಸದಿಂದ ಅಷ್ಟೊಂದು ಹೆಚ್ಚಿಗೆ ಶಿಕ್ಷಿತರಲ್ಲದವರಿಗೂ ಸಹ ಸುಲಭವಾಗಿ ತಿಳಿವಳಿಕೆ ಬರಲೆಂದು, ಬೆರಳಿನಾಕಾರದ ಸಂಜ್ಞೆಯಿಂದೆಂಬಂತೆ ನೇರವಾದ ಗೆರೆಯಂತಹ ಬರೆಯುವ ರೋಮನ್ ಅಂಕೆಯನ್ನು ಬರೆಯುವಾಗ ಇಂಗ್ಲೀಷ ವರ್ಣ ಮಾಲೆಯ ಕೆಲ ಕೆಪಿಟಲ್ (capital) ವರ್ಣಗಳನ್ನು ಅಂಕೆಯು ಸಲುವಾಗಿ ಉಪಯೋಗಿಸುವ್ರದುಂಟು :— I = 1 ; V = 5 ; X = 10 ; L = 50 ; C = 100 ; M = 1000 ; ಮತ್ತು D = 10000 ಅಂದರೆ ಐ ಬರೆದರೆ ಒಂದು ; ವ್ಹಿ = ಐದು ; ಎಕ್ಸ = ಹತ್ತು ; ಎಲ್ = ಐವತ್ತು ; ಸಿ = ಒಂದು ನೂರು ; ಎಮ್ = ಒಂದು ಸಾವಿರ ; ಡಿ = ಹತ್ತುಸಾವಿರ) — ಹೀಗೆ ಅಕ್ಷರ ಗಳನ್ನೆ ಅಂಕೆಯನ್ನಾಗಿ ಉಪಯೋಗಿಸಿ,ಸಂಖ್ಯೆಯನ್ನಾಗಿ ಬರೆಯುವ ಪದ್ಧತಿ ಪ್ರಚಲಿತವಿದೆ. ಇದನ್ನು ಗಡಿಯಾರದ 'ಡಾಯಲಿ' ನಲ್ಲಿ ಪುಸ್ತಕದ ಮುನ್ನುಡಿಯಲ್ಲಿ, ಸಂವಿಧಾನದ ಪುಟದ ಅಡಿ ಟಿಪ್ಪಣಿ, ಯಲ್ಲಿ ಬಳಸಿರುವುದನ್ನು ಕಾಣುತ್ತಿದ್ದೇವೆ. ಈ ಅಂಕೆಯು ಸರ್ವ ಸಾಧಾರಣ ಜನತೆಗೂ ಗೊತ್ತಾಗುವ ತಾಣವೆಂದರೆ ರೇಲ್ವೆ ಡಬ್ಬಿಯ ಕ್ಲಾಸ್ ಸೂಚನೆಗಾಗಿ ಮತ್ತು ಪರೀಕ್ಷಾ ಪರಿಣಾಮದ ಕ್ಲಾಸಿನ ಸೂಚನೆಗಾಗಿ. ಈ ಎರಡೂ ಸ್ಥಾನದಲ್ಲಿ ಕೇವಲ ಮೂರೇ ಗಳ ಉಪಯೋಗ. ಗಡಿಯಾರದ ಡಾಯಲಿನಲ್ಲಿ ಹನ್ನೆರಡು ಸಂಖ್ಯೆಯವರೆಗೆ. (ಕೆಲವೆಡೆಯಲ್ಲಿ ಸೆಕೆಂಡಿಗಾಗಿಯೂ ಬಳಸಿ ರುತ್ತಾರೆ.)

ಅಂಕೆಯ ರೂಪದಲ್ಲಿ ಬಳಸುವ ಈ ಅಕ್ಷರಗಳನ್ನು ಸ್ಥಾನ- ಪಲ್ಲಟ ಮಾಡಿ ಆದೆಷ್ಟು ದೊಡ್ಡ ಸಂಖ್ಯೆಯನ್ನಾದರೂ ಬರೆಯು ಬಹುದು. ವ್ಹಿ ದ ಮೊದಲಿಗೆ ಅದರ ಅತಿ ನಿಕಟದಲ್ಲಿ ಒಂದು

ಐ ಬರೆದರೆ ಅದು ನಾಲ್ಕು ಸಂಖ್ಯೆಯೆಂದು ತಿಳಿಸಂತ್ತದೆ; ವ್ಹಿ ದ ನಂತರ ಐ ಆರು; ಎರಡು ಐಗಳು ವ್ಹಿ ದ ನಂತರ ಇದ್ದರೆ ಏಳು; ಮೂರಿದ್ದರೆ ಎಂಟು; ಎಕ್ಸದಲ್ಲಿ ಒಂದು ಕಡಿಮೆ ಮಾಡಿದೆಯೆಂದು ಸೂಚಿಸುವ ದ್ಯೋತಕವಾಗಿ ಎಕ್ಸದ ಮೊದಲಿಗೆ ಒಂದು ಐ ಬರೆದರೆ, ಅದು ಒಂದು ಕಡಿಮೆಯಾದ ಹತ್ತು ಅರ್ಥಾತ್ ಒಂಭತ್ತು; ಮೂರು ಎಕ್ಸ+ಒಂದು ವ್ಹಿ +ಒಂದು ಐ = ಮೂವತ್ತಾರು; ಅಂದರೆ, XXX = V + I = XXXVI=36 = ೩೬. CXXXVI = 136 = ೧೩೬.

ಒಂದಕ್ಕೆ ಸೂಚಕವಾದ ಕೆಪಿಟಲ್ ಐ ವರ್ಣವು, ವರ್ಣವಾಗಿಯೂ ವಾಕ್ಯದ ಮೊದಲಿಗೆ, ಒಳಗಡೆ ಅಥವಾ ಅಲ್ಲಲ್ಲಿ ಉಪಯೋಗಿಸಲ್ಪಡುತ್ತದೆ. ಈ ಕೆಪಿಟಲ್ ಐ ವರ್ಣಕ್ಕೆ ತಲೆಗೆ ಬಿಂದು ಇರುವುದಿಲ್ಲ. ಅದೇ ಐ ವರ್ಣವು ಕೆಪಿಟಲ್ ಅಲ್ಲದಾದಾಗ, ಅದಕ್ಕೆ ಮೇಲೆ ಪೂರ್ಣತ್ವದ ಚುಕ್ಕೆಯು ಬಿಂದುವಿರುತ್ತದೆ. ಇಟ್ ಆಲ್‌ವೇಜ್ ಕಮ್ಸ್ ಆ್ಯಂಡ ಸಿಟ್ಸ್ ಎಂಬಲ್ಲಿಯ ಇಟ್ ಮತ್ತು ಸಿಟ್ ಎಂಬಲ್ಲಿ ಐ ಉಪಯೋಗಿಸಲ್ಪಟ್ಟಿದೆ. ಇಟ್ ದ ಐ ಗೆ ಬಿಂದು ಇಲ್ಲ; ಸಿಟ್ ದ ಐ ಗೆ ಬಿಂದು ಇದೆ. ಆದರೆ, 'ನಾನು' ಎಂದು ಉತ್ತಮ ಪುರುಷ ಅಥವಾ ಪ್ರಥಮ ಪುರುಷದ ಅರ್ಥಕೊಡುವ ಐ (I) ಎಂಬ ಸರ್ವನಾಮವು ಒಂದೇ ಒಂದೆಂದು ಅಂಕೆಯನ್ನು ಸೂಚಿಸುವ ಸ್ವಾರ್ಥಿಯಂತಹ ಕೆಪಿಟಲ್ ಐ ಆಗಿದ್ದುದರಿಂದಲೇ ಆ ಐ ಗೆ ಬಿಂದುವಿಲ್ಲ. ಆ ಐ ಗೆ ಪೂರ್ಣತ್ವದ ಬಿಂದು ಪ್ರಾಪ್ತವಾಗಬೇಕಾದರೆ, ಅದು ತನ್ನ ಇನ್ನುಳಿದ ಇಪ್ಪತ್ತೈದು ವರ್ಣಗಳೊಡನೆ ವಿನಯದಿಂದ ಸಣ್ಣವನಂತಾಗಿ ಸಹ-ಬಾಳುವೆ ಸಾಗಿಸಬೇಕಾಗುತ್ತದೆ. ವಿನಯದಿಂದ ಪವಿತ್ರತಾ-ಪ್ರಾಪ್ತಿಯಾಗುತ್ತದೆ. ವಿನಯಾದ್ ಯಾತ್ ಪಾತ್ರತಾಮ್.

ಕಾರಣ, ಸ್ವಾರ್ಥಿಯಾಗಿಯೂ ಅಹಂಕಾರಿಯಾಗಿಯೂ ಮತ್ತು ಒಬ್ಬಂಟಿಗನಾಗಿಯೂ ಇರಬಾರದೆಂದು ಭಾರತೀಯತೆಯ ನೀತಿ.

[ಪುಟ ೩೦]

'ಅಂ' ಅನುಸ್ವಾರವೇ ಪೂಜ ಹಾಗೂ ಹತ್ತು
ಸೂಚಿಸುವ ಪೂರ್ಣತೆಯ ದುಂಡಾದ ಗುರುತಿತ್ತು,
ಸಂಖ್ಯೆಯನು, ವರ್ಣವನು ನುಡಿಸುವುದು — ನೆರವಿತ್ತು.
ನುಡಿಸು ; ಪೂರ್ಣ ನುಡಿಸದೆ ಬಿಡಬೇಡ ಬೇಸತ್ತು.

ಭಾರತೀಯತೆಯ ನೀತಿಯು ಪೂರ್ಣ – ಪೂರ್ಣತ್ವವನ್ನು ಪಡೆಯುವುದೇ ಮುಖ್ಯವೆಂಬುದನ್ನು ತಿಳಿಸಿಕೊಡುತ್ತದೆ. ಇಂಥ ಭಾರತೀಯ ಸಂಸ್ಕೃತಿಯ ಭಾರತೀಯ ಲಿಪಿಗಳುಳ್ಳ ಎಲ್ಲ ಭಾಷೆಗಳ ಶಬ್ದಗಳಲ್ಲಿಯೂ ಉಪಯೋಗಿಸಲ್ಪಡುವ ಅನುಸ್ವಾರವೆಂಬ ಸೊನ್ನೆಯೇ ಬಹುತೇಕವಾಗಿ ಜಗತ್ತಿನ ಎಲ್ಲ ಭಾಷೆಯ ಲಿಪಿಗಳಲ್ಲಿಯೂ ಅಂಕೆ ಸಂಖ್ಯೆಗಳಲ್ಲಿಯೂ ಉಪಯುಕ್ತವಾಗುತ್ತದೆ.

ಸಂಖ್ಯೆಯ ಈ ಸೊನ್ನೆಯು ಯಾವಾಗಲೂ ಪೂರ್ಣ ರೂಪದಲ್ಲಿದ್ದು, ಹತ್ತು – ಹತ್ತರ (ದಶ – ದಶಕದ) ಮೊತ್ತವನ್ನೇ ತೋರಿಸುತ್ತಿರುತ್ತದೆ.

ಪ್ರತಿಯೊಂದು ದಶ–ದಶಕದ ಸ್ಥಾನ ಸೂಚಕವಾದ ಪೂರ್ಣಾಕಾರದ ಈ ದುಂಡು ಸೊನ್ನೆಯ ನೆರವಿಲ್ಲದೆ ಸಂಖ್ಯಾ – ಶಾಸ್ತ್ರವೇ ಬೆಳೆಯುತ್ತಿದ್ದಿಲ್ಲ; ಬಾಳುತ್ತಿದ್ದಿಲ್ಲ; ಉಳಿಯುತ್ತಿದ್ದಿಲ್ಲ. ಸೊನ್ನೆಯಿಲ್ಲದ ಅಥವಾ ಸೊನ್ನೆಯ ದಶಕ – ಸ್ಥಾನದಲ್ಲಿರದ ಅಂಕೆಯು ಕೇವಲ ಒಂಟಂಕೆ; ಅದು ಅತಿ-ಅತಿ ದೊಡ್ಡದೆಂದರೆ ಒಂಬತ್ತು ಇದ್ದೀತು ಅದಕ್ಕೆ ಬೆಲೆ. ಆ ಒಂಭತ್ತೇ ಒಂಟಂಕೆಗಳು ಆ ಸೊನ್ನೆಯ ಬಲದಿಂದ ಅನಂತ ಮೊತ್ತದ ಸಂಖ್ಯೆಯಾಗುತ್ತವೆ. ಆಗ ಸೊನ್ನೆಯ ನೆರವು ಪಡೆದ ಅಂಕೆಯು ಸ್ಥಾನದ್ವಯ ಗಳಿಸಿಕೊಂಡು

ಸಂಖ್ಯೆಯಾಗುತ್ತದೆ. ಆಗ ಅದು ಕೇವಲ ಅಂಕಿಯಾಗಿರುವುದಿಲ್ಲ; ಸಂಖ್ಯೆ ಎನಿಸಿಕೊಳ್ಳುತ್ತದೆ.

ಈ ಪೂಜಿಯು ಸ್ಥಾನದ ಬಲದಿಂದ ಬೇಕಾದಷ್ಟು ಸಣ್ಣ-ದೊಡ್ಡ ಸಂಖ್ಯೆಯನ್ನು ಬರೆಯಬಹುದು.

ಪೂರ್ಣದ ಪೂಜಿಯ ಬೆಂಬಲದಿಂದ ಇನ್ನುಳಿದ ಒಂಬತ್ತೂ ಅಂಕೆಗಳಿಗೆ ಮೊದಲು ತಮಗಿದ್ದುದಕ್ಕಿಂತ ಹೆಚ್ಚಿನ ಮಹತ್ವ ಬರುತ್ತದೆ. ಒಂದರಿಂದ ಒಂಬತ್ತರ ವರೆಗಿರುವ ಯಾವ ಅಂಕೆಯೇ ಆಗಲಿ, ಅದು, ಪೂಜಿಯನ್ನು ಹಿಂದು ಮಾಡಿಕೊಂಡು ವ್ಯವಹರಿಸಿದರೆ, ಅದಕ್ಕೆ ಹೆಚ್ಚಿನ ಬೆಲೆ ಬರುತ್ತದೆ; ಅದರ ಮಾನ ಹೆಚ್ಚುತ್ತದೆ. ಆದರೆ ಆ ಅಂಕೆಯು ಆ ಪೂಜಿಯನ್ನು ತನ್ನ ಹಿಂದಿಟ್ಟುಕೊಂಡು ತಾನೇ (ಅಂಕೆಯೇ) ಮುಂದಾದರೆ ತನಗೆ ಕಡಿಮೆ ಕಿಮ್ಮತ್ತು; ಇಂಜಿನ್ನನ್ನು ಮುಂದೆ ಮಾಡಿಕೊಂಡು ಹೋಗುವ ರೇಲುಗಾಡಿಯ ವೇಗ ಹೆಚ್ಚು; ಅದೇ ಇಂಜಿನ್ನು ಡಬ್ಬಿಯ ಹಿಂದಿದ್ದರೆ ವೇಗ ಕಡಿಮೆ. ಇಂಜಿನ್ ಪೂಜಿ; ಡಬ್ಬಿ ಬಿಡಿ ಅಂಕೆ. ಪೂರ್ಣ ವಯಸ್ಸಾದ ಪೂರ್ಣ ಶಾಂತಭಾವದ ಹಿರಿಯರನ್ನು ಮುಂದು ಮಾಡಿ ಗೌರವಿಸುತ್ತಿದ್ದರೆ, ಅವರಿಗೆ ಅವರ ಸಹಜವಾದ ಪೂರ್ಣ ಗೌರವವನ್ನು ಸಲ್ಲಿಸಿದಂತಾಗಿ ತನಗೂ ಮಾನ ಮರ್ಯಾದೆ ಹೆಚ್ಚುತ್ತದೆ. ಪೂರ್ಣ ವಯಸ್ಸಾದ ಹಿರಿಯನು ಪೂಜಿ, ಪೂಜಿಯನ್ನು ಮುಂದು ಮಾಡಿ ಗೌರವಿಸುವವನು ಒಂಬತ್ತರೊಳಗಿನ ಬಿಡಿ ಅಂಕೆಗಳು.

ಪೂಜಿಯನ್ನು ತನ್ನ ಮುಂದೆ (೧೦) ಕೂಡ್ರಿಸಿದ ಒಂದಂಕೆಗೆ, ಹತ್ತರ ಕಿಮ್ಮತ್ತು. ಅದನ್ನು ತನ್ನ ಮುಂದೆ ಕೂಡ್ರಿಸಲಾರದೆ ಸ್ವತಃ ತಾನೇ ಮುಂದೆ ಕುಳಿತರೆ (೦೧), ಆ ಒಂದಂಕೆಗೆ ಕಿಮ್ಮತ್ತು ಕೇವಲ ಒಂದರದ್ದೇ.

ಅಂಕೆಗೂ ವರ್ಣಕ್ಕೂ ನೆರವಾಗುವ ಪೂಜೆಯಂತೆ ಕೈಲಾದ ಮಟ್ಟಿಗೆ ಚರಾಚರಕ್ಕೂ ನೆರವನ್ನಿತ್ತು. ಪ್ರೇಮದಿಂದ ನುಡಿಸುತ್ತಿರಬೇಕು. ಅಂದರೆ ತನ್ನ ನುಡಿಯಂತೆ ನಡೆಯೂ, ನಡೆಯಂತೆ ನುಡಿಯೂ ಎರಡೂ ಒಂದಾಗಿ, ತನ್ನನ್ನು ನಂಬಿ ಮುಂದು ಮಾಡಿಕೊಂಡು ಬೆಂಬಲಿಗರಾದವರಿಗೆ ಹೆಚ್ಚಿನ ಮಾನ-ಮರ್ಯಾದೆ-ಸ್ಥಾನ ಕಲ್ಪಿಸಿ, ಒಪ್ಪಿಗೆಯಿಂದ ಜಾಗ್ರತೆಗಾಗಿ ಮುನ್ನಡೆಯುವುದು ಪ್ರತಿಯೊಬ್ಬರ ಕರ್ತವ್ಯ. ಅರ್ಜುನ-ಅಂಕೆಯು ಪೂರ್ಣ ರೂಪದ ಶ್ರೀಕೃಷ್ಣ-ಪೂಜೆಯನ್ನು ಮುಂದೆ ಮಾಡಿದ್ದರ ಫಲವೇ ಧರ್ಮಕ್ಷೇತ್ರವಾದಂಥ ಕುರುಕ್ಷೇತ್ರದಲ್ಲಿ ಅರ್ಜುನಂಕೆಗೆ ಶ್ರೀಕೃಷ್ಣ ಪೂಜೆಯ ಸಹಾಯದಿಂದ ವಿಜಯ-ಶ್ರೀ ಪ್ರಾಪ್ತಿಯು.

[ಪುಟ ೩೧]

ಪ್ರಶ್ನಾರ್ಥ, ಉದ್ಗಾರ ವಾಚ್ಯದ ಕೆಳಗೆ ಮತ್ತು
ಅರೆ, ವಿವರ ವ ವಿಸರ್ಗಗಳಿಗೆ ಬಿಂದುವನಿತ್ತು,
ಪೂರ್ಣ-ಗುಣ-ಸಾಹಿತ್ಯ ಲೇಖನಕೆ ಲಿಪಿ-ಮುತ್ತು.
ಲಿಖಿಸು; ಪೂರ್ಣ ಲಿಖಿಸದೆ ಬಿಡಬೇಡ ಬೇಸತ್ತು.

ವಿಜಯ-ಶ್ರೀಯ ಪ್ರಾಪ್ತಿಯಾಗಬೇಕೆಂದು ಕರ್ತವ್ಯದಲ್ಲಿ ನಿರತನಾಗಿ ಇತರರೊಂದಿಗೆ ಪ್ರತ್ಯಕ್ಷವಾಗಿ ಸಂಪರ್ಕ ಬೆಳೆಸಿರುವ ಮನುಷ್ಯನ ವಿವಿಧ ಮುಖ ಚರ್ಯೆಯ ಹಾವ-ಭಾವದಿಂದ, ಅವನ ಮನಸ್ಸಿನ ಹೊಯ್ದಾಟದ ಕ್ರೋಧ-ದ್ವೇಷ, ಆನಂದ-ದುಃಖ, ಅಳು-ನಗು, ಕುಣಿತ-ಓಟ ಮುಂತಾದವುಗಳಿಂದ ಆ ವ್ಯಕ್ತಿಯ ಬಗೆಗಿನ ಅಂತರಾಳದ ಅಭಿಪ್ರಾಯವನ್ನು, ಪ್ರತ್ಯಕ್ಷ ನೋಡುತ್ತಿರುವ ಇತರೇ ಜನರು ಸುಲಭವಾಗಿ ತಿಳಿಯುತ್ತಾರೆ. ಅದರಂತೆ ಅಕ್ಷರ ಸಾಹಿತ್ಯದ ಸಮಸ್ತ ವಾಕ್ಯ-ವಾಕ್ಯದಲ್ಲಿ ಕಂಡು ಬರುವ ಅಲ್ಪ-ವಿರಾಮಾದಿ ಚಿಹ್ನೆಗಳಿಂದ, ಅವುಗಳ ಪ್ರಯೋಗ

(Punctuation) ದಿಂದ ಆ-ಆ ವಾಕ್ಯದ ಅರ್ಥವು ಸ್ಪಷ್ಟವಾಗುತ್ತದೆ. ಭಾವ ಬೋಧೆಯು ಸುಸ್ಪಷ್ಟವಾಗುತ್ತದೆ.

ಪುರಾಣ-ಪ್ರವಚನ-ಭಾಷಣ-ಸಂಗೀತ ಮಾಡುವವರ ಮುಖ-ಮುದ್ರೆಯನ್ನು, ಕುಣಿಯುವವರ ಕಾಲು-ಕೈ ಚಲಿಸುವಿಕೆಯನ್ನು ಮತ್ತು ಅವರ ವೇಷ-ಭೂಷಣಾದಿಗಳನ್ನು ಪ್ರತ್ಯಕ್ಷ ನೋಡುತ್ತಿದ್ದರೆ ಹೃದಯಂಗಮವಾಗಿ ಸುಲಭದಲ್ಲಿ ಆಗುವಷ್ಟು ರಸಾಸ್ವಾದನೆಯು ಕೇವಲ ಶಬ್ದಶ್ರವಣ ಮಾತ್ರದಿಂದ ಆಗಲಾರದು. ಚಿತ್ರದೊಂದಿಗಿದ್ದ ಲೇಖ ಬಹಳ ಪ್ರಭಾವಕಾರಿಯಾಗುತ್ತದೆ; ಮಕ್ಕಳಿಗಂತೂ ಚಿತ್ರಗಳಿಲ್ಲದ ಪುಸ್ತಕ ಇರುವುದಿಲ್ಲ. ಮಕ್ಕಳ ಮನಸ್ಸಿನಷ್ಟು ಮುಗ್ಧ ಮನಸ್ಸುಳ್ಳ ಹಿರಿ ವಯಸ್ಕರಿಗೂ ಮತ್ತು ವೃದ್ಧರಿಗೂ 'ಪೂರ್ಣತ್ವ'ದ ಅರಿವನ್ನು ಕೇವಲ ನೋಟದಿಂದ ಮಾಡಿಕೊಡಬೇಕಾದರೆ, ಪೂರ್ಣವಾಗಿ ದುಂಡಾಕಾರದಲ್ಲಿರುವ ರೊಟ್ಟಿಯಂತಹ ಚಿತ್ರ ತೋರಿಸಿ, ಇದು ಪೂರ್ಣ ಇದೆ. ಎಂದು ಹೇಳಿ, ಇದರಲ್ಲಿರುವ ದುಂಡಾಗಿರುವಿಕೆಯೇ ಪೂರ್ಣತ್ವವೆಂದು ಅವರಿಗೆ ತಿಳಿಸಿದರೆ ಅವರು ಕೂಡಲೇ ಒಪ್ಪಿಬಿಡುತ್ತಾರೆ. ದಟ್ಟಡವಿಯಲ್ಲಿರುವ 'ಗವಯ'ವನ್ನು ಹಿಡಿತಂದು ತೋರಿಸುವುದು ಕಷ್ಟದ ಕೆಲಸ. ಅದನ್ನೇ ಸುಲಭದಲ್ಲಿ ತಿಳಿಸಿ ಕೊಡಬೇಕಾದರೆ. ಗೋಶಾಲೆಯಲ್ಲಿಯ ಆಕಳವನ್ನು ಅಥವಾ ಬರೆದ ಆಕಳದ ಚಿತ್ರವನ್ನು ತೋರಿಸಿ, ಇಂಥದೇ, ಇದರಂಥದೇ ಅಡವಿಯಲ್ಲಿರುವ ಆಕಳಕ್ಕೆ "ಗವಯ" (ಕಾಡಾಕಳು) ಎನ್ನುತ್ತಾರೆಂದರೆ, ಅವರು ಸುಲಭದಲ್ಲಿ ಒಪ್ಪುತ್ತಾರೆ. "ಗೋ-ಸದೃಶೋ ಗವಯಃ". ಕಾಣದ ಶಿವನನ್ನು ತೋರಿಸಲು, ಶಿವಯೋಗಿಯನ್ನು ತೋರಿಸಿ, ಈ ಶಿವಯೋಗಿಯಂತೆ ಶಿವನಿದ್ದಾನೆನ್ನುತ್ತೇವೆ. ಚಿತ್ಕಳೆಯನ್ನು ತೋರಿಸಲು ಇಷ್ಟಲಿಂಗವನ್ನು ತೋರಿಸುತ್ತೇವೆ. ಇಷ್ಟಲಿಂಗದ

ಮೂಲಕ ಪ್ರಾಣಲಿಂಗ–ಭಾವಲಿಂಗಗಳ ಜ್ಞಾನ ಮಾಡಿಕೊಡಬೇಕಾದರೆ, ಮುಂದೆ ಒಂದು ದೀಪವನ್ನಿಟ್ಟು, ಈ ದೀಪ ಇಷ್ಟಲಿಂಗ; ಈ ದೀಪದ ಕಿರಣವು ಪ್ರಾಣಲಿಂಗ. ಇದರ ಪ್ರಕಾಶವು ಭಾವಲಿಂಗವೆಂದು ಹೇಳಿದರೆ ಅರ್ಥ ಅದಷ್ಟು ಹೆಚ್ಚು ಸುಲಭ ಆಗುತ್ತದೆ. ಹಾಗೆ ಪ್ರತ್ಯಕ್ಷ ಮೂಲಕವಾದ ಚಿತ್ರಾದಿಗಳ ತೋರಿಸುವಿಕೆಯಿಂದ ಸುಲಭ ತಿಳಿವಳಿಕೆ ಆಗುವಂತೆ ಕೇವಲ ಶಬ್ದ ಜೋಡಣೆಯಿಂದ ಆಗುವದಿಲ್ಲ; ಅದು ಸುಲಭ ಆಗಬೇಕಾದರೆ, ವಿರಾಮಾದಿ ಚಿಹ್ನೆಗಳನ್ನು ಆಶ್ರಯಿಸಬೇಕಾಗುತ್ತದೆ.

ಆಧ್ಯಾತ್ಮಿಕ ವಿಷಯ ತಿಳಿಸಿಕೊಡುವ ಮಾತಂತೂ ಸರಿಯೆ. ಸರ್ವಸಾಮಾನ್ಯವಾದ ಸಾಹಿತ್ಯಿಕ ಲೇಖನದಲ್ಲಿ ಸಹ ತಕ್ಕಮಟ್ಟಿಗೆ ಸುಲಭವಾಗಿ ಪೂರ್ಣವಾದ ಅರ್ಥಾವಬೋಧನೆಗೆ ವಾಕ್ಯದ ಮುಖ್ಯಾರ್ಥದ ನೈಜ ತಿಳಿವಳಿಕೆಯು ಪೂರ್ಣ ವಿರಾಮಾದಿ ಚಿಹ್ನೆಗಳಿಲ್ಲದೆ ಆಗುವುದು ಬಲು ಕಷ್ಟ ಸಾಧ್ಯ. ಉದಾಹರಣೆಗೆ ಪೂರ್ಣತ್ವದ್ದೇ ಆದ ನಾಲ್ಕನೇಪದ್ಯದ "ಗಡಿಯಾರ ಮುಳ್ಳುಗಳು" ಎಂಬ ಒಂದೇ ಒಂದು ಪದವನ್ನು Punctuation ದ (ವಿರಾಮಾದಿ ಚಿಹ್ನೆಗಳು ಹಾಗೂ ಸಮಾಸಾದಿಗಳು ಸರಿಯಾದ ಜ್ಞಾನಕ್ಕೆ ಕಷ್ಟ ಪಟ್ಟಿರಲಾರದವರು ಹೀಗೆ ಅಂದುಕೊಳ್ಳಬಹುದು: I ಗಡಿಯಾರಮುಳ್ಳುಗಳು; II ಗಡಿಯಾರ ಮುಳ್ಳು+ಗಳು (ಗಳು=ಬಿದಿರು); III ಗಡಿ+ಯಾರ?+ಮುಳ್ಳು+ಗಳು; IV ಗಡಿಯು+ಆರು ಮುಳ್ಳು+ಗಳು; V ಗಡಿಯು+ಆರು+ಮುಳ್ಳುಗಳು; VI ಗಡಿಯು+ಅ+ಆರು+ಮುಳ್ಳು+ಉಗಳು–ಎಂದು ಮುಂತಾಗಿ ತಿಳಿದಷ್ಟು ಅನರ್ಥ ಮಾಡಿಕೊಳ್ಳಬಹುದು. ಅನರ್ಥವೆಂದರೆ ಸಮಯ – ಸಂದರ್ಭ – ಪ್ರಸಂಗಕ್ಕೆ ಅನುಚಿತವಾದದ್ದು. ಇಂತಹ ಅನರ್ಥಗಳು ನಿಜವಾದ ಪೂರ್ಣದ

ಪೂರ್ಣತ್ವದ ಜ್ಞಾನಕ್ಕೆ ತೊಡಕಾಗುತ್ತವೆ. ಆದುದರಿಂದ, ಇಂತಹ "ಅರ್ಥಮನರ್ಥಂ ಭಾವಯ ನಿತ್ಯಮ್".

"ಗಡಿಯಾರದ ಅಥವಾ ಗಡಿಯಾರದ 'ಡಾಯಲಿ'ನ ಮುಳ್ಳು ಗಳು" ಎಂಬುದಾಗಿ ಸ್ಪಷ್ಟವಾದ ಸರಳವಾದ ಸಂದರ್ಭೋಚಿತ ವಾದ ಅರ್ಥ. ಗಡಿಯಾರದ ಮುಳ್ಳುಗಳು = ಗಡಿಯಾರ ಮುಳ್ಳು ಗಳು; ಇದು ಷಷ್ಠೀ ತತ್‌ಪುರುಷ ಸಮಾಸ. ಗಡಿಯಾರದ + 'ಡಾಯಲಿನ + ಮುಳ್ಳುಗಳು = ಗಡಿಯಾರ ಮುಳ್ಳುಗಳು; ಇದು ಮಧ್ಯಮ ಪದಲೋಪೀ ಸಮಾಸ. "ಗಡಿಯಾರ ಮುಳ್ಳುಗಳು" ಎಂಬುದು ಏಕ ಪದ; ಒಂದೇ ಪದ; ಈ ಪದವು 'ತಿರುಗುವವು' ಎಂಬ ಕ್ರಿಯಾಪದದ ಕರ್ತೃ ಪದವು. ಇದನ್ನೆಲ್ಲ ಇಲ್ಲಿ ಪ್ರಾಸಂಗಿಕ ವಾಗಿ ಬೆಳೆಸಿ ವಿಸ್ತರಿಸಿ ಹೇಳಿದುದರ ಮುಖ್ಯ ತಾತ್ಪರ್ಯ ಇಷ್ಟೇ: ಲೇಖಕನಿಗೂ ವಾಚಕನಿಗೂ ವಿರಾಮಾದಿ ಚಿಹ್ನೆಗಳ ಬಳ ಕೆಯ ಪರಿಜ್ಞಾನ ಪೂರ್ಣ ಇದ್ದರೆ, ಆ-ಆ ವಾಕ್ಯದ ಪೂರ್ಣ ಜ್ಞಾನ ಸರಳ ಆಗುತ್ತದೆ.

ಜೀವಿಸುವ ಪ್ರತಿಯೊಬ್ಬ ಜೀವಿಗೂ ಮತ್ತು ಜೀವಿಯಂತಿರುವ ಪ್ರತಿಯೊಂದು ಯಂತ್ರಕ್ಕೂ ವಿರಾಮದ ವಿಶ್ರಾಂತಿಯ ಆವಶ್ಯಕತೆ ಇದೆ. ಕಾರ್ಯ ಮಾಡುತ್ತಿರುವಾಗ ಮಧ್ಯ-ಮಧ್ಯ ಬಿಡುವು ಮಾಡಿಕೊಂಡ ವಿರಾಮದಿಂದಾಗಿ ಜೀವಿಯ ದಣಿವು ಮತ್ತು ಯಂತ್ರದ ಕಾವು ಕಡಿಮೆಯಾಗುತ್ತದೆ. ಅದರಿಂದ ಅವೆರಡರ ಕಾರ್ಯ-ಕ್ಷಮತೆ ಮುಂದುವರಿಯುತ್ತದೆ. ಅದಕ್ಕಾಗಿ ಜೀವಿಗೆ ಹಬ್ಬ-ಹುಣ್ಣಿಮೆ-ಉತ್ಸವದ ವಿಶಿಷ್ಟ ಸಂಭ್ರಮದ ಲಕ್ಷಣ ಚಿಹ್ನೆ ಕಾಣುತ್ತಿರಬೇಕು. ಯುಗಾದಿಗೆ ಹೊಸ ದಿನಕ್ಕೆ ಹಬ್ಬಕ್ಕೆ ಜಾತ್ರೆಗೆ ವಿಶಿಷ್ಟ ಹೊಸ ಬಟ್ಟೆ ಬೇಕು. ಈ ವೇಷಭೂಷಣದ ಚಿಹ್ನೆಗಳಿಂದ ಆ ಉತ್ಸವಾದಿಗಳಿಗೆ ಹೆಚ್ಚಿನ ಶೋಭೆ ಬಂದಂತಾಗಿ, ಆ ವೇಷ

ಧರಿಸಿದ ವ್ಯಕ್ತಿಗೂ ವಿಶಿಷ್ಟ ಆನಂದವಾಗುತ್ತದೆ. ವಾಹನಾದಿಗಳ ಮಾರ್ಗಕ್ಕೆ ತಕ್ಕಂತೆ, ಅವುಗಳ ಕ್ಷೇಮಾಭಿಲಾಷೆಗಾಗಿ ಸ್ವಾಭ್ಯಂಡಿಗೆ ತಕ್ಕಂತೆ ಕ್ರಾಸಿಂಗ್–ಕರ್ವಿಂಗ್–ಬ್ರಿಡ್ಜ್–ಸ್ಪೀಡ್‌ಕಂಟ್ರೋಲ್ ಮುಂತಾದವುಗಳನ್ನು ಸೂಚಿಸುವ 'ಸೈನ್‌ಬೋರ್ಡ' ಚಿಹ್ನೆಯು ಸಂಕೇತದ ಫಲಕಗಳು ಆ–ಆ ಸ್ಥಾನದಲ್ಲಿ ಸಮುಚಿತವಾಗಿ ಬಳಕೆಯಾಗುತ್ತಿರಬೇಕು. ಆದರಿಂದ ವಾಹನದ ಚಾಲಕನ ಹಾಗೂ ಪಥಿಕನ ಯೋಗ ಕ್ಷೇಮಕ್ಕೆ ಯೋಗ್ಯವಾಗುತ್ತದೆ. ಹಾಗೆ ಸಾಹಿತ್ಯಕ್ಕೂ ಲೇಖಕನಿಗೂ ಹಾಗೂ ವಾಚಕನಿಗೂ ಅರ್ಥಾಭಿವ್ಯಕ್ತಿಗೆ ವಿರಾಮಾದಿ ಚಿಹ್ನೆಗಳ ಸಮುಯೋಚಿತ ಬಳಕೆಯಿಂದ ಹೆಚ್ಚಿನ ಲಾಭವಾಗುತ್ತದೆ. ಮೂರಕ್ಕೂ ಮತ್ತು ಮೂವರಿಗೂ ಒಳ್ಳೆಯದೇ ಆಗುತ್ತದೆ.

ಸಾಹಿತ್ಯದ ವಿರಾಮಾದಿ ಚಿಹ್ನೆಗಳಲ್ಲಿ ಪೂರ್ಣತ್ವದ, ಪೂರ್ಣ ಬಿಂದುವಿನ ದುಂಡಾಕಾರದ ಸಂಕೇತ ಇರುವ ಕೆಲವೊಂದು ಚಿಹ್ನೆಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಪ್ರಶ್ನಾರ್ಥಕ ಚಿಹ್ನೆ= Note of Interrogation= ? ; ಉದ್ಗಾರ ವಾಚಕ ಚಿಹ್ನೆ= Note of Exclamation = ! ; ಅರ್ಧವಿರಾಮ ಚಿಹ್ನೆ = Semi-colon = ; ; ವಿವರಣ ಬೋಧಕ ಚಿಹ್ನೆ = colon = : ; ಅಲ್ಪ ವಿರಾಮ ಚಿಹ್ನೆ = comma = , ; ಪೂರ್ಣ ವಿರಾಮ ಚಿಹ್ನೆ= Full-stop = . ; ಷಷ್ಠಿ—ಸಂಬಂಧ ಸೂಚಕ ಚಿಹ್ನೆ = Apostrophe = 's; ಉದ್ಧರಣ ಬೋಧಕ ಚಿಹ್ನೆ = Inverted commas = ' ' = " "— ಇವೆಲ್ಲ ಚಿಹ್ನೆಗಳಲ್ಲಿ ಪೂರ್ಣತ್ವದ ಬಿಂದು ರೂಪದ ಪೂರ್ಣಾಕೃತಿ ಇರುವುದರಿಂದಲೇ ವಾಕ್ಯದ ಅರ್ಥವು ಸುಸ್ಪಷ್ಟವಾಗಿ ಸರಳ ರೀತಿಯಲ್ಲಾಗುತ್ತದೆ. ಈ ಮೇಲಿನ ವಿರಾಮಾದಿ ಚಿಹ್ನೆಗಳಲ್ಲಿಯೂ ಪೂರ್ಣದ ಗುರುತಿನ ದುಂಡಾಕಾರದ

ಸಂಕೇತ ಇರುವುದರಿಂದ ಇವನ್ನು ಉಪಯೋಗಿಸಿದ ವಾಕ್ಯದಲ್ಲಿ ಸಹ ಪೂರ್ಣತ್ವದ ಅರ್ಥ ಸರಳವಾಗಿ ತಿಳಿದು ಬರುತ್ತದೆ. ಚಿಹ್ನೆಗಳನ್ನು ಅವಶ್ಯವಿದ್ದಂತೆ ಅವಶ್ಯವಾಗಿ ಉಪಯೋಗಿಸಬೇಕು.

ಯಾರನ್ನಾದರೂ ಇಲ್ಲಿ ಬಾ, ಬನ್ನಿ, ದಯಮಾಡಿಸಿರೆಂದು ಮುಂತಾಗಿ ಯಾವುದೇ ಶಬ್ದದಿಂದ ಕೂಗಿ ಕರೆಯುವಾಗ, ಆ ಕರೆಯುವ ಕೂಗಿನೊಂದಿಗೆ ಕೈಯಿಂದ ಸಂಜ್ಞೆ ಮಾಡಿದರೆ, ಆಹ್ವಾನಿತ ವ್ಯಕ್ತಿಗೆ ಆಹ್ವಾನ ಮಾಡುವವನ ಅಭಿಪ್ರಾಯವು ಸುಲಭವಾಗಿ, ಮಾತಿನ ಅರ್ಥವಾಗುತ್ತದೆ; ಕೂಗಿನ ಶಬ್ದ ಕೇಳಿಸದಿದ್ದರೂ ಸಂಜ್ಞೆಯ ಬಲದಿಂದಾದರೂ ಆಹ್ವಾನಿತ ವ್ಯಕ್ತಿಗೆ ಅರ್ಥವಾಗುತ್ತದೆ. ಹಾಗೆ ವಿರಾಮಾದಿ ಚಿಹ್ನೆಗಳಿಂದ ಕಠಿಣ ವಾಕ್ಯ-ಪದ-ಶಬ್ದಗಳ ಅರ್ಥವೂ ಸಹ ಸರಳವಾಗುತ್ತದೆ.

ಸಮಯೋಚಿತವಾಗಿ ಉಪಯೋಗಿಸಲ್ಪಡುವ ಸುಪ್-ತಿಙಂತದ ಪದಗಳ ಜೊತೆಗೆ, ವಿರಾಮಾದಿ ಚಿಹ್ನೆಗಳನ್ನು ವ್ಯಾಕರಣದ ನಿಯಮಕ್ಕನುಸರಿಸಿ, ಮಿತ-ಮಿತವಾಗಿ, ಸಮಯೋಚಿತವಾಗಿ ಸಂದರ್ಭಕ್ಕೆ ತಕ್ಕಂತೆ ಬಳಸಬೇಕು. ಇದರಿಂದ ಶಬ್ದಾರ್ಥಗಳ ಸಮಯೋಚಿತ ಬಳಕೆಯು ಸಾರ್ಥಕವಾಗಿ, ಬರೆದವನ ಅಭಿಪ್ರಾಯವು ಓದಿ ತಿಳಿಯುವವನಿಗೆ ನೇರವಾಗಿ ಅರ್ಥವಾಗಿ, ಇಬ್ಬರ ಶ್ರಮವೂ ಸಾರ್ಥಕವಾಗುತ್ತದೆ. ಅವರ ಜ್ಞಾನ ಪ್ರಸಾರಣಾ ಕಾರ್ಯವು ಸುಲಭ ಸಾಧ್ಯವಾಗುತ್ತದೆ.

[ಪುಟ ೩.೨]

ದುಂಡು ಅಥವಾ ಚೌಕು ‘ ಬ್ರಾಕೆಟ್ಟು ’ ಗಳ ಸುತ್ತು
ಒಂದರೊಂದರ ಇದಿರು - ಬದಿರಾಗಿರುವ ಗತ್ತು,
ಜೊತೆಗೂಡಿ ಪೂರ್ಣತೆಯ ತಿಳಿಸುತಿಹ ಗೆರೆ ಸುತ್ತು.
ತಿಳಿಸು ; ಪೂರ್ಣ ತಿಳಿಸದೆ ಬಿಡಬೇಡ ಬೇಸತ್ತು.

ಸುಲಭ ಸಾಧ್ಯವಾಗುವಂತೆ ಪೂರ್ಣತ್ವವನ್ನು ಪಡೆಯುವ ಸಲುವಾಗಿ ತಂತಮ್ಮ ಶಾರೀರಿಕ ಆಕಾರ ಹಾಗು ಸಾಮರ್ಥ್ಯದಿಂದ ಸರಿ ಸಮಾನವಾದ ಶೀಲಾಚರಣೆ ಮತ್ತು ಪೂರ್ಣತ್ವದ ಬಗ್ಗೆ ವ್ಯಸನವಿದ್ದರೆ, ಅಂಥವರು ಪರಸ್ಪರ ಕೂಡುವ ಅಭಿಲಾಷೆಯಿಂದ ಒಂದೆಡೆ ಕೂಡುತ್ತಾರೆ. "ಸಮಾನ - ಶೀಲ - ವ್ಯಸನೇಷು ಸಖ್ಯಮ್". ಇಂಥ ಪರಸ್ಪರ ಸಮಾನ ಅಭಿಲಾಷೆ ಆಕಾಂಕ್ಷೆ ಇದ್ದ ಅವರು ಎದುರು - ಬದಿರು ಕುಳಿತು ಅಪ್ತಾಲೋಚನೆ ಮಾಡುತ್ತಾರೆ. ಆ ಶಿವಾನುಭವದ ಅಪ್ತಾಲೋಚನೆಯಿಂದ "ವಾದೇ ವಾದೇ ಜಾಯತೇ ತತ್ತ್ವ - ಬೋಧಃ" ಎಂಬ ದೃಢ ನಂಬಿಕೆಯಿಂದ, ಸೌಮ್ಯ ಭಾವದಿಂದ ಇಬ್ಬರೂ ತಂತಮ್ಮ ಸ್ಥಾನದಲ್ಲಿದ್ದು ಅಷ್ಟಷ್ಟಕ್ಕೇ ತತ್ತ್ವ ಚಿಂತನೆಯನ್ನು ಮಾಡುತ್ತಿದ್ದರೆ, ಪೂರ್ಣತತ್ತ್ವದ ಬಗ್ಗೆ ನಿರ್ದಿಷ್ಟವೂ ನಿರ್ದುಷ್ಟವೂ ಆದ ಪೂರ್ಣ ತಿಳುವಳಿಕೆಯಾಗುತ್ತದೆ.

ವರ್ತುಲಾಕಾರದ (); ಚೌಕಾಕಾರದ [ ]; ಧನುಷಾಕಾರದ ⏞ (ಮೀಸೆ ಆಕಾರದ) ಬ್ರಾಕೆಟ್ಟು=ಕಂಸ ಚಿಹ್ನೆಗಳನ್ನು ಸಕ್ರಮವಾಗಿ ಪರಸ್ಪರ ಒಂದರೊಂದರ ಇದಿರುಬದಿರಾಗಿ ಅತಿ ಸಮೀಪವಾಗಿ ಬರವಣಿಗೆಯಲ್ಲಿ ಕೂಡ್ರಿಸಿದರೆ, ಆ - ಆ ಎರಡರ ಜೋಡಣೆಯಿಂದ ಅಥವಾ "ಮತ್ತು" ಎಂಬರ್ಥದ "∞" ಇಂಗ್ಲೀಷ And ಚಿಹ್ನೆಯಿಂದ ಪೂರ್ಣತ್ವದ ಪೂರ್ಣ ದುಂಡು ವರ್ತುಲಾಕಾರದ ಬೋಧವಾದಂತಾಗುತ್ತದೆ. ಇದರಿಂದ ಸಂಕರಕ್ಕಂತೂ ಇರುವುದಿಲ್ಲ ಮಾತ್ರವಲ್ಲ; ವಿಶಿಷ್ಟ ರೀತಿಯಲ್ಲಿ ಹೇಳಬೇಕೆಂದಿರುವ ಮಾತನ್ನು ಅಷ್ಟೊಂದು ಮುಖ್ಯವಲ್ಲದ್ದನ್ನಾಗಿ ಹೇಳಲು ಬಳಸುವ "ಪ್ಯಾರೆಂಥಿಟಿಕಲ್ ಕ್ಲಾಜ್" ಮುಂತಾದವುಗಳನ್ನು ಸಮರ್ಥ ರೀತಿಯಲ್ಲಿ ಬಳಸಿ, ಸ್ಪಷ್ಟವಾದ ಅಭಿಪ್ರಾಯ

ವನ್ನು ವ್ಯಕ್ತಮಾಡಬಹುದು. ಇದರಿಂದ ಅಂಥಾದ್ದನ್ನು ಒಂದೆಡೆ ವಿಂಗಡಿಸಿಟ್ಟು, ಮುಖ್ಯವಾದುದನ್ನು ಇನ್ನಷ್ಟು ಮುಖ್ಯವಾದದ್ದನ್ನಾಗಿಸಿ, ಗೌಣವಾದದ್ದಕ್ಕೂ ಒಂದು ಪೂರ್ಣತ್ವ ಬೇಲಿಯ ರಕ್ಷೆ ಕೊಟ್ಟು, ಅದಕ್ಕೆ ಮಧ್ಯ-ಮಧ್ಯದಲ್ಲಿ ಸ್ವತಂತ್ರ ವ್ಯಕ್ತಿತ್ವವನ್ನು ಕಾಯ್ದುಕೊಳ್ಳುತ್ತ, ಪೂರ್ಣವಾದ ಅಸ್ತಿತ್ವದೊಂದಿಗೆ ಬಾಳುವಂತೆ ಮಾಡಿದರೆ, ವರ್ಣ-ವರ್ಣದವರಲ್ಲಿಯ ಭೇದ ಅಳಿದು ಅವರೆಲ್ಲರೂ ಸಮಾನ ವರ್ಣದ ಸವರ್ಣಿಗಳಾಗುತ್ತಾರೆ. ಅವರಲ್ಲಿ ಬ್ರಾಕೆಟ್ಟಿನ ಪರಸ್ಪರ ಸಮಾನತೆಯ ಜೋಡಣೆಯಿಂದಾಗುವ ಪೂರ್ಣತ್ವದ ಪೂರ್ಣ ಸಂಕೇತದಂತೆ, ಪೂರ್ಣ ಜೀವನ ಸಾಗಿಸಲು ಪೂರ್ಣ ಗುಂಪಿನಲ್ಲಿ ಒಂದೆಡೆ ಸನ್ನದ್ಧರಾಗಿ ಒಂದಾಗಿ ಕಾಣುತ್ತಾರೆ; ಒಂದಾಗುತ್ತಾರೆ. ಬಂಧು-ಬಳಗದ ಸಂಬಂಧಿಕರಾಗುತ್ತಾರೆ.

[ಪುಟ ೭೭]

ಸಂಬಂಧಿ ಕೆಳಗಿಳಿಯೆ ಅಲ್ಪ ಮಾನ ವಿಪತ್ತು;
ಕಾಮ ಮೇಲ್ ಮುಖ ಮಾಡೆ, ಸಂಯೋಜಕದ ಗೊತ್ತು.
ಸಂಯೋಜಕವೆರಡನು ಅತಿ ನಿಕಟ ಇಡೆ ಸುತ್ತು.
ಇಡಿಸು; ಪೂರ್ಣ ಇಡಿಸದೆ ಬಿಡಬೇಡ ಬೇಸತ್ತು.

ಸಂಬಂಧಿಕರಾಗಿರಲು ಬಯಸುವವರು ತಂತಮ್ಮ ವ್ಯವಹಾರವನ್ನು ಜಾಗರೂಕತೆಯಿಂದ ಹಿತ-ಮಿತವಾಗಿಯೂ ಲೌಕಿಕಕ್ಕೆ ಮೀರದಂತೆಯೂ ಮಾಡುತ್ತಿರಬೇಕು. ವಿರೋಧ ಭಾವನೆಯು ಸ್ವಲ್ಪವೂ ಸಲ್ಲದೆಂದು ಆತ್ಮೀಯತೆಯಿಂದ ಎಲ್ಲರೊಡನೆ ಬಾಳಬೇಕು. ಅವರೆಲ್ಲರೂ ತನ್ನವರೇ ಎಂದು ಭಾವಿಸಿ ಬಾಳಿನುದ್ದಕ್ಕೂ ಒಂದೇ ಆಗಿರಬೇಕೆಂದು ಭಾವಿಸಿ ವ್ಯವಹರಿಸುತ್ತಿರಬೇಕು. ಈ ರೀತಿ ಸವರ್ಣಿಗಳೂ ಬಂಧುಗಳೂ ಆದ ಆ ಸಂಬಂಧಿಕರಲ್ಲಿ

ಮುಖ್ಯವಾದ ಗೌರವ ಸ್ಥಾನದಲ್ಲಿ ಮೇಲ್‌ಪಂಕ್ತಿಯಲ್ಲಿರುವ ವ್ಯಕ್ತಿಯು ತನ್ನ ಕೀಳು ದರ್ಜೆಯ ವ್ಯವಹಾರದಿಂದ ಅವನತಿಗಿಳಿಯದೆ ಇರಬೇಕು. ಹಾಗೆ ಇಳಿದರೆ ಅವನಿಗೆ ಅಲ್ಪರಂತಹ ಅಪಮಾನವಾಗುತ್ತದೆ. ಆದರಿಂದ ಅವನಿಗೆ ನಾನಾ ತರಹದ ಆಪತ್ತು-ವಿಪತ್ತುಗಳು ಬರುತ್ತವೆ.

ಷಷ್ಟೀ-ಕಾರಕ ಚಿಹ್ನೆಯು (Apostrophe) ಸಮಾನ ವರ್ಣಗಳ ಪಂಕ್ತಿಯಲ್ಲಿ ಮೇಲಿನ ಸ್ಥಾನದಿಂದ ಕೆಳಗಿಳಿದರೆ, ಅದು ಅಲ್ಪ ವಿರಾಮದ ಚಿಹ್ನೆಯಾಗುತ್ತದೆ.

ಅಲ್ಪರ ಸಂಗ ಅಭಿಮಾನ ಭಂಗವೆಂಬುದನ್ನು ಮನಗಂಡು ಪ್ರಾಯಶ್ಚಿತ್ತದಿಂದ ಪಕ್ವನಾಗಬೇಕು. ಸ್ವಪ್ರಯತ್ನದಿಂದ ಸತ್‌ಸಂಗ ಮಾಡಬೇಕು; ತನ್ನ ಭೌತಿಕ ವಿಷಯಾಸಕ್ತತೆಯ ಕಾಮುಭಾವನೆಯನ್ನು ಪರಿವರ್ತಿಸಿಕೊಳ್ಳಬೇಕು; ನಿಷ್ಕಾಮ ಭಾವನೆಯಿಂದ ಜಿತೇಂದ್ರಿಯನಾಗಬೇಕು. ಅದಕ್ಕಾಗಿ ಕಾಮ ಭಾವನೆಯನ್ನು ಕಾಮಾಕಾಂಕ್ಷೆಯನ್ನು ಸಾಧನೆಯ ಬಲದ ಊರ್ಧ್ವದೃಷ್ಟಿಯಿಂದ ಪರಮಾತ್ಮನ ಚಿಂತನೆಯಲ್ಲಿ ಮೇಲ್‌ಮುಖ ಮಾಡಿಕೊಳ್ಳಬೇಕು. ಆಗ ಶಿವ-ಜೀವರ ಐಕ್ಯದ, ಶಿವಯೋಗ ಸಿದ್ಧಿಯ ಅನುಭವವಾಗುವುದು ಸುಲಭವಾಗುತ್ತದೆ.

ಹಾಗೆ "ಕಾಮಾ" ವನ್ನು ಮೇಲ್ಮುಖ ಮಾಡಿದರೆ, ಅಂದರೆ ವಿರಾಮ ಚಿಹ್ನೆಯನ್ನು ಮೇಲಕ್ಕೆ ಮುಖವಾಗುವಂತೆ ಬರೆದರೆ, ಮತ್ತು ಆ ಮೇಲ್ಮುಖದಂತಾದ ಕಾಮಾವನ್ನು ವರ್ಣಪಂಕ್ತಿಯಲ್ಲಿ ಊರ್ಧ್ವಸ್ಥಾನದಲ್ಲಿರುವಂತೆ ಕಾಪಾಡಿದರೆ, ಸಂಯೋಜಕ ಚಿಹ್ನೆ ಅಥವಾ ಉದ್ಧರಣ ಬೋಧಕ ಚಿಹ್ನೆ (Inverted comma) ಆಗುತ್ತದೆ. ಆದರೆ ಊರ್ಧ್ವ ಮುಖವಾದ ಕಾಮ-'ಕಾಮಾ'ವು ಯೋಗ 'ಸಂಯೋಜಕ ಚಿಹ್ನೆ'ಯಾಗುತ್ತದೆ.

ನಿರ್ದಿಷ್ಟವಾದ ತನ್ನ ಆಶ್ರಮ–ಸ್ಥಾನದಲ್ಲಿರುವ ಸ್ಥಳೀಯ ಯೋಗಿಯ ಬಳಿಗೆ, ಬೇರೆ ಕಡೆಯ ದೂರ ಅಂತಿಮ ಸ್ಥಾನದಲ್ಲಿಂದ ಮತ್ತೊಬ್ಬ ಯೋಗಿಯು ಸ್ಥಳಿಕ ಯೋಗಿಯನ್ನು ಭೆಟ್ಟಿ ಆಗಲು ಬಂದರೆ, ಮತ್ತು ಅಲ್ಲಿ ಬಂದು ಒಂದೇ ಸಾಲಿನಲ್ಲಿ ಅತ್ಯಂತ ಸಮೀಪ ಕುಳಿತರೆ, ಅವರಿಬ್ಬರ ಚಿಂತನೆಯಿಂದ ತತ್ತ್ವದ ಬಗ್ಗೆ ಪೂರ್ಣ ತಿಳಿವಳಿಕೆ ಬರುತ್ತದೆ. ಇಲ್ಲಿ ಇಬ್ಬರ ಭೆಟ್ಟಿ ಆಗುವದು ಮುಖ್ಯ. ಅದರಂತೆ, ಸ್ಥಳಿಕನು ಒಬ್ಬನಿದ್ದರೆ, ಆಗಂತುಕನೂ ಒಬ್ಬನೇ ಇರಬೇಕು; ಇಬ್ಬರಿದ್ದರೆ ಬಂದವರೂ ಇಬ್ಬರಿರಬೇಕು. ಅದರಂತೆ, ಪ್ರಾರಂಭದ ಒಂಟಿ 'ಕಾಮಾ' ಇದ್ದರೆ ಅಂತಿಮದ್ದೂ ಒಂದಿರಬೇಕು; ಎರಡಿದ್ದರೆ ಎರಡು.

ಪರಸ್ಪರಾಭಿಮುಖವಾಗಿ ಅಂದರೆ ಒಂದಕ್ಕೊಂದನ್ನು ಇದಿರು-ಬದಿರಾಗಿ ಉಪಯೋಗಿಸಲ್ಪಡುವ ಆದಿಯ ಹಾಗೂ ಅಂತಿಮದ ಸಂಯೋಜಕ ಚಿಹ್ನೆಗಳನ್ನು ಒಂದೊಂದನ್ನು ಅಥವಾ ಎರಡೆರಡನ್ನು ಅತಿ ನಿಕಟ ಜೋಡಿಸಿ (' ') ಬರೆದರೆ ಅವೆರಡೂ ಸೇರಿ ಒಂದಾದಂತಾಗಿ ದುಂಡು ವರ್ತುಲಾಕಾರದ ಪೂರ್ಣತ್ವದ ಚಿಹ್ನೆಯ ಗೋಲವಾದಂತಾಗುತ್ತದೆ.

ಕಾರಣ, ಪ್ರತಿಯೊಬ್ಬ ಮಾನವನು ಇತರರೊಡನೆ ಪ್ರೇಮದಿಂದ ಆತ್ಮೀಯತೆಯಿಂದ, ಮಾನ–ಮರ್ಯಾದೆಯಿಂದ ಬಾಳಬೇಕು; ಅದಕ್ಕಾಗಿ ಸತ್‌ಸಂಗ ಮಾಡಬೇಕು. ತಾನೂ ತನ್ನ ಸ್ವಂತ ಸಾಧನೆಯ ಬಲದಿಂದ ವೈಯಕ್ತಿಕ ಸಂಧಾರಣೆಗಾಗಿ ಜಿತೇಂದ್ರಿಯನಾಗಲೇಬೇಕು. ಅದರಿಂದ ಯೋಗದ ಮಾರ್ಗ ಸರಳವಾಗುತ್ತದೆ. ಆ ಸಿದ್ಧಿಸಿದ ಯೋಗದ ಬಲದಿಂದ ಶಿವಯೋಗಿಯಾಗಿ ಪೂರ್ಣತ್ವವನ್ನು ಗಳಿಸಿ, ಪೂರ್ಣನ ಪೂರ್ಣನಾಗಬೇಕು.

[ಪುಟ ೩೪]

ಪೂರ್ಣತೆಯ ಸುಖ ಜೀವಿ ಪ್ರತಿದಿನವು ಜಾಗ್ರತ್ತು,
ಸ್ವಪ್ನ ವ ಸುಷುಪ್ತಿಗೂ ಸಕ್ರಮ ಸಮಯವಿತ್ತು,
ಸಂತೈಸಿ, ಸುಖಿಸುವನು-ಅನ್ಯರಿಗು ಸುಖವಿತ್ತು.
ಸುಖಿಸು; ಪೂರ್ಣ ಸುಖಿಸದೆ ಬಿಡಬೇಡ ಬೇಸತ್ತು.

ಪೂರ್ಣನಾಗಬೇಕೆಂದು ತ್ರಿಕರಣ ಪೂರ್ವಕವಾಗಿ ತಾನು ಪ್ರಯತ್ನಿಸುತ್ತಿದ್ದರೂ ಲೌಕಿಕದ ಸಾಮಾಜಿಕ ಜೀವನವನ್ನು ಮೀರಲಾರದಂತಿರಬೇಕು; ವೇದಾಂತಿಯಾಗಿ ಸಪ್ತ ಭೂಮಿಕೆಯನ್ನೇರಿದರೂ ಪ್ರಾಥಮಿಕ ಭೂಮಿಕೆಯನ್ನು ಮರೆತಂತಿರಬಾರದು; ಆರನೆಯ ಸ್ಥಲವನ್ನು ಏರಿ ಮೆರೆಯುವ ಸಾಮರ್ಥ್ಯದ ಯೋಗ್ಯತೆಯನ್ನು ಸ್ಥಿರೀಕರಿಸಿಕೊಂಡಿದ್ದರೂ ಪ್ರಥಮದ ಭಕ್ತಸ್ಥಲದಿಂದ ನಿಃಸ್ಥಲನಾಗಿರಲಾಗದು; ಆರಂತಸ್ತಿನ ಮಹಾದ್ವಾರದ ಶಿಖರದ ಬಳಿಗೇರಿದ್ದರೂ ಮೊದಲಿನಂತಸ್ತಿನ ಮೆಟ್ಟಿಲದ ಇಳಿಯುವ ವಿಧಾನದ ದಾರಿಯನ್ನು ಮರೆತಿರಬಾರದು; ಹೆಮ್ಮರದ ತುತ್ತತುದಿಗೇರಿದರೂ ಬೊಡ್ಡೆಯ ಭೂಮಿಗಿಳಿಯುವ ಪರಿಯನ್ನು ತಪ್ಪಿಸಿರಬಾರದು; ಇಂತೀ ಭೂಮಿಕೆ–ಸ್ಥಲ–ಮೆಟ್ಟಿಲದಾರಿ–ಬೊಡ್ಡೆಯ ಭೂಮಿಗಳನ್ನು ಮರೆತರೆ, ಚಕ್ರವ್ಯೂಹದ ಅಭಿಮನ್ಯುವಿನ ನಿರ್ಗಮನದಂತಾಗುವುದು. ಅಂದರೆ ಷಟ್‌ಸ್ಥಲಗಳ ಏರಿಳಿತಗಳನ್ನು ಸಕ್ರಮವಾಗಿ ಶಿವಪೂಜೆಯಿಂದ ಆಚರಿಸುತ್ತಿದ್ದರೆ, ಅಂಥವನು ಪೂರ್ಣತೆಯ ಸುಖ ಜೀವಿಯಾಗುತ್ತಾನೆ.

ಸುಖ ಜೀವನವನ್ನು ಸಾಗಿಸಬೇಕೆಂದು ಕಾರ್ಯಶೀಲನಾಗಿರುವ ವ್ಯಕ್ತಿಯು ಕೆಲವೊಂದು ಸಲ ಖಿಲ ಮನಸ್ಕನಾಗಿ ಅಂದರೆ, ಮನಸ್ಸಿನ ಶಾಂತತೆಯ ಸರಳ ಮಾರ್ಗವನ್ನು ಬಿಟ್ಟು, ಸರಳವಾಗಿರದ ಮಾರ್ಗದಲ್ಲಿ ಕಾಲಿಡಲು ಬಯಸುತ್ತಾನೆ. 'ನಿಷ್ಠೆಯುಳ್ಳ ಭಕ್ತನು

ನಟ್ಟಡಿವಿಯಲ್ಲಿದ್ದರೂ ಪಟ್ಟಣವಾಗಿಪ್ಪುದಯ್ಯಾ' ಎಂಬ ಶರಣರ ವಚನದ ಅನುಭವದ ಮಾತನ್ನು ನಂಬದಿರುವವನು ತನ್ನ ಮಾರ್ಗದ ಸಾಧನೆಗಾಗಿ ಅವನು ಗುಡ್ಡ-ಬೆಟ್ಟಗಳ ಮೇಲೆ, ಸರೋವರ-ಸಮುದ್ರಗಳ ದಂಡೆಯ ಬಳಿ, ಜಾತ್ರೆ-ಸಂತೆಯಲ್ಲಿ ಮನೆಯ ಮಾಡಿ, ವಾಸ ಮಾಡಬಹುದು. ಆದರೆ ಅಲ್ಲಿಯ ಮೃಗಗಳಿಗೆ, ನೊರೆ-ತೆರೆಗಳಿಗೆ ಅಥವಾ ಶಬ್ದದ ಸದ್ದು-ಗದ್ದಲಕ್ಕೆ ಅಂಜು ವುದಾದರೆ, ಅಲ್ಲಿಯ ಏಕಾಂತ ವಾಸದ ಪರಿವರ್ತನೆಯು ಪ್ರಯೋ-ಜನವೇನು? ಅಂದರೆ, ತನ್ನನ್ನು ಹರಿದು ತಿನ್ನುವ ಕ್ರೂರಿಗೆ, ಕೊಚ್ಚಿ ಎಳೆದೊಯ್ಯುವ ಊರ್ಮಿಗೆ ಮತ್ತು ಹಿಯಾಳಿಸುತ್ತಿರು ವಂತಿರುವ ಊರಿಗೆ-ಇಂಥವೇ ಮೊದಲಾದ ಇನ್ನಾವ ಯಾವು ದಕ್ಕೂ ತಾನು ಅಂಜದೆ, ಅಳುಕದೆ, ನಾಚದೆ ಸಮದರ್ಶಿಯಾಗಿ ಸ್ಥಿತಪ್ರಜ್ಞಭಾವದಿಂದ ಬಾಳುತ್ತಿರಬೇಕು. ಗುಡ್ಡದ ಬಳಿಯ ಧಾಮದಲ್ಲಿದ್ದು, ಗುಡ್ಡದಷ್ಟು ಸ್ಥಿರವಾದ ಧೈರ್ಯಶಾಲಿಯಾಗಿ, ಧೀರೋನ್ನತ ಮಹಿಮಾತಿಶಯದವಿಶಾಲಭಾವನೆಯುವರಾಗಬೇಕು. ಆರೇನಂದರೂ ಓರಂತಿಪ್ಪುವ ಸಮತೆಯುಳ್ಳವರಾಗಬೇಕು. "ತನಗೆ ಮುನಿವರಿಗೆ ತಾ ಮುನಿಯಲೇಕಯ್ಯ? ತನಗಾದ ಆಗೇನು; ಅವರಿಗಾದ ಚೇಗೇನು? ತನುವಿನ ಕೋಪ ತನ್ನ ಹಿರಿಯತನದ ಕೇಡು! ಮನದ ಕೋಪ ತನ್ನ ಅರಿವಿನ ಕೇಡು! ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ ನೆರೆಮನೆಯ ಸುಡದು, ಕೂಡಲ ಸಂಗಮ ದೇವ" ಎಂದು "ತನ್ನ ಹಿರಿಯತನದ ಕೇಡು" ತನ್ನ ತನುವಿನ ಕೋಪವಾಗಿ ಪರಿಣಮಿಸುತ್ತದೆ; ತನ್ನ ಅರಿವಿನ ಕೇಡು ತನ್ನ ಮನದ ಕೋಪವಾಗಿ ಪರಿಣತಿ ಹೊಂದುತ್ತದೆ, ಎಂಬು ದಾಗಿ ದೃಢವಾಗಿ ಶಾಂತ ಮನದಿಂದ ವ್ಯವಹರಿಸುವವನು ಎಲ್ಲರಿಗೂ ಬೇಕಾಗಿರುತ್ತಾನೆ. ಬೇಕಾದ ವ್ಯಕ್ತಿಯ ಜೊತೆಗೆ ವೈರತ್ವವೆಂಥದು?

ಬೇಡರ ಕಣ್ಣಪ್ಪನ ಪೂಜಾ-ವಿಧಾನದ ರೀತಿ ಮುಖ್ಯವಲ್ಲ; ಅವನ ಅನನ್ಯ ಚಿಂತನೆಯು ನವಮ ಭಕ್ತಿ ಮುಖ್ಯ. ಪ್ರಹ್ಲಾದನ ಧ್ರುವನ ವಯಸ್ಸು ಮುಖ್ಯವಲ್ಲ. ಅವರ ನಿಷ್ಠೆ ಮುಖ್ಯ. ಶಬರಿಯ ರೀತಿ ಮುಖ್ಯವಲ್ಲ; ಅವಳ ಮಾತೃ ಹೃದಯದ ಮಮತೆ ಮುಖ್ಯ. ಆದರೆ ಕೆಲವರ ರೀತಿ ನಡವಳಿಕೆ ವಿರೋಧದವೆಂದು ಕೊಂಡರೂ, ಅವರವರ ಹೃದಯ ಪರಿವರ್ತನೆ ಮಾಡಿ ತೋರಿಸುವ "ಪವಾಡ" ಮಾಡಿ ಅಂಥವರನ್ನು ದಾರಿಗೆ ತರಬೇಕು. ಅದಕ್ಕಿಂತ ಮುಂಚೆ "ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ; ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ" ತನು-ಮನವನ್ನು (ನಿಮ್ಮದನ್ನೇ ನೀವು) ಸಂತೈಸಿಕೊಳ್ಳಲಾರದವರು ಪರೋಪದೇಶ ಮಾಡಿದರೇನು ಬಂತು ? ಇಷ್ಟಲಿಂಗ ಬಿಟ್ಟವನು ಆ ಇಷ್ಟಲಿಂಗದಿಂದೊದಗುವ ಪ್ರಾಣಲಿಂಗ-ಭಾವಲಿಂಗಗಳ ಅನುಭವವನ್ನು ತಿಳಿಸಲೆಂದು ಕೂಗಿದರೇನು ಬಂತು ? ಇದು ಬೊಡ್ಡೆಯಿಲ್ಲದ ಮಾವಿನ ಮರದ ಹಣ್ಣನ್ನು ತಿನ್ನಿಸಿದಂತಾಗುತ್ತದೆ. 'ಗಾಳಿಗೋಪುರಕ್ಕೆ ಕಳಸ ಇಡಬಯಸಿದಂತಾಗುತ್ತದೆ. ಕಾರಣ, ಎಂಥ ಸಿದ್ಧ ಸ್ಥಿತಿಗೇರಿದರೂ "ವ್ಯವಹಾರೇ ಭಟ್ಟ-ನಯಃ" ಎಂಬಂತೆ, ಲೌಕಿಕದಲ್ಲಿದ್ದ ಮೇಲೆ ಲೋಕ-ವಿದ್ವೇಷಿಯಾಗಿರಬಾರದು. ಅಷ್ಟಾವರಣವೇ ಅಂಗವಾಗಿರುವ ವೀರಶೈವ ಧರ್ಮದಂತೆ ಆಚರಿಸುವ ವೀರಶೈವನು ಗುರು-ಲಿಂಗ-ಜಂಗಮಾದಿಗಳಲ್ಲಿ ಒಂದನ್ನಾದರೂ ತ್ಯಜಿಸಿದರೆ, ಅವನು ಕುಂಟ-ಕುರುಡ-ಕಿವುಡ-ಮೂಕ-ಎಬಡ-ತಬಡನಾದಂತೆ ! ಆದುದರಿಂದ ಅಷ್ಟಾವರಣಗಳೇ ಅಂಗಗಳಾಗಿ ಪಂಚಾಚಾರಗಳೇ ಪ್ರಾಣಗಳಾಗಿರುವ ವೀರಶೈವ ಧರ್ಮಕ್ಕನುಸರಿಸಿ ನಡೆದು ವೀರಶೈವನೆನ್ನಿಸಿಕೊಳ್ಳುವವನು ತನ್ನ ಇಷ್ಟಲಿಂಗವನ್ನಾಗಲಿ, ಗುರು-ಜಂಗಮರ ನಿಂದೆಯನ್ನಾಗಲಿ, ಪಾದೋದಕ-ಪ್ರಸಾ

ದಾದಿಗಳಲ್ಲಿ ಅಪನಂಬುಗೆಯನ್ನಾಗಲಿ, ವಿಭೂತಿ-ರುದ್ರಾಕ್ಷಿಗಳನ್ನು ಧರಿಸದೇ ಇರುವದಾಗಲಿ ಮತ್ತು ಮಂತ್ರವನ್ನು "ಲೌಡ್ ಸ್ಪೀಕರ್"ನಂತೆ ತಿಳಿಯದೆ ಜೋರಾಗಿ ಪ್ರಕಟಿಸುವದಾಗಲಿ-ಇವನ್ನು ಸರ್ವಥಾ ಮಾಡಬಾರದು. ಪೂರ್ಣತೆಯ ಸುಖಜೀವಿಯಾಗ ಬೇಕಾದರೆ ಪೂರ್ಣವಾದ ಧರ್ಮಾಚರಣೆಯನ್ನು, ಪೂರ್ಣವಾದ ತುಂಬು – ಹೃದಯದ ಮಾನವತಾವಾದ ಭಾವೈಕ್ಯವನ್ನು ಸಾಧಿಸ ಬೇಕಾದರೆ, ಮೊದಲು ತಾನು ನಿಯಮಕ್ಕೊಳಪಟ್ಟವನಾಗಿರ ಬೇಕು; ಪರಿಶುದ್ಧ ಹೃದಯದವನಾಗಿರಬೇಕು. ಭಾರತದ ಪ್ರಧಾನ ಶಾಸಕ ಅಥವಾ ಮಂತ್ರಿ, ಮತ್ತು ರಾಜ್ಯಪಾಲ ಅಥವಾ ರಾಷ್ಟ್ರಪತಿ ಆಗಬೇಕಾದರೆ, ಅವರವರ ಷರತ್ತುಗಳನ್ನು ಪೂರೈಸ ಬೇಕಾಗುತ್ತದೆ; ಭಾರತದ ಸರ್ವೋಚ್ಚ ಅಥವಾ ಯಾವುದೇ ಅಧಿಕಾರದಲ್ಲಿರುವವರಾಗಬೇಕಾದರೆ ಅವರಿಗೆ ಭಾರತೀಯ ನಾಗರಿಕತೆ ಅತ್ಯಾವಶ್ಯಕ. ಹಾಗೆ ಇಷ್ಟಲಿಂಗಾದಿಧಾರಣೆಯ ಷರತ್ತುಗಳು ವೀರಶೈವನಾದವನಿಗೆ ಅತ್ಯಾವಶ್ಯಕಗಳಾದ ಷರತ್ತುಗಳಾಗಿವೆ. ಅಂದರೇನೇ ಅವನು ಪೂರ್ಣತೆಯ ಸುಖ ಜೀವಿಯಾಗುತ್ತಾನೆ. ಅವನು ಎಲ್ಲರಿಗೂ ಬೇಕಾಗಿ, ಎಲ್ಲರೂ ಅವನಿಗೆ ಬೇಕಾಗಿ, ಅನ್ಯರಿಗೂ ಸುಖವಿತ್ತು, ತಾನು ಪೂರ್ಣತೆಯ ಸುಖ ಜೀವಿಯಾಗಿ "ಸಕಲ ಜೀವಾವಳಿಗೆ ಲೇಸನೇ ಬಯಸುವ" ವೀರಶೈವ ಲಕ್ಷಣದ ಮಹಾಮಾನವನಾಗಿ ದೇವನಾಗುತ್ತಾನೆ.

ಹೀಗೆ ತನ್ನ ಸದ್‌ವಿಚಾರ ಸದಾಚಾರಗಳ ಸಮನ್ವಯದಿಂದ ಪೂರ್ಣತೆಯ ಸುಖ ಜೀವಿಯಾದ ಮಾನವನು ತನ್ನ ಆ ಪ್ರಶಾಂತ ಜೀವನದಲ್ಲಿ ದಿನ – ದಿನವು ಜಾಗ್ರತ್, ಸ್ವಪ್ನ ಹಾಗೂ ಸುಷುಪ್ತಿಯ ಬಗೆಗೆ ಆರೋಗ್ಯದ ದೃಷ್ಟಿಯಿಂದಲೂ ಧಾರ್ಮಿಕ – ಸಾಮಾಜಿಕ ದೃಷ್ಟಿಯಿಂದಲೂ ಕ್ರಮ – ಕ್ರಮವಾಗಿ ಸಮಯಕ್ಕೆ ಸರಿಯಾಗಿ

ಜಾಗರೂಕತೆಯಿಂದ ವ್ಯವಹಾರ ಮಾಡುತ್ತಿರುತ್ತಾನೆ.

ಧಾರ್ಮಿಕವಾದ ಮುಖ್ಯ ಕುರುಹನ್ನು ಪ್ರತಿಯೊಬ್ಬರೂ, ಅವರವರ ಧರ್ಮಕ್ಕನುಸರಿಸಿ, ಧರಿಸಲೇಬೇಕು. ಸರಿಯಾದ ಟಿಕೇಟನ್ನು ಧರಿಸಲಾರದ ಪತ್ರ "ನಾಟ್ ಪೇಡ್." ಪೇಡ್ ಆಗ ಬೇಕಾದರೆ ಅದು ತನ್ನ ಮೈ ಮೇಲೆ ಅರೆ–ಕೊರೆಯುಂತಹ 'ನಾಟ್–ಪೇಡ್' ಮುದ್ರೆಯನ್ನೊತ್ತಿಸಿಕೊಳ್ಳುವುದಲ್ಲದೆ, ಕೆಂಪು ಬಣ್ಣದ ಡೇಂಜರ್ ಅಕ್ಷರದಿಂದ ಬರೆ ಎಳೆಸಿಕೊಳ್ಳಬೇಕಾಗುತ್ತದೆ. ಮತ್ತು ಟಿಕೇಟನ್ನು ಧರಿಸದಿದ್ದುದಕ್ಕಾಗಿ ತಪ್ಪಾಯಿತೆಂದು ಅನ್ನಿಸಿ ಕೊಳ್ಳುವ ಉದ್ದೇಶದಿಂದ ಆ ತನ್ನ ವಿಳಾಸದ ವ್ಯಕ್ತಿಯಿಂದ ಪೋಸ್ಟ ಆಫೀಸಿನವನ ಕೈಯಲ್ಲಿ ದುಪ್ಪಟ್ಟು ದಂಡವನ್ನೂ ಕೊಡ ಬೇಕಾಗುತ್ತದೆ. ಅದಕ್ಕೆ ಪ್ರಮಾಣ – ದಾಖಲೆ ಇರಲೆಂದು ಸ್ವತಃ 'ಪೋಸ್ಟಮನ್' ನೇ ವಿಳಾಸದಾರನಿಗೆ ಭೆಟ್ಟಿ ಆಗಿ ಇನ್ನೊಮ್ಮೆ ಹೀಗಾಗದಿರಲೆಂದು ಹೇಳಿ, ಆ ಪತ್ರವನ್ನು ಅವನಿಗೆ ಮುಟ್ಟಿಸು ತ್ತಾನೆ. ತಾನು ಧರಿಸಬೇಕಾಗಿದ್ದ ಟಿಕೇಟನ್ನು ಧರಿಸಲಾರದ್ದಕ್ಕೆ ಇಷ್ಟು ಕಷ್ಟ ಪರಂಪರೆಯನ್ನು ಅದು ಸಹಿಸಬೇಕಾಗುತ್ತದೆ; ಅವಲ್ಲದೆ ಅದರ ಮಾಲಿಕನಿಗೂ ತೊಂದರೆ ಪ್ರಾಪ್ತವಾಗುತ್ತದೆ. ಅಂದ ಮೇಲೆ ತಾನು ಶ್ರೀಗುರುವಿನಿಂದ ತನ್ನ, ಚಿತ್ಕಳೆಯನ್ನೆ ಆ – ಗುರುವಿನ ಅಮೃತಹಸ್ತದಿಂದ, ಪಡೆದು ಧರಿಸಿದ ಲಿಂಗವನ್ನು ಕಟ್ಟಿಕೊಂಡು ಬಿಟ್ಟವನಿಗೆ ಎಷ್ಟು ಕಷ್ಟವಾಗುವುದೆಂಬುವನ್ನು ಊಹೆಯಿಂದಲೆ ತಿಳಿದರೆ ಸಾಕು. "ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು; ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು." ಸಲ್ಲಲು ಯೋಗ್ಯರಾಗದವರಿಗೆ ಪೂರ್ಣತೆಯ ಸುಖಜೀವನ ಸಾಗಿಸಲು ಸಾಧ್ಯವೇ ಇಲ್ಲ.

ಇಷ್ಟಲಿಂಗವು ರೇಲ್ವೇ ಟಿಕೇಟಿನಂತಲ್ಲ; ಪೋಸ್ಟ ಆಫೀಸಿನ

ಟಿಕೇಟಿನಂತೆ. ಪ್ರೋಷ್ಟಿನ ಟಿಕೇಟನ್ನು ಪತ್ರಕ್ಕೆ ಒಮ್ಮೆ ಧಾರಣೆ ಮಾಡಿದ ಮೇಲೆ ಅದನ್ನು ಕಿತ್ತುವುದಿಲ್ಲ; ಕಿತ್ತುವ ಆವಶ್ಯಕತೆಯೂ ಇಲ್ಲ. ಆದರೆ, ರೇಲ್ವೆ ಸ್ಟೇಶನ್ನನ್ನು ದಾಟುವಾಗ ಆ ರೇಲ್ವೆ-ಟಿಕೇಟನ್ನು ಅಲ್ಲೇ ಬಿಡುವುದು ಬಹಳ; ಕೆಲ ಸಲ ತೋರಿಸಿ ಮುಂದುವರಿಯಬಹುದು. ಹಾಗೆ ಇಷ್ಟಲಿಂಗವನ್ನು ಯಾವಾಗಲೂ ಬಿಡದಂತಿದ್ದು ಶಿವಪೂಜಾದಿ ಲಕ್ಷಣದ ಶಿವಯೋಗ ಸಾಧಿಸುತ್ತ ಪೂರ್ಣತೆಯ ಸುಖ ಜೀವನವನ್ನು ಸಾಗಿಸಬೇಕು.

ಷಟ್‌ಸ್ಥಲಾಚರಣೆಯು ವೀರಶೈವ ಧರ್ಮಕ್ಕೆ ಲಿಂಗತ್ರಯ ಲಿಂಗ-ಷಟ್ಕ, ಲಿಂಗ-ನವಕ ಎಂಬುವ ಶಿವಾನುಭವದ ಪರಿಯನ್ನು ತಿಳಿಯಲು ಲಿಂಗಧಾರಣೆ ಆಗಿರಲೇಬೇಕು. ಅಂಗ ಸ್ಥಲ-ಲಿಂಗಸ್ಥಲದ ಏಕೋತ್ತರ-ಶತಸ್ಥಲದ ವಿಸ್ತಾರದ ರಹಸ್ಯವನ್ನರಿಯಲಿಕ್ಕೆ ಲಿಂಗದ ಧಾರಣೆಯಿಲ್ಲದೆ, ಅದೆಂತು ಪೂರ್ಣತೆ ಪ್ರಾಪ್ತವಾದೀತು ?

ಇಷ್ಟಾರ್ಥ ಸಿದ್ಧಿಸಿತು ;
ಇಷ್ಟಕ್ಕೆ ಸಾಕೆಂದು,
ಇಷ್ಟ ಲಿಂಗವ ಬಿಡುವ ವೀರಶೈವ : ಅರೆ ವೀರಶೈವ ।
ಅಷ್ಟ ಮಾಸದ ಗರ್ಭ
ಸೃಷ್ಟಿಯಿಂ ಲಯಂತನಕ
ಇಷ್ಟಲಿಂಗವ ಬಿಡದ ವೀರಶೈವ : ಪರ ವೀರಶೈವ ॥

– ಪರ ಅಂದರೆ ನಿಜವಾಗಿ ಶ್ರೇಷ್ಠನಾದ ವೀರಶೈವನಾಗಬೇಕಾದರೆ, ಧರಿಸಿದ ಇಷ್ಟಲಿಂಗವನ್ನು ಬಿಡಬಾರದು ; ಅದನ್ನು ಬಿಟ್ಟವರೂ, ಧರಿಸದೇ ಇದ್ದವರೂ ಅದನ್ನು ಧರಿಸಬೇಕು. ಧರಿಸಿದರೆ ಒಳ್ಳೇದು; ಧರಿಸದಿದ್ದರೆ ಒಳ್ಳೆಯದಲ್ಲ ಎನ್ನುವುದು ಇಲ್ಲಿಯ ಮುಖ್ಯ ಮಾತಲ್ಲ ! ಯಾವುದಕ್ಕೂ ಅದರದರ ಚಿಹ್ನೆ ಅದರದರ ಮೇಲೆ

ರಬೇಕು. ವಿಕಾಸವಿಲ್ಲದ ಪತ್ರ ಯಾರಿಗೆ? ಆ ಇಷ್ಟಲಿಂಗ ವರೆ ಕೇವಲ ಧಾರ್ಮಿಕ ಕುರುಹಲ್ಲ; ಅದು ಆ ಧರಿಸಿರುವ ಕ್ತಿಯ ಚಿತ್ಕಳೆ. ಆ ಚಿತ್ಕಳೆಯನ್ನೇ ಇಷ್ಟಲಿಂಗವನ್ನಾಗಿ ವಹರಿಸುತ್ತೇವೆ. ತಾಮ್ರದಂತಹ ಲೋಹಗಳ ತಗಡಿಗೆ ಅಕ್ಷರದ ರಕಹೊಯ್ದು ನಾಣ್ಯವೆನ್ನುತ್ತೇವೆ. ಅದಕ್ಕಾಗಿಯೇ ಮಾಡಿದ ಪರಿಗೆ ಮುದ್ರೆಯೊತ್ತಿ ರೂಪಾಯಿ ಎನ್ನುತ್ತೇವೆ. ಬೆಲೆ – ಲ್ಲ ಕಿಮ್ಮತ್ತನ್ನು ಆ ನಾಣ್ಯದ ತಗಡು, ನೋಟಿನ ಪೇಪರ್ ಲ್ಲದೆ ಆದಾನ ಪ್ರದಾನ ಮಾಡಲು ಹೇಗೆ ಅಸಾಧ್ಯವಾಗುವುದೋ ಗೆ ಇಷ್ಟಲಿಂಗದ ಕಲ್ಲಿನ ಪೀಠಿಕೆ, ಕಂತಿ ಇಲ್ಲದೇ ಆ – ಆ ವ್ಯಕ್ತಿಯ ತ್ವವು – ಶಿಖಾ ಚಕ್ರದಲ್ಲಿದ್ದುದನ್ನು ಪತ್ರ – ಪುಷ್ಪಾದಿಗಳಿಂದ ಜಿಸಲು ಬರುವುದಿಲ್ಲ.

ಪೂಜಿಸಲು ಬರಬೇಕಾದರೆ, ಆ ಚಿತ್ಕಳೆಯು ಇಷ್ಟಲಿಂಗದ ಪದಲ್ಲಿ ಶ್ರೀಗುರುವಿನ ಮಾಧ್ಯಮದಿಂದ ಬರಬೇಕು. ಹಾಗೆ ದುದನ್ನು ಕ್ಷಣ ಮಾತ್ರವೂ ಸೂತ್ರ ತಪ್ಪದಂತೆ ಧರಿಸಿ, ರ್ಣತೆಯ ಸುಖಿ ಜೀವಿಯಾಗಬೇಕು.

ಇಷ್ಟಲಿಂಗಾದಿ ಅಷ್ಟಾವರಣಗಳನ್ನು ಧರಿಸಿದರೆ, ಅಂಥವನಿಗೆ ರ್ಣತೆಯ ಲಕ್ಷಣದ ಸಂಕೇತಗಳನ್ನು ಧರಿಸಿದುದರ ಕಾರಣ ದಾಗಿ ಪೂರ್ಣತ್ವದ ಪ್ರಾಪ್ತಿಯು ಸುಲಭ ಸಾಧ್ಯವಾಗುತ್ತದೆ. ರಿಂದ ಭೂತ-ಪಿಶಾಚಾದಿಗಳ ಅಥವಾ ದುಷ್ಟ ಗ್ರಹಗಳ ದಿರುವಿಕೆ ಮತ್ತು ಆರೋಗ್ಯ ಇಲ್ಲದ ಅಂದರೆ ಮನಸ್ಸಿಗೆ ಮ್ಮದಿಯಿಲ್ಲದಾಗುವಿಕೆಗಳು ದೂರವಾಗುತ್ತವೆ.

ಧಾರ್ಮಿಕ ಚಿಹ್ನೆಗಳನ್ನು ಧರಿಸಿದವರಿಗೆ ಧಾರ್ಮಿಕ ಮನ್ನಣೆ ಯೇ ಇರುತ್ತದೆ. ಸಾಧಾರಣವಾಗಿ ತಿಳಿಯುವಂತೆ ನೆನಪು ಡಿಕೊಳ್ಳುವುದಾದರೆ, ಖಾಕಿ ಡ್ರೆಸ್ಸನ್ನು ನೋಡಿದರೆ, ಜಾಗ

ರೂಕತೆ ತೋರಿಸುತ್ತೇವೆ; ಖಾದಿ ವೇಷ ನೋಡಿದರೆ ಸ್ವದೇಶ ಪ್ರೇಮದ ಭಾವನೆ ಜಾಗ್ರತವಾಗುತ್ತದೆ; ಕಾವಿ ಬಟ್ಟೆ ಧರಿಸಿರುವ ಪೂಜ್ಯರನ್ನು ನೋಡಿದರೆ ತನ್ನಷ್ಟಕ್ಕೆ ತಾನೇ ಭಕ್ತಿ ಭಾವ ಬಲಗೊಳ್ಳುತ್ತದೆ,

ಈ ಖಾಕಿ-ಖಾದಿ-ಕಾವಿ ಧರಿಸಿದ ಹಾಗೆ ಇಷ್ಟಲಿಂಗವನ್ನು ಪೂಜಿಸಲು ಧರಿಸಬೇಕು. ಆದರೆ ಕೇವಲ ಧರಿಸಿದರೆ ಪೂರ್ಣತೆಯ ಸಿದ್ಧಿ ಪ್ರಾಪ್ತವಾಗಲಾರದು. ಅದರಂತೆ ಯೋಗ್ಯವಾದ ಪವಿತ್ರ ಆಚರಣೆಯೂ ಬೇಕು. "ಲಾಂಛನಕ್ಕೆ ಶರಣೆಂಬೆ; ಆ ಲಾಂಛನಕ್ಕೆ ತಕ್ಕ ಆಚಾರವಿಲ್ಲದಿದ್ದರೆ, ನೀ ಸಾಕ್ಷಿಯಾಗಿ ಛೀ! ಎಂಬೆ ಕೂಡಲ ಸಂಗಮದೇವ" ಎಂಬುದಾಗಿ ಶ್ರೀ ಬಸವಣ್ಣನ ಸ್ಪಷ್ಟೀಕರಣದ ವಿಧಿ-ವಿಧಾನವಿದೆ; ಕಟ್ಟಳೆ ಇದೆ. ಕಾರಣ, ತಪ್ಪದೇ ಇಷ್ಟಲಿಂಗಾದಿ ಅಷ್ಟಾವರಣಗಳನ್ನು ಯೋಗ್ಯ ರೀತಿಯಿಂದ ಧರಿಸಬೇಕಲ್ಲದೆ, ಯೋಗ್ಯ ಆಚರಣೆಯಿಂದಿರಬೇಕು.

ಧಾರ್ಮಿಕ ಚಿಹ್ನೆಗಳನ್ನು ಧಾರ್ಮಿಕ ನೀತಿ-ನಡವಳಿಕೆಯನ್ನು ಕಾರ್ಯ ರೂಪದಲ್ಲಿ ಸಮರ್ಥ ರೀತಿಯಿಂದ ಆಚರಿಸುತ್ತಿರುವವನಿಗೆ ಆ-ಆ ಸಮಯದಲ್ಲಿ ಆ-ಆ ಅವಸ್ಥೆಯು ಪೂರ್ಣ ಅನುಮತಿ ಇರಬೇಕು; ಆಚರಣೆ ವ್ಯತ್ಯಸ್ತವಾಗಬಾರದು; ಯಾವುದೇ ಆಗಲಿ, ಕ್ರಮ ತಪ್ಪಬಾರದು. ಜಾಗರಣೆಯಲ್ಲಿ ತೂಕಡಿಕೆ, ನಿದ್ರೆಯಲ್ಲಿ ಜಾಗರಣೆ. ನಿದ್ರಾ ಜಾಗರಣೆಗಳನ್ನು ಮೀರಿದ ಕನಸಿನಲ್ಲಿ ಗಾಢನಿದ್ರೆ ಇರಬಾರದು. ಅಂದರೆ ಜಾಗರಣೆಯ ಅವಸ್ಥೆಯಲ್ಲಿ ಪೂರ್ಣ ಜಾಗರಣೆ ಇರಬೇಕು; ಗಾಢ ನಿದ್ರಾವಸ್ಥೆಯಲ್ಲಿ (ಸುಷುಪ್ತಿಯಲ್ಲಿ) ಗಾಢ ನಿದ್ರೆಯೇ ಇರಬೇಕು. ಆಗ ಗಾಢ ನಿದ್ರೆ ಬರದಿದ್ದರೆ, ಅಂಥವರಿಗೆ ಚಿರನಿದ್ರೆ ಸಮೀಪ ಬರುತ್ತದೆ, ಆದುದರಿಂದ ಪ್ರತಿಯೊಬ್ಬನೂ ಸಾತ್ತ್ವಿಕಾಹಾರ ಸೇವನೆಯಿಂದ ಸದಾಚಾರ-

ಂಯಮದಿಂದಿರಬೇಕು. ಇದರಿಂದ ಅವನಿಗೂ, ಅವನಿಂದ ತರರಿಗೂ ಜೀವನದಲ್ಲಿ ನೆಮ್ಮದಿ ಇರುತ್ತದೆ; ತಾನು ಸ್ವಾರ್ಥಿ ರಾಗಿ ಒಬ್ಬನೇ ಸರ್ವವನ್ನೂ ಉಪಭೋಗಿಸಿ ಸುಖಿಸುವೆನೆನ್ನು ದಕ್ಕಿಂತ. ಪರೋಪಕಾರಿಯಾಗಿ ಬಾಳುವಲ್ಲಿಯೇ ಹೆಚ್ಚಿನ ಖವಿದೆ.

ಕಾಗೆ ಅಥವಾ ಕೋಳಿಯಂತಹ ಪಕ್ಷಿಗಳೂ ಒಂದಗುಳನ್ನು ಥವಾ ಗುಟುಕೊಂದನ್ನು ಕಂಡು ತಿನ್ನುವಾಗ ಅದು ತನ್ನ ಕುಲ ಥವಾ ಬಳಗವನ್ನು ಕರೆಯದಿರಲಾರದು. ಆದುದರಿಂದ "ಸರ್ವೇ ನಾಃ ಸುಖಿನೋ ಭವಂತು" ಎಂದು ಸಕಲ ಪ್ರಾಣಿಗಳಿಗೂ ಾಧ್ಯವಾದಷ್ಟು ಒಳ್ಳೆಯದನ್ನು ಬಯಸುವ ಶರಣರಂತಾಗಬೇಕು. ಚಾರದಿಂದ ಆಚಾರ್ಯ ಜಂಗಮವರೇಣ್ಯರಾಗಿ ಅವಸ್ಥಾ- ಯವನ್ನು ಗೆಲ್ಲ ಬಲ್ಲ ಆದರ್ಶ ಜೀವನವನ್ನು ಸಾಗಿಸಬೇಕು.

ಪುಟ ೩೫]

ಪುತ್ರ - ಮಮತಾ - ಸಹಿತಮಸ್ತು ತವ ಮಾತೃ-ಹೃತ್ತು.
ಸೋದರರು ಅರಿತಿರಲಿ—ನಿನ್ನ ದಿವ್ಯ ಮಹತ್ತು,
ಹರಸಿ, ಸಲುಹಲಿ ಸದಾ ಸ-ಕಲ ಜನ ಪರಿಷತ್ತು.
ಸಲುಹು; ಪೂರ್ಣ ಸಲುಹದೆ ಬಿಡಬೇಡ ಬೇಸತ್ತು,

ಆದರ್ಶ ಜೀವನವನ್ನು ಸಾಗಿಸುತ್ತ, ನಿರಂತರವೂ ಅನ್ಯವಿಲ್ಲದ ನನ್ಯ ಭಕ್ತಿಯಿಂದ ಪೂಜಿಸುವ ಭಕ್ತನಿಗೆ "ಅನನ್ಯಾಶ್ಚಿಂತ- ಯಂತೋ ಮಾಂ ಯೇ ಜನಾಃ ಪರ್ಯುಪಾಸತೇ. ತೇಷಾಂ ತ್ಯಾಭಿಯುಕ್ತಾನಾಂ ಯೋಗ - ಕ್ಷೇಮಂ ವಹಾಮ್ಯಹಂ" ಂಬುದಾಗಿಯೂ ಮತ್ತು "ಮದ್‌ಭಕ್ತಾ ಯತ್ರ ತಿಷ್ಠಂತಿ ತ್ರ ತಿಷ್ಠಾಮಿ ಪಾರ್ವತಿ!" ಎಂದುದಾಗಿಯೂ ಭಕ್ತರ ಕ್ಷಣೆಯ ಹೊಣೆ ಹೊತ್ತಿರುವವರ ಘೋಷಣೆ.

ಘೋಷಣೆಯ ಪ್ರಕಾರ ಜಂಗಮದ ರೂಪದಲ್ಲಿ ಜನ್ಮ ತಾಳಿ. ದಯಾಳು ದಾಕ್ಷಿಣ್ಯನಾಗಿ. ಸದಾಶಿವ ಶಿವಯೋಗಿಯಾಗಿ ಬಂದವನು—ಭಕ್ತವತ್ಸಲನಾದ ಭಗವಂತ. ಆ ಭಗವಂತನ ಅಂಶ ನಾವು ಈ ಚರಾಚರ ಜಗತ್ತಿನವರೆಲ್ಲ ತನ್ನ ಮಕ್ಕಳೇ ಎನ್ನುವ ತಾಯಿಯಂತಹ ಕರುಣಾಳು ಹೃದಯದವರಾಗಿರಬೇಕು; ಜನಸೇವೆಯೇ ಜನಾರ್ದನನ ಸೇವೆಯೆನ್ನಬೇಕು; ಸೇವಾ–ಧರ್ಮವು ಪರಮ-ಗಹನವಾದರೂ ತಾಯಿಯಂತೆ (ಶಕ್ತಿಯ ತತ್ತ್ವದಂತೆ) ಅನ್ನದಾನಾದಿ ಕೊಡುಗೆಯಿಂದ ಪಾಲನೆ ಪೋಷಣೆ ಮಾಡುತ್ತಿರಬೇಕು.

ತಾಯಿಯಂತಹ ಹೃದಯವಂತಿಕೆಯನ್ನು ಗಳಿಸುವುದು ಮಾತ್ರವಲ್ಲ, ಸದ್‌ವಿಚಾರ–ಸದಾಚಾರಗಳಿಂದ ಸಾಧಿಸಿದ ದಿವ್ಯ ಮಹತ್ತ್ವವನ್ನು ಸೋದರರಂತಿರುವ ಇತರರೂ ಸಹ, ಇವನೊಬ್ಬ ಆದರ್ಶ ವ್ಯಕ್ತಿಯೆಂದು ಅನುಕರಿಸುವಂತಹ ಆದರ್ಶ ಪುರುಷ ವರೇಣ್ಯನಾಗಿರಬೇಕು.

ಇಂತಹ ಆದರ್ಶ ಗುಣೋತ್ಕರ್ಷಕ್ಕೆ ಸಾತ್ತ್ವಿಕ ಸಿದ್ಧಿಗೆ ಮೆಚ್ಚಿ, ಬೆಂಬಲಿಗರಾಗಿದ್ದು, ಪೂರ್ಣತ್ವ ಕಲೆಯನ್ನು ಸಾಧಿಸಿ, ಸ–ಕಲರಾದ ಸಕಲ ಹಿರಿ ಜನರ ಸಂಘ–ಸಂಸ್ಥೆಗಳು ಯೋಗ್ಯತೆಗೆ ತಕ್ಕ ಗೌರವಾದರ ಮನ್ನಣೆಯನ್ನಿತ್ತು ಸದಾ ಆತ್ಮೀಯತೆಯನ್ನು ಮುಖ್ಯವಾಗಿಟ್ಟುಕೊಂಡು ಪ್ರೇಮದಿಂದ ಸಲಹುತ್ತಿರುವಂತಹ ಪವಿತ್ರಾತ್ಮನಾಗಿರಬೇಕು; ಪೂರ್ಣ ಗುಣದವನಾಗಿರಬೇಕು.

[ಪುಟ ೩೬]

ಓಂ: ಪೂರ್ಣ. ಅದು ಪೂರ್ಣ; ಇದು ಪೂರ್ಣವಿದೆ. ಮತ್ತು
ಪೂರ್ಣದಿಂದಲೆ ಪೂರ್ಣ. ಅದೆ ಸತ್ತು; ಅದೆ ಚಿತ್ತು.
ಪೂರ್ಣದಲಿ ಪೂರ್ಣ ಕಳೆದರು; ಬೆರೆಸುವುದು ಮತ್ತು.
ಬೆರೆಸು; ಪೂರ್ಣ ಬೆರೆಸದೆ ಬಿಡಬೇಡ ಬೇಸತ್ತು.

ಪೂರ್ಣ ಗುಣದ ಓಂಕಾರ ಸ್ವರೂಪನಾಗಿ, ಲೀಲೆಗೋಸ್ಕರ,

"ಅಂ-ಉಂ-ಮಂ = ಓಂ. ಇತಿ ಮನು-ಗಿರಂ
ಸರ್ವದೋಚ್ಚಾರಯಂತಂ।
ಶ್ರೋತವ್ಯೋಯಂ ಶ್ರುತಿ-ನುತಿರಿತಿ
ಶ್ರದ್ಧಯಾ ಶ್ರಾವಯಂತಮ್ ||
ತಂತ್ರೀ-ಕಂಠಾದುದಿತ-ಸಕಲಾ
ಮಾತೃಕಾ ಧ್ಯಾನಯಂತಂ।
ವಂದ್ಯೇಹಂ ತಂ ಮನು-ಮುನಿ-ನುತಂ
ಮಾನವಂತಂ ಮಹಾಂತಮ್ ||"

(ನನ್ನ ನಾದ ಬ್ರಹ್ಮ ಸ್ತೋತ್ರದಿಂದ)

ಇಂಥ ಮಾನವಂತ ಮಹಾಂತನ ಅತ್ಯಂತ ಸಂಕ್ಷಿಪ್ತ ರೂಪವು ಓಂ. ಇದಕ್ಕೆ ಪೂರ್ಣವೆಂದೂ ಹೆಸರಿದೆ. ಇದರ ಅತ್ಯಂತ ಸಂಕ್ಷಿಪ್ತದ ವಿಸ್ತಾರದ ಕುರುಹು; ಅ-ಉ-ಮ. ಇನ್ನಷ್ಟು ವಿಸ್ತಾರದ್ದು ನ-ಮಃ;ಶಿ-ವಾ-ಯ. ಇದಕ್ಕೂ ಮತ್ತಿಷ್ಟು ವಿಸ್ತರಿಸಿದ್ದುದು "ಪೂರ್ಣಮದಃ ಪೂರ್ಣಮಿದಂ, ಪೂರ್ಣಾತ್ ಪೂರ್ಣಮ್ ಉದಚ್ಯತೇ। ಪೂರ್ಣಸ್ಯ ಪೂರ್ಣಮಾದಾಯ, ಪೂರ್ಣಮೇವ ಅವಶಿಷ್ಯತೇ ||" ಮತ್ತೊಂದಿಷ್ಟು ಇನ್ನೂ ವಿಸ್ತೃತಿ ಹೊಂದಿದ್ದು ಗಾಯತ್ರೀ ಮಂತ್ರವು. 'ಪೂರ್ಣಮದಃ' ಎಂಬ ಅನುಷ್ಟುಪ್ ಛಂದಸ್ಸಿನಲ್ಲಿರುವ ನಾಲ್ಕು ಚರಣದಲ್ಲಿಯ ಮೂವತ್ತೆರಡು ಅಕ್ಷರ-ವರ್ಣಗಳಿಗಿಂತ ಗಾಯತ್ರಿಯ ವರ್ಣಸಂಖ್ಯೆ ಸಣ್ಣದು. ನಿಜ. ಆದರೆ, ಅಸ್ಮಚ್ಛಬ್ದದ "ನಃ" ಪದದ ಪ್ರಯೋಗವು ಸಕಾಮ ಭಕ್ತಿಯ ಫಲಾಕಾಂಕ್ಷೆಯ ಸೂಚಕವಾಗಿರುವುದರಿಂದ "ಪೂರ್ಣಮದಃ"ಕ್ಕಿಂತಲೂ ಗಾಯತ್ರಿ ಹೆಚ್ಚು ವಿಸ್ತಾರದ್ದು.

ಪ್ರಣವಸಹಿತ ಪಂಚಾಕ್ಷರೀ ಮಂತ್ರದಲ್ಲಿ ಮತ್ತು "ಪೂರ್ಣಮದಃ" ಶ್ಲೋಕ ಮಂತ್ರದಲ್ಲಿ ನಿಷ್ಕಾಮ ಭಕ್ತಿಗೇ ಪ್ರಾಧಾನ್ಯತೆ ಇದೆ. ಅಹಂಕಾರ ನಿರಸನೆ ಇದೆ; ಮಮಕಾರ ಇಲ್ಲ. ಇಂಥವರಿಗೆ ಇಂಥಾದ್ದನ್ನು ಮಾಡು, ಎಂಬ ಯಾವ ಷರತ್ತೂ, ಹೊದಲಿನ ಎರಡರಲ್ಲಿಯೂ ಇಲ್ಲ. ಮೂರನೆಯದರಲ್ಲಿ ಷರತ್ತು, ಅಸ್ಮಾತ್ ಪದದ "ನಃ" ಎಂಬುದೂ ಪ್ರತ್ಯಕ್ಷ ವಾಚ್ಯಾರ್ಥದಲ್ಲಿಯೇ ಸುಸ್ಪಷ್ಟವಾಗಿ ಗೋಚರಿಸುತ್ತಿದೆ. ಕಾರಣ, "ಪೂರ್ಣಮದಃ"ದಲ್ಲಿ ಅಕ್ಷರ ಹೆಚ್ಚಿದ್ದರೂ ವಿಸ್ತಾರದ ತತ್ತ್ವದ ರೀತಿಯಲ್ಲಿ ಸಂಕ್ಷಿಪ್ತವಾದುದಾಗಿದೆ.

ಈ ಮೂರಕ್ಕೂ ಹೆಚ್ಚಿನ ವಿಸ್ತಾರದ್ದು ವೇದೋಪನಿಷತ್ತು ಆಗಮ ಸ್ಮೃತಿ ಪುರಾಣ ಇತಿಹಾಸ ಕಾವ್ಯಾದಿಗಳು. ಹೀಗೆ ಓಂ ಎಂಬುದು ಪೂರ್ಣ; ಅ–ಉ–ಮ ಎಂಬುವು ಪೂರ್ಣತ್ವ. ಇದೇ ಅ–ಉ–ಮ ಪೂರ್ಣ : ನ–ಮಃ–ಶಿ–ವಾ–ಯ ಎಂಬುವು ಪೂರ್ಣತ್ವವು. ಈ ಕ್ರಮವು ಸಣ್ಣ ಪೂರ್ಣ–ಪೂರ್ಣತ್ವ ಅಥವಾ ದೊಡ್ಡ ಪೂರ್ಣ–ಪೂರ್ಣತ್ವಎಂಬುದಾಗಿ ಅಲ್ಲ. ವಾಸ್ತವಿಕವಾಗಿ ಪೂರ್ಣವೂ ಅದೇ; ಪೂರ್ಣತ್ವವೂ ಅದೇ ವಿಭಾಗಶಃ ತಿಳಿಸುವ ಶಕ್ತಿಯಿಂದೊಡಗೂಡಿದ್ದು ಅಷ್ಟೆ.

ಪೂರ್ಣ ಒಂದೇ ಆದರೂ, ತತ್ತ್ವ ಒಂದೇ ಆದರೂ, ಅಡಿಗೆ ಒಂದೇ ಆದರೂ, ಆಕಾಶ ಒಂದೇ ಆದರೂ ವ್ಯವಹಾರಕ್ಕೆ ಅದು–ಇದು. 'ಅದಃ, ಇದಂ' ಭೇದವು ತಿಳಿವಳಿಕೆಯ ಬಳಕೆಗೆ. ಅಂ–ಅತ್–ಅಸ್ಯ— ಮುಂತಾಗಿ ಪೂರ್ಣತ್ವಕ್ಕೆ ಪ್ರತ್ಯಯದ ಅಂಗೀ ತೊಡಿಸುವುದೆಂದರೇನು? ಇದೆಲ್ಲವೂ ತಿಳಿಸಲು ಮಾತ್ರ. ಅನುಭೂತಿಯನ್ನು ಅನುಭವಿಸಲು ಶಬ್ದದ ಮಾಧ್ಯಮ ಬೇಕಿಲ್ಲ; ಅದನ್ನೇ ತಿಳಿಸುವಂತೆ ಮಾಡುವ ಪ್ರಯತ್ನಕ್ಕೆ ಮಾತ್ರ ಶಬ್ದದ

ಸಹಾಯಬೇಕು. ಶಬ್ದಕ್ಕೂ ಮೀರಿದ ಆ ಪೂರ್ಣವನ್ನು ಶಬ್ದದಿಂದ ತಿಳಿಸಿದಂತೆ ಮಾಡುತ್ತೇವೆ; ಆದರಿಂದ ತಿಳಿಸಿದ ಆಭಾಸ ಆಗುತ್ತದೆಯಲ್ಲದೆ, ಸ್ವಾನುಭೂತಿಯನ್ನು ಪ್ರತ್ಯಕ್ಷವಾಗಿ ತಿಳಿಸಲು ಬಾರದು. ನೀರಿನಲ್ಲಿ ಮುಳುಗಿದವನು ನೇರವಾಗಿ (ಯಂತ್ರ-ವಾಯರ್‌ಲೆಸ್ಸಿನ ಸಹಾಯವಿಲ್ಲದೆ) ಮೇಲಿದ್ದವನಿಗೆ ಏನು ಮಾತನ್ನು ಹೇಳಿ ಸುದ್ದಿ ತಿಳಿಸಬಲ್ಲ! ಹಾಗೆ ನಿರ್ದಿಷ್ಟವಾಗಿ ತಿಳಿಸಲು ಬಾರದಾದರೂ ತಿಳಿಸುವ ಹವಣಿಕೆ ಇರಬೇಕು. ತನ್ನ ಸ್ವಾನುಭೂತಿಗೆ ಒದಗಿದ ಮಂಜು ಇಲ್ಲವಾಗುತ್ತದೆ.

ಅಂತಹ ' ಪೂರ್ಣಾತ್ ಪೂರ್ಣಮುದಚ್ಯತೇ ' ಪೂರ್ಣವು ಶಿವವು; ಪೂರ್ಣತ್ವ ವಿಶ್ವ. ಪೂರ್ಣ ಶಿವನಿಂದ ಪೂರ್ಣ ಜಗತ್ತು—ಪರಿಣಮಿಸುತ್ತದೆ. ಈ ಪರಿಣತಿ ಹೊಂದಿದ ವಿಶ್ವವು ಸತ್ಯವಾಗಿರುವುದರಿಂದ ಸತ್ಯವಾದ ಪೂರ್ಣ ಶಿವನಲ್ಲಿ ಲೀನವಾದಾಗ ಪೂರ್ಣವೇ ಆಗುತ್ತದೆ. "ಪೂರ್ಣಸ್ಯ ಪೂರ್ಣಮ್ ಆದಾಯ, ಪೂರ್ಣಮ್ ಏವ ಅವಶಿಷ್ಯತೇ" ಅಂದರೆ ಪೂರ್ಣದಿಂದ ಪೂರ್ಣವು ಪರಿಣಮಿಸುವುದು, ಪರಿಣಮಿಸಿದ್ದು ಮತ್ತೆ ಅದರಲ್ಲಿಯೇ ಲೀನವಾಗುವುದು ಪೂರ್ಣ ಸತ್ಯ; ಸತ್ಯ ಪೂರ್ಣ. ಸತ್ಯ ಶಿವನಲ್ಲಿಂದ ಸತ್ಯ ಜಗತ್ತು ಪರಿಣಾಮ ಹೊಂದುತ್ತದೆಂದ ಮೇಲೆ ಸತ್ಯಕ್ಕೆ ಸತ್ಯವಾಗಿ ಬೆರೆಯುತ್ತದೆ; ಬೇರೆಯಾಗುತ್ತದೆ; ರೂಪು ಅಡಗುತ್ತದೆ; ರೂಪು ರೂಪಾಗುತ್ತದೆ. ಸತ್ಯವಾದ ಕಲ್ಲ ಬಂಡೆಯಿಂದ ಅಂಥದೇ ಸತ್ಯವಾದ ಕಲ್ಲ-ಚೂರುಗಳು ಗೋಚರಿಸುತ್ತವೆ. ಅಸತ್ಯವಾದ ಗಗನ-ಕುಸುಮ ಸತ್ಯವಾದ ಗಗನದಿಂದ ಬರುವುದಿಲ್ಲ. ಶಶ-ಶೃಂಗವೂ ಹಾಗೆಯೇ. ವಂಧ್ಯಾ-ಪುತ್ರನಂತೂ ಹೆಸರಿಸಿಕೊಳ್ಳಲಾರದವ; ಅಡಲಾರದವ. ಅಂದರೆ ಮೂರ್ತ ವಸ್ತುವಿನಿಂದ ಮೂರ್ತ ವಸ್ತುಗಳೇ ಹೊರಬರುತ್ತವೆ; ಅಮೂರ್ತ

ವಸ್ತುವು ಬರುವುದೇ ಇಲ್ಲ; ಅದು ಬರುವುದೆಲ್ಲಿಂದ ಬಂತು! ಅಮೂರ್ತವಾದದ್ದು ವಾಸ್ತವಿಕವಾಗಿ ಇಲ್ಲವೇ ಇಲ್ಲ. ಎಲ್ಲವೂ ಪೂರ್ಣವೇ; ಎಲ್ಲವೂ ಪೂರ್ಣದಿಂದಲೇ; ಎಲ್ಲವೂ ಪೂರ್ಣದಲ್ಲಿಯೇ; ಎಲ್ಲವೂ ಪೂರ್ಣದಲ್ಲಿಂದಲೇ; ಎಲ್ಲವೂ ಸಂಪೂರ್ಣವೇ; ಪೂರ್ಣವೂ ಪೂರ್ಣವೇ.

ಮೂರ್ತ ಅಪ (ಕೂಪರ್)ದಿಂದ ಅದರ ಮೂರ್ತ ಕಾರು ಬರುತ್ತವೆ, ನಿಜ; ಆದರೆ ಮೋಟರ ಕಾರಿನಿಂದ ಬರುವ ಹೊಗೆಯ ಬಗ್ಗೆ ಹೇಗೆ? ಎಂದು ಪ್ರಶ್ನೆಗೆ ಉತ್ತರ ಇಷ್ಟೆ! ಅದರ ಎಗ್ಝಾಸ್ಟ್ ಪಾಯಿಪಿನಿಂದ ಕಾರ್ಬನ್ ಹೊಗೆಯಾಗಿ ಬರುವುದು—ಆ ಇಂಜಿನ್ನಿನ ಸಹಾಯದಿಂದ ಪರಿಣಾಮ ಹೊಂದಿ ಬರುವ ಪೆಟ್ರೋಲ್ ಡಿಜಾಯಿಲ್‌ನಂತಹ ಎಣ್ಣೆಯೇ ಆಗಿದೆ. ಅದು ಎಣ್ಣೆಯ ರೂಪಾಂತರ. ಅರ್ಥಾತ್ ಮೂರ್ತದಿಂದ ಅಮೂರ್ತ, ಅಮೂರ್ತದಿಂದ ಮೂರ್ತದ ಪರಿಣತಿ ಆಗುವುದೇ ಇಲ್ಲ. 'ವಟ ವಿಸ್ತಾರವನೊಳಕೊಂಡಿರ್ಪ' ಬೀಜದ ಪರಿಯಂತೆ ಮೊದಲ ಅಮೂರ್ತವು ಬರಿಗಣ್ಣಿಗೆ ಕಾಣಿಸದಷ್ಟು ಸೂಕ್ಷ್ಮಾತಿಸೂಕ್ಷ್ಮವಾಗಿರಬಹುದು. ಆದರೂ ಅದು ಮೂರ್ತವೆ. ಇಂದ್ರಿಯಗಳಿಗೆ ಕಿಂಚಿತ್ತಾದರೂ ಗೋಚರವಾಗಲಿ, ಅಥವಾ ಇಲ್ಲದಿರಲಿ, ಅದು ಉತ್ಪತ್ತಿ—ಸ್ಥಿತಿ—ಲಯ ಕಾರ್ಯಕ್ಕೆ ಕಾರಣ ಅಥವಾ ಕಾರ್ಯ ಆಗಿದ್ದರೆ, ಆಗುವುದಿದ್ದರೆ, ಅವೆಲ್ಲವೂ ಮೂರ್ತವೇ. ಇಲ್ಲಿ ಮೂರ್ತವೆಂದರೆ, ಇಂದ್ರಿಯಗಳಿಗೆ ಗೋಚರಿಸಬಲ್ಲದು. ಅದು ಆಕಾಶದಂತೆ ನಿರೂಪ ಆಗಿರಬಹುದು; ಅಥವಾ ಅದರ ಹೆಸರೂ ಗೊತ್ತಿಲ್ಲದಿರಬಹುದು. ಅಂದರೆ, ಮೂವತ್ತಾರು ತತ್ತ್ವಗಳ ಪೈಕಿ ಒಂದಕ್ಕಾದರೂ ಸ್ವಲ್ಪಾದರೂ ಸಂಬಂಧಿಸಿದ್ದರೆ ಅದು ಮೂರ್ತ. ಮೂರ್ತವಾದದ್ದೆಲ್ಲವೂ ಸತ್ಯ, ಅಂತೆಯೇ ಜಗತ್ತು ಸತ್ಯ; ನಿತ್ಯ. ಕೇವಲ ನಾಮ–ರೂಪ–

ಯೆಗಳ ಪರಿಣಾಮದಿಂದಾಗಿ ಬೇರೆ–ಬೇರೆಯಾಗಿ, ನಾಶ
ದಂತೆ ಭಾಸವಾಗುತ್ತದೆ, ಅಷ್ಟೆ. ಯಾವುದಕ್ಕೂ ನಿಜವಾದ
ಶವನ್ನೂ ಯಾರೂ ಒಪ್ಪುವುದಿಲ್ಲ. "ಜಲ – ಬಿಂದು"ವು
ಸ್ಸಿನೊಡೆವೆರೆದು ಬೆಳೆದು ಮಗು – ಮಗ (ಅಥವಾ ಮಗಳು)–
ಡುಗ – ತರುಣ – ಪ್ರೌಢ – ಮುದುಕ – ಶವ – ಮಣ್ಣು —
ಗೆ ರೂಪಾಂತರವಾಗಿ ಪರಣತಿ ಹೊಂದುತ್ತದೆ, ಪರಣತಿ;
ಶವನ್ನಲ್ಲ. ನಾಶಶಬ್ದವಾದರೂ ಪರಿಣತಿ ಅರ್ಥದಲ್ಲಿ ಉಪ-
ೋಗಿಸಿದರೆ ಮಾತ್ರ ಅದಕ್ಕೆ ಎಲ್ಲರದೂ ಒಪ್ಪಿಗೆ. ಅದರಂತೆ
ರ್ಣವದಂತಹ ಬೀಜ – ಮೊಳಕೆ – ಸಸಿ – ಗಿಡ – ಮರ–ತೊಲೆ
ಗೆ – ಚಕ್ಕಿ – ಬೆಂಕಿ – ಬೂದಿ – ಮಣ್ಣು ಇದೂ ಒಂದು
ರ್ಣವಿಯಂತಹುದರ ಪರಿಣಾಮ. ಷಡ್ಭಾವ ವಿಕಾರಗಳಲ್ಲಿ
ರಿಣಮಂತೇ" ಎಂಬುದೊಂದು ಇದ್ದೇ ಇದೆ. ಅಂದರೆ, ಜವರು–
ರಿ, (ಜಂಕೂಲಿಕಾ), ಗೋಮಯ–ಜೇಳು ;, ಗೋವು–ಹಾಲು,
ಲು – ಮೊಸರು, ಮೊಸರು – ಮಜ್ಜಿಗೆ, ಮಜ್ಜಿಗೆ – ಬೆಣ್ಣೆ,
ಪ್ಪ.— ಇವು ಒಂದೇ ವಿಧವಾದದ್ದರ ರೂಪದ ಪರಿಣಾಮಗಳು ;
ರ ಮೂಲವು ಗೋ – ಸ್ತನೋದ್ಭವವಾದ ನೀರಿನಂತೆ ತರಲ
ದ ಬಿಳಿ ದ್ರವ್ಯವಾದ ಹಾಲೆಂಬ ಮೂರ್ತ ದ್ರವ್ಯವೇ ಆಗಿದೆ.
ವಟುವೆಂಬ ಹಾಲಿಗೆ ಹದವರಿತ ಕಾವಿನ ಸುಸ್ಕಾರ ಮಾಡಬೇಕು;
ಪ್ಪ–ಲಿಂಗ ದೀಕ್ಷೆಯಾಗಬೇಕು; ಆ ನಂತರ ಘರ್ಷಣಾನು-
ಪದಿಂದ ಬೆಣ್ಣೆ-ಶರಣಸ್ಥಲದವನಾಗಬೇಕು; ತತ್ಪಶ್ಚಾತ್
ಪ್ಪ–ಪಾಕದಿಂದ ಘೃತರೂಪದ ಐಕ್ಯಸ್ಥಲದವನಾಗಬೇಕು. ಐಕ್ಯ
ದಲ್ಲಿ ಆಗು-ಹೋಗು ಮುಂತಾದ ದ್ವಂದ್ವದ ಕಾಟವಿಲ್ಲ.
ತೆಯೋ ಅದು ನಿತ್ಯಾತ್ಮ-ಸ್ವರೂಪ, ಅದರ ಸಹಜ ಸ್ವರೂಪ
ಾವವು ಘನವಾದದ್ದು, ಅದುವೇ ಮುಂದೆ ಭಕ್ತರ ಭಕ್ತಿಯು

ಕಾಪಿನಿಂದ ದಯಾರ್ದ್ರತೆಯಿಂದ ದ್ರವೀಭೂತವಾಗುತ್ತದೆ. ಆ ದ್ರವೀಕರಿಸಿದ ತುಪ್ಪವು ಮತ್ತೆ ನೈಜ ಶಾಂತ ಸ್ಥಿತಿಯಲ್ಲಿ ತನ್ನ ಘನ ರೂಪವನ್ನೇ ತಾಳುತ್ತದೆ. ಘನ ರೂಪವು ಸ್ಪಷ್ಟ ಪ್ರತ್ಯಕ್ಷ ರೂಪದ ಪೂರ್ಣತ್ವವು; ಸತ್ಯವಾದ ಸತ್ವವು.

ಜಗತ್ತನ್ನು ಸತ್ಯವೆನ್ನಲೇಬೇಕು. ಜಗತ್ತು ಅಸತ್ಯವಾದರೆ, ಸತ್ಯವಾದ ಪೂರ್ಣ ಶಿವನಲ್ಲಿ, ಪ್ರಲಯ ಕಾಲದ ದಿಶೆಯಲ್ಲಿ ಲೀನವಾಗಲು ಬರಲಾರದು. ಅಜ್ಞಾನವನ್ನು ಸಹ ನಾವು ಭಾವ ವಾಚಕವೆಂದು, ಭಾವ ಪದಾರ್ಥವೆಂದು ಒಪ್ಪಿ, ಸತ್ಯವೆನ್ನಲೇಬೇಕು. ಅಂದರೇನೇ ಭಾವ-ವಸ್ತುವಾದ ಶಿವನಲ್ಲಿ, ಭಾವ-ವಸ್ತುವಾದ ಅಜ್ಞಾನದ ಸಂಪರ್ಕದಿಂದಾಗಿ, ಒಂದೇ ಕಡೆಯಲ್ಲಿ ಒಂದಕ್ಕೊಂದು ಬೆರೆತು ಅದ್ವೈತವಾಗುತ್ತದೆ. ಭಾವ ವಸ್ತು ಆದ ಮಾತ್ರದಿಂದ ಶಕ್ತಿಯ ವಿಶಿಷ್ಟತೆಯಂತೂ ಪ್ರತೀತಿ ವೇದ್ಯವೇ ಆಗಿದೆ. ಇದರಿಂದೇನೂ ಶಕ್ತಿ ವಿಶಿಷ್ಟಾದ್ವೈತಕ್ಕೆ ಊನತೆ-ನ್ಯೂನತೆಯೇನೂ ಬಾರದು. "ಏಕಾಕಾರವಿಂದ್ಯೈಕ್ಯತ್ವಂ".

ಈ ಏಕಾಕಾರ ಪೂರ್ಣದ ಮಾನವಂತ ಮಹಾಂತನು ಪೂರ್ಣತ್ವವೂ ಸಹ ತಾನೇ ಆದರೂ ನಿಜಕ್ಕೂ ಮಾನ-ರಹಿತನು. ಅಂತೆಯೇ ಮಾನ-ಮೇಯ-ಮಾತೃತ್ರಯದ ತ್ರಿಪುಟಿ ಸ್ವರೂಪನೂ ಅವನೇ ಆಗಿದ್ದಾನೆ. ಆದನು ಅಗಮ್ಯ ಅಗೋಚರ ಅಪ್ರಮಾಣನೂ ನಿರಾಲಂಬ ನಿರವಯವ ನಿರೂಪನೂ ಆಗಿದ್ದರೂ ಭಕ್ತ-ಭಕ್ತಿಗೆ ಮೆಚ್ಚಿ ಮಾನ ಮಾಡಿಸಿಕೊಳ್ಳಲು ಮಾನವಂತನಾಗಿದ್ದಾನೆ; ಮಾನ ಕೊಳ್ಳಪಟ್ಟಿದ್ದಾನೆ. ಸ್ವಂತ ಶರೀರ ಪೋಷಣೆಗಾಗಿ ಏನನ್ನೂ ಆಶಾವಶನಾಗಿ ಬೇಡಲಾರದವನಾಗಿದ್ದರೂ ಹಾನುಗಲ್ಲ ವಿರಕ್ತಾಧೀಶನು ಶಿವಯೋಗಿಯಾಗಿಯೂ ಸಮಾಜದ ಭಕ್ತರ ನಾಡಿನ ಉದ್ಧಾರಕ್ಕಾಗಿ ಭಿಕ್ಷಾಟನೆಯಜೋಳಿಗೆಯನ್ನು ಧರಿಸಿ, ಮಾನವಂತನಾದನು.

ಂತೆಯೇ ಅವನು ಮಹಾಂತನು; ಅನಂತನು. ಆ ಅನಂತನೇ
ಕಾಂತ; ಏಕಾಂತವೇ ಐಕ್ಯಾಂತ; ಐಕ್ಯ. ಐಕ್ಯತ್ವವೇ ಪೂರ್ಣತ್ವ.
ರ್ಣತ್ವವೇ ಪೂರ್ಣ; ಪೂರ್ಣವಾದದ್ದೇ ಯಾವಾಗಲೂ
ರ್ಣಾಕಾರದ ಪೂಜಿಯು ಪೂರ್ಣವಾಗಿ [ಇಂಗ್ಲೀಷ O
= ಓ); ಉರ್ದೂವಿನ ೦ (= ಹೇ); ಭಾರತೀಯ ಭಾಷೆಗಳ
ರ್ಣಮಾಲೆಯ ಅಂ (= ಪೂಜಿ); ವಿಸರ್ಗ; ಜಿಹ್ವಾಮೂಲೀಯ
ಗೂ ಉಪಧ್ಮಾನೀಯದ ದ್ವಂದ್ವರೂಪ ಮತ್ತು ಸರ್ವ
ಷೆಗಳ ಅಂಕೆಯ ಪೂಜಿ] ಗೋಚರಿಸುತ್ತಿರುವಂತೆಯೇ
ರ್ಣವು ಪೂರ್ಣ ರೀತಿಯಲ್ಲಿ ಪೂರ್ಣವೇ ಆಗಿರುತ್ತದೆ.
ಅಂತೆಯೇ ಪೂರ್ಣವೆಂಬ ಓಂಕಾರವು ಪೂರ್ಣ. ಅದು
ರ್ಣ. ಇದು ಪೂರ್ಣ. ದೂರದ್ದು ಪೂರ್ಣ; ಸಮೀಪದ್ದು
ರ್ಣ. ಮೂಲ ತತ್ತ್ವವೂ ಪೂರ್ಣ; ಅದರಂಗದ ಮೂವ-
ೈದೂ ಉಪತತ್ತ್ವಗಳೂ ಪೂರ್ಣ, ಒಂದೂ ಪೂರ್ಣ.
ಲ್ಲವೂ ಪೂರ್ಣ. ಎಲ್ಲವನ್ನು ಒಂದೊಂದಾಗಿ, ಒಟ್ಟಾಗಿ ಹೇಳುವ
ದ್ದವೂ ಪೂರ್ಣ.

ಅವನು ಅದು ಇದು ಅವಳು ನೀನೇ ;
ರವಿಯೂ ನೀನೇ, ಶಶಿಯೂ ನೀನೇ ;
ಪವೆಯೂ ನೀನೇ, ಬೆಂಕಿ ನೀನೇ ;
ನೀರು ನಭ ನೀನೇ ।

ಭುವಿಯೂ ನೀನೇ, ಆತ್ಮ ನೀನೇ ;
ಇವುಗಳೆಂಟೂ ನಿನ್ನ ತನುವೆಂ –
ಬುವವು ಬೇರೆಯೂ, ಒಟ್ಟು ಸಹ ಇವು
ನಿನ್ನ ರೂಪಗಳೇ ॥

– ಎಂಬುದಾಗಿ ಈ "ಸರ್ವಂ ಖಲ್ವಿದಂ ಬ್ರಹ್ಮ" ಸ್ತೋತ್ರದ

ಪದ್ಯದಲ್ಲಿ ನಾನು ಈ ಮೊದಲು ಹೇಳಿದಂತೆ ಆದಿತ್ಯಪ್ರಭೃತಿ ಆತ್ಮಾಂತದ ಪೂರ್ಣನ ಅಷ್ಟ ತನುಗಳು ಮತ್ತು ಅವುಗಳನ್ನು ಹೆಸರಿಸುವ 'ಅವನು ಅದು ಇದು' ಮುಂತಾದ ಪದಗಳು ಕೂಡ ಸೃಷ್ಟಿ ಹಾಗೂ ಸ್ಥಿತಿಗಳೆರಡರಲ್ಲಿ ಬೇರೆ-ಬೇರೆಯಾಗಿದ್ದರೂ ಪೂರ್ಣ; ಪ್ರಳಯಾಂತ್ಯದಲ್ಲಿ ಒಟ್ಟಾಗಿ, ಒಂದೇ ಒಂದಾದ ಶಿವ ಆಗಿದ್ದರೂ ಪೂರ್ಣ. ಸಾಕಾರದಲ್ಲಿ ಪೂರ್ಣ; ನಿರಾಕಾರದಲ್ಲಿದ್ದರಂತೂ ಪೂರ್ಣ ಪೂರ್ಣವೇ.

ನಿರಾಕಾರದಲ್ಲಿದ್ದ ಪೂರ್ಣನನ್ನು ಸಾಕಾರದಲ್ಲಿದ್ದವರು ಅವನನ್ನು ನಿರಾಕಾರಿಯನ್ನಾಗಿಯೇ ಗುರುತಿಸಲು ಕಷ್ಟಸಾಧ್ಯವಾಗುತ್ತದೆ. ಪೂರ್ಣನಾದ ಆ ಪರಂಜ್ಯೋತಿ ಸತ್ತ್ವವನ್ನು ಬೆಳಕನ್ನಾಗಿ ಗುರುತಿಸಲು ಸಾಕಾರವಾದ ಪ್ರಣತಿ ಮೋಂಬತ್ತಿ ಬ್ಯಾಟ್ರಿ ತಂತಿ ಕಟ್ಟಿಗೆ ಮುಂತಾದವುಗಳ ನೆರವಿನಿಂದ ಸುಲಭವಾಗುತ್ತದೆ. ಆ ಪೂರ್ಣ ಶಿವನು ನಿರಾಕಾರನಾಗಿ ಅಗಮ್ಯನಾಗಿದ್ದಂತೆ ನಾದ ಬಿಂದು ಕಲಾತೀತನೂ ಮತ್ತು ಸಚ್ಚಿದಾನಂದ ನಿತ್ಯ ಪರಿಪೂರ್ಣನೂ, ಹಾಗೆಯೇ ಇನ್ನೂ-ಇನ್ನೂ ಏನೇನೋ ಬಹಳ-ಬಹಳ ಆಗಿದ್ದರೂ ಅಂಥ ಪೂರ್ಣನನ್ನು ಓಂಕಾರವನ್ನಾಗಿ ಭಾವಿಸಿಕೊಳ್ಳಬೇಕು. ಆ ಓಂಕಾರವೇ ಶಿವನು, ಶಿವನೇ ಓಂಕಾರನು, ಎಂದುದಾಗಿ ಅವನ ವಾಚ್ಯ-ವಾಚಕವಾದ ಓಂಕಾರವನ್ನು ಬರೆಯಬೇಕು; ಬರೆದದ್ದನ್ನು ಧ್ಯಾನಿಸಿ, ಗುರುತಿಸುತ್ತಿರಬೇಕು.

ತನ್ನ ಮೂವತ್ತೈದು ತತ್ತ್ವಗಳನ್ನೊಳಗೊಂಡ ಅಂಥ ಪೂರ್ಣ ಪರಿಪೂರ್ಣ ಸಂಪೂರ್ಣ ಶಿವನಿಗೂ ಮತ್ತು ಮಸಿಯಂತಹ ಸಾಧನೆಯಿಂದ ಬರೆದೋದಿ ಅಳುಕಿಸಿದರೆ ಅಳುಕುವ ಓಂಕಾರ ವರ್ಣಕ್ಕೂ ಸರಿ ಸಮ ಹೋಲಿಸುವುದೆಂದರೆ ಚಿಕ್ಕ ಮಕ್ಕಳಾಡುವ ಮಣ್ಣಾಟದಲ್ಲಿಯ ಮಣ್ಣನ್ನು ಸಕ್ಕರೆಯನ್ನಾಗಿ ಹೋಲಿಸಿದಂತೆ!

ೂರ್ಣದಿಂದಾದದ್ದು ಮಣ್ಣು ಪೂರ್ಣ. ಪೂರ್ಣ ಮಣ್ಣಲ್ಲಿ ೇರೆ ರೂಪ ತಾಳಿ ಬೆಳೆದದ್ದಾಗಿ ಕಬ್ಬಿನಿಂದಾದದ್ದು ಸಕ್ಕರೆ ಹೆಸರಿನ ುಣ್ಣು.

ಮಣ್ಣು ಪೃಥ್ವಿ. ಮಣ್ಣಿನಲ್ಲಿ ಮಣ್ಣಲ್ಲಿ ಮಣ್ಣಿನಿಂದ ಮಣ್ಣಾಟ ಡುವಾಗ ಮಕ್ಕಳು ಅದೊಂದೇ ಮಣ್ಣನ್ನೇ ಬೇರೆ-ಬೇರೆ ರಾಗಿಟ್ಟು, ಅಕ್ಕಿ ಗೋದಿ ಸಕ್ಕರೆ ಮುಂತಾದ್ದನ್ನಾಗಿ ಹೆಸರಿಟ್ಟು ರೆದು, ಆಡಿ, ಆ ಆಟ ಮುಗಿದ ಮೇಲೆ, ಆ ಮಣ್ಣನ್ನು ಅಲ್ಲಿಯೇ ಸುಟಿ, ಮನೆಯಲ್ಲಿ ಹೋಗುತ್ತಾರೆ. ಆ ಆಟ ಆಡುವಾಗಿನ ಆ ಕ್ಕಳು ಆ ಮಣ್ಣು ಸಕ್ಕರೆಯಂತೆ ತಿನ್ನಲು ಬರುವುದಿಲ್ಲೆಂದು ಳಿದಿದ್ದರೂ ಕೂಡ ಮಣ್ಣಿಗೆ ಸಕ್ಕರೆಯೆಂದೇ ವ್ಯವಹರಿಸುತ್ತಾರೆ. ಸಕ್ಕರೆಯಲ್ಲದ ಸಕ್ಕರೆಯಂತಹ ಸಕ್ಕರೆಯನ್ನು ಪಡೆದು, ಅಂದರೆ ಕ್ಕರೆಯಂತೆ ಪುಡಿ - ಪುಡಿಯಾದ ಆ ಮಣ್ಣಿನಿಂದ ಅವರು ಆ ಜವಾದ ಸಕ್ಕರೆಯಿಂದಾಗುವ ಸ್ಪರ್ಶಾನುಭವ ಪಡೆಯುತ್ತಾರೆ.

ಮಕ್ಕಳಾಡುವ ಈ ಮಣ್ಣಿನಾಟವೂ ದಾರ್ಶನಿಕರಾಡುವ ಾಸ್ತ್ರಾರ್ಥದ ಆಟವೂ ಒಂದೇ. ಮಕ್ಕಳಾಡುವ ಈ ಮಣ್ಣಿನಾಟಕ್ಕೆ ಗವು ವೇದ ಉಪನಿಷತ್ತು ಶಾಸ್ತ್ರಗಳಲ್ಲಿ ಸಂಪದುಪಾಸನೆ ್ರತೀಕೋಪಾಸನೆ ಹಾಗೂ ಅಂಗಾವಬದ್ಧೋಪಾಸನೆ ಮೊದಲಾದ ೆಸರಿಟ್ಟು ಕರೆದು ತತ್ತ್ವಜ್ಞಾನಿಗಳು ಪೂರ್ಣನ ಪೂರ್ಣತ್ವವನ್ನು ಳಿಸುವ ಆಟವಾಡುತ್ತಾರೆ. ಇದನ್ನು ವಿಸ್ತೃತವಾಗಿ ತಿಳಿದು ೋಡಬೇಕೆಂದರೆ, ಕಾಶೀ ಹಿಂದೂ ವಿಶ್ವವಿದ್ಯಾಲಯದ ಪೀ-ಚ್.ಡಿ. ಚಕ್ರವರ್ತಿ ಪದವಿಗಾಗಿ ಬರೆದ ಸಂಸ್ಕೃತದ ನನ್ನ ಂಶೋಧನಾ ಪ್ರಬಂಧವನ್ನು ಅವಲೋಕಿಸಬಹುದು. ಆ ್ರಬಂಧದ ಉಪಾಸನಾ ಪ್ರಕರಣದಲ್ಲಿ "ನಾಮ ಬ್ರಹ್ಮೇತ್ಯು-ಾಸ್ತೇ" ಏವಂ "ವಾಚಂ ಬ್ರಹ್ಮೇತ್ಯುಪಾಸ್ತೇ" ಎಂದು

ಮುಂತಾಗಿ ವಿಸ್ತರಿಸಲಾಗಿದೆ.

ವಿಸ್ತೃತ ಭಾವನೆಯು ವೀರಶೈವನು ಕಲ್ಲು ಕಂತಿಯಿಂದಾದ ಇಷ್ಟಲಿಂಗದ ಆಕಾರದಲ್ಲಿ ತನ್ನ ಪಶ್ಚಿಮ-ಶಿಖಾ ಚಕ್ರದ ಚಿತ್ಕಳೆಯನ್ನು ಇಷ್ಟಲಿಂಗವನ್ನಾಗಿ ಪೂಜಿಸುತ್ತಾನೆ. ಆದರಿಂದ ಪ್ರಾಣಲಿಂಗಾನುಷ್ಠಾನವನ್ನು ನೆರವೇರಿಸಿ ನೋಡುತ್ತಾನೆ. ಮತ್ತು ಭಾವ ಲಿಂಗಾನುಸಂಧಾನವನ್ನು ಮುಂದುವರೆಸುತ್ತ ಕೂಡುತ್ತಾನೆ; ನಿಬ್ಬೆರಗಾಗುತ್ತಾನೆ.

"ಅಥಾಽಷ್ಟಧಾಽರ್ಚನಂ ಕುರ್ಯಾದ್
ಇಷ್ಟಲಿಂಗಸ್ಯ ಪೂಜನಂ ;
ತಲ್ಲಿಂಗಂ ಮನುತೇ ಯಸ್ತು
ಪ್ರಾಣಲಿಂಗಸ್ಯ ಪೂಜನಂ ;
ಮನೋಲಯಂ ತಂ ನಿರ್ಲೇಪಂ
ಭಾವಲಿಂಗಸ್ಯ ಪೂಜನಂ." (ಶಿವರಹಸ್ಯ)

ಅಂಥ ಇಷ್ಟಲಿಂಗವು ಸಾಕಾರವಾಗಿ ಕಂಡರೂ, ಅದು ಶಿವಯೋಗ ಶಿವಾನುಭವ ಶಾಸ್ತ್ರದ ಬಲದಿಂದ ನಿರಾಕಾರವೆಂದೇ ನಂಬಬೇಕು. ಇಂತಹ ಪ್ರತೀಕೋಪಾಸನಾದಿಗಳು ಛಾಂದೋಗ್ಯ-ಬೃಹದಾರಣ್ಯಕಾದಿ ಉಪನಿಷತ್ತುಗಳಲ್ಲಿ ಹೇರಳವಾಗಿವೆ. ಈ ಇಷ್ಟಲಿಂಗ ವೆಂಬ ಚಿತ್ಕಳೆಯು ಶಬ್ದರೂಪವೇ ಓಂಕಾರವು.

ಓಂಕಾರ ಶಿವ ಪೂರ್ಣ ಚಿತ್ಕಲೆ ಮುಂತಾದ ಶಬ್ದಗಳು ಇಷ್ಟಲಿಂಗದ ಅವ್ಯಕ್ತ ರೂಪದ ದ್ಯೋತಕ ಪದಗಳು. ಪ್ರಾಣಲಿಂಗ ಭಾವಲಿಂಗಗಳು ಇಷ್ಟಲಿಂಗದ ವಿಸ್ತೃತೀಕರಣ. (ಇಲ್ಲಿ 'ಚ್ವಿ'ಸಮಾಸ "ಅಭೂತತದ್ಭಾವೇ ಚ್ವಿಃ"; "ಚ್ವೌ ಚ" ಎಂಬುದಾಗಿ ಪಾಣಿನೀಯ ಸೂತ್ರಗಳನ್ನು ಸ್ಮರಿಸಿಕೊಳ್ಳಬೇಕು.) ಈ ವಿಸ್ತೃತೀಕರಣದ

ಶಾಲೀಕರಣದಂತೆಯೇ ಷಡ್‌ಲಿಂಗ ಮತ್ತು ನವಲಿಂಗಗಳ ಕೀಲ. ಆಚಾರಲಿಂಗ–ಗುರುಲಿಂಗ–ಶಿವಲಿಂಗ–ಜಂಗಮಲಿಂಗ–ಪ್ರಸಾದಲಿಂಗ – ಮಹಾಲಿಂಗ ಈ ಆರು ಷಡ್‌ಲಿಂಗಗಳು. ವುಗಳೊಂದಿಗೆ, ಇಷ್ಟಲಿಂಗ–ಪ್ರಾಣಲಿಂಗ–ಭಾವಲಿಂಗಗಳನ್ನೂ ಟ್ಟಿಗೆ ಎಣಿಸಿದರೆ ನವಲಿಂಗಗಳು. ಈ ಎಲ್ಲ ಲಿಂಗಗಳ ಸಕೀಲಾದಿ ಕಲಕ್ಕೂ ಸ–ಕಲವಾದದ್ದು ಇಷ್ಟಲಿಂಗವು.

ಈ ಇಷ್ಟಲಿಂಗಕ್ಕೆ ಸರಿ ಸಮಾನ ಅರ್ಥಬೋಧಕ ಪದವು ುತ್ತೋಂದಿಲ್ಲ. ಆದರೂ ಇಂಥ ಇಷ್ಟಲಿಂಗ ಶಬ್ದವನ್ನು ಅನುವಾ ಸಲು ವೀರಶೈವೇತರ ದಾರ್ಶನಿಕರ ಪಾರಿಭಾಷಿಕ ಶಬ್ದಗಳಲ್ಲಿ ೇಳಲೇಬೇಕಾಗಿದ್ದರೆ, ಹೀಗೆ ಹೇಳಬಹುದು : ಇಷ್ಟಲಿಂಗವು= ರಣ್ಯಗರ್ಭವು ; ಸೂತ್ರಾತ್ಮವು = ಪ್ರಾಣಲಿಂಗವು ; ಭಾವ ಂಗವು = ಅಂತರ್ಯಾಮಿಯು. ಅಂದರೆ, ಅಂತಃಕರಣ–ಕಾರಣ ಂದ ಕೂಡಿದ ಪರಮಾತ್ಮನಾದ ಹಿರಣ್ಯಗರ್ಭನೇ ಇಷ್ಟಲಿಂಗವು. ್ರಾಣಕಾರಣೋಪಹಿತನಾದ ಸೂತ್ರಾತ್ಮನು ಪ್ರಾಣಲಿಂಗವು. ಈ ಎರಡೂ ಕಾರಣಗಳಿಂದೊಡೆಮೆರೆದು ಎರಕವಾಗಿಪ್ಪ ಅಂತ–ರ್ಯಾಮಿಯೆ ಭಾವಲಿಂಗವು. ಭಾವಲಿಂಗಾದಿಗಳ ಭಾವದ ಭಾವ ಂಕಾರ ಪೂರ್ಣ. ಇದರ ಅರ್ಥಾನುಸಂಧಾನವನ್ನು ಹೃದ–ಯಂಗಮವಾದ ವಾರ್ಧಕ ಷಟ್‌ಪದಿ ಛಂದದ ಪದ್ಯದಲ್ಲಿ ಹೀಗೆ ುಂದರವಾಗಿ ಜೋಡಿಸಿ ಹೇಳಬಹುದು :

ಓಂಕಾರ

|| ವಾರ್ಧಕ ಷಟ್‌ಪದಿ ||

ಶಿವ-ಶಕ್ತಿ, ಪರಿಪೂರ್ಣ–ಪೂರ್ಣತ್ವ = ಓ+ಮ್ ಕಾರ
ಶಿವನೆ ಮೂವತ್ತಾರು ತತ್ತ್ವದಲಿ ಕಾಣುವನು;
ಅವುಗಳನು ಹೆಸರಿಸಲು, ಒಂದಾದ ಅಕ್ಷರದ
ಆಕಾರ ಓಂಕಾರವು ||ಪಲ್ಲವಿ||

ಓಂಕಾರ–ಓಂಕಾರ–ಓಂಕಾರವೇ ಪೂರ್ಣ
ಓಂಕಾರವಾಗಿಹುದು ಅ-ಉ–ಮ ಜೊತೆ–ಜೊತೆಗೂಡಿ
ಓಂಕಾರ, ಸ್ವರ ವರ್ಣ ಆದೇಶ ಗುಣ ಸಂಧಿ
ಓ+ಮ್ = ಬೀಜ ದೀರ್ಘ ಶಿವನು |

ಹ್ರಾಂಕಾರ, ಹ್ರೀಂಕಾರ, ಹ್ರೂಂಕಾರ ಹ್ರೈಂಕಾರ,
ಹ್ರೌಂಕಾರ, ಹ್ರಃಕಾರ ಸರ್ವವೂ ಶಕ್ತಿಗಿಹ
ಶ್ರೀಂಕಾರ, ಶ್ರೀಕಾರ, ಶ್ರೀಕಾರ್ಯ ಕಾರಣದ
ಸಿರಿ–ಸಿರಿಯು, ಶ್ರೀಶಕ್ತಿಯು ||

ಸಚ್ಚಿದಾನಂದ ಪರಿ–ಪೂರ್ಣ ನಿಜ ಸಚ್ಚರಿತ
ನಿಚ್ಚ–ನಿಚ್ಚದ ಅಚ್ಚ ಸಚ್ಚರಣದಚ್ಚು ಮೋಕ್ಷ
ಆಚ್ಚು-ಮೆಚ್ಚಿನ ಸೌಖ್ಯ ಕಿಚ್ಚಾದ ಚೇತನದ
ಚೈತನ್ಯ ಸತ್-ಪೂರ್ಣವು |

ಕಿಚ್ಚಿನಿಂ ಜನಿಸಿದ್ದು, ಕಿಚ್ಚಿನಿಂ ನೆಲೆ ನಿಂತು
ಕಿಚ್ಚಿನಲಿ ಲಯವೆಂಬ ಮುಚ್ಚಂಜೆಗಿಂ ಮುಂಚೆ
ಹುಚ್ಚೆದ್ದು ಕಿಚ್ಚನ್ನು ಝಗ–ಝಗಿಸಿ ಮಿಂಚಿಸುವ
ಬಿಸಿ ಝಳವು ಪೂರ್ಣತ್ವವು ||

ಓ = ತಂದೆ, "ಮ"ವು ತಾಯಿ; ಕವಿಯು = ಓ, ಮವು = ಕಾವ್ಯ;
ಓ = ತತ್ತು, ತತ್ತ್ವ = ಮವು; ಓ = ಶಬ್ದ, ಮವು = ಅರ್ಥ;
ಭೂತಿ = ಓ. ಮ = ವಿಭೂತಿ; ನಿತ್ಯ ಅವಿನಾಭಾವ
ಸಂಬಂಧಿ ಓಂಕಾರವು |

ಓ = ತರಣಿ, ಮವು = ಬಿಸಿಲು; ಓ = ಚಂದ್ರ, ಚಂದ್ರಿಕೆ = ಮ;
ಜ್ಯೋತಿ = ಓ, ಮವು = ಕಿರಣ; ಗುರುವು = ಓ, ಮ = ಗುರುತ್ವ;
ಈ ತರದ ಶಿವ-ಶಿವೆಯು 'ಓ'ಸ್ವರದ, 'ಮ'ವ್ಯಂಜನದ
ಜೋಡಿ ಓಂಕಾರವು ||

ಈ ಓಂಕಾರ ವರ್ಣವು ಸರ್ವ ಶಬ್ದಗಳ ಉತ್ಪಾದಿಗಳಿಗೆ ಕಾರಣವಾಗಿದೆ. ಇದು ನಾದ-ಬಿಂದು-ಕಲೆಯೂ ಆಗಿದೆ. ಇದು "ಏಕೋ ನಾದಾತ್ಮಕೋ ವರ್ಣಃ ಸರ್ವ-ನಾದ-ವಿಭಾಗ ವಾನ್" ಕೂಡ ಆಗಿದೆ. ಅಂತೆಯೇ ಈ ಓಂಕಾರವೆಂಬ "ಅಕ್ಷರಾತ್ ಸಂಭವತೀಹ ವಿಶ್ವಮ್" ಎನ್ನುತ್ತಿದೆ—ವೇದ.

ವೇದಾಗಮಾದಿಗಳು ನಿಚ್ಚಳವಾಗಿ ತಿಳಿಸುತ್ತಿರುವಂತೆ ವಾಚ್ಯ-ವಾಚಕವಾದ ಪೂರ್ಣತ್ವದ ಪೂರ್ಣ ಓಂಕಾರವನ್ನೇ ಚರಾಚರಗಳೆಲ್ಲ ನುಡಿಯುತ್ತಿರುತ್ತವೆ. ಓಂಕಾರವೇ ವಿಶ್ವವಾಗಿರುವುದರಿಂದ ಅದೇ ಓಂಕಾರವೇ ಆ ವಿಶ್ವದ ಮುಖದಿಂದ ಹೊರಬರುತ್ತದೆ. ಆದರೆ ಓಂಕಾರ ರೂಪದ ವಿಶ್ವವು ವ್ಯಷ್ಟಿ ಸಮಷ್ಟಿ ರೂಪದಲ್ಲಿದ್ದರೂ ಓಂಕಾರ ಧ್ವನಿಯನ್ನೇ ಮಾರ್ದನಿಗೊಳಿಸುತ್ತಿರುತ್ತದೆ. ಹೀಗೆ ಓಂಕಾರವನ್ನೇ ಶುದ್ಧರೀತಿಯಲ್ಲಿ ಅಥವಾ ಅಪಭ್ರಂಶವನ್ನಾಗಿಸಿಕೊಂಡು ಜನ ಸಾಮಾನ್ಯರೂ ಪಶು-ಪಕ್ಷಿಗಳೂ ಮತ್ತು ನಿರ್ಜೀವದಂತಹ ವಸ್ತುಗಳೂ ಸಹ ತಮ್ಮ ಜೀವನದಲ್ಲಿ ಆಗಾಗ್ಗೆ ನಿಶ್ಚಿತವಾಗಿ ಉಪಯೋಗಿಸುತ್ತಲೇ ಇರು

ತ್ವವೆ: ಷಟ್‌ಸ್ಥಲ ಬ್ರಹ್ಮಗಳೂ ಪ್ರಣವ ಸ್ವರೂಪಿಗಳೂ ಆದ ಶಿವ ಯೋಗಿಗಳು ತಮ್ಮ ಸತ್ತ್ವಗುಣದ ವೃತ್ತಿ ಪ್ರಾಧಾನ್ಯತೆಯ ದೆಶೆಯಿಂದ ಅವರು ಓಂ ಓಂ ಎಂದು ಜಪಿಸುತ್ತಾರೆ. ರಜೋಗುಣ ಪ್ರಧಾನದ ಭೋಗಿಗಳು 'ಹೋಂ' ಬರಲಿ! ಎಂದು ತರಿಸಿಕೊಂಡು ಭೋಗಿಸುತ್ತಾರೆ. ತಾಮಸ ಗುಣದಿಂದ ಹಾಸಿಗೆ ಹಿಡಿದ ರೋಗಿಗಳು ಊಂ ಊಂ ಎಂದು ನರಳುತ್ತಾರೆ. ಸಣ್ಣ ಕೂಸು ತನ್ನ ತಾಯಿಯನ್ನು ನೆನೆಸಿ ಕರೆಯುವಾಗ ಅವಳ ಹೆಸರೆತ್ತಲಾರದೆ, 'ಅಮ್ಮ, ಮಾ' ಅನ್ನುತ್ತ ಅವಳನ್ನು ಆಹ್ವಾನಿಸಿದಂತೆ ಮಾಡುತ್ತದೆ. ಅದು ಅಮ್ಮ, ಮಾ, ಮದರ್, ಮಮ್ಮಿ ಎಂದು ಮುಂತಾಗಿ ಮಕಾರ ಮಿಶ್ರಿತ ಶಬ್ದಗಳನ್ನೇ ಸಹಜ ಸ್ವಾಭಾವಿಕವಾಗಿ, ಯಾರೂ ಕಲಿಸದೇನೇ ನುಡಿಯುತ್ತಿರುತ್ತದೆ. ಅದೇ ಮಗುವು ದೊಡ್ಡದಾಗಿ ಸ್ವಲ್ಪ ಸುಧಾರಿಸಿದಂತಾದ ಮೇಲೆ ಅವ್ವ ತಾಯಿ ಮಾತಾಜಿ ಅಂದರೂ ಸಹ ಅದೂ ಆ ಓಂಕಾರದ್ದೇ. ಗೋವು ಹಾಗೂ ಅದರ ಕರುವಿನ ಭಾಷೆಯಲ್ಲಿ 'ಅಂಬಾ' ಎಂದು ತಾಗುತ್ತದೆ. ನಂಬುಗೆಯ ನಾಯಿಯು ಬೇರೆಯವರನ್ನು ನೋಡಿ ಬೊಗುಳುವಾಗ 'ವಂವ್-ವಂವ್' ಎಂದು ಧ್ವನಿಯಿಂದ ಎಚ್ಚರಗೊಳಿಸುತ್ತದೆ. ಮಧು ಮಕ್ಷಿಕೆಯ ನಾದ ಝೇಂಕಾರ; ಕೋಗಿಲೆ 'ಕೂಂವು' ; ಗುಬ್ಬಿಯದು ಚಿಂವ್ ಚಿಂವ್.

ನಿರ್ಜೀವದಂತಹ ಬಿದಿರು ಕೊಳಲು "ವೇಣು ನಾದ" 'ಚೀಂವ್ ಚೀಂವ್‌ರ'; ಗಡಿಯಾರ, ಗಂಟೆ, ಜಾಗಟೆಗಳದ್ದು 'ಢಣ್';ಢೋಲು, ನಗಾರಿಯಂತಹ ವಾದ್ಯದ ಧ್ವನಿ ಢಮ್, ಆಳವಾದ ನೀರಿನಲ್ಲಿ ಭಾರವಾದ ಕಲ್ಲು ಬಿದ್ದರೆ ಢುಮ್; ಬಾಣ ಬಿರುಸು ಹಾರಿ ಹೋಗುವಾಗ ಸುಂಯ್ ಸುರ್; ಹಾರ್‌ನ ಪಾಂವ್ ಪಾಂವ್.

ನಾದ ಬ್ರಹ್ಮದ ಪೂರ್ಣ ಓಂಕಾರವನ್ನು ತಮ್ಮ-ತಮ್ಮ

ಯೋಗ್ಯತೆಗನುಸರಿಸಿ ಪ್ರತಿಧ್ವನಿಸಲಾರದ ವಾದ್ಯಗಳೇ ಸಂಗೀತದಲ್ಲಿಲ್ಲವೆನ್ನಬಹುದು. ಯಾವುದೇ ವಾದ್ಯವನ್ನು ಬಾರಿಸುವ ಅಥವಾ ನುಡಿಸುವ ವ್ಯಕ್ತಿಗೆ ಸಂಗೀತದ ವಾಸ್ತವಿಕ ಜ್ಞಾನವಿರದಿದ್ದರೂ ಆ-ಆ ವಾದ್ಯಗಳು ಓಂಕಾರಕ್ಕೆ ಸಮನಾದ ನುಡಿಯನ್ನೇ ನಿನದಿಸುತ್ತಿವೆ. ತನ್ನ ತಾಯಿಂದ ಜನಿಸಿ, ಅವಳಿಂದ ಪೋಷಣೆ ಪೊಂದಿ, ಅವಳಿಂದ ಮಾತು ಕಲಿತು, ಅಸ್ತಿತ್ವ ಹೊಂದಿದ ಮಗುವು ತನ್ನ ತಾಯಿಗೆ ತಾಯಿಯೆನ್ನುವಂತೆಯೇ ಓಂಕಾರದಿಂದ ಜನಿಸಿದ ಚರಾಚರ ಪದಾರ್ಥಗಳೆಲ್ಲವೂ ಆ ಪೂರ್ಣದ ಪೂರ್ಣತ್ವದ ಓಂಕಾರವನ್ನೇ ನುಡಿಯುತ್ತವೆ.

ಓಂಕಾರ ಅಥವಾ ಪೂರ್ಣ ಎಂಬ ಶಿವನಿಗೆ "ತತ್" ಎಂದೂ ಕರೆಯುತ್ತೇವೆ. ಈ ತತ್ ಅಥವಾ ತದ್ ಅಂದರೆ "ಅದು". ಸರ್ವನಾಮ ಸಂಜ್ಞೆಯಾದ ಇದೇ ತಚ್ಛಬ್ದವು 'ಸಃ' ಎಂದು ಪುಲ್ಲಿಂಗದಲ್ಲಿಯೂ ಅದರಂತೆ ಸ್ತ್ರೀಲಿಂಗದಲ್ಲಿ 'ಸಾ' ಎಂದೂ ಪರಿಣತಿಯನ್ನು ಹೊಂದುತ್ತದೆ.

ಈ ತತ್ ಎಂಬ ಸರ್ವನಾಮದ ಸಂಜ್ಞಾ ಪದದ ಪ್ರಾತಿಪದಿಕಕ್ಕೆ ಭಾವವಾಚಕದ 'ತ್ವ' ಪ್ರತ್ಯಯವು ಸೇರಿ "ತತ್ತ್ವ" ಎಂದು ಸಿದ್ಧಿಸುತ್ತದೆ. ತತ್ತ್ವವೆಂದರೆ "ಅದರ ಭಾವ" "ಅದರತನ" ಎಂದಾಗುತ್ತದೆ. ಇದರಿಂದ ಪೂರ್ಣತ್ವ ಪರಮಾತ್ಮನ ಸ್ವರೂಪ ನಿಜಸ್ಥಿತಿ ಎಂದೂ ಪ್ರಾಸಂಗಿಕವಾದ ಅರ್ಥ ಪ್ರತೀತಿಯಾಗುತ್ತದೆ.

" ಯೇನ ಯೇನ ಹಿ ರೂಪೇಣ
ಸಾಧಕಃ ಸಂಸ್ಮರೇತ್ ಸದಾ ।
ತಸ್ಯ ತನ್ಮಯತಾಂ ಯಾತಿ
ಚಿಂತಾಮಣಿರಿವೇಶ್ವರಃ ॥"

(ಸರ್ವಸ್ತ್ರೋತಃಸಂಗ್ರಹಸಾರಃ)

ಅಂದರೆ,

"ಅವರವರ ದರುಶನಕೆ
ಅವರವರ ವೇಷದಲಿ
ಅವರವರಿಗೆಲ್ಲ ಗುರುವು ನೀನೊಬ್ಬನೆ!
ಅವರವರ ಭಾವಕ್ಕೆ
ಅವರವರ ಪೂಜೆಗಂ,
ಅವರವರಿಗೆಲ್ಲ ದೇವ ನೀನೊಬ್ಬನೆ! " (ಮುಪ್ಪಿನ ಷಡಕ್ಷರಿ)

ಎಂದು ತಿಳಿಸಿರುವುದರಿಂದ ಮತ್ತು "ಓಂಕಾರಃ ಸಂಪ್ರಾಸ್ರವತ್. ಓಂಕಾರೇಣ ಸರ್ವಾ ವಾಕ್... ಓಂಕಾರ ಏವೇದಂ ಸರ್ವಮ್" (ಛಾಂದೋಗ್ಯೋಪನಿಷತ್) ಎಂಬುದಾಗಿ ತಿಳಿಸಿರುವುದರಿಂದಲೂ ಓಂಕಾರವೇ ಪರಶಿವನಿಗೆ ವಾಚ್ಯವೂ ವಾಚಕವೂ ಆಗಿದೆ. 'ಐಂ' ಬೀಜ ಮಂತ್ರವೂ ಸಹ ಅವನ ಶಕ್ತಿಯ ದ್ಯೋತಕವೂ ಹಾಗೂ ತತ್‌ಪರಂಪರೆಯಿಂದ ಸ್ವ ವಾಚಕವೂ ಆಗಿದೆ.

ಹೀಗೆ ಪೂರ್ಣವೆಂಬ ಪದವು ನಾಮವಾಗಿಯೂ ವಿಶೇಷಣವಾಗಿಯೂ ಮತ್ತು ಎಲ್ಲವೂ ಆಗಿ ಉಪಯೋಗಿಸಲ್ಪಡುತ್ತದೆ. ಒಟ್ಟಿನ ಮೇಲೆ ಪೂರ್ಣವೆಂದರೆ ಆರೆ-ಕೊರೆ ಇಲ್ಲದ್ದು; ಪರಿಪೂರ್ಣವಾದುದು; ಸಚ್ಚಿದಾನಂದಾತ್ಮಕವಾದದ್ದು. ಆದದ್ದು, ಆಗುತ್ತಿರುವಂಥಾದ್ದು ಹಾಗೂ ಆಗುವಂಥಾದ್ದು ಸರ್ವವೂ ಸರ್ವದಾ ಸರ್ವತ್ರ ಪೂರ್ಣವೇ ಪೂರ್ಣ.

ಈ ಪೂರ್ಣವನ್ನು ಪೂರ್ಣವಾಗಿ ವರ್ಣಿಸಿ, ಪೂರ್ಣ ಮಾಡಲು ಸುಲಭವಾದುದಲ್ಲ. ಆದರೂ ಮಂದಾನಿಲದಂತೆ ಮಂದ – ಮಂದವಾಗಿಯಾದರೂ ಅಂದವಾಗಿ ಮನದುಂಬಿ ಮಂದಾನಿಲ ರಗಳೆಯ ಛಂದದ ಗತಿಯಲ್ಲಿ ಪೂರ್ಣವಾಗುವಂತೆ ಪೂರ್ಣದ ಗುಣಗಾನ ಮಾಡೋಣ:

ಪೂರ್ಣ

|| ಮಂದಾನಿಲ ರಗಳೆ ||

ಓಂ ಎಂಬಕ್ಷರ ಪೂರ್ಣವೆ ಪೂರ್ಣ
ಓ + ಮ್ = ಓಂ ÷ ಓಂ + ಓಂ — ಓಂ × ಓಂ = ಪೂರ್ಣ :

ಯಾವುದು ಮೂಲವೊ ಅದು ಚಿರ ಪೂರ್ಣ
ಯಾವುದಪೂರ್ಣವೊ ಅದು ಚರ ಪೂರ್ಣ

ಚೂರ್ಣವು ಆದರು ಅಣು ಅಣು ಪೂರ್ಣ
ಚೂರ್ಣದ ಚೂರ್ಣತೆಗದು ಪರಿಪೂರ್ಣ

ಚೂರ್ಣವು ಹೆಸರಿಗೆ; ಅದು ಸಹ ಪೂರ್ಣ
ಪೂರ್ಣ ಚೂರ್ಣ ದೃಗ್ ದೃಶ್ಯವು ಪೂರ್ಣ

ಪೂರ್ಣದ ಭಾಗವು ಶೇಷವು ಪೂರ್ಣ
ಪೂರ್ಣದ ಜೋಡಣೆ ಮೊತ್ತವು ಪೂರ್ಣ

ಪೂರ್ಣವ ಕಳೆದರೆ ಉಳಿವಿಕೆ ಪೂರ್ಣ
ಪೂರ್ಣಕೆ ಗುಣಿಸಲು ವೃದ್ಧಿಯು ಪೂರ್ಣ

ಪೂರ್ಣಕೆ ಸರಿ ಇದೆ ಕಾಣುವುದೆಲ್ಲಾ
ಪೂರ್ಣವೆ ಪೂರ್ಣವು ಜಗವಿದು ಎಲ್ಲಾ

ಅಲ್ಲಾ ಮುಲ್ಲಾ ಮುಸ್ಲಿಮ್ ಪೂರ್ಣ
ಇಲ್ಲಲ್ಲಾಹೋ ಅಕ್‌ಬರ್ ಪೂರ್ಣ

ಸ್ವಸ್ತಿಯ ವಾಚಕ 卐 ಎಲ್ಲಾ ಪೂರ್ಣ
ಕ್ರಿಸ್ತ ಕ್ರೈಸ್ತ ಪ್ರೇಯರ್ ಪೂರ್ಣ

ಪೂರ್ಣತ್ವ

ದೇವರು ದೇವತೆ ದಿವ್ಯತೆ ಪೂರ್ಣ
ಭಾವವು ಭಾವ್ಯವು ಭಾವನೆ ಪೂರ್ಣ

ಬುದ್ಧನು ಬೌದ್ಧರು ಸಂಘಂ ಪೂರ್ಣ
ಶುದ್ಧನಶುದ್ಧನು ಶುದ್ಧಿಯು ಪೂರ್ಣ

ತ್ರಿಪಿಟಕ ಕುರಾನ್ ಬೈಬಲು ಪೂರ್ಣ
ತ್ರಿಪುಟಿಯು ಧೀ ಶ್ರುತ್ಯಾಗಮ ಪೂರ್ಣ

ಸಿದ್ಧರ ಶರಣರ ವಚನವು ಪೂರ್ಣ
ಸಿದ್ಧಾಂತ ಶಿಖಾ-ಮಣಿ ಪದ ಪೂರ್ಣ

ಸೂತ್ರ ಭಾಷ್ಯ ಕೃತಿ ವಿವರಣೆ ಪೂರ್ಣ
ಪಾತ್ರಾನಪಾತ್ರ ಪವಿತ್ರತೆ ಪೂರ್ಣ

ಪಾತನ ಪತನವು ಪಾತ್ಯವು ಪೂರ್ಣ
ಪಾತ ಪುರಾಣವು, ಜ್ಞಾನವು ಪೂರ್ಣ

ಪಾರಮಾರ್ಥ ಗುರು ಮಂತ್ರವು ಪೂರ್ಣ
ತಾರಕ ಮಾರಕ ನೂತ್ನಕೆ ಪೂರ್ಣ

ಲೀಲೋದಯ ನೆಲೆ ಲಯಗತಿ ಪೂರ್ಣ
ಮೇಲೆ ಕೆಳಗೆ ಒಳ ಹೊರ ದೆಶೆ ಪೂರ್ಣ

ಮುಳ್ಳು ಗುಲಾಬಿಯು ಗಂಧವು ಪೂರ್ಣ
ಹಳ್ಳಿ ದಿಲ್ಲಿ ವನ ಜನ ದನ ಪೂರ್ಣ

ಮಠ ಮನೆ ಅಂಗಡಿ ವಸ್ತುವು ಪೂರ್ಣ
ಶತ ಕೃತಿ ಸುಕೃತಿ ಸಮಸ್ತವು ಪೂರ್ಣ

ಉಂಡರೆ ಉಣದಿರೆ ಉಣಿಸಿದೆ ಪೂರ್ಣ
ಗಂಡೂ ಹೆಣ್ಣು ತನು ಮಗು ಮರಿ ಪೂರ್ಣ

ಮಾನಾಪಮಾನವು ಸಮಂತೆಯಂ ಪೂರ್ಣ
ಮಾನವರೆಲ್ಲಾ ವಿಧದಲಿ ಪೂರ್ಣ

ಹಿರಿ ಕಿರಿ ರೂಪದ ವಾದ್ಯವು ಪೂರ್ಣ
ಸರಿಗಮ ನಾದ ಬ್ರಹ್ಮವು ಪೂರ್ಣ

ಯಮನಿಯಮಾದಿಯ ಯೋಗವು ಪೂರ್ಣ
ಶಮ ದಮ ಯುತ ಶಿವಯೋಗವು ಪೂರ್ಣ

ವೃತ್ತಿ ಸುತ್ತು ಆರೆ ಬಿಡದಿರೆ ಪೂರ್ಣ
ಸುತ್ತಿ ಸುತ್ತಿ ಗುರಿ ಮುಟ್ಟಲು ಪೂರ್ಣ

ತಿರುಗು ಜೇಕು ಇರು ಇರಿಸುತ ಪೂರ್ಣ
ಧರಿಸುತ ಜಟಿಸು ನಲಿ ನಲಿಸುತ ಪೂರ್ಣ

ಲಿಖಿಸು ಬೆಳಗು ತಿಳಿ ತಿಳಿಸುತ ಪೂರ್ಣ
ಸುಖಿಸು ಗಳಿಸು ಒಲಿ ಮಿನುಗುತ ಪೂರ್ಣ

ಚಲಿಸು ಸುತ್ತು ಬೆಳೆ ಬೆಳೆಸುತ ಪೂರ್ಣ
ಸಲುಹು ಹೇಳು ಬೆರೆ ನುಡಿ, ಇದು ಪೂರ್ಣ

ವ್ಯಷ್ಟಿ ಸಮಷ್ಟಿಯು ಅಥ–ಇತಿ ಪೂರ್ಣ
ಸೃಷ್ಟಿ ಸ್ಥಿತಿ ಲಯ ಇತಿ ಮಿತಿ ಪೂರ್ಣ

ಪರಮ ಪರಾತ್ಪರ, ಜ್ಯೋತಿಯು ಪೂರ್ಣ
ಪರಮನ ಅಂಧಂ–ತಮ ಸಹ ಪೂರ್ಣ

ಶಿವೆಯೊಡಗೂಡಿದ ಪರಶಿವ ಪೂರ್ಣ
ಅವರಿ: ವಿಶ್ವದ ಸತ್ಯತೆ ಪೂರ್ಣ

ಸತ್ತೂ ಚಿತ್ತೂ ನಿತ್ಯವು ಪೂರ್ಣ
ಸತ್ತಾಗಿಹ ಜಗ ಸಂತಸ ಪೂರ್ಣ

ತತ್ತ್ವಾತತ್ತ್ವವು ತತ್–ತತ್ ಪೂರ್ಣ
ಸತ್ತ್ವಾದಿತ್ರಯ ವಿಶ್ವವು ಪೂರ್ಣ

ಮೂವತ್ತಾರೂ ತತ್ತ್ವವು ಪೂರ್ಣ
ಮೂವತ್ತು ಶಿವ ಶಕ್ತಿಯು ಪೂರ್ಣ

ತಂದೆ ತಾಯಿ ಗುರು ಬಂಧುವು ಪೂರ್ಣ
ಹೊಂದಿದ ಗೆಳೆಯರು ಭಕ್ತರು ಪೂರ್ಣ

ಹಾನಗಲ್ಲಿ ಶಿವ-ಯೋಗಿಯು ಪೂರ್ಣ
ನಾನು ನನ್ನ ಪೂರ್ಣತ್ವವು ಪೂರ್ಣ

ಮೃಣ್ಮಯು ಸತ್‌ಕಲಿ ಓ + ಮ್ = ಸತ್ = ತತ್
ಚಿನ್ಮಯಂ ಚಿತ್‌ಕಲೆ ಓಂ ತತ್. ಸತ್

ಓಂ ತತ್ ಸತ್; ಓಂ ಸತ್ ತತ್;
ಓಂ ಶಿವ ಓಂ; ಓಂ ಓಂ ಓಂ.

卐

ಅನುಬಂಧ

ಅರ್ಥಕೋಶ

|| ಅನುಬಂಧ ೧ ||

ಅ-ಕ್ಷ— ಅಕಾರದಿಂದ ಕ್ಷಕಾರದ ವರೆಗಿನ ಸಮಸ್ತ ವರ್ಣಗಳು

"ಅಕ್ಷರದ"— ವಿದ್ಯೆಯು; ಕ್ಷರ ರಹಿತ ಅಥವಾ ನಾಶರಹಿತ ಶಿವನ

ಅತಿ ನಿಕಟ— ಅತ್ಯಂತ ಸಮೀಪ

ಅತ್ತು— ರೋಧಿಸಿ, ದುಃಖಿಸಿ

ಅನ್ಯರಿಗು— ನೆರೆಹೊರೆಯವರಿಗು

ಅಮಾವಾಸ್ಯೆ— ಕೃಷ್ಣ ಪಕ್ಷದ ಕೊನೆಯ ದಿನ

ಅಮ್ಮ— ತಾಯಿ, ಜನನಿ ಮಾತೆ

ಅರೆ— ಅರ್ಧವಿರಾಮ ಚಿಹ್ನೆ

ಅರೆ ಸುತ್ತು— ಅಪೂರ್ಣವಾದ ಸುತ್ತು, ಸುತ್ತುವರೆವಿಕೆಯಲ್ಲಿ ಅರ್ಧ

ಅಲ್ಪಮಾನ— ಅಲ್ಪವಿರಾಮ; ಕಡಿಮೆ ಮರ್ಯಾದೆ

ಅಷ್ಟೆ— ಇರುವಷ್ಟೆ, ಇದ್ದಷ್ಟನ್ನೆ

ಅಂಕ—ಎಣಿಕೆ; ಅಂಕ

ಅಂಕೆ— ಸಂಖ್ಯೆಯ ಗುರುತು

ಅಂತಿಮ— ಕೊನೆಯ; ನಾಶದ; ಪ್ರಲಯದ

ಅಂ-ತೆತ್ತು—ಅನುಸ್ವಾರವನ್ನು ಜೋಡಿಸಿ

ಅಂ-ದಲ್ಲಿ— ಅನುಸ್ವಾರದಲ್ಲಿ

ಅಸ್ತು— ಇರಲಿ, ಆಗಲಿ

ಆರು ಅರಿಗಳು— ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ ಗಳು

ಇಪ್ಪತ್ತು + ಆರು— ಇಪ್ಪತ್ತಾರು

ಇರೆ— ಇದ್ದರೆ,

ಇಷ್ಟಲಿಂಗ— ವೀರಶೈವರ ಅಷ್ಟಾವರಣಗಳಲ್ಲಿ ದ್ವಿತೀಯ ಆರಾಧ್ಯ-ದೇವತೆ, ಕರಸ್ಥಲಕ್ಕೆ ಬಂದ ಚಿತ್‌ಕಳೆಯ ಕುರುಹು. ಅಂಗದ ಮೇಲೆ ಎಡೆಬಿಡದೆ ಧರಿಸುವ ಲಿಂಗ

ಉಗೆ— ಉಗಿ, ಹಬೆ, ಬಾಷ್ಪ

ಉರಿ— ಜ್ವಾಲೆ, ಬೆಂಕಿ, ತೇಜಸ್ಸು

ಎಡಕ್ಕಿಟ್ಟು— ಎಡಕ್ಕೆ + ಇಟ್ಟು, ಎಡಗಡೆ ಆಗುವಂತೆ ಮಾಡಿ
ಎಡ ಮ ಬಲ— ಎಡ ಭಾಗ ಮತ್ತು ಬಲ ಭಾಗ
ಎತ್ತು—ವೃಷಭ, ಗಾಣ ತಿರುಗಿಸುವ ಜೀವಿ; ಮೇಲಕ್ಕೆತ್ತು
ಎಂಬೈವತ್ತು— ಎಂಬ ಐವತ್ತು
ಏರಿಳಿತ— ಏರು ಇಳಿತ; ತಗ್ಗು ದಿಣ್ಣೆ; ಉನ್ನತಿ ಅವನತಿ
ಐದರದೆ— ಐದು ಐದರದ್ದೆ
ಒಲುಮೆ— ಅನುರಾಗ, ಪ್ರೀತಿ, ಮೆಚ್ಚಿಸುವಿಕೆ
ಓರ್ ಸುತ್ತು— ಒಂದು ಸುತ್ತು, ವರ್ತುಲ
ಓಂ— ಮೂಲ ಪ್ರಣವ; ಅ-ಉ-ಮ್ ಕೂಡಿ ಆದ ಬೀಜಮಂತ್ರ
ಕಪಿಟಲ್— ದೊಡ್ಡ ತರಗತಿಯ ವರ್ಣ
ಕತ್ತು— (ಕತ್ತನ್ನು) ಕುತ್ತಿಗೆ; ಮುಖ, ಮೋರೆ
ಕರಿಮಣಿ— ಗಾಜಿನ ಕಪ್ಪು ಬಣ್ಣದ ದುಂಡಾಕಾರದ ಛಿದ್ರವಿದ್ದು ಪೋಣಿಸಲು ತಕ್ಕುದಾದ ಗುಂಡುಗಳು
ಕಲೆ ಹೊತ್ತು— ಕಲೆಯನ್ನು ಧರಿಸಿ, ಸುಂದರವಾಗಿ
ಕಾಮ— ಅಲ್ಪವಿರಾಮ, ಆಶೆ ಆಕಾಂಕ್ಷೆ; ಇಂದ್ರಿಯಸುಖ
ಕಾಮ ಕೇಲೀ ಪಾಹಿಜೇ— ಕಾಯಕ ಮಾಡಬೇಕು
ಕೀಲಿ— ಗಡಿಯಾರದೊಳಗಣ 'ಸ್ಪ್ರಿಂಗ್'ನ್ನು ಬಿಗಿಯಾಗಿಸಿ ಸುತ್ತಿಸಿರುವಿಕೆ; ಗಡಿಯಾರದ ಚಕ್ರ ಹಾಗೂ ಮುಳ್ಳುಗಳ ಚಾಲನೆಗೆ ಪ್ರಚೋದಕವಾದುದು.
ಕುತ್ತು— ವಿಪತ್ತು, ಸಂಕಟ, ತೊಂದರೆ
ಕೆರೆ— ಕೊಳ ಜಲಾಶಯ
ಕೆಲ—ಕೆಲವು, ಹಲವು
ಕೈಕೊಳ್ವ— ಕೈಕೊಳ್ಳುವ, ಅಂಗೀಕರಿಸುವ, ಸ್ವೀಕರಿಸುವ
ಕೊನೆ ಹೊತ್ತು— ಅಂತಿಮ ಸಮಯ; ಸಿದ್ಧಿಯ ಸಮಯ
ಕುಂಕುಮದ ಬೊಟ್ಟು— ಅರಿಸಿನ ಸುಣ್ಣಗಳನ್ನು ಹದವರಿತು ಬೆರೆಸಿ ಮಾಡಿದ ಕೆಂಪು ಪುಡಿಯನ್ನು ಬೆರಳಿನಿಂದ ಭ್ರೂಮಧ್ಯದಲ್ಲಿ ಧರಿಸಿದ ತಿಲಕ

ಗಗನ— ಬಾನು, ಆಗಸ, ಆಕಾಶ
ಗಡಿಯಾರ— ವೇಳೆ ಸೂಚಿಸುವ ಯಂತ್ರ
ಗತಿ— ಮೋಕ್ಷ; ಸಿದ್ಧಿ; ಜ್ಞಾನ
ಗತಿಯುತ— ಮುಂದುವರೆಯುವಿಕೆಯಿಂದೊಡಗೂಡಿದ
ಗಾಣ— ಎಣ್ಣೆ ತೆಗೆಯುವ ಯಂತ್ರ, ರಸ ಹಿಂಡಿ ತೆಗೆಯುವ ಸಾಧನ
ಗಾಳಿ— ಬೀಸುವ ವಾಯು
ಗೆರೆ— ರೇಖೆ
ಗೆಲುವಿತ್ತು— ಗೆಲುವನ್ನಿತ್ತು; ವಿಜಯವನ್ನಿತ್ತು
ಗೊತ್ತು— ನೆಲೆ, ತಿಳುವಳಿಕೆ, ಜ್ಞಾನ
ಗೊತ್ತು ಗುರಿ—ಲಕ್ಷ್ಯ; ಗಮ್ಯ, ಫಲ
ಗ್ರಹಣ— ಸೂರ್ಯ ಚಂದ್ರರಿಗೆ ಬರುವ ಕತ್ತಲು
ಚಕ್ರ— ವಿಷ್ಣುವಿನ ಸುದರ್ಶನ ಚಕ್ರ
ಚಕ್ರಗಳು— ಗಾಲಿಗಳು
ಚಕ್ರಪಾಣಿ— ಚಕ್ರಾಯುಧ ಧರಿಸಿದವನು, ವಿಷ್ಣು
ಚಂದ್ರಬಿಂದು— ಅರ್ಧ ಚಂದ್ರಾಕಾರದ ಗೆರೆ ಹಾಗೂ ಅದರ ಮೇಲಿನ ದುಂಡು ಪೂಜಿ
ಚಿತ್ತು— ಚಿತ್ + ತ್ + ಉ ಚಿದ್‌ರೂಪ
ಜಗತ್ತು— ಜಗತ್ತನ್ನು, ಭೂಲೋಕವನ್ನು
ಜಗ ತುಂಬ— ಜಗತ್ತಿನಲ್ಲೆಲ್ಲಾ
ಜಪಮಾಲೆ— ಜಪಿಸಲು ಉಪಯೋಗಿಸುವ ರುದ್ರಾಕ್ಷ ಮುಂತಾದವುಗಳ ಸರ
ಜಪಿಸು— ಮಂತ್ರದೊಂದಿಗೆ ಧ್ಯಾನ ಮಾಡು: ತಪಿಸು
ಜನರೇಟರ್— ವಿದ್ಯುದುತ್ಪಾದಕ ಸಾಧನೆ
ಜನಿವಾರ— ಯಜ್ಞೋಪವೀತ
ಜಲ— ನೀರು, ಅಪ್
ಜಲನಿಧಿ— ಸಾಗರ, ಸಮುದ್ರ
ಜಲಬಿಂದು— ನೀರ ಹನಿ; ಶುಕ್ರ, ರೇತಸ್ಸು

ಜಾಗ್ರತ್ತು— ಜಾಗ್ರತ್ + ತ್ + ಉ ಜಾಗ್ರದವಸ್ಥೆ, ಜಾಗರಣೆ
ಜೀಕು — ತೂಗಾಡಿಸು, ಉಯ್ಯಾಲೆಯಾಡು
ಜೀಕೆತ್ತು — ಜೀಕು + ಎತ್ತು; ಮೇಲುಸಿರೆಳೆದು ಬಿರು
ಜೋಕಾಲಿ— ಉಯ್ಯಾಲೆ, ತೂಗುಯ್ಯಾಲೆ
ಜೋಗುಳ— ಲಾಲಿ ಪದ, ಜೋ-ಜೋ ಎನ್ನುವ ಹಾಡು, ಎಳೆ ಮಕ್ಕಳನ್ನು ಮಲಗಿಸಲು ಮಧುರವಾಗಿ ಹೇಳುವ ಸಂತಸದ ಹಾಡುವಿಕೆ
ತಣ್ಪಿತ್ತು— ತಣ್ಪು + ಇತ್ತು, ತಂಪಾಗಿಸಿ; ಶೀತ ಹಿತ ಶಾಂತಿ ದಾಯಕವಾಗಿಸಿ
ತನುವಿತ್ತು— ಕಾಯಾ, ಕ್ರಿಯಾಶೀಲನಾಗಿ, ಸ್ವಯಂ ಚಲಿಸುತ್ತ
ತಮ್ಮ— ಕಿರಿಯ ಸೋದರ, ಅನುಜ
ತವ— ನಿನ್ನ
ತಾಳಿ— ಮಂಗಲ ಸೂತ್ರ ಮಾಂಗಲ್ಯ
ತಿರುಗಿದ್ದು— ಸುತ್ತುವರೆದಿದ್ದು
ತೆರೆ— ತರಂಗ, ಅಲೆ
ತೊಟ್ಟಿಲ— ಮಗುವನ್ನು ಮಲಗಿಸಿ ತೂಗುವ ಚೌಕ ಬುಟ್ಟಿಯಂತಹ ಸಾಧನ ಬಾಲಶಯ್ಯೆ
ತೊತ್ತು— ಸೇವಕ, ಆಳು
ದಿನ ದಿನಕು— ಪ್ರತಿ ದಿವಸ
ದಿನ ದಿನದ— ಪ್ರತಿಯೊಂದು ಹಗಲಿನ
ದಿಶೆ— ದಿಕ್ಕು, ಪೂರ್ವ ಪಶ್ಚಿಮ ಮುಂತಾದ್ದು
ದೇವನಾಗರಿ ಲಿಪಿ— ಸಂಸ್ಕೃತ ಹಿಂದಿ ಮುಂತಾದ ಭಾಷೆಗಳ ವರ್ಣಮಾಲೆಯ ಅಕ್ಷರ
ದೇವಾಲಯ— ದೇವಸ್ಥಾನ, ಮಂದಿರ, ಗುಡಿ
ಧರಣಿ— ಭೂಮಿ, ಪೃಥ್ವಿ
ನತ್ತು— ಮೂಗುತಿ
ನಿಜ— ನಿಜವಾದ, ಸತ್ಯವಾದ

ನಿಜ ನಿಜತೆ— ತನ್ನತನ, ಸ್ವತ್ವ, ಸ್ವರೂಪ
ನೀಟಾಗಿ— ಋಜುಕಾಯನಾಗಿ
ನೀರು— ಜಲ
ನೆಗೆಟಿವ್ ವಾಯರ್— ಋಣವಿದ್ಯುದ್ವಾಹಕ ತಂತಿ
ನೆರವಿತ್ತು— ನೆರವನ್ನಿತ್ತು, ಬೆಂಬಲವನ್ನಿತ್ತು ಸಹಾಯಮಾಡಿ
ಪಟಗ— ತಲೆಗೆ ಸುತ್ತುವ ಉದ್ದಾದ ವಸ್ತ್ರ
ಪಥ— ಮಾರ್ಗ, ದಾರಿ
ಪದ— ಪದ್ಯ, ಹಾಡು, ಗೀತ
ಪದದ ಮೊದಲ ನೆಲೆ— ಮೂಲ ಪ್ರಣವದ ಯೋಗ್ಯತೆ
ಪರಮ— ಶ್ರೇಷ್ಠ, ಪೂರ್ಣ, ಪ್ರಣವ ಶಿವ ಪರಾತ್ ಪರ
ಪರಿಹರಿಸು— ಪರಿಹಾರ ಮಾಡು, ನಿವಾರಣೆ ಮಾಡು
ಪಾವರ್— ವಿದ್ಯುತ್-ಶಕ್ತಿ, 'ಕರೆಂಟ್'
ಪೂಜೆ— ಅರ್ಚನೆ, ಉಪಾಸನೆ
ಪೂರ್ಣ— ಪೂರಾ, ಪೂರ್ತಿ, ಸಮಗ್ರವಾಗಿ, ಅರೆ ಕೊರೆ ಇಲ್ಲದುದು, ತುಂಬಿದ್ದುದು, ಸಂಪೂರ್ಣ
ಪೂರ್ಣತೆಯು— ಪೂರ್ಣತ್ವದ; ಶಕ್ತಿಯು; ಸಮಸ್ತ ವಿಶ್ವದ
ಪೂರ್ಣದಾಕೃತಿ— ಗೋಲಾಕೃತಿ; ವಿಶ್ವದ ಆಕಾರ, ದುಂಡು
ಪೊಜಿಟಿವ್ ವಾಯರ್— ಧನ ವಿದ್ಯುದ್ವಾಹಕ ತಂತಿ
ಪಂಚಾಕ್ಷರೀ ಮಂತ್ರ— ನ-ಮಃ-ಶಿ-ವಾ-ಯ
ಪ್ರತಿಪತ್ತು— ಪಾಡ್ಯ, ಪಕ್ಷದ ಪ್ರಾರಂಭದ ತಿಥಿ
ಪ್ರದಕ್ಷಿಣೆ— ಪ್ರತಿಮೆ ಲಿಂಗ ಅಥವಾ ಗುಡಿ ವೃಕ್ಷ ಮೊದಲಾದವುಗಳ ಎಡದಿಂದ ಬಲಕ್ಕೆ ಭಕ್ತಿಯಿಂದ ಸುತ್ತುವರಿಯುವಿಕೆ
ಪ್ರಭಾವಳಿ— ಪ್ರಭಾ+ಆವಳಿ, ಪ್ರಭಾ ಮಂಡಲ; ಪ್ರತಿಮೆಗಳ ಹಿಂಭಾಗದಲ್ಲಿ ದುಂಡು ಕಮಾನಾಗಿ ಇರಿಸುವ ದುಂಡು ಅಲಂಕಾರ
ಬಳೆ— ಕಂಕಣ, ಮುಂಗೈಗೆ ತೊಡುವ ದುಂಡು ಆಭರಣ
ಬಂಡಿ— ಗಾಡಿ ಚಕ್ಕಡಿ

ಬಾಲ್ಯ— ಎಳೆತನ ಹುಡುಗತನ
ಬಿಡಬೇಡ— ತ್ಯಜಿಸಬೇಡ, ಬಿಡಬಾರದು ಮುಂದುವರೆಸುತ್ತಿರಬೇಕು
(ಬಿಡಬೇಡ)ಬೇ !— ಸ್ತ್ರೀ ವಾಚಕ ಸಂಬೋಧನ
ಬಿಡಲದು— ಬಿಡಲು + ಅದು, ಬಿಟ್ಟುಬಿಟ್ಟರೆ ಅದು
ಬೀಸಲು— ಬೀಸಿದರೆ, ಪ್ರವಹಿಸಿದರೆ
ಬೀಳಲು— ಬಿದ್ದರೆ
ಬಿಂದು— ಹನಿ, ಹನಿಯಂತಹ ಚುಕ್ಕಿ; ಗುರುತು
ಬಿಂದು ಗಂಗೆ— ಗಂಗಾ ಹನಿಯಾಕಾರದಂತಹ ಬಿಂದು, ಚುಕ್ಕಿ
ಬೆಲೆ ತೆತ್ತು— ಮನ್ನಣೆ ಕೊಟ್ಟು, ಸತ್ಕರಿಸಿ, ಮನ್ನಿಸಿ
ಬೇಸತ್ತು— ಬೇಸರಿಸಿ, ಆಲಸಿಯಾಗಿ ಬೇಸರಿಕೆಯನ್ನು, ತೋರಿಸಿ, ಬೇಜಾರು ಪಟ್ಟುಕೊಂಡು, ಅಸಮಾಧಾನದಿಂದ, ಮನೋವ್ಯಥೆಯಿಂದ, ದಣಿವಿನಿಂದ, ಉದಾಸೀನನಾಗಿ
'ಬ್ರಾಕೆಟ್ಟು'— ಕಂಸಚಿಹ್ನೆ, ಬರೆಯುವಾಗ ( ) [ ] ಹಾಕುವ ಆವರಣದ ಗುರುತು
ಭಕ್ತ ಜನ— ಭಕ್ತರು, ಭಕ್ತಿಯುಳ್ಳವರು
ಭಾವಿ— ಬಾವಿ, ವಾಪಿ, ಕೂಪ
ಮನ ತೆತ್ತು— ಮನಸ್ಸುಗೊಟ್ಟು, ಮನಸಾ ಮನಸ್ಸಿನಿಂದ
ಮನವಿತ್ತು— ಕಾಳಜಿಯಿಂದ
ಮತ್ತೂ ಮತ್ತು— ಮೇಲಿಂದ ಮೇಲೆ, ಆಗಾಗ್ಗೆ, ಪುನಃ ಪುನಃ
ಮರಳಿ ಬರಲು— ವಾಪಸ್ಸು ಬಂದರೆ
ಮಹತ್ತು— ಶ್ರೇಷ್ಠತೆ, ದೊಡ್ಡಸ್ತಿಕೆ, ಹೆಚ್ಚಳ
ಮಳೆ— ಮೋಡದಿಂದ ನೀರು ಹನಿ ಸುರಿಯುವಿಕೆ, ಜಲವರ್ಷಣ
ಮಾತೃ ಹೃತ್ತು— ಮಾತೃವಿಗಿರುವಂತಹ ದಯಾಳು ಹೃದಯ, ತಾಯಿಯಂತಹ ವಾತ್ಸಲ್ಯ
ಮಾರ್ಗ— ಪಥ, ಹಾದಿ; ರೀತಿ ನಡತೆ
ಮಿಂಚು— ಮಿನುಗು, ಹೊಳೆ, ಶೋಭಿಸು
ಮುಖ ಸುತ್ತು— ಮುಖದ ಸುತ್ತು-ಮುತ್ತಲೂ

ಮುತ್ತೈದೆ— ಸುಮಂಗಲಿ, ಸುಹಾಸಿನಿ, ಗರತಿ
ಮುದ್ರಿಸಿದರೂ— ಅಚ್ಚು ಪ್ರಿಂಟು ಮಾಡಿಸಿದರೂ
ಮುಳ್ಳು— ಗಡಿಯಾರದಲ್ಲಿ ಗಂಟೆ ಮಿನೀಟುಗಳನ್ನು ತೋರಿಸುವ ಸೂಜಿ
ಮೂರ್ ತಿಳಿದ— ತ್ರಿಪುಟಿಯನ್ನು ಅರಿತ
ಮೂರ್ತಿ— ಪ್ರತಿಮೆ, ವಿಗ್ರಹ
ಮೇಘ— ಮೋಡ
ಮೇರು— ಮೇರು ಪರ್ವತ, ಭಾರತದ ಉತ್ತರ ದಿಕ್ಕಿನ ಮೇರುವೆಂಬ ಹೆಸರಿನ ಸುವರ್ಣ ಪರ್ವತ; ಕೇಂದ್ರ
ಯಂತ್ರ— ಶ್ರಮವುಳಿಸುವ ಯಾವುದೇ ಸಾಧನ
ರಕ್ಷಿಸುವ— ಪಾಲನೆ ಪೋಷಣೆ ಮಾಡುತ್ತಿರುವ
ರವಿ— ಸೂರ್ಯ, ಬಾನು
ರುಮಾಲು— ತಲೆಗೆ ಸುತ್ತುವ ದೊಡ್ಡ ಚೌಕಾದ ವಸ್ತ್ರ
ರೇಫ— ರಕಾರ, ರ ವರ್ಣ
ಲಿಂಗ— ದೇವಾಲಯದಲ್ಲಿಯ ಚಲಿಸದ ಸ್ಥಾವರ ಲಿಂಗ, ದ್ವಾದಶ ಜೋತೀರ್ಲಿಂಗ ಮೊದಲಾದುದು
ಲೈಟ್ ಸ್ವಿಚ್ ಆನ್ ಒತ್ತು— ವಿದ್ಯುತ್ ಶಕ್ತಿ ಪ್ರವಹಿಸುವಂತೆ ಮಾಡಲು ಬಳಸುವ ಗುಂಡಿ ಒತ್ತುವಿಕೆ
ವ— ಮತ್ತು
ವೃತ್ತ— ಇರುವಿಕೆ, ಸ್ಥಿರತೆ, ಸಂಪ್ರದಾಯ, ಚರಿತೆ, ಜೀವನ, ಬಾಳು
ವೃತ್ತಿ— ಉದ್ಯೋಗ, ಕೆಲಸ, ನಡತೆ, ಜೀವನದ ಕಸಬು, ಕಾಯಕ
ವಿದ್ಯೆ— ಜ್ಞಾನ, ತಿಳಿವಳಿಕೆ, ಕಲಿಕೆ, ಚಿತ್ಸ್ವರೂಪ
ವಿಧಿ ಇತ್ತು— ನಿಯಮವನ್ನು ರೂಪಿಸಿ
ವಿಪತ್ತು— ಸಂಕಟ, ವಿಪತ್ತಿ, ವಿಘ್ನ
ವಿವರ— ವಿವರಣ ಬೋಧಕ ಚಿಹ್ನೆ; (:)
ವಾಚ್ಯ— ಹೇಳತಕ್ಕ
ವಾಹನ— ಸವಾರಿ ಮಾಡುವ ರಥ

ಶಶಿ— ಚಂದ್ರ

ಶಿವದಾರ— ವೀರಶೈವರು ಕೊರಳಲ್ಲಿ ಧರಿಸುವ ಶಿವರೂಪ ಇಷ್ಟ ಲಿಂಗದ ಕರಡಿಗೆಯ ದಾರ

ಶೆಲ್ಲೆ— ಹೆಗಲ ಮೇಲೆ ಹಾಕಿಕೊಳ್ಳುವ ಉದ್ದಾದ ವಸ್ತ್ರ

ಶ್ರಮ— ಪರಿಶ್ರಮ, ಪ್ರಯತ್ನ, ಕಾಯಕ

ಶ್ರುತಿ— ವೇದ, ವಿದ್ಯೆ

ಶ್ರುತಿಮಧುರ— ಕಿವಿಗಿಂಪಾದ

ಸಕಲ ಜನ ಪರಿಷತ್ತು— ಕಲಾಭಿಮಾನಿ ಜನರ ಸಮೂಹ

ಸಕ್ರಮ — ಕ್ರಮವನ್ನು ಮೀರದಂತೆ, ಅನುಕ್ರಮವಾಗಿ

ಸತ್ತು— ಸತ್+ತ್+ಉ, ಸದ್ರೂಪ; ಸತ್ತು ನಿರ್ಜೀವವಾಗಿ, ಶವ ಆಗಿ

ಸರ— ಹಾರ ಮಾಲೆ

ಸಹಸ್ರ— ಸಾವಿರ

ಸರ್ಕಲ್— ವರ್ತುಲ, ಸುತ್ತು

ಸರ್ಕಿಟ್— ಸುತ್ತುವರಿಯುವಿಕೆ

ಸಂಪತ್ತು— ಸಂಪದ; ತುಷ್ಟಿ ಕೊಡುವ ಸ್ಥಿತಿ, ಶಿರಿವಂತಿಕೆ

ಸಂಬಂಧಿ— ಷಷ್ಠೀ ಸಂಬಂಧ ಸೂಚಕ, 'ಎಪಾಸ್ಟ್ರಫಿ'

ಸಂಯೋಜಕ— "ಇನ್‌ವರ್ಟೆಡ್ ಕಾಮಾ"; ಯೋಗ ಶಿವಯೋಗಾದಿ-ಪಂಚಯೋಗಗಳು

ಸಂವಿತ್ತು— ಸಂವಿತ್+ತ್-ಉ; ಜ್ಞಾನ, ತಿಳಿವಳಿಕೆ

ಸಾಲಿಗ್ರಾಮ— ಶಾಲಗ್ರಾಮ, ವಿಷ್ಣು ರೇಖೆಯುಳ್ಳದ್ದೆಂಬ ಪೂಜೆಯ ಒಂದು ರೀತಿಯ ದುಂಡು ಶಿಲೆ ಪೂಜ್ಯವಸ್ತು

ಸುತ್ತು— ವರ್ತುಲ, ದುಂಡು; ಸುತ್ತಾಡು, ಸುತ್ತುವರೆ; ಸುತ್ತುವಿಕೆ

ಸುತ್ತಿಗೆ—— ಸುತ್ತು+ಗೆ, ಸುತ್ತುವಿಕೆಗೆ

ಸುತ್ತು ಮುತ್ತಲು— ನಾಲ್ಕು ಕಡೆಗೂ, ಆಸು-ಪಾಸು, ಎತ್ತೆತ್ತ ನೋಡಿದೊಡತ್ತತ್ತ

ಸುತ್ತದಿರೆ— ಸುತ್ತಲಾರದಂತೆ ಇದ್ದರೆ

ಸುಷುಪ್ತಿ— ನಿದ್ರಾವಸ್ಥೆ

ಸೊತ್ತು— ಸ್ವತ್ವ, ಬೆಲೆ, ಕಿಮ್ಮತ್ತು, ಮಹತ್ವ; ತನ್ನ ವಸ್ತು

ಸೋದರರು— ಅಣ್ಣ ತಮ್ಮಂದಿರಂತಿರುವ ನೆರೆ ಹೊರೆಯವರು

ಸ್ಫೂರ್ತಿ— ಪ್ರತಿಭೆ, ಉತ್ತೇಜನ, ಸಮಯಕ್ಕೆ ಸರಿಯಾಗಿ ಯೋಚನೆ ಹೊಳೆಯುವಿಕೆ,

ಸ್ವಪ್ನ— ಸ್ವಪ್ನಾವಸ್ಥೆ, ಕನಸು ಅನ್ನಿಸುವಿಕೆ

ಸ್ವಯಮೇವ— ಸ್ವತಃ ತಾನೇ

ಸ್ವಾರ್ಥಿ— ಕೇವಲ ತನ್ನದೊಂದೇ ಪ್ರಯೋಜನೆಯನ್ನು ಬಯಸುವವ

ಹಗ್ಗ— ಸೇಣು, ಕಟ್ಟುವ, ಅತಿ ದಪ್ಪದಾರ

ಹರಸಿ— ಆಶೀರ್ವದಿಸಿ, ಕರುಣಿಸಿ

ಹಳ್ಳ— ತೊರೆ, ಕಿರಿ ಹೊಳೆ, ಲಘು ನದಿ

ಹಿರಿ ಹೊಳೆ— ದೊಡ್ಡ ನದಿ, ನದ

ಹುಣ್ಣಿಮೆ— ಪೂರ್ಣ ಚಂದ್ರನು ಕಾಣಿಸುವ ದಿನ, ಶುಕ್ಲಪಕ್ಷದ ಕೊನೆಯ ತಿಥಿ.

ಹೊತ್ತು— (ಹೊತ್ತನ್ನು) ವೇಳೆ ಸಮಯ, ಕಾಲ

ಆದೇಶದ ಅಕಾರಾದಿ

||ಅನುಬಂಧ—೨||

ಈ ಎಲ್ಲವನ್ನೂ ಪೂರ್ಣ ಮುಗಿಸದೆ ಬೇಸತ್ತು 'ಬಿಡಬೇಡ !'

ಪದ್ಯಗಳ ಅಕಾರಾದಿ

||ಅನುಬಂಧ—೩||

卐

ಹರಿ–ಹರ–ಬ್ರಹ್ಮರಾದರೇನಂತೆ! ವೃತ್ತದ ಸ್ಫೂರ್ತಿಗೊಳಪಟ್ಟ ಕಾರಣ ದಿಂದಾಗಿ ಅವರು ಮತ್ತೆ–ಮತ್ತೆ ಪೂರ್ಣತ್ವದ ವೃತ್ತಿಯಲ್ಲಿರಬೇಕಾ ಗುತ್ತದೆ.

ಈ ಒಂದು ಮುಖ್ಯ ವೃತ್ತಿಯಲ್ಲಿ ತೊಡಗಿರುವಾಗ, ಭೌತಿಕ ಶರೀರ ಧರಿಸಿ, ಮಾನವರಾದ ನಮಗೆ ಉಪ ವೃತ್ತಿಗಳು ಬಂದೊದಗುವುದು ಸ್ವಾಭಾವಿಕ. ಆದರೂ, ಅಲ್ಲಿಯೇ, ನೆಲೆ ನಿಲ್ಲದೆ ಏರು–ಇಳಿತ, ಎಡ ಮತ್ತು ಬಲಗಡೆಗೆ ಬೀಡು ಬಿಡದೆ, ಮುಂದುವರಿಯುತ್ತಿರುವದೇ ಧುಂ ಡಗೇ ತಿರುಗುವಿಕೆ. ಇದೇ ವೃತ್ತಿಯು ಪೂರ್ಣದ ಪೂರ್ಣತ್ವದ ಕೃತಿ...... ಆದುದರಿಂದ ಪೂರ್ಣತ್ವ ಪಡೆದು ಪೂರ್ಣನಾಗಲು ಯಾವಾಗಲೂ ಸದ್–ವೃತ್ತಿಯಲ್ಲಿರಬೇಕು.

(ಪುಟ : ಐವತ್ತು)

ಪೂರ್ಣರೂಪರಾಗಲೇಬೇಕೆಂದು ಪ್ರತಿಯೊಬ್ಬರೂ ಬಯಸು ತ್ತೇವೆ ಬಯಸಿದ್ದುದನ್ನು ಬರಮಾಡಿಕೊಳ್ಳಲು ಬಾಳಿನುದ್ದಕ್ಕೂ ಬಡಿದಾಡಬೇಕಾಗುತ್ತದೆ; ಬದುಕಬೇಕಾಗುತ್ತದೆ. ಬದುಕಲು ಹೋರಾಡಬೇಕಾಗುತ್ತದೆ. ಹೋರಾಟದಲ್ಲಿ ತೊಡಗಿದಾಗ ಅಳಿವು ಉಳಿವುಗಳ ಪ್ರಶ್ನೆ ಮುಂಬರುತ್ತದೆ. ಆ ಪ್ರಶ್ನೆಗೆ ಉತ್ತರ ದೊರೆ ಯುವುದು ಬೇರೆ-ಬೇರೆ ಮುಖದಿಂದ ಬೇರೆ-ಬೇರೆಯೆ. ಆ ಅಳಿವು-ಉಳಿವುಗಳೆರಡರಲ್ಲಿ ಎಲ್ಲರೂ ಬಯಸುವುದು ಉಳಿವನ್ನೇ; ಅಳಿವನ್ನಲ್ಲ...... ಬೆಣ್ಣೆಯನ್ನು ಬೆಂಕಿಯ ಮೇಲಿಟ್ಟು ಅದು ಕರಗ ಬಾರದೆಂದುಕೊಂಡರೆ ಹೇಗೆ? ಬೆಣ್ಣೆಯ ಕರಗುವಿಕೆ ಮತ್ತು ಬೆಂಕಿಯ ಕರಗಿಸುವಿಕೆ ಅದರದರ ಸಹಜ ಸ್ವಾಭಾವಿಕ ನೈಸರ್ಗಿಕ ಗುಣ—ಪರಸ್ಪರ ಸಮೀಪಿಸಿದರೆ ಮಾತ್ರ. ಅನಿವಾರ್ಯವಾಗಿ ಅವು ಸಮೀಪಿಸಿದಾಗ ಆ ಕರಗುವ ಬೆಣ್ಣೆಯನ್ನು ತುಪ್ಪವನ್ನಾಗಿಸಿಕೊಳ್ಳು ವುದೇ ಅಳಿವನ್ನು ಬಿಟ್ಟು, ಉಳಿವನ್ನು ಉಳಿಸಿಕೊಳ್ಳುವಿಕೆ.

(ಪುಟ : ನೂರಾಮೂರು)

*